ಶನಿವಾರ, ಅಕ್ಟೋಬರ್ 9, 2021 | ₹ 6.00

● www.prajavani.net

/prajavani.net @prajavani /prajavani http://bit.ly/Prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಶಾರದಾ ದೇವಿ
ಮಂಗಳೂರಿನ ಕುದ್ರೋಳಿ ಗೋಕರ್ಣನಾಥ ಕ್ಷೇತ್ರದಲ್ಲಿ ಶುಕ್ರವಾರ ಕಂಡು ಬಂದ ಶಾರದಾದೇವಿಯ ಅಲಂಕಾರ

₹3499ಕ್ಕೆ ಖರೀದಿ ಮಾಡಿ ಮತ್ತು ಆಕರ್ಷಕ ಉಡುಗೊರೆ ಕೇವಲ ₹199ಕ್ಕೆ ಪಡೆಯಿರಿ*
+
₹3000 ಮೌಲ್ಯದ ಕೂಪನ್ಸ್ ಉಚಿತ*
+
JioMart ಮಹಾ ಕ್ಯಾಶ್‌ಬ್ಯಾಕ್ ಗಳಿಸಿ 30% ಕ್ಯಾಶ್‌ಬ್ಯಾಕ್*

ದಸರಾ ಸ್ಪೆಷಲ್

ಇದರ ಮೇಲೂ ಕೊಡುಗೆ ಲಭ್ಯವಿದೆ

TRENDS MAN | TRENDS WOMAN | TRENDS junior | TRENDS FOOTWEAR

ಇತರ ಕೊಡುಗೆಗಳಿಗೆ ಆನ್‌ಲೈನ್‌ನಲ್ಲಿ ಶಾಪಿಂಗ್ ಮಾಡಿ:

JioMart www.trends.ajio.com

10% INSTANT DISCOUNT# SBI card

#Min. Trxn.: ₹3,499; Max. Discount: ₹600 per card.
Valid once per card during offer period. Validity: 03 Oct - 10 Nov 2021. T&C Apply.

*ನಿಯಮ ಮತ್ತು ಷರತ್ತುಗಳು ಅನ್ವಯಿಸುತ್ತವೆ. ಸ್ಟಾಕ್ ಇರುವವರಿಗೆ ಕೊಡುಗೆ ಲಭ್ಯವಿರುತ್ತದೆ. ಈ ಕೊಡುಗೆ ಇಲ್ಲದೆಯೂ ಉಡುಪು ಲಭ್ಯವಿದೆ. 2 ಅಥವಾ ಹೆಚ್ಚು ಬಿಲ್‌ಗಳನ್ನು ಸೇರಿಸುವುದು ಅಥವಾ ವಿಭಜಿಸುವುದನ್ನು ಸಮ್ಮತಿಸಲಾಗುವುದಿಲ್ಲ. ಟ್ರೆಂಡ್ಸ್ ಸ್ಟೋರ್‌ನಲ್ಲಿ ಒಂದು ಬಿಲ್‌ನಲ್ಲಿ ಕನಿಷ್ಠ ₹2999ಕ್ಕೆ ಖರೀದಿ ಮಾಡಿದರೆ, ಈ ಮುಂದಿನ ಪ್ರಯೋಜನಗಳನ್ನು ಪಡೆಯಲು ಟ್ರೆಂಡ್ಸ್ ಸ್ಟೋರ್‌ನಲ್ಲಿನ ಗ್ರಾಹಕ ಸೇವೆ ಡೆಸ್ಕ್‌ನಲ್ಲಿ ದಯವಿಟ್ಟು ಬಿಲ್ ಕೊಡಿ: ₹1500 ಟ್ರೆಂಡ್ಸ್ ಕೂಪನ್ ಮತ್ತು ₹1500trends.ajio.com ಕೂಪನ್. ವಿವರವಾದ ನಿಯಮ ಮತ್ತು ಷರತ್ತುಗಳು, ಟ್ರೆಂಡ್ಸ್ ಮತ್ತು trends.ajio.com ವಿತರಿಸುವ ಕೂಪನ್‌ಗಳ ಕೊಡುಗೆಯ ಮಾನ್ಯತೆಯನ್ನು ನೋಡಿ. ಹೆಚ್ಚಿನ ವಿವರಗಳಿಗಾಗಿ ಸ್ಟೋರ್ ಸಿಬ್ಬಂದಿಯನ್ನು ಕೇಳಿ.

ಶನಿವಾರ, ಅಕ್ಟೋಬರ್ 9, 2021 | ಬೆಂಗಳೂರು | ₹ 6.00 | ಸಂಪುಟ 74 | ಸಂಚಿಕೆ 281 | ಪುಟ 30

● www.prajavani.net

/prajavani.net @prajavani /prajavani http://bit.ly/Prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಭೂಮಿಕಾ
ಕೋವಿಡ್‌ನಿಂದಾಗಿ ಮನೆಯೊಳಗೇ ಇದ್ದ ಪುಟ್ಟ ಮಕ್ಕಳು ಈಗ ಸಾಮಾಜಿಕವಾಗಿ ಬೆರೆಯಲು ಹಿಂಜರಿಯುತ್ತಿದ್ದಾರೆ. ಕೋವಿಡ್ ಕುರಿತ ಮುಂಜಾಗ್ರತೆಯೊಂದಿಗೆ, ಅವರಲ್ಲಿ ಹೆದರಿಕೆ ನೀಗಿಸುವುದು ಹೇಗೆ?

ಚರ್ಚೆ
ರಾಷ್ಟ್ರೀಯ ಆಸ್ತಿ ನಗದೀಕರಣ ಯೋಜನೆ ಸರಿಯಾದ ಕ್ರಮವೇ? 7

ಮುಳಬಾಗಿಲು: 15 ಮನೆಗಳು ಕುಸಿತ 4

ಆರ್‌ಟಿಪಿಎಸ್: ಬೇಡಿಕೆಯಷ್ಟು ಕಲ್ಲಿದ್ದಲು ಪೂರೈಕೆ 4

ಸೆನ್ಸೆಕ್ಸ್	ನಿಫ್ಟಿ	₹/$
60,059 ▲	17,895 ▲	74.99 ▼

ಲಖಿಂಪುರ–ಖೇರಿ ಹಿಂಸಾಚಾರ: ಉತ್ತರ ಪ್ರದೇಶ ಸರ್ಕಾರದ ನಡವಳಿಕೆಗೆ ತೀವ್ರ ಆಕ್ಷೇಪ

ಬಂಧನಕ್ಕೆ ಹಿಂದೇಟು: 'ಸುಪ್ರೀಂ' ತರಾಟೆ

ನವದೆಹಲಿ(ಪಿಟಿಐ): ಲಖಿಂಪುರ–ಖೇರಿಯಲ್ಲಿ ನಾಲ್ವರು ರೈತರು ಸೇರಿ ಎಂಟು ಮಂದಿಯ ಕ್ರೂರ ಹತ್ಯಾ ಪ್ರಕರಣಕ್ಕೆ ಸಂಬಂಧಿಸಿ ಉತ್ತರ ಪ್ರದೇಶ ಸರ್ಕಾರ ಕೈಗೊಂಡ ಕ್ರಮಗಳು ತೃಪ್ತಿಕರವಲ್ಲ ಎಂದು ಸುಪ್ರೀಂ ಕೋರ್ಟ್ ತರಾಟೆಗೆ ತೆಗೆದುಕೊಂಡಿದೆ. ಆರೋಪಿಗಳನ್ನು ಏಕೆ ಬಂಧಿಸಿಲ್ಲ ಎಂದು ಕೋರ್ಟ್ ಶುಕ್ರವಾರ ಪ್ರಶ್ನಿಸಿದೆ. ಸಾಕ್ಷ್ಯಗಳನ್ನು ಸಂರಕ್ಷಿಸುವಂತೆ ಸೂಚಿಸಿದೆ. ಪ್ರಕರಣದ ತನಿಖೆಯನ್ನು ಬೇರೊಂದು ಸಂಸ್ಥೆಗೆ ವಹಿಸುವ ಬಗ್ಗೆಯೂ ಚಿಂತನೆ ನಡೆಸಿದೆ. ಸರ್ಕಾರವು ಮಾತಿಗಷ್ಟೇ ಸೀಮಿತ, ಕ್ರಿಯೆಯಲ್ಲಿ ಏನೂ ಇಲ್ಲ ಎಂದಿದೆ.

ಎಲ್ಲ ಆರೋಪಿಗಳ ವಿರುದ್ಧವೂ ಕಾನೂನಿನ ಅನ್ವಯವೇ ಕ್ರಮ ಜರುಗಬೇಕು ಎಂದು ಮುಖ್ಯ ನ್ಯಾಯಮೂರ್ತಿ ಎನ್.ವಿ. ರಮಣ ನೇತೃತ್ವದ ಪೀಠವು ಸ್ಪಷ್ಟವಾಗಿ ಹೇಳಿದೆ. ಹತ್ಯಾ ಪ್ರಕರಣದ ತನಿಖೆಯ ಬಗ್ಗೆ ಜನರಲ್ಲಿ ವಿಶ್ವಾಸ ಮೂಡುವುದಕ್ಕಾಗಿ ಅಗತ್ಯವಿರುವ ಎಲ್ಲ ಕ್ರಮಗಳನ್ನೂ ಸರ್ಕಾರವು ಕೈಗೊಳ್ಳಬೇಕು ಎಂದಿದೆ.

ತನಿಖೆಗೆ ಸಂಬಂಧಿಸಿ ಈವರೆಗೆ ಆಗಿರುವುದು ತೃಪ್ತಿಕರವಲ್ಲ ಎಂಬುದನ್ನು ಉತ್ತರ ಪ್ರದೇಶ ಸರ್ಕಾರದ ಪರವಾಗಿ ಹಾಜರಾಗಿದ್ದ ಹಿರಿಯ ವಕೀಲ ಹರೀಶ್ ಸಾಳ್ವೆ ಅವರೂ ಒಪ್ಪಿಕೊಂಡರು. ತನಿಖೆಯಲ್ಲಿ ಆಗಿರುವ ಎಲ್ಲ ಲೋಪಗಳು ನಾಳೆಯೊಳಗೆ (ಶನಿವಾರ) ಸರಿ ಆಗಲಿದೆ. ಏಕೆಂದರೆ, ಸಂದೇಶವು ರವಾನೆ ಆಗಿದೆ ಎಂದು ಅವರು ಹೇಳಿದರು.

'ರಾಜ್ಯ ಸರ್ಕಾರವು ಕೈಗೊಂಡಿರುವ ವಿವಿಧ ಕ್ರಮಗಳನ್ನು ವಕೀಲರು ವಿವರಿಸಿದ್ದಾರೆ. ಸ್ಥಿತಿಗತಿ ವರದಿಯನ್ನೂ ಸಲ್ಲಿಸಲಾಗಿದೆ. ಆದರೆ, ಕೈಗೊಂಡ ಕ್ರಮಗಳು ತೃಪ್ತಿಕರವಲ್ಲ. ಸರಿಯಾದ ದಿಸೆಯಲ್ಲಿ ಕೈಗೊಂಡ ಕ್ರಮಗಳನ್ನು ಮುಂದಿನ ವಿಚಾರಣೆಯ ಸಂದರ್ಭದಲ್ಲಿ ವಕೀಲರು ತಿಳಿಸಲಿದ್ದಾರೆ. ಬೇರೊಂದು ಸಂಸ್ಥೆಯ ಮೂಲಕ ತನಿಖೆ ನಡೆಸುವ ಬಗ್ಗೆಯೂ ಅವರು ಯೋಚನೆ ಮಾಡಲಿದ್ದಾರೆ' ಎಂದು ಪೀಠವು ಆದೇಶದಲ್ಲಿ ಹೇಳಿದೆ.

'ನಾವು ಯಾವುದೇ ಹೇಳಿಕೆ ನೀಡುವುದಿಲ್ಲ. ಕೆಲವು ಕಾರಣಗಳಿಂದಾಗಿ ಸಿಬಿಐ ತನಿಖೆ ಸಾಧ್ಯವಿಲ್ಲ. ಕಾರಣ ನಿಮಗೆ ತಿಳಿದಿದೆ. ಪ್ರಕರಣದಲ್ಲಿ ಒಳಗೊಂಡ ವ್ಯಕ್ತಿಗಳ ಕಾರಣಕ್ಕೂ ಸಿಬಿಐ ತನಿಖೆಯ ಬಗ್ಗೆ ಆಸಕ್ತಿ ಇಲ್ಲ (ಸಿಬಿಐ ಕೇಂದ್ರ ಗೃಹ ಖಾತೆಯ ಅಧೀನದಲ್ಲಿದೆ. ಆರೋಪಿ ಆಶಿಶ್ ಮಿಶ್ರಾ ಅವರ ತಂದೆ ಅಜಯ್ ಮಿಶ್ರಾ ಗೃಹ ಖಾತೆಯ ರಾಜ್ಯ ಸಚಿವರಾಗಿದ್ದಾರೆ). ಹಾಗಾಗಿ, ತನಿಖೆಗೆ ಬೇರೆ ಮಾರ್ಗ ಹುಡುಕಿಕೊಳ್ಳಬೇಕು' ಎಂದು ಪೀಠವು ಹೇಳಿದೆ.

'ಹೊಣೆಗಾರಿಕೆಯುಳ್ಳ ಸರ್ಕಾರ, ಹೊಣೆಗಾರಿಕೆಯುಳ್ಳ ಪೊಲೀಸ್ ಅಧಿಕಾರಿಗಳು ಮತ್ತು ವ್ಯವಸ್ಥೆ ಇರಬೇಕು ಎಂದು ನಾವು ಬಯಸುತ್ತೇವೆ. ಗುಂಡೇಟು ಮತ್ತು ಕೊಲೆಯ ಗಂಭೀರ ಪ್ರಕರಣ ಇದು. ರೈತರ ಮೇಲೆ ಹರಿಸಲಾದ ವಾಹನದಲ್ಲಿ ಆರೋಪಿ ಇದ್ದರು ಎಂದು ಪ್ರತ್ಯಕ್ಷದರ್ಶಿಯೊಬ್ಬರು ಹೇಳಿದ್ದಾರೆ. ಗುಂಡಿನ ಗಾಯ ಇರಲಿಲ್ಲ ಎಂದು ಮರಣೋತ್ತರ ಪರೀಕ್ಷೆಯಲ್ಲಿ ಹೇಳಿರುವುದೇ ಆರೋಪಿಯನ್ನು ವಶಕ್ಕೆ ಪಡೆಯದೆ ಇರಲು ಕಾರಣವಾಯಿತೇ' ಎಂದು ಪೀಠವು ಪ್ರಶ್ನಿಸಿದೆ.

ಈಗ ಇರುವ ತನಿಖಾಧಿಕಾರಿಗಳನ್ನು ಮುಂದುವರಿಸುವುದರ ಬಗ್ಗೆಯೂ ಪೀಠವು ಆಕ್ಷೇಪ ವ್ಯಕ್ತಪಡಿಸಿದೆ.

8ನೇ ಪುಟ ನೋಡಿ

'ಆರೋಪಿಯನ್ನು ಗೋಗರೆಯುವುದು ಏಕೆ?'

ಆರೋಪಿಯ ಬಗ್ಗೆ ಪೊಲೀಸರು ತಳೆದಿರುವ ಧೋರಣೆಯನ್ನು ಸುಪ್ರೀಂ ಕೋರ್ಟ್ ಪ್ರಶ್ನಿಸಿದೆ. ತನಿಖೆಗೆ ಹಾಜರಾಗುವಂತೆ ಆರೋಪಿಗೆ ಸಮನ್ಸ್ ನೀಡಲಾಗಿದೆ. ಅವರು ಸ್ವಲ್ಪ ಸಮಯ ಕೇಳಿದ್ದಾರೆ ಎಂದು ಸಾಳ್ವೆ ತಿಳಿಸಿದರು.

ಶುಕ್ರವಾರ ಅವರು ಹಾಜರಾಗಿಲ್ಲ. ಶನಿವಾರ ಬೆಳಿಗ್ಗೆ 11 ಗಂಟೆಗೆ ಹಾಜರಾಗಲು ಸೂಚಿಸಲಾಗಿದೆ. ಶನಿವಾರವೂ ಹಾಜರಾಗದಿದ್ದರೆ ಅವರ ವಿರುದ್ಧ ಕಾನೂನು ಪ್ರಕಾರ ಕಠಿಣ ಕ್ರಮ ಕೈಗೊಳ್ಳಲಾಗುವುದು ಎಂದು ಸಾಳ್ವೆ ವಿವರಿಸಿದರು.

'ಸಾಳ್ವೆ ಅವರೇ, ಆರೋಪಗಳು ಗಂಭೀರವಾಗಿವೆ. ಅದರ ಸತ್ಯಾಂಶಗಳ ಬಗ್ಗೆ ಈಗ ಯೋಚನೆ ಮಾಡುವುದು ಬೇಡ. ಆದರೆ, ಉತ್ತರ ಪ್ರದೇಶದ ವಕೀಲರು ಸಲ್ಲಿಸಿರುವ ಎಫ್‌ಐಆರ್ ಪ್ರತಿಯ ಪ್ರಕಾರ, ಸೆಕ್ಷನ್ 302ರ ಅಡಿಯಲ್ಲಿ (ಕೊಲೆ) ಪ್ರಕರಣ ದಾಖಲಿಸಲಾಗಿದೆ. ಈ ಸೆಕ್ಷನ್ ಅಡಿಯಲ್ಲಿ ಪ್ರಕರಣ ದಾಖಲಾಗುವ ಎಲ್ಲ ಆರೋಪಿಗಳನ್ನೂ ಹೀಗೆಯೇ ನಡೆಸಿಕೊಳ್ಳಲಾಗುವುದೇ? ನೋಟಿಸ್ ಕಳುಹಿಸಿ ದಯವಿಟ್ಟು ಬನ್ನಿ, ದಯವಿಟ್ಟು ತನಿಖೆಗೆ ಸಹಕರಿಸಿ ಎಂದು ಗೋಗರೆಯ ಲಾಗುವುದೇ' ಎಂದು ಪೀಠವು ತರಾಟೆಗೆ ತೆಗೆದುಕೊಂಡಿದೆ.

'ಪುರಾವೆ ಇಲ್ಲದೆ ಬಂಧಿಸಲಾಗದು'

ಪ್ರಕರಣದ ಪ್ರಮುಖ ಆರೋಪಿ ಆಶಿಶ್ ಮಿಶ್ರಾ ಅವರನ್ನು ಬಂಧಿಸದೇ ಇರುವುದನ್ನು ಸಮರ್ಥಿಸಿಕೊಳ್ಳುವ ರೀತಿಯಲ್ಲಿ ಉತ್ತರ ಪ್ರದೇಶ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ ಮಾತನಾಡಿದ್ದಾರೆ.

ಭಾನುವಾರ ನಡೆದ ಘಟನೆಯ ಬಗ್ಗೆ ಇದೇ ಮೊದಲಿಗೆ ಯೋಗಿ ಮಾತನಾಡಿದ್ದಾರೆ. 'ಕೇವಲ ಅರೋಪಗಳ ಆಧಾರದಲ್ಲಿ ನಾವು ಯಾರನ್ನೂ ಬಂಧಿಸಲಾಗದು. ಪುರಾವೆ ಇದ್ದರೆ ಮಾತ್ರ ಬಂಧನ ಸಾಧ್ಯ. ಪೊಲೀಸರು ತನಿಖೆ ನಡೆಸುತ್ತಿದ್ದಾರೆ. ಪುರಾವೆಯ ಆಧಾರದಲ್ಲಿ ಕ್ರಮ ಕೈಗೊಳ್ಳಲಾಗುವುದು' ಎಂದು ಸುದ್ದಿ ವಾಹಿನಿಯೊಂದಕ್ಕೆ ಅವರು ಹೇಳಿದ್ದಾರೆ.

ದೀಪಾಲಂಕಾರ ದಸರಾ ಉತ್ಸವದ ಎರಡನೇ ದಿನವಾದ ಶುಕ್ರವಾರ ದೀಪಾಲಂಕಾರದಲ್ಲಿ ಕಂಗೊಳಿಸಿದ ಮೈಸೂರಿನ ಚಾಮರಾಜೇಂದ್ರ ಒಡೆಯರ್ ವೃತ್ತದಲ್ಲಿ ಸೆಲ್ಫಿ ತೆಗೆದುಕೊಳ್ಳಲು ನೂರಾರು ಮಂದಿ ನೆರೆದಿದ್ದರು ಪ್ರಜಾವಾಣಿ ಚಿತ್ರ: ಬಿ.ಆರ್.ಸವಿತಾ

ಭಾರತೀಯರು ಹೆಮ್ಮೆಪಡುವ ಕಂಪನಿ ಕಟ್ಟುವೆವು: ಟಾಟಾ

ಟಾಟಾ ಕೈಗೆ ಏರ್ ಇಂಡಿಯಾ

ನವದೆಹಲಿ (ಪಿಟಿಐ): ಸರಿಸುಮಾರು 90 ವರ್ಷಗಳ ಹಿಂದೆ ತಾನೇ ಆರಂಭಿಸಿದ್ದ ವಿಮಾನಯಾನ ಕಂಪನಿಯನ್ನು ಟಾಟಾ ಸನ್ಸ್ ಮರಳಿ ತನ್ನ ತೆಕ್ಕೆಗೆ ತೆಗೆದುಕೊಳ್ಳಲಿದೆ. ಏರ್ ಇಂಡಿಯಾ ಖರೀದಿಗೆ ಟಾಟಾ ಸನ್ಸ್ ಸಲ್ಲಿಸಿದ್ದ ₹ 18 ಸಾವಿರ ಕೋಟಿ ಮೊತ್ತದ ಬಿಡ್ ಅನ್ನು ಕೇಂದ್ರ ಸರ್ಕಾರ ಒಪ್ಪಿಕೊಂಡಿದೆ. ಸಾಲದ ಸುಳಿಯಲ್ಲಿ ಇರುವ ಏರ್ ಇಂಡಿಯಾದ ಶೇಕಡ 100ರಷ್ಟು ಷೇರುಗಳನ್ನು ಟಾಟಾ ಸನ್ಸ್ ತನ್ನದಾಗಿಸಿಕೊಳ್ಳಲಿದೆ.

ಟಾಟಾ ಸಮೂಹವು ₹ 2,700 ಕೋಟಿ ನಗದು ಪಾವತಿಸಿ, ₹ 15,300 ಕೋಟಿ ಮೊತ್ತದ ಸಾಲವನ್ನು ತಾನು ವಹಿಸಿಕೊಳ್ಳುವ ಮೂಲಕ ಏರ್ ಇಂಡಿಯಾ ಕಂಪನಿಯನ್ನು ತನ್ನದಾಗಿಸಿಕೊಳ್ಳಲಿದೆ ಎಂದು ಹೂಡಿಕೆ ಮತ್ತು ಸಾರ್ವಜನಿಕ ಆಸ್ತಿ ನಿರ್ವಹಣೆ ಇಲಾಖೆಯ ಕಾರ್ಯದರ್ಶಿ ತುಹಿನ್ ಕಾಂತ ಪಾಂಡೆ ಅವರು ಸುದ್ದಿಗಾರರಿಗೆ ತಿಳಿಸಿದರು.

ಸ್ಪೈಸ್‌ಜೆಟ್ ಕಂಪನಿಯ ಪ್ರವರ್ತಕ ಅಜಯ್ ಸಿಂಗ್ ಅವರು ₹ 15,100 ಕೋಟಿ ಮೊತ್ತದ ಬಿಡ್ ಸಲ್ಲಿಸಿದ್ದರು. 2004–05ರ ನಂತರದ ಮೊದಲ ಖಾಸಗೀಕರಣ ಪ್ರಕ್ರಿಯೆ ಇದು. ಏರ್ ಇಂಡಿಯಾ ಕಂಪನಿಯು ಟಾಟಾ ಸಮೂಹದ ಪಾಲಿಗೆ ಮೂರನೆಯ ವಿಮಾನಯಾನ ಕಂಪನಿ ಆಗಿರಲಿದೆ.

ನೂರಕ್ಕೂ ಹೆಚ್ಚು ವಿಮಾನಗಳು, ಸಾವಿರಾರು ಪೈಲಟ್‌ಗಳು ಮತ್ತು ಸಿಬ್ಬಂದಿ, ವಿಶ್ವದ ಹಲವೆಡೆ ವಿಮಾನ ನಿಲ್ದಾಣಗಳಲ್ಲಿ ನಿಲುಗಡೆ ಸ್ಥಳಗಳು ಟಾಟಾ ಸಮೂಹದ ಪಾಲಿಗೆ ಸಿಗಲಿವೆ.

2017ರಿಂದಲೂ ಏರ್ ಇಂಡಿಯಾ ಕಂಪನಿಯನ್ನು ಖಾಸಗಿಯವರಿಗೆ ಮಾರಾಟ ಮಾಡಲು ಯತ್ನ ನಡೆದಿತ್ತು. ಆದರೆ ಆ ಯತ್ನಗಳು ಫಲ ನೀಡಿರಲಿಲ್ಲ. ಇದು ಮೂರನೆಯ ಪ್ರಯತ್ನವಾಗಿತ್ತು. ಏರ್ ಇಂಡಿಯಾದ ಸಾಲದಲ್ಲಿ ಎಷ್ಟು ಪಾಲನ್ನು ತಾವು ವಹಿಸಿಕೊಳ್ಳಲು ಸಿದ್ಧ ಎಂಬುದನ್ನು ಬಿಡ್ ಮಾಡುವ ಕಂಪನಿಗಳೇ ತಿಳಿಸಬಹುದು ಎಂದು ಕಳೆದ ಅಕ್ಟೋಬರ್‌ನಲ್ಲಿ ಕೇಂದ್ರ ಹೇಳಿತ್ತು. ಏರ್ ಇಂಡಿಯಾ ಕಂಪನಿ ಮತ್ತು ಇಂಡಿಯನ್ ಏರ್‌ಲೈನ್ಸ್ ಕಂಪನಿಯನ್ನು 2007ರಲ್ಲಿ ವಿಲೀನ ಮಾಡಿದಾಗಿನಿಂದಲೂ ನಷ್ಟ ಉಂಟಾಗುತ್ತಿದೆ.

'ಏರ್ ಇಂಡಿಯಾಕ್ಕೆ ಸ್ವಾಗತ. ಏರ್ ಇಂಡಿಯಾ ಬಿಡ್ ಗೆದ್ದುಕೊಂಡಿರುವುದು ದೊಡ್ಡ ಸುದ್ದಿ. ವಿಮಾನಯಾನ ಕಂಪನಿಯನ್ನು ಮರಳಿ ಕಟ್ಟಲು ಗಣನೀಯ ಪ್ರಯತ್ನ ಬೇಕು. ವಿಮಾನಯಾನ ಉದ್ಯಮದಲ್ಲಿ ಟಾಟಾ ಸಮೂಹಕ್ಕೆ ಬಲಿಷ್ಠ ಮಾರುಕಟ್ಟೆ ಅವಕಾಶವನ್ನು ಇದು ಕಲ್ಪಿಸಲಿದೆ ಎಂದು ಆಶಿಸುತ್ತೇನೆ' ಎಂದು ಟಾಟಾ ಸನ್ಸ್‌ನ ಗೌರವಾಧ್ಯಕ್ಷ ರತನ್ ಟಾಟಾ ಹೇಳಿದ್ದಾರೆ.

ಏರ್ ಇಂಡಿಯಾ ಮತ್ತು ಅದಕ್ಕೆ ಸಂಬಂಧಿಸಿದ ಕಂಪನಿಗಳ ಒಟ್ಟು ಸಾಲ ₹ 61,562 ಕೋಟಿ. ಈ ಪೈಕಿ ₹ 15,300 ಕೋಟಿ ಸಾಲವನ್ನು ಟಾಟಾ ಸನ್ಸ್ ಹೊತ್ತುಕೊಳ್ಳಲಿದೆ. ಇನ್ನುಳಿದ ಮೊತ್ತವು ಏರ್ ಇಂಡಿಯಾ ಅಸೆಟ್ಸ್ ಹೋಲ್ಡಿಂಗ್ ಲಿಮಿಟೆಡ್‌ಗೆ ವರ್ಗಾವಣೆ ಆಗಲಿದೆ.

12ನೇ ಪುಟ ನೋಡಿ

ಟಾಟಾ ಸಮೂಹದ ಅಧ್ಯಕ್ಷರಾಗಿದ್ದ ಉದ್ಯಮಿ ಜೆಆರ್‌ಡಿ ಟಾಟಾ ಅವರು ಏರ್ ಇಂಡಿಯಾ ವಿಮಾನದಿಂದ ಕೆಳಕ್ಕೆ ಇಳಿಯುತ್ತಿರುವ ಈ ಚಿತ್ರವನ್ನು ರತನ್ ಟಾಟಾ ಅವರು ಟ್ವಿಟರ್ ಮೂಲಕ ಹಂಚಿಕೊಂಡಿದ್ದಾರೆ

ಜೆಆರ್‌ಡಿ ಟಾಟಾ ಅವರು ಈಗ ನಮ್ಮ ನಡುವೆ ಇದ್ದಿದ್ದರೆ ಬಹಳ ಖುಷಿಪಡುತ್ತಿದ್ದರು
ರತನ್ ಟಾಟಾ, ಟಾಟಾ ಸನ್ಸ್ ಕಂಪನಿಯ ಗೌರವಾಧ್ಯಕ್ಷ

ಇದೊಂದು ಐತಿಹಾಸಿಕ ಕ್ಷಣ. ದೇಶದ ಮುಂಚೂಣಿ ವಿಮಾನಯಾನ ಕಂಪನಿಯನ್ನು ತನ್ನದಾಗಿಸಿಕೊಳ್ಳುವ ವಿಶೇಷ ಹಕ್ಕೊಂದು ನಮ್ಮ ಸಮೂಹಕ್ಕೆ ಸಿಕ್ಕಿದೆ.
ಎನ್. ಚಂದ್ರಶೇಖರನ್
ಟಾಟಾ ಸನ್ಸ್‌ನ ಅಧ್ಯಕ್ಷ

UNIVERSAL COACHING CENTRE
VIJAYANAGAR, BANGALORE
KAS IAS
New Batch from 18th October
KAS Mains Batch Shortly
Notification shortly
9686664983
6366816622

ವಿಜಯೇಂದ್ರ ಸಹಪಾಠಿ ಸೇರಿ ಹಲವರ ಮನೆಗಳಲ್ಲಿ ಶೋಧ

ಅಪಾರ ದಾಖಲೆಗಳ ವಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸರ್ಕಾರಿ ಕಾಮಗಾರಿಗಳ ಭ್ರಷ್ಟಾಚಾರ, ತೆರಿಗೆ ವಂಚನೆ ಮತ್ತು ಅಕ್ರಮ ಹಣದ ವಹಿವಾಟು ಕುರಿತು ಶುಕ್ರವಾರವೂ ಶೋಧ ಮುಂದುವರಿಸಿರುವ ಆದಾಯ ತೆರಿಗೆ (ಐ.ಟಿ) ಇಲಾಖೆ ಅಧಿಕಾರಿಗಳು, ಮುಖ್ಯಮಂತ್ರಿ ಸಚಿವಾಲಯ ಸಿಬ್ಬಂದಿಯಾಗಿದ್ದ ಆಯನೂರು ಉಮೇಶ್ ನಿವಾಸದಿಂದ ಜಲ ಸಂಪನ್ಮೂಲ ಇಲಾಖೆಯ ಅಧೀನದ ನೀರಾವರಿ ನಿಗಮಗಳ ಕಾಮಗಾರಿಗಳ ಟೆಂಡರ್‌ಗಳಿಗೆ ಸಂಬಂಧಿಸಿದ ಅಪಾರ ದಾಖಲೆಗಳನ್ನು ವಶಪಡಿಸಿಕೊಂಡಿದ್ದಾರೆ.

ಬಿಜೆಪಿ ನಾಯಕ ಬಿ.ಎಸ್. ಯಡಿಯೂರಪ್ಪ ಕುಟುಂಬದ ಆಪ್ತ ವಲಯದಲ್ಲಿ ಗುರುತಿಸಿಕೊಂಡಿದ್ದ ಉಮೇಶ್, ದೀರ್ಘಕಾಲದಿಂದ ಮುಖ್ಯಮಂತ್ರಿಯವರ ಸಚಿವಾಲಯದಲ್ಲಿ ನಿಯೋಜನೆ ಮೇಲೆ ಕೆಲಸ ಮಾಡುತ್ತಿದ್ದರು.

9ನೇ ಪುಟ ನೋಡಿ

ಗುತ್ತಿಗೆದಾರ ಉಪ್ಪಾರ್‌ಗೆ 'ಕ್ಲೀನ್ ಚಿಟ್' ಕೊಟ್ಟ ಸರ್ಕಾರ

● ರಾಜೇಶ್ ರೈ ಚಟ್ಲ

ಬೆಂಗಳೂರು: ಜಲ ಸಂಪನ್ಮೂಲ ಇಲಾಖೆಯ ನಾಲ್ಕೂ ನೀರಾವರಿ ನಿಗಮಗಳಡಿ 2015ರಿಂದ 2019ರ ಮಧ್ಯೆ ಡಿ.ವೈ.ಉಪ್ಪಾರ್ ಸಹಭಾಗಿತ್ವದ 'ಎಡಿಯು ಇನ್ಫ್ರಾ' ಎಂಬ ಕಂಪನಿ ಗುತ್ತಿಗೆ ಪಡೆದ ₹ 17,685.52 ಕೋಟಿ ಮೊತ್ತದ ಎಂಟು ಬೃಹತ್ ಕಾಮಗಾರಿಗಳಲ್ಲಿ ನೂರಾರು ಕೋಟಿ ಮೊತ್ತದ ಅಕ್ರಮ ನಡೆದಿದೆ ಎಂಬ ದೂರಿನ ಮೇಲೆ ವಿಚಾರಣೆ ನಡೆಸಿರುವ ಸತ್ಯಶೋಧನಾ ತಂಡ, 'ಕ್ಲೀನ್ ಚಿಟ್' ನೀಡಿದೆ.

ಇಲಾಖೆಯ ನಿವೃತ್ತ ಕಾರ್ಯದರ್ಶಿ ಎಸ್.ಜೆ. ಚನ್ನಬಸಪ್ಪ ಮತ್ತು ಎಚ್.ಡಿ.ಕುಮಾರಸ್ವಾಮಿ ಅವರು ಮುಖ್ಯಮಂತ್ರಿ ಆಗಿದ್ದಾಗ ತಾಂತ್ರಿಕ ಸಲಹೆಗಾರರಾಗಿದ್ದ ಎಂ.ಕೆ. ವೆಂಕಟರಾಮ್ ಅವರನ್ನೊಳಗೊಂಡ ಸತ್ಯಶೋಧನಾ ತಂಡವನ್ನು ರಾಜ್ಯ ಸರ್ಕಾರ 2020ರ ನ. 25ರಂದು ರಚಿಸಿತ್ತು. ಕೇವಲ ಮೂರು ತಿಂಗಳಲ್ಲಿ ವಿಚಾರಣೆ ನಡೆಸಿ ಮಾರ್ಚ್ 1ರಂದು ತಂಡ ವರದಿ ಸಲ್ಲಿಸಿದೆ. ವರದಿಯನ್ನು ಯಥಾವತ್ ಒಪ್ಪಿ ಈ ವರ್ಷದ ಜುಲೈ 5 ರಂದು ಆದೇಶ ಹೊರಡಿಸಿರುವ ಸರ್ಕಾರ, ಹೆಚ್ಚುವರಿಯಾಗಿ ಪಾವತಿಯಾಗಿರುವ ₹ 52 ಕೋಟಿಯನ್ನು ಗುತ್ತಿಗೆದಾರರ ಬಿಲ್‌ಗಳಲ್ಲಿ ಸರಿ ಹೊಂದಿಸಬೇಕೆಂಬ ಶಿಫಾರಸು ಒಪ್ಪಿ ಪ್ರಕರಣವನ್ನು ಮುಕ್ತಾಯಗೊಳಿಸಿದೆ.

9ನೇ ಪುಟ ನೋಡಿ

ಇಬ್ಬರು ಪತ್ರಕರ್ತರಿಗೆ ನೊಬೆಲ್ ಶಾಂತಿ ಪ್ರಶಸ್ತಿ

ಓಸ್ಲೊ (ಎಪಿ): ಪತ್ರಕರ್ತರಾದ ಫಿಲಿಪ್ಪೀನ್ಸ್‌ನ ಮರಿಯಾ ರೆಸ್ಸಾ ಮತ್ತು ರಷ್ಯಾದ ಡಿಮಿಟ್ರಿ ಮುರಾಟೋವ್ ಅವರಿಗೆ ಶುಕ್ರವಾರ ನೊಬೆಲ್ ಶಾಂತಿ ಪ್ರಶಸ್ತಿ ಘೋಷಿಸಲಾಗಿದೆ.

'ವಿಶ್ವ ದೆಲ್ಲೆಡೆ ಪ್ರಜಾಪ್ರಭುತ್ವ ಮತ್ತು ಪತ್ರಿಕಾ ಸ್ವಾತಂತ್ರ್ಯ ಪ್ರತಿಕೂಲ ಪರಿಸ್ಥಿತಿಗಳನ್ನು ಎದುರಿಸುತ್ತಿವೆ. ಅದರ ರಕ್ಷಣೆಗಾಗಿ ನಿಲ್ಲುವ ಎಲ್ಲ ಪತ್ರಕರ್ತರನ್ನು ಈ ಇಬ್ಬರೂ ಪ್ರಶಸ್ತಿ ಪುರಸ್ಕೃತರು ಪ್ರತಿನಿಧಿಸುತ್ತಾರೆ' ಎಂದು ನೊಬೆಲ್ ಪ್ರಶಸ್ತಿ ಆಯ್ಕೆ ಸಮಿತಿ ಅಧ್ಯಕ್ಷೆ ಬೆರಿಟ್ ರೀಸ್ ಆಂಡರ್‌ಸನ್ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.



ಡಿಮಿಟ್ರಿ ಮುರಾಟೋವ್

ಮರಿಯಾ ರೆಸ್ಸಾ

ನೊಬೆಲ್ ಪ್ರಶಸ್ತಿಯನ್ನು ಸ್ಥಾಪಿಸಿದ ಆಲ್ಫ್ರೆಡ್ ನೊಬೆಲ್ ಅವರ ಪುಣ್ಯಸ್ಮರಣೆ ದಿನವಾದ ಡಿ.10ರಂದು ಈ ಪ್ರಶಸ್ತಿಯನ್ನು ಪ್ರದಾನ ಮಾಡಲಾಗುತ್ತದೆ.

2012ರಲ್ಲಿ ಆರಂಭವಾದ 'ರಾಪ್ಲರ್' ಎಂಬ ನ್ಯೂಸ್ ವೆಬ್‌ಸೈಟ್ ಸಹ ಸ್ಥಾಪಕರಲ್ಲಿ ರೆಸ್ಸಾ ಒಬ್ಬರು. ಮುರಾಟೋವ್ ಅವರು 1993ರಲ್ಲಿ ರಷ್ಯಾದ ಸ್ವತಂತ್ರ ಪತ್ರಿಕೆ 'ನೊವಾಯಾ ಗೆಜೆಟಾ' ಸ್ಥಾಪಕರಲ್ಲಿ ಒಬ್ಬರಾಗಿದ್ದಾರೆ.

ಗೋಲ್ಡ್ ಲೋನ್
ಬಡ್ಡಿ 58* ಪೈಸೆ
ಪ್ರತಿ ತಿಂಗಳು
*7% ಪ್ರತಿ ವರ್ಷ
ಮಣಪ್ಪುರಂ ಫೈನಾನ್ಸ್ ಲಿಮಿಟೆಡ್
Make Life Easy
Toll Free : 1800-420-22-33

ಸುದರ್ಶನ್ ಜ್ಯುವೆಲರ್ಸ್
ಚಿನ್ನ ❖ ಬೆಳ್ಳಿ ❖ ಚಿನ್ನದ ಆಭರಣಗಳು
916 Hallmark Gold Rate
₹ 4305/-gm
ಬೆಳ್ಳಿ ₹ 58,000/- *CA
ಚಿಕ್ಕಪೇಟೆ: 41300355
Gangothri

ಅರುಣಾಚಲ ಪ್ರದೇಶದ ತವಾಂಗ್ ಬಳಿ ಸಂಘರ್ಷ

ಚೀನಾ ಅತಿಕ್ರಮಣಕ್ಕೆ ತಿರುಗೇಟು

ನವದೆಹಲಿ (ಪಿಟಿಐ): ಭಾರತ ಮತ್ತು ಚೀನಾ ಸೈನಿಕರು ಅರುಣಾಚಲ ಪ್ರದೇಶದ ತವಾಂಗ್ ಬಳಿಯ ಯೆಂಗ್‌ಟ್ಸೆ ಎಂಬಲ್ಲಿ ಮುಖಾಮುಖಿಯಾಗಿದ್ದಾರೆ. ಚೀನಾ ಸೈನಿಕರು ಭಾರತದ ಗಡಿಯನ್ನು ಅತಿಕ್ರಮಿಸುವುದನ್ನು ತಡೆಯಲಾಗಿದೆ. ಯಾವುದೇ ಅಹಿತಕರ ಘಟನೆ ನಡೆಯದೆ, ಎರಡೂ ಕಡೆಯ ಸೈನಿಕರು ತಮ್ಮ ಸ್ಥಾನಗಳಿಗೆ ಮರಳಿದ್ದಾರೆ ಎಂದು ಮೂಲಗಳು ಹೇಳಿವೆ.

ಸೆಪ್ಟೆಂಬರ್ ಕೊನೆಯ ವಾರದಲ್ಲಿ ಈ ಘಟನೆ ನಡೆದಿದೆ. ಪೂರ್ವ ಲಡಾಖ್‌ನಲ್ಲಿನ ಸಂಘರ್ಷದ ಸಂಬಂಧ ಎರಡೂ ಕಡೆಯ ಸೇನಾಧಿಕಾರಿಗಳ ಸಭೆ ಮುಂದಿನ ವಾರ ನಡೆಯಲಿದೆ. ಆದರೆ ಅದಕ್ಕೂ ಮುನ್ನವೇ ಈ ಮುಖಾಮುಖಿ ನಡೆದಿದೆ.

'ಯೆಂಗ್‌ಟ್ಸೆ ಪ್ರದೇಶವು ಭೂತಾನ್‌ನ ಗಡಿಗೆ ಹೊಂದಿಕೊಂಡಿರುವ ಬುಮ್‌-ಲಾ ಪಾಸ್‌ಗೆ ಹತ್ತಿರವಿದೆ. ಅಲ್ಲಿನ ವಾಸ್ತವ ನಿಯಂತ್ರಣ ರೇಖೆಯುದ್ದಕ್ಕೂ ಎರಡೂ ಕಡೆಯ ಸೈನಿಕರು ಗಸ್ತು ತಿರುಗುತ್ತಿರುತ್ತಾರೆ. ಹೀಗೆ ಗಸ್ತು ತಿರುಗುವಾಗ ಮುಖಾಮುಖಿ ನಡೆದಿದೆ. ಭಾರತದ ಗಡಿಯನ್ನು ಚೀನಾ ಸೈನಿಕರು ಅತಿಕ್ರಮಿಸಲು ಮುಂದಾಗಿದ್ದರು. ಆಗ ಅಲ್ಲಿಗೆ ಭಾರತದ ಸೈನಿಕರು ತೆರಳಿದ್ದಾರೆ. ಚೀನಾ ಸೈನಿಕರನ್ನು ತಡೆದಿದ್ದಾರೆ' ಎಂದು ಮೂಲಗಳು ಹೇಳಿವೆ.

'ಮುಖಾಮುಖಿಯಾದ ನಂತರ ನಾಲ್ಕೈದು ತಾಸುಗಳವರೆಗೆ ಸಂಘರ್ಷ ನಡೆದಿದೆ. ಆದರೆ ಯಾರಿಗೂ ಗಾಯಗಳಾಗಿಲ್ಲ. ನಂತರ, ಜಾರಿಯಲ್ಲಿರುವ ಮಾರ್ಗಸೂಚಿಯ ಅನ್ವಯ ಎರಡೂ ಕಡೆಯ ಸೈನಿಕರು ವಾಪಸ್ಸಾಗಿದ್ದಾರೆ' ಎಂದು ಮೂಲಗಳು ಮಾಹಿತಿ ನೀಡಿವೆ.

9ನೇ ಪುಟ ನೋಡಿ

ಅ.13 ರಿಂದ 20: ಪಿ.ಯು ಕಾಲೇಜುಗಳಿಗೆ ರಜೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪದವಿಪೂರ್ವ ಕಾಲೇಜುಗಳಿಗೆ ಇದೇ 13 ರಿಂದ 20 ರವರೆಗೆ ದಸರಾ ರಜೆ ಘೋಷಿಸಲಾಗಿದೆ.

ಕರ್ನಾಟಕ ಪದವಿ ಪೂರ್ವ ಕಾಲೇಜುಗಳ ಉಪನ್ಯಾಸಕರ ಸಂಘ ಈ ಸಂಬಂಧ ಕೋರಿಕೆ ಸಲ್ಲಿಸಿತ್ತು ಎಂದು ಪದವಿ ಪೂರ್ವ ಶಿಕ್ಷಣ ಇಲಾಖೆ ಜಂಟಿ ನಿರ್ದೇಶಕರು ಆದೇಶದಲ್ಲಿ ತಿಳಿಸಿದ್ದಾರೆ.

ವಿಚಾರಣೆಗೆ ಹಾಜರಾಗದ ಆಶಿಶ್ ಮಿಶ್ರಾ 9

ವಾಯುಪಡೆ: 3 ತುಕಡಿಗಳಿಗೆ ಪ್ರಶಂಸಾ ಪತ್ರ 10

ಒಳ ಪುಟ
ಸಿಂದಗಿ: ಕಾಂಗ್ರೆಸ್, ಬಿಜೆಪಿ ಶಕ್ತಿ ಪ್ರದರ್ಶನ 8

ಚಿನಕುರಳಿ

ಪ್ರಕಾಶ್ ಶೆಟ್ಟಿ

ಚಿಕ್ಕಗೊಲ್ಲರಹಟ್ಟಿ ಬಳಿ ಅವಘಡ: ಇಬ್ಬರಿಗೆ ತೀವ್ರ ಗಾಯ

ಗುಂಡಿಯಿಂದಾಗಿ ಅಪಘಾತ: ಪ್ರಾಣ ಬಿಟ್ಟ ಬಾಲಕಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ಹೊರ ವಲಯದ ಚಿಕ್ಕಗೊಲ್ಲರಹಟ್ಟಿ ಬಳಿ ಮುಖ್ಯರಸ್ತೆಯಲ್ಲಿ ಗುಂಡಿ ತಪ್ಪಿಸಲು ಹೋಗಿ ಅಪಘಾತ ಸಂಭವಿಸಿದ್ದು, ನುಬಿಯಾ (17) ಎಂಬಾಕೆ ಸ್ಥಳದಲ್ಲೇ ಪ್ರಾಣ ಬಿಟ್ಟಿದ್ದಾರೆ.

ಮಾದನಾಯಕನಹಳ್ಳಿ ಠಾಣೆ ವ್ಯಾಪ್ತಿಯಲ್ಲಿ ಶುಕ್ರವಾರ ಬೆಳಿಗ್ಗೆ ನಡೆದಿರುವ ಅವಘಡದಲ್ಲಿ ಹರಾನ್ (30) ಹಾಗೂ ಅಫ್ರಿನ್ (15) ಎಂಬುವರು ತೀವ್ರ ಗಾಯಗೊಂಡಿದ್ದು, ಅವರನ್ನು ಆಸ್ಪತ್ರೆಗೆ ದಾಖಲಿಸಲಾಗಿದೆ.

'ಬೆಂಗಳೂರಿನ ಗೋರಿಪಾಳ್ಯ ನಿವಾಸಿ ಹರಾನ್, ಯಮಹಾ ಮೊಪೆಡ್ ದ್ವಿಚಕ್ರ ವಾಹನದಲ್ಲಿ ನುಬಿಯಾ ಹಾಗೂ ಅಫ್ರಿನ್ ಅವರನ್ನು ಕರೆದುಕೊಂಡು ತಾವರೆಕೆರೆಯತ್ತ ಸಂಬಂಧಿಕರ ಮನೆಗೆ ಹೊರಟಿದ್ದರು. ಈ ಮಾರ್ಗದಲ್ಲಿ ರಸ್ತೆ ಹಾಳಾಗಿ ಹಲವೆಡೆ ದೊಡ್ಡ ಗುಂಡಿಗಳು ಬಿದ್ದಿದ್ದವು' ಎಂದು ಪೊಲೀಸ್ ಮೂಲಗಳು ಹೇಳಿವೆ.

5A ಪುಟ ನೋಡಿ

'ಗುಂಡಿ ಮುಚ್ಚದ ಅಧಿಕಾರಿಗಳು'

'ಯಲಹಂಕ ವಿಧಾನಸಭಾ ಕ್ಷೇತ್ರದ ಕಾಚೋಹಳ್ಳಿ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ರಸ್ತೆ ಇದೆ. ಲೋಕೋಪಯೋಗಿ ಇಲಾಖೆ ರಸ್ತೆ ನಿರ್ವಹಣೆ ಮಾಡುತ್ತದೆ. ಹಲವು ತಿಂಗಳಿನಿಂದ ರಸ್ತೆಯಲ್ಲಿ ಗುಂಡಿಗಳು ಬಿದ್ದಿದ್ದು, ಇವುಗಳನ್ನು ಮುಚ್ಚಲು ಅಧಿಕಾರಿಗಳು ಯಾವುದೇ ಕ್ರಮ ಕೈಗೊಂಡಿಲ್ಲ. ಅಧಿಕಾರಿಗಳ ನಿರ್ಲಕ್ಷ್ಯವೇ ಬಾಲಕಿ ಸಾವಿಗೆ ಕಾರಣ' ಎಂದು ಸ್ಥಳೀಯರು ಆಕ್ರೋಶ ವ್ಯಕ್ತಪಡಿಸಿದರು.

'ರಸ್ತೆಯಲ್ಲಿರುವ ಗುಂಡಿಯಿಂದಾಗಿ ನಿತ್ಯವೂ ಅಪಘಾತಗಳು ಸಂಭವಿಸುತ್ತಿದ್ದು, ಹಲವರು ಗಾಯಗೊಳ್ಳುತ್ತಿದ್ದಾರೆ. ಗುಂಡಿ ಮುಚ್ಚಲು ಹಲವು ಬಾರಿ ಸಂಬಂಧಪಟ್ಟ ಅಧಿಕಾರಿಗಳಿಗೆ ಹಾಗೂ ಜನಪ್ರತಿನಿಧಿಗಳಿಗೆ ಮನವಿ ಸಲ್ಲಿಸಲಾಗಿದೆ. ಕಾಮಗಾರಿ ಬಾಕಿ ನೆಪದಲ್ಲಿ ಯಾರೊಬ್ಬರೂ ಗುಂಡಿ ಮುಚ್ಚಲು ಕ್ರಮ ಕೈಗೊಂಡಿಲ್ಲ' ಎಂದೂ ಅವರು ದೂರಿದರು.

ಗುಂಡಿಯಿಂದ ಸಂಭವಿಸಿದ್ದ ಅವಘಡಗಳು

- ಬೆಂಗಳೂರಿನ ಹೆಸರಘಟ್ಟ ಮುಖ್ಯರಸ್ತೆಯಲ್ಲಿ ಜಲಮಂಡಳಿಯ ಕಾಮಗಾರಿ ಸಲುವಾಗಿ ತೋಡಿದ್ದ ಗುಂಡಿಯಲ್ಲಿ ಬಿದ್ದು ದ್ವಿಚಕ್ರ ವಾಹನ ಸವಾರ ಬಾಗಲಗುಂಟೆಯ ಆನಂದಪ್ಪ (47) ಎಂಬುವರು ಸೆ. 17ರಂದು ತಡರಾತ್ರಿ ಮೃತಪಟ್ಟಿದ್ದರು. ಈ ಬಗ್ಗೆ ಪೀಣ್ಯ ಸಂಚಾರ ಠಾಣೆಯಲ್ಲಿ ಪ್ರಕರಣ ದಾಖಲಾಗಿತ್ತು.
- ಕಾಮಾಕ್ಷಿಪಾಳ್ಯ ಸಂಚಾರ ಠಾಣೆ ವ್ಯಾಪ್ತಿಯ ಮಂಗನಹಳ್ಳಿ ಮುಖ್ಯರಸ್ತೆಯಲ್ಲಿ ಗುಂಡಿಯಿಂದಾಗಿ ದ್ವಿಚಕ್ರ ವಾಹನ ಉರುಳಿ ಬಿದ್ದಿದ್ದು, ಸವಾರ ಮೈಕೊ ಲೇಔಟ್ ಬಿಸ್ಮಿಲ್ಲಾ ನಗರದ ಖುರ್ಷಿದ್ ಅಹ್ಮದ್ (65) ಎಂಬುವರು ಸೆ. 7ರಂದು ಮೃತಪಟ್ಟಿದ್ದರು.

'ಬಿಬಿಎಂಪಿ ವ್ಯಾಪ್ತಿಯಲ್ಲಿಲ್ಲ'

ಅಪಘಾತ ಸಂಭವಿಸಿದ್ದ ರಸ್ತೆ ಬಿಬಿಎಂಪಿ ವ್ಯಾಪ್ತಿಯಲ್ಲಿರುವುದಾಗಿ ಸ್ಥಳೀಯರು ಹೇಳಿದ್ದರು. ಅದಕ್ಕೆ ಪ್ರತಿಕ್ರಿಯಿಸಿರುವ ಬಿಬಿಎಂಪಿ ರಾಜರಾಜೇಶ್ವರಿನಗರ ವಲಯದ ಜಂಟಿ ಆಯುಕ್ತ ನಾಗರಾಜ್, 'ರಸ್ತೆಯು ಬಿಬಿಎಂಪಿ ವ್ಯಾಪ್ತಿಗೆ ಬರುವುದಿಲ್ಲ' ಎಂದಿದ್ದಾರೆ.

'ಅಪಘಾತದ ಮಾಹಿತಿ ಬರುತ್ತಿದ್ದಂತೆ ಕೆಂಗೇರಿ ವಿಭಾಗದ ಕಾರ್ಯಪಾಲಕ ಎಂಜಿನಿಯರ್, ಸ್ಥಳಕ್ಕೆ ಹೋಗಿ ಪರಿಶೀಲನೆ ನಡೆಸಿದರು. ಈ ಮುಖ್ಯರಸ್ತೆಯು ನಮ್ಮ ವ್ಯಾಪ್ತಿಗೆ ಬರುವುದಿಲ್ಲವೆಂಬುದು ತಿಳಿಯಿತು' ಎಂದೂ ಹೇಳಿದ್ದಾರೆ. 'ಮುಖ್ಯರಸ್ತೆಯ ಬಲಭಾಗದ ಪ್ರದೇಶ ಯಲಹಂಕ ವಿಧಾನಸಭಾ ಕ್ಷೇತ್ರದಲ್ಲಿದೆ. ಎಡಭಾಗದ ಪ್ರದೇಶ ಯಶವಂತಪುರ ವಿಧಾನಸಭಾ ಕ್ಷೇತ್ರದಲ್ಲಿದೆ. ಎರಡೂ ಕ್ಷೇತ್ರಗಳ ಮಧ್ಯದಲ್ಲಿ ಈ ಮುಖ್ಯರಸ್ತೆ ಇದೆ' ಎಂದೂ ತಿಳಿಸಿದ್ದಾರೆ.

SHREE SAI GOLD PALACE
Redefining Jewellery
Gold | Diamond | Silver | Platinum
YELAHANKA • HSR LAYOUT • KR PURAM • BASAVANAGUDI • BENGALURU
www.saigoldpalace.com

ನಮ್ಮ ನೆಚ್ಚಿನ ಗ್ರಾಹಕರಿಗೆ
ಶ್ರೀ ಸಾಯಿ ಗೋಲ್ಡ್ ಪ್ಯಾಲೇಸ್ ವತಿಯಿಂದ
ನಾಡ ಹಬ್ಬ ದಸರಾದ ಹಾರ್ದಿಕ ಶುಭಾಶಯಗಳು

ವೇಸ್ಟೇಜ್ ಚಾರ್ಜ್ ಮತ್ತು ಸ್ಟೋನ್ ಚಾರ್ಜ್ ಇಲ್ಲ
ಮೇಕಿಂಗ್ ಚಾರ್ಜಸ್ ಮೇಲೆ 15% ಡಿಸ್ಕೌಂಟ್

• ನಿಮ್ಮ ಹಳೆಯ (916) ಚಿನ್ನವನ್ನು ಇಂದಿನ (916) ಚಿನ್ನದ ದರಕ್ಕೆ ಬದಲಾಯಿಸಿಕೊಳ್ಳಿ
• ಪ್ರತಿ ಕೆ.ಜಿ. ಬೆಳ್ಳಿ ಆಭರಣದ ಮೇಲೆ ₹2000/– ರಿಯಾಯಿತಿ
• ಪ್ರತಿ ಕ್ಯಾರೆಟ್ ವಜ್ರದ ಮೇಲೆ ₹5000/– ರಿಯಾಯಿತಿ
• ಶ್ರೀ ಸಾಯಿ ಸಮೃದ್ಧಿ ಚಿನ್ನ ಉಳಿತಾಯ ಯೋಜನೆಗೆ ಇಂದೇ ಸದಸ್ಯರಾಗಿ

ಡಾ. ಟಿ.ಎ. ಶರವಣ
ಮಾಲೀಕರು
ಶ್ರೀ ಸಾಯಿಗೋಲ್ಡ್ ಪ್ಯಾಲೇಸ್

ಬಸವನಗುಡಿ 6366929823 | ಎಚ್ ಎಸ್ ಆರ್ ಲೇಔಟ್ 7406227661 | ಯಲಹಂಕ 9513034919 | ಕೆ. ಆರ್ . ಪುರಂ 6366947191

ಶಾಲೆ ಬಿಟ್ಟ ಮಕ್ಕಳ ಸಮೀಕ್ಷೆಗೆ ಎರಡು ತಿಂಗಳ ಕಾಲಾವಕಾಶ

ಬೆಂಗಳೂರು: ನಗರದಲ್ಲಿ ಶಾಲೆ ಬಿಟ್ಟ ಮಕ್ಕಳ ಬಗ್ಗೆ ನಡೆಸುತ್ತಿರುವ ಸಮೀಕ್ಷೆ ಪೂರ್ಣಗೊಳಿಸಲು ಬಿಬಿಎಂಪಿಗೆ ಹೈಕೋರ್ಟ್ ಎರಡು ತಿಂಗಳ ಕಾಲಾವಕಾಶ ನೀಡಿದೆ.

2013ರಲ್ಲಿ ಸ್ವಯಂಪ್ರೇರಿತವಾಗಿ ದಾಖಲಿಸಿಕೊಂಡು ಅರ್ಜಿ ವಿಚಾರಣೆ ನಡೆಸಿದ ಹಂಗಾಮಿ ಮುಖ್ಯ ನ್ಯಾಯಮೂರ್ತಿ ಸತೀಶ್ ಚಂದ್ರ ಶರ್ಮಾ ನೇತೃತ್ವದ ವಿಭಾಗೀಯ ಪೀಠ, ವಿಚಾರಣೆ ಮುಂದೂಡಿತು.

'ಶಾಲೆ ಬಿಟ್ಟ ಮಕ್ಕಳ ನಿಖರ ಮಾಹಿತಿ ಕಲೆ ಹಾಕಲು ಮನೆ-ಮನೆ ಸಮೀಕ್ಷೆ ನಡೆಸಲಾಗುತ್ತಿದೆ. 2021ರ ಸೆಪ್ಟೆಂಬರ್ ವೇಳೆಗೆ ಶೇ 12.14ರಷ್ಟು ಸಮೀಕ್ಷೆ ನಡೆದಿತ್ತು. ಈಗ ಶೇ 51ರಷ್ಟು ಪೂರ್ಣಗೊಂಡಿದೆ' ಎಂದು ಬಿಬಿಎಂಪಿ ಪರ ವಕೀಲರು ಮಾಹಿತಿ ನೀಡಿದರು.

'ಮಾಹಿತಿ ನೀಡಲು ಹಿಂಜರಿಯುವ ಜನರಿಗೆ ತಿಳಿವಳಿಕೆ ನೀಡಿ ಸಮೀಕ್ಷೆ ನಡೆಸಲು ಸಿಬ್ಬಂದಿಗೆ ತರಬೇತಿ ನೀಡಲಾಗುತ್ತಿದೆ. ಹೀಗಾಗಿ, ಸಮೀಕ್ಷೆ ಪೂರ್ಣಗೊಳಿಸಲು ಮೂರು ತಿಂಗಳ ಕಾಲಾವಕಾಶ ಬೇಕು' ಎಂದು ಮನವಿ ಮಾಡಿದರು. ಆದರೆ, ಪೀಠ ಎರಡು ತಿಂಗಳ ಕಾಲಾವಕಾಶ ನೀಡಿತು.

ಉಚಿತ ಆರೋಗ್ಯ ಶಿಬಿರ ನಾಳೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಎಚ್.ವೆಂಕಟೇಶ ದೊಡ್ಡೇರಿ ಪ್ರತಿಷ್ಠಾನವು ಪೀಪಲ್ ಟ್ರೀ ಆಸ್ಪತ್ರೆಯ ಸಹಯೋಗದಲ್ಲಿ ನೆಲಮಂಗಲ ತಾಲ್ಲೂಕಿನ ತ್ಯಾಮಗೊಂಡ್ಲು ಪಟ್ಟಣದ ಶಾರದಾ ವಿದ್ಯಾಪೀಠದಲ್ಲಿ ಅ.10ರಂದು ಉಚಿತ ಆರೋಗ್ಯ ಶಿಬಿರ ಮತ್ತು ಕೋವಿಡ್ ಲಸಿಕೆ ಅಭಿಯಾನ ಹಮ್ಮಿಕೊಂಡಿದೆ.

ಬೆಳಿಗ್ಗೆ 9.30ರಿಂದ ಸಂಜೆ 4.30ರವರೆಗೆ ಶಿಬಿರ ನಡೆಯಲಿದೆ. ಜಿಲ್ಲಾಧಿಕಾರಿ ಶ್ರೀನಿವಾಸ್ ಅವರು ಶಿಬಿರ ಉದ್ಘಾಟಿಸಲಿದ್ದಾರೆ. ಹೆಗ್ಗುಂದ ವನಕಲ್ಲು ಮಲ್ಲೇಶ್ವರ ಸಂಸ್ಥಾನ ಮಠದ ಬಸವ ರಮಾನಂದ ಸ್ವಾಮೀಜಿ ಸಾನ್ನಿಧ್ಯ ವಹಿಸಲಿದ್ದು, ಅತಿಥಿಯಾಗಿ ರಾಜ್ಯ ಅನುಸೂಚಿತ ಜಾತಿ ಮತ್ತು ಪಂಗಡಗಳ ಆಯೋಗದ ಸದಸ್ಯ ಎಚ್.ವೆಂಕಟೇಶ ದೊಡ್ಡೇರಿ ಭಾಗವಹಿಸಲಿದ್ದಾರೆ.

ಶಿಬಿರದಲ್ಲಿ ಇಸಿಜಿ, ಎಕೋ ಪರೀಕ್ಷೆಯನ್ನು ಉಚಿತವಾಗಿ ಮಾಡಲಾಗುವುದು. ಸ್ತ್ರೀರೋಗ ಮತ್ತು ಮಕ್ಕಳ ತಜ್ಞರೂ ಇರಲಿದ್ದಾರೆ. ಆಸಕ್ತರು ಬಿಪಿಎಲ್ ಕಾರ್ಡ್ ಮತ್ತು ವೈದ್ಯಕೀಯ ದಾಖಲೆ ತರಬೇಕು ಎಂದು ಪ್ರಕಟಣೆ ತಿಳಿಸಿದೆ. ಸಂಪರ್ಕ: 9900456379, 9740318313

ದೇಶದಲ್ಲಿ ಬೆಂಗಳೂರಿಗೆ ಎರಡನೇ ಸ್ಥಾನ

ರಾಜ್ಯದಲ್ಲಿ ವಾರ್ಷಿಕ 9,800 ಸ್ತನ ಕ್ಯಾನ್ಸರ್ ಪ್ರಕರಣ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ರಾಜ್ಯದಲ್ಲಿ ವಾರ್ಷಿಕ 9,800ಕ್ಕೂ ಹೆಚ್ಚು ಸ್ತನ ಕ್ಯಾನ್ಸರ್‌ನ ಪ್ರಕರಣಗಳು ಪತ್ತೆಯಾಗುತ್ತಿವೆ. ರೋಗಿಗಳ ಸರಾಸರಿ ವಯಸ್ಸು 50–70 ರಿಂದ 30–50 ವರ್ಷಗಳಿಗೆ ಬದಲಾಗಿದೆ. ಯುವತಿಯರಲ್ಲಿ ಈ ಕಾಯಿಲೆ ತೀವ್ರ ಸ್ವರೂಪ ಪಡೆದುಕೊಳ್ಳುತ್ತಿದೆ' ಎಂದು ಕಿದ್ವಾಯಿ ಸ್ಮಾರಕ ಗಂಥಿ ಸಂಸ್ಥೆಯ ನಿರ್ದೇಶಕ ಡಾ.ಸಿ. ರಾಮಚಂದ್ರ ತಿಳಿಸಿದ್ದಾರೆ.

'ಹಿಂದಿನ ವರ್ಷಗಳಲ್ಲಿ ಅತಿ ಹೆಚ್ಚು ಸ್ತನ ಕ್ಯಾನ್ಸರ್ ಪ್ರಕರಣಗಳು ವರದಿಯಾಗಿರುವ ನಗರಗಳ ಪೈಕಿ ಬೆಂಗಳೂರು, ದೇಶದಲ್ಲಿಯೇ ಎರಡನೇ ಸ್ಥಾನದಲ್ಲಿದೆ. 1982ರಲ್ಲಿ ಪ್ರತಿ 1 ಲಕ್ಷ ಮಂದಿ ಪೈಕಿ 15 ಜನರಲ್ಲಿ ಸ್ತನ ಕ್ಯಾನ್ಸರ್ ಕಾಣಿಸಿಕೊಳ್ಳುತ್ತಿತ್ತು. ಅದು 40.5ಕ್ಕೆ ಏರಿಕೆಯಾಗಿದೆ. ಇದು ಮತ್ತಷ್ಟು ಹೆಚ್ಚಳವಾಗುವ ಸಾಧ್ಯತೆ ಇದೆ' ಎಂದು ಹೇಳಿದ್ದಾರೆ.

'ಕಿದ್ವಾಯಿ ಸಂಸ್ಥೆಯಲ್ಲಿ ಪ್ರತಿ ವರ್ಷ ಸುಮಾರು 800 ಸ್ತನ ಕ್ಯಾನ್ಸರ್ ಪ್ರಕರಣಗಳು ದಾಖಲಾಗುತ್ತಿವೆ. ಮಹಿಳೆಯರಲ್ಲಿ ಪತ್ತೆಯಾಗುವ ಕ್ಯಾನ್ಸರ್‌ಗಳ ಪೈಕಿ ಸ್ತನ ಕ್ಯಾನ್ಸರ್ ಪ್ರಮಾಣ ಶೇ 17ರಷ್ಟಿದೆ. ಅಮೆರಿಕ (ಶೇ 89) ಮತ್ತು ಇಂಗ್ಲೆಂಡ್‌ಗೆ (ಶೇ 82) ಹೋಲಿಸಿದರೆ ಭಾರತದಲ್ಲಿ ಸ್ತನ ಕ್ಯಾನ್ಸರ್ ಪೀಡಿತರ ಬದುಕುಳಿಯುವಿಕೆ ಪ್ರಮಾಣ (ಶೇ 65) ಕಡಿಮೆ ಇದೆ. ಇತ್ತೀಚಿನ ವರ್ಷಗಳಲ್ಲಿ ಇದು ಸಾಕಷ್ಟು ಸುಧಾರಿಸಿದೆ' ಎಂದೂ ಮಾಹಿತಿ ನೀಡಿದ್ದಾರೆ.

'ಬಹುತೇಕ ಮಂದಿಯಲ್ಲಿ ಈ ರೋಗವು ತಡವಾಗಿ ಪತ್ತೆಯಾಗುತ್ತದೆ. ಅಂತಹವರ ಜೀವ ಉಳಿಸುವುದು ತುಂಬಾ ಕಷ್ಟ. ಚಿಕ್ಕ ವಯಸ್ಸಿನಲ್ಲಿ ಋತುಚಕ್ರದ ಆರಂಭ ಹಾಗೂ ಅದರ ಅಸಮರ್ಪಕತೆ, ಸಂತಾನೋತ್ಪತ್ತಿ, ಗರ್ಭನಿರೋಧಕಗಳ ಬಳಕೆ, ಮದ್ಯಪಾನ, ಬೊಜ್ಜು, ಪ್ರೌಢಾವಸ್ಥೆಯಲ್ಲಿ ತೂಕ ಹೆಚ್ಚಳ ಹೀಗೆ ಹಲವು ಅಂಶಗಳು ಸ್ತನ ಕ್ಯಾನ್ಸರ್‌ಗೆ ದಾರಿ ಮಾಡಿಕೊಡುತ್ತವೆ. ಸ್ತನ ಕ್ಯಾನ್ಸರ್‌ನ ಆರಂಭಿಕ ತಪಾಸಣೆ ಬಗ್ಗೆ ಅರಿವು ಮೂಡಿಸದೇ ಇರುವುದೂ ಈ ರೋಗ ಉಲ್ಬಣಕ್ಕೆ ಕಾರಣ' ಎಂದೂ ತಿಳಿಸಿದ್ದಾರೆ.

ಅಂಕಿ-ಅಂಶಗಳು

- **26-30** ಸಾವಿರ — ಸ್ತನ ಕ್ಯಾನ್ಸರ್‌ನ ಸಕ್ರಿಯ ಪ್ರಕರಣಗಳು
- **1,688** — ಬೆಂಗಳೂರಿನಲ್ಲಿ ಪ್ರತಿ ವರ್ಷ ದಾಖಲಾಗುತ್ತಿರುವ ಪ್ರಕರಣ
- **4,588** — ಬೆಂಗಳೂರಿನಲ್ಲಿರುವ ಸಕ್ರಿಯ ಪ್ರಕರಣ
- **28%** — ಮಹಿಳೆಯರಲ್ಲಿ ಸ್ತನ ಕ್ಯಾನ್ಸರ್ ಪ್ರಮಾಣ

ಎಚ್‌ಎಸ್‌ಆರ್‌ಪಿ ಟೆಂಡರ್‌ನಲ್ಲಿ ಅಕ್ರಮ: ಆರೋಪ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಸಾರಿಗೆ ಇಲಾಖೆಯ 'ಅತಿ ಭದ್ರತೆಯ ನೋಂದಣಿ ಫಲಕ' (ಎಸ್‌ಎಸ್‌ಆರ್‌ಪಿ) ಟೆಂಡರ್ ಪ್ರಕ್ರಿಯೆಯಲ್ಲಿ ಅಕ್ರಮ ನಡೆಯುತ್ತಿದೆ' ಎಂದು ಸಾಮಾಜಿಕ ಹೋರಾಟಗಾರರ ಸಮಿತಿ ಆರೋಪಿಸಿದೆ.

ಶುಕ್ರವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಸಮಿತಿಯ ಅಧ್ಯಕ್ಷ ಆರ್.ರಂಗನಾಥ್, 'ರೋಸ್‌ಮೆಟ್ರಾ ಟೆಕ್ನಾಲಜೀಸ್ ಪ್ರೈವೇಟ್ ಲಿಮಿಟೆಡ್ ಹೆಸರಿನ ಸಂಸ್ಥೆಗೆ ಅನುಕೂಲವಾಗುವಂತೆ ಟೆಂಡರ್ ಪ್ರಕ್ರಿಯೆ ನಡೆಯುತ್ತಿದೆ. ಈ ಸಂಸ್ಥೆಯ ಅಕ್ರಮಗಳ ಕುರಿತು ಈಗಾಗಲೇ ವಿವಿಧ ರಾಜ್ಯಗಳಲ್ಲಿ ಪ್ರಕರಣಗಳು ದಾಖಲಾಗಿವೆ' ಎಂದು ಆರೋಪಿಸಿದರು.

'ಈ ಸಂಸ್ಥೆಯೊಂದಿಗೆ ಇಲಾಖೆ ಅಧಿಕಾರಿಗಳೂ ಒಳ ಒಪ್ಪಂದ ಮಾಡಿಕೊಂಡಿರುವ ಶಂಕೆ ಇದ್ದು, ಟೆಂಡರ್ ಪ್ರಕ್ರಿಯೆ ಏಕಪಕ್ಷೀಯವಾಗಿ ನಡೆಯುತ್ತಿದೆ. ಇಂತಹ ಹಿನ್ನೆಲೆಯುಳ್ಳ ಸಂಸ್ಥೆಗೆ ಸಾರಿಗೆ ಟೆಂಡರ್ ವಹಿಸಬಾರದು' ಎಂದು ಒತ್ತಾಯಿಸಿದರು.

'ಅಭಿವೃದ್ಧಿ ಹೆಸರಲ್ಲಿ ಬಿಜೆಪಿ ಸರ್ಕಾರದಿಂದ ಲೂಟಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ರಾಜ್ಯ ಸರ್ಕಾರ, ಬಿಬಿಎಂಪಿ, ನಗರೋತ್ಥಾನ ಯೋಜನೆ ಹಾಗೂ ಇತರ ಇಲಾಖೆಗಳಿಂದ ಬೆಂಗಳೂರು ದಕ್ಷಿಣ ಕ್ಷೇತ್ರಕ್ಕೆ ನೂರಾರು ಕೋಟಿ ಅನುದಾನ ಬಿಡುಗಡೆಯಾಗುತ್ತಿದೆ. ಇದರ ಸದ್ವಿನಿಯೋಗ ಆಗುತ್ತಿಲ್ಲ. ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ನಡೆಯುತ್ತಿರುವ ಅಭಿವೃದ್ಧಿ ಕಾಮಗಾರಿಗಳು ಕಳಪೆ ಗುಣಮಟ್ಟದಿಂದ ಕೂಡಿವೆ. ಅಭಿವೃದ್ಧಿ ಹೆಸರಲ್ಲಿ ಬಿಜೆಪಿ ಸರ್ಕಾರ ಲೂಟಿ ಮಾಡುತ್ತಿದೆ. ಅದೇ ಸರ್ಕಾರದ ಸಾಧನೆಯಾಗಿದೆ' ಎಂದು ಕಾಂಗ್ರೆಸ್ ಮುಖಂಡರು ದೂರಿದ್ದಾರೆ.

ಬೇಗೂರಿನಲ್ಲಿ ನಡೆದ ಬೆಂಗಳೂರು ದಕ್ಷಿಣ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಬ್ಲಾಕ್ ಕಾಂಗ್ರೆಸ್ ಸಮಿತಿಯ ವಿವಿಧ ಘಟಕಗಳ ಅಧ್ಯಕ್ಷರು, ಪದಾಧಿಕಾರಿಗಳು ಹಾಗೂ ಮುಖಂಡರ ಸಭೆಯಲ್ಲಿ ಮುಖಂಡರು ಮಾತನಾಡಿದರು.

'ಬಿಜೆಪಿಯ ಎಂ.ಕೃಷ್ಣಪ್ಪ, ಮೂರು ಬಾರಿ ಶಾಸಕರಾಗಿದ್ದಾರೆ. ಹೀಗಿದ್ದರೂ ಕ್ಷೇತ್ರದ ಅಭಿವೃದ್ಧಿಯತ್ತ ಗಮನ ಹರಿಸಿಲ್ಲ. ಇದನ್ನು ಪ್ರಶ್ನಿಸಿದರೆ ಅಂತಹವರ ಮೇಲೆ ದೌರ್ಜನ್ಯ ನಡೆಸುತ್ತಾರೆ. ಇದಕ್ಕಾಗಿ ಪೊಲೀಸರು ಹಾಗೂ ಅಧಿಕಾರಿಗಳನ್ನು ದುರ್ಬಳಕೆ ಮಾಡಿಕೊಳ್ಳುತ್ತಿದ್ದಾರೆ' ಎಂದು ಮುಖಂಡರು ಆರೋಪಿಸಿದರು.

ಮುಖಂಡರಾದ ಆರ್.ಕೆ.ರಮೇಶ್, ಕೆಪಿಸಿಸಿ ಸದಸ್ಯ ವಿನೋದ್ ಮತ್ತು ಸಂಜಯ್, ಬೇಗೂರು ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಅಂತೋಣಿ ಕಿರಣ್, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷರಾದ ಶ್ರೀಧರ್ ಲಕ್ಷ್ಮಣ್, ಕುಮಾರ್, ಸಂಪತ್, ಇಂಟೆಕ್ ರಾಜ್ಯ ಕಾರ್ಯದರ್ಶಿ ಶ್ಯಾಮಣ್ಣ ರೆಡ್ಡಿ, ಪ್ರದೇಶ ಯುವ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ದೀಪಿಕಾ ರೆಡ್ಡಿ, ಸಾಮಾಜಿಕ ಜಾಲತಾಣ ವಿಭಾಗದ ಅಧ್ಯಕ್ಷ ನಾಗರಾಜರೆಡ್ಡಿ, ಕಾಂಗ್ರೆಸ್ ರೈತ ಘಟಕದ ಅಧ್ಯಕ್ಷ ಆಂಜನಪ್ಪ ರೆಡ್ಡಿ, ಮುಖಂಡ ಕಮ್ಮನಹಳ್ಳಿ ಮಂಜು, ಬೇಗೂರು ಮಹಿಳಾ ಕಾಂಗ್ರೆಸ್ ಅಧ್ಯಕ್ಷೆ ರಾಜಮ್ಮ, ವಾರ್ಡ್ ಅಧ್ಯಕ್ಷರಾದ ರೂಪಾ ಹಾಗೂ ಪಲ್ಲವಿ ಇದ್ದರು.

ತಿಂಗಳಾಂತ್ಯಕ್ಕೆ ಕಲಬುರಗಿ ದೂರದರ್ಶನ ಕೇಂದ್ರ ಬಂದ್

ಕಲಬುರಗಿ: ದೂರದರ್ಶನದ ಕಲಬುರಗಿಯ ಕೇಂದ್ರವನ್ನು ಇದೇ 31ರಿಂದ ಸಂಪೂರ್ಣವಾಗಿ ಮುಚ್ಚಲಾಗುತ್ತಿದೆ ಎಂದು ದೂರದರ್ಶನ ಮಹಾನಿರ್ದೇಶನಾಲಯ ತಿಳಿಸಿದೆ.

1977ರಲ್ಲಿ ಈ ಕೇಂದ್ರ ಆರಂಭಿಸಲಾಗಿತ್ತು. ಕೆಲ ತಿಂಗಳ ಹಿಂದೆಯೇ ಇದನ್ನು ಮುಚ್ಚುವ ಪ್ರಸ್ತಾವ ಇದೆ ಎಂದು ಮಾಧ್ಯಮಗಳಲ್ಲಿ ವರದಿಯಾಗಿತ್ತು. ಆಗ ಟ್ವೀಟ್ ಮೂಲಕ ಸ್ಪಷ್ಟನೆ ನೀಡಿದ್ದ ದೂರದರ್ಶನ ಹಾಗೂ ಆಲ್ ಇಂಡಿಯಾ ರೇಡಿಯೊದ ಪ್ರಾದೇಶಿಕ ಕಚೇರಿಯವರು, 'ಇದು ಸುಳ್ಳು ಸುದ್ದಿ. ಕಲಬುರಗಿ ಕೇಂದ್ರ ಮುಚ್ಚುವುದಿಲ್ಲ' ಎಂದಿದ್ದರು.

ಕೋವಿಡ್ ಸೇನಾನಿಗಳಿಗೆ 'ನಮ್ಮ ಬೆಂಗಳೂರು ಪ್ರಶಸ್ತಿ'

ಬೆಂಗಳೂರು: 'ನಮ್ಮ ಬೆಂಗಳೂರು ಪ್ರಶಸ್ತಿ'ಯ 12ನೇ ಆವೃತ್ತಿಗೆ ಚಾಲನೆ ನೀಡಲಾಗಿದ್ದು, ಈ ಬಾರಿ ಕೋವಿಡ್ ಸೇನಾನಿಗಳಿಗೆ ಪ್ರಶಸ್ತಿ ಕೊಡಲು ನಮ್ಮ ಬೆಂಗಳೂರು ಪ್ರಶಸ್ತಿ ಟ್ರಸ್ಟ್ ನಿರ್ಧರಿಸಿದೆ.

'ವರ್ಷದ ಆರೋಗ್ಯ ವೃತ್ತಿಪರರು', 'ವರ್ಷದ ಮುಂಚೂಣಿ ಕಾರ್ಯಕರ್ತರು', 'ವರ್ಷದ ಸಾಮಾಜಿಕ ಸಂಸ್ಥೆ/ವ್ಯಕ್ತಿ', 'ವರ್ಷದ ಮಾಧ್ಯಮ ಚಾಂಪಿಯನ್' ಹಾಗೂ 'ವರ್ಷದ ನಮ್ಮ ಬೆಂಗಳೂರಿನವರು' ವಿಭಾಗಗಳಲ್ಲಿ ಪ್ರಶಸ್ತಿ ನೀಡಲಾಗುತ್ತದೆ. ನಮ್ಮ ಬೆಂಗಳೂರು ಪ್ರಶಸ್ತಿಯ ವೆಬ್‌ಸೈಟ್‌ಗೆ ಭೇಟಿ ನೀಡಿ ತಾವು ಗುರುತಿಸಿರುವ 'ಹೀರೊ'ಗಳನ್ನು ಜನರೇ ನಾಮನಿರ್ದೇಶನ ಮಾಡಬಹುದು. ಇದೇ 24ಕ್ಕೆ ನಾಮನಿರ್ದೇಶನ ಪ್ರಕ್ರಿಯೆ ಮುಕ್ತಾಯಗೊಳ್ಳಲಿದೆ' ಎಂದು ಪ್ರಕಟಣೆ ತಿಳಿಸಿದೆ.

'ನಟ ರಮೇಶ್ ಅರವಿಂದ್, ಮೈಕ್ರೋಲ್ಯಾಂಡ್ ಅಧ್ಯಕ್ಷ ಪ್ರದೀಪ್ ಕರ್, ಎಚ್‌ಸಿಜಿ ಕ್ಯಾನ್ಸರ್ ಕೇಂದ್ರದ ಡಾ.ವಿಶಾಲ್ ರಾವ್, ಫೋರ್ಟಿಸ್‌ನ ಡಾ.ವಿವೇಕ್ ಪಡೆಗಲ್, ಮಣಿಪಾಲ್ ಆಸ್ಪತ್ರೆಯ ಡಾ.ಸುದರ್ಶನ ಬಲ್ಲಾಳ್, ಐಎಎಸ್ ಅಧಿಕಾರಿ ಮಣಿವಣ್ಣನ್, ವಕೀಲ ಸಜನ್ ಪೂವಯ್ಯ, ಅನಿತಾ ರೆಡ್ಡಿ ಮತ್ತು ಸಂಜಯ ಪ್ರಭು ತೀರ್ಪುಗಾರರಾಗಿರುವರು' ಎಂದೂ ಹೇಳಲಾಗಿದೆ.

ನಗರದಲ್ಲಿ ಇಂದು

'ಪೆಡಲ್ ಅವೇ ಫ್ರಂ ಒಬೆಸಿಟಿ' ಸೈಕಲ್ ಜಾಥಾ: ಭಾಗವಹಿಸುವವರು–ಪ್ರಮೋದ್ ಕುಂದೇರ್, ವಿ.ಶಂಕರ್, ನಾಗೇಶ್, ಆಯೋಜನೆ, ಸ್ಥಳ–ಮಣಿಪಾಲ್ ಆಸ್ಪತ್ರೆ, ಬೆಳಿಗ್ಗೆ 7

ಬೃಹತ್ ಸೌರ ವಿದ್ಯುತ್ ಸ್ಥಾವರ ಉದ್ಘಾಟನೆ: ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವ ಸಿ.ಎನ್.ಅಶ್ವತ್ಥನಾರಾಯಣ, ಆಯೋಜನೆ–ಬ್ರಿಗೇಡ್ ಗೇಟ್ ವೇ ಅಪಾರ್ಟ್‌ಮೆಂಟ್ ನಿವಾಸಿಗಳ ಸಂಘ, ಸ್ಥಳ:ಬ್ರಿಗೇಡ್ ಗೇಟ್ ವೇ ಅಪಾರ್ಟ್‌ಮೆಂಟ್ ಸಮುಚ್ಚಯ, ಯಶವಂತಪುರ, ಒರಾಯನ್ ಮಾಲ್ ಹತ್ತಿರ, ಬೆಳಿಗ್ಗೆ 9.30

ಪೌರಕಾರ್ಮಿಕರ ಜಾಥಾ: ಆಯೋಜನೆ–ಬಿಬಿಎಂಪಿ ಪೌರಕಾರ್ಮಿಕರ ಸಂಘ, ಸ್ಥಳ–ಕೆ.ಆರ್.ಪುರ ಮಾರುಕಟ್ಟೆ, ಬೆಳಿಗ್ಗೆ 10

ಗುಲ್ಫಿಶಾ ಫಾತಿಮಾ ಬಿಡುಗಡೆಗಾಗಿ ಏಕತೆಯ ಸಮಾವೇಶ: ಆಯೋಜನೆ–ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆ ಹಾಗೂ ವಿವಿಧ ಸಂಘಟನೆಗಳು, ಸ್ಥಳ–ಶಾಂತಿ ರೋಡ್ ಸ್ಟುಡಿಯೊ ಗ್ಯಾಲರಿ, ಶಾಂತಿನಗರ, ಬೆಳಿಗ್ಗೆ 10.30

'ಅಂತರರಾಷ್ಟ್ರೀಯ ಸ್ತನ ಕ್ಯಾನ್ಸರ್ ಅರಿವು ಮೂಡಿಸುವ ತಿಂಗಳು' ಕಾರ್ಯಕ್ರಮ: ಉದ್ಘಾಟನೆ–ಆರೋಗ್ಯ ಸಚಿವ ಕೆ.ಸುಧಾಕರ್, ಅತಿಥಿ–ಸಿ.ರಾಮಚಂದ್ರ, ಸ್ಥಳ–ಕಿದ್ವಾಯಿ ಸ್ಮಾರಕ ಗಂಥಿ ಸಂಸ್ಥೆ, ಎಂ.ಎಚ್.ಮರಿಗೌಡ ರಸ್ತೆ, ಬೆಳಿಗ್ಗೆ 11

ನವರಾತ್ರಿ ಶುಭಾಶಯಗಳು

ಶಾಂತಲಾ ಸಿಲ್ಕ್ ಫ್ಯಾಂಟಸಿ

ವಾರ್ಷಿಕೋತ್ಸವದ ಕೊಡುಗೆ

50% ರವರೆಗೆ ರಿಯಾಯಿತಿ ಮಾರಾಟ

ಸೆಪ್ಟಂಬರ್ 7 ರಿಂದ ನವೆಂಬರ್ 7, 2021 ರ ವರೆಗೆ

ಈ ಎಲ್ಲಾ ಸೀರೆಗಳು ಸಾವಿರಾರು ಬಣ್ಣ ಹಾಗೂ ಡಿಸೈನ್‌ಗಳು ನೂತನ ದಾಸ್ತಾನುಗಳೊಂದಿಗೆ ಲಭ್ಯ

• ಕಾಂಜೀವರಂ • ಪೋಚಂಪಲ್ಲಿ • ಪಟೋಲ • ಬನಾರಸ್ • ಎಂಬ್ರಾಯಡರಿ • ಕ್ರೇಪ್ • ಟಸ್ಸರ್ • ಶಿಫಾನ್ ಹಾಗೂ ಪ್ರಿಂಟೆಡ್ ಸಿಲ್ಕ್ಸ್ • ರೇಷ್ಮೆ ಧೋತಿಸ್ • ಶಲ್ಯ • ಶರ್ಟ್ಸ್ ಮತ್ತು ಚೂಡಿದಾರ್ ಉಡುಗೆ ಸಾಮಗ್ರಿಗಳು ಸಹ ಲಭ್ಯವಿದೆ.

ಶಾಂತಲಾ ಸಿಲ್ಕ್ಸ್ & ಸ್ಯಾರೀಸ್
ಶಾಂತಲಾ ಸರ್ಕಲ್, ಸಿಟಿ ರೈಲ್ವೆ ಸ್ಟೇಷನ್ ಹತ್ತಿರ ಬೆಂಗಳೂರು. ಫೋನ್ : 22872783, 42035567

ಶಾಂತಲಾ ಸಿಲ್ಕ್ ಹೌಸ್
ಪಿ. ಯು. ಬಿಲ್ಡಿಂಗ್, ಎಂ.ಜಿ.ರಸ್ತೆ, ಬೆಂಗಳೂರು ಫೋನ್ : 25588932, 41232219

MAHA RASHTRA APEX CORPORATION LTD
CIN-L85110KA1943PLC001177
website www.maharashtraapex.com, E-mail: mracl.ho@manipal.com, Te.: 080-40313131
Regd. Office: 3rd Floor, Front Wing North Block, Manipal Centre 47, Dickenson Road, Bengaluru - 560042

NOTICE OF LOSS OF SHARE CERTIFICATE

Notice is hereby given that the following Share Certificates issued by the company are stated to have been lost or misplaced or stolen and I, the registered holder thereof have applied to the company for the issue of Duplicate Certificates.

Sr No.	LFNO	Name of Shareholders	Certificate No From	Certificate No To	Distinctives From	Distinctives To	No Share
1	R00447	Radha Hulekal	131192	131195	5958841	5959040	200
2	R00447	Pramod Hulekal	216817	216820	10049191	10049390	200

The public is hereby warned against purchasing or dealing in any way, with the above Share Certificates. Any perosn(s) who has/have any claim(s) in respect of the said Share Certificates should lodge such claim(s) with the Company at its registered office at the address: 3rd Floor, Front Wing North Block, Manipal Centre, 47, Dickenson road, Bengaluru - 560042 within 15 days of publication of this notice, after which no claim will be entertained and the Company will proceed to issue duplicate Share Certificates.

Place: Bengaluru
Date: 08-10-2021

SHAREHOLDERS
Radha Hulekal
Pramod Hulekal

ಜಿಲ್ಲಾ ಪಂಚಾಯತ್, ಚಿಕ್ಕಬಳ್ಳಾಪುರ
ಕಾರ್ಯಪಾಲಕ ಅಭಿಯಂತರರು, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಚಿಕ್ಕಬಳ್ಳಾಪುರ

ಇ-ಪ್ರೊಕ್ಯೂರ್‌ಮೆಂಟ್ ಅಲ್ಪಾವಧಿ ಟೆಂಡರ್ ಪ್ರಕಟಣೆ
ಸಂಖ್ಯೆ: 32/2021-22, ದಿನಾಂಕ: 01.10.2021

(ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯೂಮೆಂಟ್ ಕೆ.ಡಬ್ಲ್ಯೂ-I & IIರ ನಿಬಂಧನೆಗೊಳಪಟ್ಟಂತೆ ಟೆಂಡರ್‌ಗಳಿಗಾಗಿ ಅರ್ಜಿ)

ಕರ್ನಾಟಕ ರಾಜ್ಯದ ರಾಜ್ಯಪಾಲರ ಪರವಾಗಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪಾರದರ್ಶಕತೆ ಅಧಿನಿಯಮ 2000ರ ಪ್ರಕಾರ ಐಟಂವಾರು ಇ-ಪ್ರೊಕ್ಯೂರ್‌ಮೆಂಟ್ ಏಕ-ಲಕೋಟೆ ಪದ್ಧತಿಯಲ್ಲಿ ಚಿಕ್ಕಬಳ್ಳಾಪುರ ವಿಭಾಗ ವ್ಯಾಪ್ತಿಯ ಈ ಕೆಳಗೆ ನಮೂದಿಸಿರುವ ಕಾಮಗಾರಿಗಳಿಗೆ ಸೂಕ್ತ ದರ್ಜೆಯಲ್ಲಿ ಲೋಕೋಪಯೋಗಿ ಇಲಾಖೆಯಲ್ಲಿ ಎನ್‌ರೋಲ್ ಮಾಡಿಸಿಕೊಂಡಿರುವ ಅಧಿಕೃತ ಗುತ್ತಿಗೆದಾರರಿಂದ ಆಹ್ವಾನಿಸಲಾಗಿದೆ ಇ-ಪ್ರೊಕ್ಯೂರ್‌ಮೆಂಟ್ ದಾಖಲೆಗಳಿಗಾಗಿ ಇಲಾಖಾ ವೆಬ್‌ಸೈಟ್ **https://eproc.karnataka.gov.in** ಮೂಲಕ ಅರ್ಜಿಯನ್ನು ಸಲ್ಲಿಸಲು ಕೋರಲಾಗಿದೆ. (1) E-procurement ಮುಖಾಂತರ ಅರ್ಜಿ ಸಲ್ಲಿಸಲು ಹಾಗೂ ಷೆಡ್ಯೂಲ್-ಬಿ ಗಳನ್ನು ವೆಬ್‌ಸೈಟ್‌ನಲ್ಲಿ ಭರ್ತಿ ಮಾಡಿ ಸಲ್ಲಿಸುವ ಕೊನೆಯ ದಿನಾಂಕ: **13.10.2021ರ 16.30ರ ವರೆಗೆ.** (2) ತಾಂತ್ರಿಕ ಬಿಡ್‌ನ್ನು ತೆರೆಯುವ ದಿನಾಂಕ: **16.10.2021 ರಂದು 16.35 ನಂತರ.** (3) ಅರ್ಜಿ ಶುಲ್ಕ (ಹಿಂದಿರುಗಿಸಲಾಗುವಿಲ್ಲ): E-procurement ನಿಯಮಾನುಸಾರ

ಸಹಿ/- ಕಾರ್ಯಪಾಲಕ ಅಭಿಯಂತರರು, ಪಂ.ರಾ.ಇಂ. ವಿಭಾಗ, ಚಿಕ್ಕಬಳ್ಳಾಪುರ
ವಾ.ಸಾ.ಸಂ.ಇ./ಚಿಕ್ಕಬಳ್ಳಾಪುರ/ಆರ್‌ಓ ಸಂಖ್ಯೆ 198/ಎಂಸಿಎ/2021-22

ಕೋವಿಡ್-19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ. ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ತೋಟಗಾರಿಕೆ ಇಲಾಖೆ
ತೋಟಗಾರಿಕೆ ಉಪ ನಿರ್ದೇಶಕರ ಕಛೇರಿ (ಜಿಪಂ), ಚಪ್ಪರದಕಲ್ಲು, ಬೀರಸಂದ್ರ ಗ್ರಾಮ, ಬೆಂಗಳೂರು ಗ್ರಾಮಾಂತರ ಜಿಲ್ಲೆ

ಸಂಖ್ಯೆ:ಹಿಸತೋನಿ/ರಾವ/ವಿನಿ1/13/2021–22 ದಿನಾಂಕ:07.10.2021

2021–22 ನೇ ಸಾಲಿಗೆ ಬೆಂಗಳೂರು ಗ್ರಾಮಾಂತರ ಜಿಲ್ಲೆ ಆಧೀನದ ಕ್ಷೇತ್ರ–ಸಸ್ಯಾಗಾರಗಳಿಗೆ ಹೊರಗುತ್ತಿಗೆ ಆಧಾರದ ಮೇಲೆ ತೋಟಗಾರರ ಸೇವೆ ಒದಗಿಸಲು ಬಾಹ್ಯ ಮಾನವ ಸಂಪನ್ಮೂಲ ಸಂಸ್ಥೆಗಳಿಂದ ಆಹ್ವಾನಿಸಿರುವ ಮರು ಇ–ಟೆಂಡರ್‌ನ ಸಂಕ್ಷಿಪ್ತ ವಿವರ

1	ಟೆಂಡರ್ ಪ್ರಕಟಣೆ ದಿನಾಂಕ	ಟೆಂಡರ್ ಪ್ರಕಟಣೆ ಪತ್ರ ದಿನಾಂಕ: ಸಂಖ್ಯೆ: ಹಿಸತೋನಿ/ರಾವ/ವಿನಿ1/13/2021–22 ದಿನಾಂಕ: 07.10.2021
2	ಇ–ಟೆಂಡರ್ ಸಲ್ಲಿಸುವ ಕೊನೆಯ ದಿನಾಂಕ ಮತ್ತು ವೇಳೆ	**ದಿನಾಂಕ: 16.10.2021 ಅಪರಾಹ್ನ 5.00 ಗಂಟೆಗೆ**
3	ತಾಂತ್ರಿಕ ಬಿಡ್ ತೆರೆಯುವ ಸ್ಥಳ ವೇಳೆ ಮತ್ತು ದಿನಾಂಕ	ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರು, (ರಾಜ್ಯವಲಯ) ರವರ ಕಛೇರಿ, ಕಬ್ಬನ್ ಉದ್ಯಾನವನ, ಬೆಂಗಳೂರು ಗ್ರಾಮಾಂತರ ಜಿಲ್ಲೆ **ದಿನಾಂಕ : 18.10.2021 ಸಂಜೆ 4.00 ಗಂಟೆಗೆ**
4	ಆರ್ಥಿಕ ಬಿಡ್ ತೆರೆಯುವ ಸ್ಥಳ ಮತ್ತು ದಿನಾಂಕ	ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರು, (ರಾಜ್ಯವಲಯ) ರವರ ಕಛೇರಿ, ಕಬ್ಬನ್ ಉದ್ಯಾನವನ, ಬೆಂಗಳೂರು ಗ್ರಾಮಾಂತರ ಜಿಲ್ಲೆ ಟೆಂಡರುದಾರರು ಒದಗಿಸುವ ಪೂರ್ವಾಪೇಕ್ಷಿತ ದಾಖಲಾತಿಗಳನ್ನು ಪರಿಶೀಲಿಸಿದ ನಂತರ ತಾಂತ್ರಿಕ ಬಿಡ್ ಅನುಮೋದನೆಗೊಂಡ ಯಶಸ್ವಿ ಟೆಂಡರುದಾರರ ಆರ್ಥಿಕ ಬಿಡ್‌ನ್ನು ಮಾತ್ರ ತೆರೆಯಲಾಗುವುದು.
5	ಅಂದಾಜು ಮೊತ್ತ	**ರೂ.44.88 ಲಕ್ಷ** (ಅನುದಾನದ ಲಭ್ಯತೆ ಮೇರೆಗೆ)
6	ಇ–ಟೆಂಡರ್ ನೊಂದಿಗೆ ಪಾವತಿಸ ಬೇಕಾದ ಇ.ಎಂ.ಡಿ ಮೊತ್ತ	**ರೂ.1,122 ಲಕ್ಷ**
7	ಅಗತ್ಯವಿರುವ ತೋಟಗಾರರ ಸಂಖ್ಯೆ	22 ಸಂಖ್ಯೆ ತೋಟಗಾರರು. (ಅನುದಾನದ ಲಭ್ಯತೆ ಮೇರೆಗೆ)
8	ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸ ಬೇಕಾದ ಕಛೇರಿಯ ವಿಳಾಸ ಮತ್ತು ದೂರವಾಣಿ ಸಂಖ್ಯೆ	ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರು, (ರಾಜ್ಯವಲಯ) ರವರ ಕಛೇರಿ, ತೋಟಗಾರಿಕೆ ಇಲಾಖೆ, ಕಬ್ಬನ್ ಉದ್ಯಾನವನ, ಬೆಂಗಳೂರು ಗ್ರಾಮಾಂತರ ಜಿಲ್ಲೆ ದೂ.ಸಂಖ್ಯೆ: **080–22860815, E-Id:sadhssbangalorerural@gamil.com**

ಸಹಿ/–
ಟೆಂಡರ್ ಆಹ್ವಾನ ಪ್ರಾಧಿಕಾರ ಹಾಗೂ ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರ ಕಛೇರಿ (ರಾಜ್ಯವಲಯ), ಕಬ್ಬನ್ ಪಾರ್ಕ್, ಬೆಂಗಳೂರು(ಗ್ರಾ) ಜಿಲ್ಲೆ

ವಾಸಾಸಂಇ/ಉನಿಕ/ಬೆಂಗ್ರಾಜಿ/ಶಿರಡಿ ಸಾಯಿ/228/2021–22

ಕೋವಿಡ್-19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ. ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಬೆಂಗಳೂರು ಅಂತರಾಷ್ಟ್ರೀಯ ವಿಮಾನ ನಿಲ್ದಾಣ ಪ್ರದೇಶ ಯೋಜನಾ ಪ್ರಾಧಿಕಾರ, ದೇವನಹಳ್ಳಿ
ನಂ. 333/1, 1ನೇ ಮಹಡಿ, ವಿ.ಜೆ. ಕಾಂಪ್ಲೆಕ್ಸ್, ಸೂಲಿಬೆಲೆ ರಸ್ತೆ, ದೇವನಹಳ್ಳಿ ಟೌನ್, ಬೆಂಗಳೂರು ಗ್ರಾಮಾಂತರ ಜಿಲ್ಲೆ–562 110.

ಸಂ: ಬಿಐಎಎಪಿಎ/ಟಿಪಿ/ಭೂಉಬ/24/2021–22/943 ದಿನಾಂಕ : 05–10–2021

ಪ್ರಕಟಣೆ

ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 14 (ಎ) ರ ಅಡಿಯಲ್ಲಿ ಈ ಕೆಳಕಂಡ ಅರ್ಜಿದಾರರು ವ್ಯವಸಾಯ ವಲಯದಿಂದ ವಸತಿ ಭೂವಲಯಕ್ಕೆ ಭೂಉಪಯೋಗ ಬದಲಾವಣೆ ಕೋರಿ ಅರ್ಜಿ ಸಲ್ಲಿಸಿರುತ್ತಾರೆ. ಭೂಉಪಯೋಗ ಬದಲಾವಣೆಯ ಪ್ರಸ್ತಾವನೆಯ ವಿವರಗಳು ಈ ಕೆಳಕಂಡಂತೆ ಇರುತ್ತದೆ. ಸದರಿ ಭೂಉಪಯೋಗ ಬದಲಾವಣೆ ಪ್ರಸ್ತಾವನೆ ಬಗ್ಗೆ ಯಾವುದೇ ಆಕ್ಷೇಪಣೆಗಳಿದ್ದರೆ, ಈ ಪ್ರಕಟಣೆ ಪ್ರಕಟವಾದ ದಿನಾಂಕದಿಂದ 15 ದಿವಸಗಳೊಳಗಾಗಿ ಆಕ್ಷೇಪಣೆಗಳನ್ನು ಲಿಖಿತವಾಗಿ ಸದಸ್ಯ ಕಾರ್ಯದರ್ಶಿಗಳು, ಬೆಂಗಳೂರು ಅಂತರಾಷ್ಟ್ರೀಯ ವಿಮಾನ ನಿಲ್ದಾಣ ಪ್ರದೇಶ ಯೋಜನಾ ಪ್ರಾಧಿಕಾರ ದೇವನಹಳ್ಳಿ ಕಛೇರಿಗೆ ಸಲ್ಲಿಸಲು ತಿಳಿಸಲಾಗಿದೆ. ನಿಗಧಿತ ಅವಧಿಯ ನಂತರ ಬರುವ ಯಾವುದೇ ಆಕ್ಷೇಪಣೆಗಳನ್ನು ಪರಿಗಣಿಸುವುದಿಲ್ಲ.

ಕ್ರ ಸಂ.	ಅರ್ಜಿದಾರರ ಹೆಸರು	ತಾಲ್ಲೂಕು	ಹೋಬಳಿ	ಗ್ರಾಮದ ವಿವರ	ಸರ್ವೆ ನಂ.	ವಿಸ್ತೀರ್ಣ ಎ/ಗುಂ	ಮಹಾಯೋಜನೆಯ ಪ್ರಕಾರ ಭೂ ಉಪಯೋಗ	ಭೂ ಉಪಯೋಗ ನಿಗಧಿ ಪಡಿಸಲು ಕೋರಿರುವ ಉದ್ದೇಶ
1.	ಶ್ರೀ ಜಿ. ಚಂದ್ರೇಗೌಡ ಬಿನ್ ಲೇ॥ ಗೋವಿಂದಪ್ಪ	ದೇವನಹಳ್ಳಿ	ಕುಂದಾಣ	ಅರದೇಶನಹಳ್ಳಿ	41/3	1–21	ವ್ಯವಸಾಯ	ವಸತಿ
2.		ದೇವನಹಳ್ಳಿ	ಕುಂದಾಣ	ಅರದೇಶನಹಳ್ಳಿ	41/4	0–30.08 & 01ಗು 'ಎ' ಖರಾಬ್	ವ್ಯವಸಾಯ	ವಸತಿ
3.		ದೇವನಹಳ್ಳಿ	ಕುಂದಾಣ	ಅರದೇಶನಹಳ್ಳಿ	41/5	1–12	ವ್ಯವಸಾಯ	ವಸತಿ
4.		ದೇವನಹಳ್ಳಿ	ಕುಂದಾಣ	ಅರದೇಶನಹಳ್ಳಿ	43/1	1–30	ವ್ಯವಸಾಯ	ವಸತಿ
5.		ದೇವನಹಳ್ಳಿ	ಕುಂದಾಣ	ಅರದೇಶನಹಳ್ಳಿ	43/2	1–30	ವ್ಯವಸಾಯ	ವಸತಿ

ಷರಾ :– ಪ್ರಸ್ತಾವನೆಯಲ್ಲಿನ ಅರ್ಜಿದಾರರು ಪ್ರಶ್ನಿತ ಜಮೀನುಗಳನ್ನು ವ್ಯವಸಾಯ ಉಪಯೋಗಕ್ಕೆ ಬಳಸಿಕೊಳ್ಳಲು ಸಾಧ್ಯವಾಗುತ್ತಿಲ್ಲವೆಂದೂ, ಹಾಗೂ ಪರಿಸರದಲ್ಲಿ ವಾಸದ ಬೆಳವಣಿಗೆಗೆ ಅತಿ ಹೆಚ್ಚು ಬೇಡಿಕೆ ಇದ್ದು, ಉದ್ದೇಶಿತ ಜಮೀನುಗಳಲ್ಲಿ ಯೋಜಿತ ಬೆಳವಣಿಗೆಯ ಅಭಿವೃದ್ಧಿಯನ್ನು ಅಭಿವೃದ್ಧಿಪಡಿಸುವುದರಿಂದ ಸುತ್ತಮುತ್ತಲ ಗ್ರಾಮಸ್ಥರಿಗೆ ಉದ್ಯೋಗಾವಕಾಶ ಕಲ್ಪಿಸಿದಂತಾಗುವುದೆಂದೂ ಸದರಿ ಜಮೀನುಗಳು ವ್ಯವಸಾಯ ವಲಯದಿಂದ ವಸತಿ ವಲಯಕ್ಕೆ ಭೂಉಪಯೋಗ ಬದಲಾವಣೆಗೊಂಡ ನಂತರ ವಸತಿ ಉದ್ದೇಶಕ್ಕೆ ಭೂಪರಿವರ್ತಿಸಿ, ಪ್ರಾಧಿಕಾರದಿಂದ ಅನುಮೋದನೆ ಪಡೆದು, ಯೋಜನಾ ಬದ್ಧ ಅಭಿವೃದ್ಧಿ ಕಾರ್ಯಗಳಿಂದ ಸ್ಥಳೀಯರಿಗೆ ಉದ್ಯೋಗಾವಕಾಶ ಸೃಷ್ಟಿ ಹಾಗೂ ಮೂಲ ಸೌಕರ್ಯ ಅಭಿವೃದ್ಧಿಯಾಗುವುದರಿಂದ ಸಾರ್ವಜನಿಕ ಹಿತಾಶಕ್ತಿ ಅಂಶ ಅಡಗಿದೆ ಎಂದು ತಿಳಿಸುತ್ತಾ ಸದರಿ ಪ್ರದೇಶವನ್ನು 'ವ್ಯವಸಾಯ ವಲಯ' ದಿಂದ 'ವಸತಿ ವಲಯ' ಕ್ಕೆ ಭೂಉಪಯೋಗ ಬದಲಾವಣೆ ಮಾಡಿಕೊಳ್ಳಲು ಇಚ್ಛಿಸಿರುವುದಾಗಿ ತಿಳಿಸಿರುತ್ತಾರೆ.

ವಾಸಾಸಂಇ/ಉನಿಕ/ಬೆಂಗ್ರಾಜಿ/231/2021–22

ಕೋವಿಡ್-19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ. ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಸಹಿ/–
ನಗರ ಮತ್ತು ಗ್ರಾಮಾಂತರ ಯೋಜನಾ ಜಂಟಿ ನಿರ್ದೇಶಕರು ಹಾಗೂ ಸದಸ್ಯ ಕಾರ್ಯದರ್ಶಿಗಳು, ಬಿ.ಐ.ಎ.ಎ.ಪಿ.ಎ, ದೇವನಹಳ್ಳಿ.

PUBLIC NOTICE

ICICI Bank ICICI Bank Limited
Registered office: Landmark, Race Course Circle, Vadodara 390 007.
Corporate office: ICICI Bank Towers, Bandra-Kurla Complex, Mumbai 400 051.

ಚಿನ್ನ ಹರಾಜು ಕಂ ಆಹ್ವಾನ ಪ್ರಕಟಣೆ

ಈ ಕೆಳಗೆ ನಮೂದಿಸಲಾಗಿರುವ ಸಾಲಗಾರರಿಗೆ ನೋಟಿಸ್ ಹೊರಡಿಸಿ, ತಾವು ಚಿನ್ನಾಭರಣಗಳನ್ನು ಅಡಮಾನಗೊಳಿಸಿ ಪಡೆದುಕೊಂಡಿರುವ ಸೌಲಭ್ಯಕ್ಕೆ ಸಂಬಂಧಿತ ಬಾಕಿಮೊತ್ತವನ್ನು ಪಾವತಿಸಲು ಸೂಚಿಸಲಾಗಿತ್ತು. ಅದಾಗ್ಯೂ ಇವರುಗಳು ಸಂಬಂಧಿತ ಬಾಕಿಮೊತ್ತವನ್ನು ಮರುಪಾವತಿಸಲು ವಿಫಲರಾಗಿರುವುದರಿಂದ ಈಡು ಮಾಡಿರುವ ಚಿನ್ನಾಭರಣಗಳನ್ನು **ಅಕ್ಟೋಬರ್ 20, 2021** ರಂದು ಹರಾಜು ಹಾಕುವುದು ಅನಿವಾರ್ಯವಾಗಿದೆ. ಯಾವುದೇ ಪೂರ್ವ ಸೂಚನೆ ನೀಡದೆಯೇ ಯಾವುದೇ ಖಾತೆಯನ್ನು ಕೈಬಿಡುವ/ಬದಲಾಯಿಸುವ ಹಕ್ಕನ್ನು ಐಸಿಐಸಿಐ ಬ್ಯಾಂಕ್ ಹೊಂದಿರುತ್ತದೆ. **https://gold.samil.in** ಪೋರ್ಟಲ್‌ನಲ್ಲಿ **ಮಧ್ಯಾಹ್ನ 12:30 ರಿಂದ 3:30** ಗಂಟೆಯೊಳಗೆ ಆನ್‌ಲೈನ್ ಹರಾಜು ಕೈಗೊಳ್ಳಲಾಗುತ್ತದೆ. ಷರತ್ತುಗಳು ಹಾಗೂ ನಿಬಂಧನೆಗಳ ಕುರಿತಾದ ಸಂಪೂರ್ಣ ವಿವರಗಳಿಗಾಗಿ ದಯವಿಟ್ಟು ಸದರಿ ವೆಬ್‌ಸೈಟ್‌ಗೆ ಲಾಗಾನ್ ಮಾಡಿರಿ. ಒಂದು ವೇಳೆ ಸಾಲಗಾರರು ಮೃತರಾಗಿದ್ದಲ್ಲಿ, ಅವರ ಕಾನೂನು ಉತ್ತರಾಧಿಕಾರಿಗಳಿಗೆ ಎಲ್ಲಾ ಷರತ್ತುಗಳು ಅನ್ವಯಿಸುತ್ತವೆ.

ಸಾಲದ ಖಾತೆ ಸಂ.	ಗ್ರಾಹಕರ ಹೆಸರು
ಶಾಖೆ ಹೆಸರು: ಬೆಂಗಳೂರು–ಅಕ್ಷಯನಗರ	
728105000134	ಎಸ್ ಆದಿನಾರಾಯಣ ರೆಡ್ಡಿ
ಶಾಖೆ ಹೆಸರು: ಬೆಂಗಳೂರು–ಬಾಗಲೂರು	
231805000637	ಮೊಹಮ್ಮದ್ ಇಮ್ರಾನ್
231805000516	ಅನಿಲಕುಮಾರ್ ಟಿ ಕೆ
231805000669	ಸಿಂಧೂ ಆರ್
ಶಾಖೆ ಹೆಸರು: ಬೆಂಗಳೂರು–ಬಟ್ಟರಹಳ್ಳಿ	
369805000978	ಸತೀಶ್ ಎ
369805001178	ಸೋಫಿಯಾ ಪಿ
369805001183	ಹರೀಶ್ ಶ್ರೀನಿವಾಸುಲು
369805001191	ಜ್ಯೋಶ್ನಾ ದೇವಿ ಕಡಾಳಿ
ಶಾಖೆ ಹೆಸರು: ಬೆಂಗಳೂರು–ಬೇಗೂರು ಮುಖ್ಯರಸ್ತೆ	
410705000441	ಜ್ಯೋತಿ ಹೆಚ್ ಎಸ್
ಶಾಖೆ ಹೆಸರು: ಬೆಂಗಳೂರು–ಗಿರಿನಗರ	
720605000151	ಮಹೇಶ್ ಎಸ್
720605000161	ಮಹೇಶ್ ಎಸ್
ಶಾಖೆ ಹೆಸರು: ಬೆಂಗಳೂರು–ಜಯನಗರ 4ನೇ ಬ್ಲಾಕ್	
723105000156	ಎಸ್ ರೇಣುಕಾಬಾಯಿ
ಶಾಖೆ ಹೆಸರು: ಬೆಂಗಳೂರು–ಕೊತ್ತನೂರ್	
748205000056	ಮಂಜುನಾಥ್ ಕೆ ಎಂ
[illegible]	[illegible]
047805013314	ಮಂಜುಳಾ *
047805013366	ವಿ ಮುನಿರಾಜು
ಶಾಖೆ ಹೆಸರು: ಬೆಂಗಳೂರು–ಬನ್ನೇರಘಟ್ಟ ರಸ್ತೆ	
100705003481	ಓಂಪ್ರಕಾಶ ಬೊದ್ದುಲಾ
ಶಾಖೆ ಹೆಸರು: ಬೆಂಗಳೂರು–ಬಸವೇಶ್ವರನಗರ	
230105002133	ರಾಧಾ ಬಿ ಸಿ
230105002141	ಕೃಷ್ಣಕುಮಾರ್ ಜಿ ಎಸ್
230105002143	ದೀಪಿಕಾ ಎಸ್
230105002145	ಆರ್ ಮೋಹನ್
230105002150	ಶ್ರೀನಿವಾಸ ಮೂರ್ತಿ
230105002165	ಚಂದ್ರಶೇಖರ ಹೆಚ್

ಸಾಲದ ಖಾತೆ ಸಂ.	ಗ್ರಾಹಕರ ಹೆಸರು
[illegible]	[illegible]
040105005114	ಕರ್ನಾಟಿ ಕೃಷ್ಣರಾವ್
040105005118	ಪ್ರೀತಿ ಎಸ್
040105005126	ಪ್ರದೀಪ್ ಎನ್
040105005144	ಸೈಯದ್ ಅಜೀಮ್
ಶಾಖೆ ಹೆಸರು: ಬೆಂಗಳೂರು–ಕೆ ಹೆಚ್ ರೋಡ್	
193705002847	ಶ್ರೀರಾಮ್ ಬಿ
193705002848	ಶ್ರೀರಾಮ್ ಬಿ
193705002849	ಶ್ರೀರಾಮ್ ಬಿ
193705002850	ಶ್ರೀರಾಮ್ ಬಿ
ಶಾಖೆ ಹೆಸರು: ಬೆಂಗಳೂರು–ಕಲಾಸಿಪಾಳ್ಯ	
313105000539	ಉಷಾ ಉಷಾ
313105000603	ಬಾಳಾ ವಿ

ಸಾಲದ ಖಾತೆ ಸಂ.	ಗ್ರಾಹಕರ ಹೆಸರು
[illegible]	[illegible]
279305000957	ತಬ್ರೇಜ್ ಎ
ಶಾಖೆ ಹೆಸರು: ಕೋಲಾರ	
185205002415	ನಿಖಿಲ್ ಆರ್
ಶಾಖೆ ಹೆಸರು: ಮಲ್ಲನಾಯಕನಹಳ್ಳಿ	
375005000950	ಎಂ ಜಿ ನಾಗರಾಜ
375005001245	ಬ್ರಿಜೇಶ್ ಬ್ರಿಜೇಶ್
375005001128	ಬ್ರಿಜೇಶ್ ಬ್ರಿಜೇಶ್
ಶಾಖೆ ಹೆಸರು: ಸಂಗನಹಳ್ಳಿ	
272705000265	ಸುಬ್ರಮಣಿ ಎಸ್
ಶಾಖೆ ಹೆಸರು: ಸರ್ಜಾಪುರ	
438705000077	ಶಹನವಾಸ್ ಎಂ ಡಿ
ಶಾಖೆ ಹೆಸರು: ಯಶವಂತಪುರ	
028705003384	ಶ್ರೀನಿವಾಸ ಬಿ ವಿ

ದಿನಾಂಕ: 09.10.2021
ಸ್ಥಳ: ಬೆಂಗಳೂರು ನಗರ, ಬೆಂಗಳೂರು ಗ್ರಾಮಾಂತರ, ಚಿಕ್ಕಬಳ್ಳಾಪುರ, ಕೋಲಾರ, ರಾಮನಗರ

ಸಹಿ/– ಅಧಿಕೃತ ಅಧಿಕಾರಿ
ಐಸಿಐಸಿಐ ಬ್ಯಾಂಕ್ ಲಿಮಿಟೆಡ್ ಪರವಾಗಿ

ಮೂವರು ವಿದ್ಯಾರ್ಥಿನಿಯರಿಗೆ ತಲಾ 9 ಚಿನ್ನದ ಪದಕ

ಧಾರವಾಡ: ಪತ್ರಿಕೋದ್ಯಮ ಹಾಗೂ ಸಮೂಹ ಸಂವಹನ ವಿಭಾಗದ ವಿದ್ಯಾರ್ಥಿನಿಯರಾದ ಪುಷ್ಪಾವತಿ ಹಾಗೂ ಪ್ರೀತಿ ಕಾಮತ್ ಕ್ರಮವಾಗಿ ಕರ್ನಾಟಕ ವಿಶ್ವವಿದ್ಯಾಲಯದ 70, 71ನೇ ಘಟಿಕೋತ್ಸವದಲ್ಲಿ ತಲಾ 9 ಚಿನ್ನದ ಪದಕ ಹಾಗೂ 'ಪ್ರಜಾವಾಣಿ ಮತ್ತು ಡೆಕ್ಕನ್ ಹೆರಾಲ್ಡ್' ನಗದು ಪುರಸ್ಕಾರವನ್ನು ಪಡೆದರು.

ಇವರೊಂದಿಗೆ ಕನ್ನಡ ಅಧ್ಯಯನ ವಿಭಾಗದ ಲಕ್ಷ್ಮಿ ದೊಡ್ಡಗೌಡ್ರ 9 ಚಿನ್ನದ ಪದಕ ಪಡೆದಿದ್ದಾರೆ. ಕೋವಿಡ್–19 ಸೋಂಕಿನ ಕಾರಣದಿಂದ ಎರಡು ವರ್ಷಗಳಿಂದ ನಡೆಯದ ಘಟಿಕೋತ್ಸವ ಶುಕ್ರವಾರ ಆನ್‌ಲೈನ್ ವೇದಿಕೆಯಲ್ಲಿ ಜರುಗಿತು. 451 ಚಿನ್ನದ ಪದಕ, 146 ರ‍್ಯಾಂಕ್, 81 ನಗದು ಪುರಸ್ಕಾರ ಮತ್ತು 147 ಶಿಷ್ಯ ವೇತನದೊಂದಿಗೆ ಪದವಿಗಳನ್ನು ಕುಲಾಧಿಪತಿಯೂ ಆಗಿರುವ ರಾಜ್ಯಪಾಲ ತಾವರಚಂದ ಗೆಹಲೋತ್ ಘೋಷಿಸಿದರು.

ಎರಡು ಘಟಿಕೋತ್ಸವದಿಂದ 31,694 ಪದವಿ, 8,733 ಸ್ನಾತಕೋತ್ತರ ಹಾಗೂ 311 ಪಿಎಚ್.ಡಿ. ಪದವಿ ಸೇರಿದಂತೆ 40,738 ವಿದ್ಯಾರ್ಥಿಗಳು ಪದವಿ ಪಡೆದರು.

ಘಟಿಕೋತ್ಸವ ಭಾಷಣ ಮಾಡಿದ ಇಸ್ರೊ ಮಾಜಿ ಅಧ್ಯಕ್ಷ ಡಾ.ಎ.ಎಸ್. ಕಿರಣಕುಮಾರ್, 'ಸ್ಪರ್ಧಾತ್ಮಕ ಜಗತ್ತಿನಲ್ಲಿ ಹೊಸತನ್ನು ಕಲಿಯಬೇಕು, ಹೊಸ ಕೌಶಲ ಅಭ್ಯಸಿಸಬೇಕು. ಹೀಗಾದಲ್ಲಿ ಮಾತ್ರ ಯಶಸ್ಸು ಸಾಧ್ಯ' ಎಂದರು.

ಸಹ ಕುಲಾಧಿಪತಿ ಆಗಿರುವ ಉನ್ನತ ಶಿಕ್ಷಣ ಸಚಿವ ಡಾ.ಸಿ.ಎನ್.ಅಶ್ವತ್ಥನಾರಾಯಣ, ಕುಲಪತಿ ಪ್ರೊ. ಕೆ.ಬಿ. ಗುಡಸಿ, ಆಡಳಿತ ಕುಲಸಚಿವ ಡಾ. ಕೆ.ಟಿ.ಹನುಮಂತಪ್ಪ, ಮೌಲ್ಯಮಾಪನ ಕುಲಸಚಿವ ಡಾ.ಎಚ್.ನಾಗರಾಜ ಇದ್ದರು.

'ಸಫಾಯಿ ಕರ್ಮಚಾರಿಗಳ ಸಮೀಕ್ಷೆ ಶೀಘ್ರ'

ಹೂವಿನಹಡಗಲಿ (ವಿಜಯನಗರ ಜಿಲ್ಲೆ): 'ರಾಜ್ಯದಲ್ಲಿ ಸಫಾಯಿ ಕರ್ಮಚಾರಿಗಳ ಮರು ಸಮೀಕ್ಷೆಗೆ ಚಾಲನೆ ನೀಡಿದ್ದು, ಬಳ್ಳಾರಿ, ವಿಜಯನಗರ, ಮೈಸೂರು ಜಿಲ್ಲೆಯನ್ನು ಪ್ರಾಯೋಗಿಕವಾಗಿ ಆಯ್ಕೆ ಮಾಡಲಾಗಿದೆ. 15 ದಿನಗಳಲ್ಲಿ ಸಮೀಕ್ಷಾ ಕಾರ್ಯ ಪೂರ್ಣಗೊಳ್ಳಲಿದೆ' ಎಂದು ಸಫಾಯಿ ಕರ್ಮಚಾರಿ ಅಭಿವೃದ್ಧಿ ನಿಗಮದ ಅಧ್ಯಕ್ಷ ಎಚ್.ಹನುಮಂತಪ್ಪ ಹೇಳಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ಸಫಾಯಿ ಕರ್ಮಚಾರಿಗಳನ್ನು ಮುಖ್ಯವಾಹಿನಿಗೆ ತರುವುದು ಸಮೀಕ್ಷೆಯ ಉದ್ದೇಶ. ಈ ಹೊಣೆಯನ್ನು ಕೇಂದ್ರೀಯ ಕಾನೂನು ಕಾಲೇಜಿಗೆ ಒಪ್ಪಿಸಲಾಗಿದೆ' ಎಂದು ತಿಳಿಸಿದರು.'ರಾಜ್ಯದಲ್ಲಿ 9, 10,ಪಿಯುಸಿ ಓದುತ್ತಿರುವ ಸಫಾಯಿ ಕರ್ಮಚಾರಿಗಳ ಅವಲಂಬಿತ ಮಕ್ಕಳಿಗೆ 15 ದಿನದಲ್ಲಿ ಉಚಿತವಾಗಿ ಟ್ಯಾಬ್ ನೀಡಲಾಗುವುದು' ಎಂದರು.

ಪ್ರಜಾವಾಣಿ ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು

ನಿಮ್ಮ ಪ್ರೀತಿಪಾತ್ರರ ಅಗಲಿಕೆಯನ್ನು ಶ್ರದ್ಧಾಂಜಲಿ ಜಾಹೀರಾತು ಮೂಲಕ ಪ್ರಕಟಿಸಲು ಅಥವಾ ನಿಮ್ಮ ಪ್ರೀತಿಪಾತ್ರರ ಸವಿನೆನಪಿಗೆ ಸಂತಾಪ ಸೂಚನೆ ಪ್ರಕಟಿಸಲು ಬಯಸುವಿರಾದರೆ, ನಮ್ಮ

ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ

ಪತ್ರಿಕೆಗಳಲ್ಲಿ ನಿಮ್ಮ ಜಾಹೀರಾತುಗಳನ್ನು ಪ್ರಕಟಿಸಲು ಅಗತ್ಯವಿರುವ ಎಲ್ಲ ಮಾರ್ಗದರ್ಶನ ನೀಡುತ್ತೇವೆ.

ದಯವಿಟ್ಟು ಸಂಪರ್ಕಿಸಿ:

Santhosh Kumar : 9880856233
Jerry : 9731810277 | Ravichandra : 9901641752
Vishal : 9845114560 | Anitha R: 9900428036

ನಿಮ್ಮ ಮಾರ್ಗದರ್ಶನಕ್ಕಾಗಿ ಕೆಲವು ಅನುಕೂಲಕರ ಫಾರ್ಮಾಟ್ಸ್ ಹಾಗೂ ಟೆಕ್ಸ್ಟ್ ಆಯ್ಕೆಗಳನ್ನು ಹೊಂದಿರುವ ಒಂದು ವೆಬ್‌ಸೈಟ್‌ನ್ನು ಕೂಡ ನಾವು ಆರಂಭಿಸಿದ್ದೇವೆ. ದಯವಿಟ್ಟು ಲಾಗಾನ್ ಮಾಡಿರಿ
https://homages.deccanherald.com
ಅಥವಾ QR code ಸ್ಕ್ಯಾನ್ ಮಾಡಿ
ನಮ್ಮ ಆನ್‌ಲೈನ್ ಬುಕ್ಕಿಂಗ್ ಫಾರಂ ಪಡೆಯಿರಿ.

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಬಿಲ್ಡರ್ ಎಸೆನ್ಷಿಯಲ್

Water Proofing Materials

ಲೀಕೇಜ್.. ಲೀಕೇಜ್.. ನಿಮ್ಮ ಮನೆ, ಕಛೇರಿಯ ಮೇಲ್ಛಾವಣಿ, ಸಂಪ್, ಟ್ಯಾಂಕ್, ಬಾತ್‌ರೂಂ ಹಾಗೂ ಗೋಡೆಯ ಬಿರುಕುಗಳನ್ನು ನೂತನ ತಂತ್ರಜ್ಞಾನದಿಂದ ಸ್ಥಗಿತಗೊಳಿಸಲಾಗುವುದು. ಸಂಪರ್ಕಿಸಿ: 9880916988

ರಿಯಲ್ ಎಸ್ಟೇಟ್ ಸೆಲ್ಲಿಂಗ್

Mysore

GOVIANU LUXURIA, High-end Luxury Flat at Mysore, Zoo Road, near Mysore Mall, Rera-003588, www.govianu.com. 8103990990

Farm House/ Land/ Resorts

Out-Station

GOOD NEWS for Investors: 600Acrs Mega Gated Farm Land project @Narayankhed (Sangareddy, Telangana state) Nagapur Highway, Bidar Airport 30kms, per Unit: 605 Sqyds with 30 RedSandlewood, 20 Mixed fruit plantation. price:771/- per sq.yd ph:9553404329.

ಉದ್ಯೋಗಾವಕಾಶ

General

WORK FROM HOME ಮನೆಯಿಂದಲೆ ಬುಕ್ ಬರೆಯುವ ಮೂಲಕ ತಿಂಗಳಿಗೆ 12,000-15,000ವರೆಗೆ ಸಂಪಾದಿಸಿ. ಕನ್ನಡ/ಇಂಗ್ಲೀಷ್ ಓದಲು, ಬರೆಯಲು ಬರುವ ಎಲ್ಲರಿಗೂ ಅವಕಾಶ. ಕೊರಿಯರ್ ಸೌಲಭ್ಯವಿದೆ. 8095377333/ 8095377444

ಬೇಕಾಗಿದ್ದಾರೆ: ಕೃಷಿ ಯಂತ್ರೋಪಕರಣಗಳ ಚಾಲಕರು ಹಾಗೂ ಅಕ್ಕಿ ಮಿಲ್ಲಿನ ಕೆಲಸಕ್ಕೆ ಹೆಂಗಸರು ಅಥವಾ ದಂಪತಿಗಳು. ವಸತಿಯಿದೆ. ಸಂಪರ್ಕಿಸಿ: 9482080026, 9740343023

TATA ಮೋಟರ್ಸ್, TOYOTA, ಬ್ರಿಟಾನಿಯಾ ಆನ್‌ಲೈನ್ ಕಂಪೆನಿಗಳಿಗೆ SSLC, PUC,Degree, ITI ನವರು (ವಿದ್ಯಾರ್ಹತೆಯಿಲ್ಲದವರಿಗೂ) ನೇರನೇಮಕಾತಿ 18,000-56,000/- ವಸತಿಯೂಟವಿದೆ. 7204853296, 7204396011

Marketing & Sales

LOOKING FOR Sales Staff in Bangalore Showroom with 6 to 8 years experience in Jewellery. Salary starting from 25000 up to 35000. Food and Accommodation shall be provided by the Company. Contact B.B. Jewellers 9986577790

Part-Time Jobs

ಕನ್ನಡ ಮತ್ತು ಇಂಗ್ಲೀಷ್ ಓದಲು,ಬರೆಯಲು ಬರುವ ಯುವಕ/ಯುವತಿಯರಿಗೆ,ಗೃಹಿಣಿಯರಿಗೆ ವಯಸ್ಸಾದವರು ಮನೆಯಲ್ಲೇ ಕುಳಿತು ನಾವು ಕೊಡುವ ಬುಕ್ ಬರೆಯುವ ಮೂಲಕ ತಿಂಗಳಿಗೆ 12,000-15,000 ವರೆಗೆ ಸಂಪಾದಿಸಿ.ಕೊರಿಯರ್ ಸೌಲಭ್ಯವಿದೆ.8884777502, 8884777503

Wanted

ಸಿನಿಮಾ ಧಾರವಾಹಿಗಾಗಿ ನಟ, ನಟಿಯರ ಮಕ್ಕಳ ಪೋಷಕ ಪಾತ್ರಗಳ ಆಯ್ಕೆ ನಡೆಯುತ್ತಿದ್ದು, ಭಾವಚಿತ್ರದೊಂದಿಗೆ ತಕ್ಷಣ ಸಂಪರ್ಕಿಸಿ : 9741496310 .

ಭವಿಷ್ಯ

Astrology

★ಅಂಭಾಭವಾನಿ★ ಜ್ಯೋತಿಷ್ಯಾಲಯ ಕೊಳ್ಳೆಗಾಲದ ನಂ.1 'ವಶೀಕರಣ ಸ್ಪೆಷಲಿಸ್ಟ್' ದೇವಿಪ್ರಸಾದ್. (ಉಚಿತ ಭವಿಷ್ಯ ಖಚಿತ ಪರಿಹಾರ) ನಿಮ್ಮ ಸಮಸ್ಯೆಗಳೇನೇಯಿರಲಿ 2ದಿನದಲ್ಲಿ ಪರಿಹಾರ.9886755306

EDUCATION CORNER

ಸ್ಪರ್ಧಾಮಿತ್ರ ACADEMY
IAS
KAS / PSI
FreeWorkshop on 10th
IBPS / BANK-PO
Classes From October 11th
Online & Offline Classes
STUDY CENTRE
24/7 24 Hours Open
Limited Seats
OUR FACILITIES
A/c
CCTV,
High Speed Wi-fi
Separate Cubicles
News Papers
Near Attiguppe Metro Station, Service Road, Vijayanagar, Bengaluru - 40.
9535111188 / 9535111199

ಕೊಳ್ಳೇಗಾಲದ ಪ್ರಸಿದ್ಧ ತಾಂತ್ರಿಕರು ನುಡಿದಂತೆ ನಡೆಯುವುದು, ಅಸಾಧ್ಯವಾದದ್ದು ಇಲ್ಲಿ ಸಾಧ್ಯ, ದಾಂಪತ್ಯ ಕಲಹ, ಶತ್ರುಗಳ ಕಾಟ, ಮಾಟಮಂತ್ರ, ವಾಮಾಚಾರ, ಸ್ತ್ರೀಪುರುಷ ವಶೀಕರಣ, ಚೌಡಿಮಂತ್ರ ಶಕ್ತಿಯಿಂದ ಸಶ್ಮಾನ ಕಾಳಿಯ ಬಲಿಷ್ಠ ಪ್ರಯೋಗಗಳಿಂದ 3ದಿನದಲ್ಲಿ ಶಾಶ್ವತ ಪರಿಹಾರ ಗ್ಯಾರಂಟಿ ಪ್ರಧಾನ ತಾಂತ್ರಿಕ ವೆಂಕಟೇಶ ಮೂರ್ತಿ: ಉತ್ತರಹಳ್ಳಿ ಬೆಂಗಳೂರು: 9686748656

||ಉಚಿತ ಭವಿಷ್ಯ|| ಅಷ್ಟಮಂಗಳ ಪ್ರಶ್ನೆಯಿಂದ ನಿಮ್ಮ ಜೀವನದ ಸಕಲಸಂಕಷ್ಟಗಳು ನಿವಾರಣೆ, ಸ್ತ್ರೀಪುರುಷ ವಶೀಕರಣ ಕೇವಲ 1ಗಂಟೆಯಲ್ಲಿ 101% ಮಾಡಿಕೊಡುತ್ತಾರೆ. ಕರೆಮಾಡಿ.9538486472

★||ಶ್ರೀಚಾಮುಂಡೇಶ್ವರಿದೇವಿ ಜ್ಯೋತಿಷ್ಯರು||★ ಸ್ತ್ರೀಪುರುಷ_ವಶೀಕರಣ, ಸಂಭೋಗ_ವಶೀಕರಣ ಇನ್ನೂ ಯಾವುದೇ ಸಮಸ್ಯೆಗಳಿಗೆ 15 ನಿಮಿಷಗಳಲ್ಲಿ ಪರಿಹಾರ. ರಾಘವೇಂದ್ರ_ಗುರೂಜಿ. 8050061378

ಶ್ರೀಚಕ್ರ ಜ್ಯೋತಿಷ್ಯ ಪೀಠಂ ಕಠಿಣ ನಿಗೂಢ ಗುಪ್ತ ಸಮಸ್ಯೆಗಳಿಗೆ ಸಲಹೆ ಪಡೆಯಿರಿ. ಯಾವುದೇ ವಶೀಕರಣಗಳಿಗೆ 2865/-. 50 ವರ್ಷದ ಅನುಭವ 9845899127 .

"ವಶೀಕರಣಯಂತ್ರ" ಜನವಶೀಕರಣ, ಲಕ್ಷ್ಮಿವಶೀಕರಣ, ಸ್ತ್ರೀಪುರುಷ ವಶೀಕರಣ, ಶತ್ರು ವಶೀಕರಣ, ಕೇವಲ 2001 ರೂಪಾಯಿ ಗುರೂಜಿ ಮಹೇಶ್9686999517

ಪ್ರವಾಸ

Travel

16-10-2021 ಮಧ್ಯಪ್ರದೇಶ, ಗುಜರಾತ್, 17-10-2021 ಬದ್ರಿನಾಥ್, ಕೇದಾರ್‌ನಾಥ್, ಗಂಗೋತ್ರಿ, ಯಮುನೋತ್ರಿ, ಕರ್ನಾಟಕ ಹೆರಿಟೇಜ್ ಟೂರ್ಸ್ (ಹನುಮಂತ್ ನಗರ) 9845035349, 9482435755

10.10.2021 5 ದಿನಗಳು ರಾಮೇಶ್ವರಂ ಪ್ರವಾಸ., 15.10.2021 5 ದಿನಗಳು ಅಹೋಬಲಂ ಪ್ರವಾಸ. ಆರ್.ಗಾಂಧಿ ಟೂರ್ಸ್ (ರಿ) 9945445809/ 9902433500

ಅಂಡಮಾನ್ ಹವಳದ್ವೀಪ Royal Package ಅಕ್ಟೊಬರ್, ನವೆಂಬರ್, ಡಿಸೆಂಬರ್‌ನಲ್ಲಿ 5 ದಿನಗಳು ವಿಮಾನದಲ್ಲಿ. ಶ್ರೀಸಾಯಿ ರಾಘವೇಂದ್ರ ಟ್ರಾವೆಲ್ಸ್ 9739847429/ 9845560219.

Classifieds

Book Your Classifieds Ads
Online Log in to
dhclassifieds.com
For More Details Call
9880856233 • 9886213331
Email: Santhoshkumar@deccanherald.co.in

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ವೈಟಿಪಿಎಸ್‌ನಲ್ಲೂ 20 ಸಾವಿರ ಮೆ.ಟನ್ ದಾಸ್ತಾನು; ಅಧಿಕಾರಿಗಳ ಮಾಹಿತಿ

ಆರ್‌ಟಿಪಿಎಸ್: ಬೇಡಿಕೆಯಷ್ಟು ಕಲ್ಲಿದ್ದಲು ಪೂರೈಕೆ

ಪ್ರಜಾವಾಣಿ ವಾರ್ತೆ

ರಾಯಚೂರು: ರಾಯಚೂರು ಶಾಖೋತ್ಪನ್ನ ವಿದ್ಯುತ್ ಸ್ಥಾವರ (ಆರ್‌ಟಿಪಿಎಸ್)ದ ಎಂಟು ಘಟಕಗಳ ಪೈಕಿ ನಾಲ್ಕರಲ್ಲಿ ವಿದ್ಯುತ್ ಉತ್ಪಾದಿಸಲಾಗುತ್ತಿದ್ದು, ಬೇಡಿಕೆಗೆ ಅನುಗುಣವಾಗಿ ನಿತ್ಯ 10–12 ಸಾವಿರ ಟನ್ ಕಲ್ಲಿದ್ದಲು ಪೂರೈಕೆ ಆಗುತ್ತಿದೆ.

'ಆರ್‌ಟಿಪಿಎಸ್‌ನಲ್ಲಿ ಕಲ್ಲಿದ್ದಲು ಅಭಾವ ಕಾಣಿಸಿಕೊಂಡಿಲ್ಲ. ರಾಜ್ಯದಲ್ಲಿ ಮಳೆ ಕಡಿಮೆಯಾದರೆ ಮಾತ್ರ ಶಾಖೋತ್ಪನ್ನ ವಿದ್ಯುತ್ ಘಟಕಗಳಿಗೆ ಒತ್ತಡ ಬರುತ್ತದೆ. ಕಲ್ಲಿದ್ದಲು ಕೊರತೆ ಆತಂಕ ಇನ್ನೂ ಎದುರಾಗಿಲ್ಲ' ಎಂದು ಆರ್‌ಟಿಪಿಎಸ್ ಮುಖ್ಯ ಕಾರ್ಯನಿರ್ವಾಹಕ ನಿರ್ದೇಶಕ ಕೆ.ವಿ. ವೆಂಕಟಚಲಾಪತಿ 'ಪ್ರಜಾವಾಣಿ'ಗೆ ತಿಳಿಸಿದರು.

ಎಂಟು ಘಟಕಗಳಿಂದ ವಿದ್ಯುತ್ ಉತ್ಪಾದನೆ ಆರಂಭಿಸಿದರೆ ನಿತ್ಯ 25 ಸಾವಿರ ಮೆಟ್ರಿಕ್ ಟನ್ ಕಲ್ಲಿದ್ದಲು ಉರಿಸಬೇಕಾಗುತ್ತದೆ. ಕಲ್ಲಿದ್ದಲು ವಿಭಾಗದಲ್ಲಿ 12 ಸಾವಿರ ಮೆಟ್ರಿಕ್ ಟನ್ ದಾಸ್ತಾನು ಇದೆ. ನಿತ್ಯ, ತೆಲಂಗಾಣದ ಸಿಂಗರೇಣಿ ಮತ್ತು ಮಹಾರಾಷ್ಟ್ರದ ವೆಸ್ಟರ್ನ್ ಕೋಲ್ ಫೀಲ್ಡ್ ಕಂಪನಿಯ ಕಲ್ಲಿದ್ದಲು ಗಣಿಗಳಿಂದ ನಾಲ್ಕು ರೇಕ್ (59 ಸರಕು ಸಾಗಣೆ ಬೋಗಿಗಳಿಗೆ ಒಂದು ರೇಕ್) ಕಲ್ಲಿದ್ದಲು ಬರುತ್ತಿದೆ.

ಆರ್‌ಟಿಪಿಎಸ್ ಎಂಟು ಘಟಕಗಳಿಂದ 1,720 ಮೆಗಾವಾಟ್ ವಿದ್ಯುತ್ ಉತ್ಪಾದಿಸುವ ಸಾಮರ್ಥ್ಯ ಹೊಂದಿದ್ದು, ಈಗ ನಾಲ್ಕು ಘಟಕಗಳಿಂದ 625 ಮೆಗಾವಾಟ್ ವಿದ್ಯುತ್ ಉತ್ಪಾದಿಸಲಾಗುತ್ತಿದೆ.

ಶಕ್ತಿನಗರ ಪಕ್ಕದಲ್ಲೇ ಇರುವ ಯರಮರಸ್ ಸೂಪರ್‌ಕ್ರಿಟಿಕಲ್ ಶಾಖೋತ್ಪನ್ನ ವಿದ್ಯುತ್ ಸ್ಥಾವರ (ವೈಟಿಪಿಎಸ್)ದಲ್ಲಿ ಎರಡು ಘಟಕಗಳಿದ್ದು, 1,600 ಮೆಗಾವಾಟ್ ವಿದ್ಯುತ್ ಉತ್ಪಾದನೆ ಸಾಮರ್ಥ್ಯ ಹೊಂದಿವೆ. ಮೊದಲ ಘಟಕ ಕಾರ್ಯ ನಿರ್ವಹಿಸುತ್ತಿದ್ದು 643 ಮೆಗಾವಾಟ್ ವಿದ್ಯುತ್ ಉತ್ಪಾದನೆ ಆಗುತ್ತಿದೆ. ವೈಟಿಪಿಎಸ್‌ನಲ್ಲಿ 20 ಸಾವಿರ ಮೆಟ್ರಿಕ್ ಟನ್ ಕಲ್ಲಿದ್ದಲು ಸಂಗ್ರಹವಿದೆ.

'ದೇಶದ ಕಲ್ಲಿದ್ದಲು ಗಣಿಗಳಿರುವ ಕಡೆ ಮಳೆ ಆಗುತ್ತಿರುವುದರಿಂದ ಪೂರೈಕೆಯಲ್ಲಿ ಸಮಸ್ಯೆ ಆಗಲಿದೆ ಎಂದು ಹೇಳಲಾಗುತ್ತಿದೆ. ಆದರೆ, ಆರ್‌ಟಿಪಿಎಸ್, ವೈಟಿಪಿಎಸ್‌ನಲ್ಲಿ ಇದುವರೆಗೂ ಕಲ್ಲಿದ್ದಲು ಕೊರತೆ ಎದುರಾಗಿಲ್ಲ' ಎನ್ನುವುದು ಈ ಸಂಸ್ಥೆಗಳ ಮಾಹಿತಿ.

'ನಮ್ಮ ಸ್ಥಾವರಕ್ಕೂ ಪ್ರತಿದಿನ ಎರಡು ರೇಕ್ ಕಲ್ಲಿದ್ದಲು ಬರುತ್ತಿದೆ. ಹಬ್ಬದ ದಿನಗಳಲ್ಲಿ ಕಾರ್ಖಾನೆಗಳಿಗೆ ರಜೆ ಇರುವುದರಿಂದ ವಿದ್ಯುತ್ ಬೇಡಿಕೆಯೂ ಹೆಚ್ಚಾಗಿರುವುದಿಲ್ಲ' ಎಂದು ವೈಟಿಪಿಎಸ್ ಯೋಜನಾ ನಿರ್ದೇಶಕ ರಮೇಶ ತಿಳಿಸಿದರು.

ಕೂಡಗಿ: ಕಲ್ಲಿದ್ದಲಿನ ಕೊರತೆ ಇಲ್ಲ

ವಿಜಯಪುರ: ಜಿಲ್ಲೆಯ ಕೂಡಗಿ ಉಷ್ಣ ವಿದ್ಯುತ್ ಸ್ಥಾವರ (ಎನ್‌ಟಿಪಿಸಿ)ದಲ್ಲಿ ಮೂರು ವಿದ್ಯುತ್ ಘಟಕಗಳಿವೆ. ಪ್ರತಿದಿನ 2,400 (3x800) ಮೆಗಾ ವಾಟ್ ವಿದ್ಯುತ್ ಉತ್ಪಾದನಾ ಸಾಮರ್ಥ್ಯ ಹೊಂದಿವೆ. ಸದ್ಯ ಇದರಲ್ಲಿ ಒಂದನೇ ಘಟಕವನ್ನು ತಾತ್ಕಾಲಿಕವಾಗಿ ಸ್ಥಗಿತಗೊಳಿಸಲಾಗಿದೆ. ಇನ್ನೂ ಎರಡು ಮತ್ತು ಮೂರನೇ ಘಟಕಗಳು ಕಾರ್ಯಾಚರಣೆ ಮಾಡುತ್ತಿವೆ. ಎರಡರಿಂದಲೂ ದಿನಕ್ಕೆ 1,015 ಮೆಗಾ ವ್ಯಾಟ್ ವಿದ್ಯುತ್ ಉತ್ಪಾದಿಸಲಾಗುತ್ತಿದೆ ಎಂದು ಎನ್‌ಟಿಪಿಸಿ ಎಚ್.ಆರ್. ವಿಭಾಗದ ಹಿರಿಯ ವ್ಯವಸ್ಥಾಪಕ ಮಂಜುನಾಥ 'ಪ್ರಜಾವಾಣಿ'ಗೆ ಮಾಹಿತಿ ನೀಡಿದರು.

ಕೂಡಗಿ ಉಷ್ಣ ವಿದ್ಯುತ್ ಸ್ಥಾವರದಲ್ಲಿ ಸದ್ಯ 6,500 ಮೆಟ್ರಿಕ್ ಟನ್ ಕಲ್ಲಿದ್ದಲು ದಾಸ್ತಾನು ಇದೆ. ಈ ಕಲ್ಲಿದ್ದಲು ಮೂರು ದಿನಗಳಿಗೆ ಮಾತ್ರ ಸಾಲುತ್ತದೆ. ಅ.9 ಮತ್ತು 10ರಂದು ದಿನಕ್ಕೆ ಮೂರು ರೇಕ್ ಕಲ್ಲಿದ್ದಲ್ಲು ಗೂಡ್ಸ್ ರೈಲಿನ ಮೂಲಕ ಕೂಡಗಿಗೆ ಬರಲಿದೆ. ಪ್ರತಿ ರೇಕ್‌ನಲ್ಲಿ ಸುಮಾರು 40 ಗೂಡ್ಸ್ ಡಬ್ಬಿಗಳಿರುವ ಒಂದು ರೈಲಿನಲ್ಲಿ ಸುಮಾರು 3,700 ಮೆಟ್ರಿಕ್ ಟನ್ ಕಲ್ಲಿದ್ದಲ್ಲು ಇರಲಿದೆ ಎಂದು ಅವರು ಹೇಳಿದರು.

'ಕೂಡಗಿ ಉಷ್ಣ ವಿದ್ಯುತ್ ಸ್ಥಾವರದಲ್ಲಿ ಸದ್ಯ ಕಲ್ಲಿದ್ದಲಿನ ಕೊರತೆ ಇಲ್ಲ. ಬೇಡಿಕೆಗೆ ಅನುಗುಣವಾಗಿ ವಿದ್ಯುತ್ ಉತ್ಪಾದಿಸಲಾಗುತ್ತಿದೆ' ಎಂದರು.

ಕೂಡಗಿಯಲ್ಲಿ ಉತ್ಪಾದನೆಯಾಗುವ ವಿದ್ಯುತ್‌ನಲ್ಲಿ ರಾಜ್ಯಕ್ಕೆ ಶೇ 50 ಹಾಗೂ ಉಳಿದ ವಿದ್ಯುತ್ ಅನ್ನು ದಕ್ಷಿಣದ ರಾಜ್ಯಗಳಿಗೆ ಹಂಚಿಕೆ ಮಾಡಲಾಗಿದೆ. ಸದ್ಯ ಸುಮಾರು ಆರು ಸಾವಿರ ಕಾರ್ಮಿಕರು ಇಲ್ಲಿ ಕಾರ್ಯನಿರ್ವಹಿಸುತ್ತಿದ್ದಾರೆ.

ಕುಡಿತಿನಿ: ಕಲ್ಲಿದ್ದಲು ಕೊರತೆ: ಬಳ್ಳಾರಿ ಜಿಲ್ಲೆಯ ಕುಡಿತಿನಿ ಉಷ್ಣ ವಿದ್ಯುತ್ ಸ್ಥಾವರದಲ್ಲಿ ಮೂರು ಘಟಕಗಳಿದ್ದು, ದಿನಕ್ಕೆ 8,000 ಮೆಟ್ರಿಕ್ ಟನ್ ಕಲ್ಲಿದ್ದಲು ಪೂರೈಕೆ ಆಗುತ್ತಿದೆ. 25 ಸಾವಿರ ಮೆಟ್ರಿಕ್ ಟನ್ ಕಲ್ಲಿದ್ದಲು ಅಗತ್ಯವಿದೆ. ಹೀಗಾಗಿ ಕಲ್ಲಿದ್ದಲು ಪೂರೈಕೆ ಕಡಿಮೆ ಇರುವುದರಿಂದ ಅಲ್ಲಿ ಸದ್ಯಕ್ಕೆ ಒಂದೇ ಘಟಕದ ಕೆಲಸ ಮಾಡುತ್ತಿದ್ದು ಉಳಿದ ಎರಡು ಘಟಕಗಳು ಸ್ಥಗಿತಗೊಂಡಿವೆ.

ರಾಯಚೂರು ಶಾಖೋತ್ಪನ್ನ ವಿದ್ಯುತ್ ಸ್ಥಾವರ (ಆರ್‌ಟಿಪಿಎಸ್)ದ ಕಲ್ಲಿದ್ದಲು ಸಂಗ್ರಹ ವಿಭಾಗದ ನೋಟ

ಬಳ್ಳಾರಿ ಜಿಲ್ಲೆ ಕುಡಿತಿನಿ ವಿದ್ಯುತ್ ಸ್ಥಾವರದ ವಿವರ	
ಒಟ್ಟು ಘಟಕ	3
ಉತ್ಪಾದನಾ ಸಾಮರ್ಥ್ಯ	1,700 (700+500+500)ಮೆ.ವಾಟ್
ಅಗತ್ಯವಿರುವ ಕಲ್ಲಿದ್ದಲು	25,000 ಮೆಟ್ರಿಕ್ ಟನ್
ಪೂರೈಸುತ್ತಿರುವ ಕಲ್ಲಿದ್ದಲು	8,000 ಮೆಟ್ರಿಕ್ ಟನ್
ಸ್ಥಗಿತಗೊಂಡಿರುವ ಘಟಕಗಳು	2 (700+500 ಮೆ.ವಾಟ್)

'ವಿದ್ಯುತ್ ಉತ್ಪಾದನೆ ಅಲ್ಪ ಕುಸಿತ'

ಉಡುಪಿ: ಛತ್ತೀಸಗಡ ಹಾಗೂ ಮಹಾರಾಷ್ಟ್ರದಲ್ಲಿ ಕಳೆದವಾರ ಮಳೆಯ ಪ್ರಮಾಣ ಹೆಚ್ಚಾಗಿದ್ದರಿಂದ ರಾಜ್ಯಕ್ಕೆ ಕಲ್ಲಿದ್ದಲು ಪೂರೈಕೆಯಲ್ಲಿ ವ್ಯತ್ಯಯ ಉಂಟಾಗಿ ವಿದ್ಯುತ್ ಉತ್ಪಾದನೆಯಲ್ಲಿ ಸ್ವಲ್ಪ ಕುಸಿತವಾಗಿತ್ತು. ಸದ್ಯ ಮಳೆ ಕಡಿಮೆಯಾಗಿದ್ದು, ಎಂದಿನಂತೆ ಕಲ್ಲಿದ್ದಲು ಪೂರೈಕೆಯಾಗುತ್ತಿದೆ ಎಂದು ಇಂಧನ ಸಚಿವ ವಿ.ಸುನಿಲ್ ಕುಮಾರ್ ಹೇಳಿದರು.

ವಿ. ಸುನಿಲ್ ಕುಮಾರ್

ರಾಯಚೂರು ಶಾಖೋತ್ಪನ್ನ ವಿದ್ಯುತ್ ಸ್ಥಾವರ ಹಾಗೂ ಬಳ್ಳಾರಿ ಉಷ್ಣ ವಿದ್ಯುತ್ ಸ್ಥಾವರಗಳಲ್ಲಿ ಎಲ್ಲ ಘಟಕಗಳು ವಿದ್ಯುತ್ ಉತ್ಪಾದನೆ ಮಾಡುತ್ತಿಲ್ಲ. ಹಾಗಾಗಿ, ಕಲ್ಲಿದ್ದಲು ಕೊರತೆ ತೀವ್ರವಾಗುವ ಆತಂಕವಿಲ್ಲ ಎಂದರು.

ಮುಳಬಾಗಿಲು: 15 ಮನೆಗಳು ಕುಸಿತ

ಪ್ರಜಾವಾಣಿ ವಾರ್ತೆ

ಕೋಲಾರ: ಜಿಲ್ಲೆಯಲ್ಲಿ ಗುರುವಾರ ರಾತ್ರಿ ಧಾರಾಕಾರ ಮಳೆಯಾಗಿದೆ. ಮುಳಬಾಗಿಲು ತಾಲ್ಲೂಕಿನಲ್ಲಿ 15ಕ್ಕೂ ಹೆಚ್ಚು ಮನೆಗಳು ಕುಸಿದಿವೆ. ನಾಲ್ಕೈದು ತಾಸು ಎಡಬಿಡದೆ ಸುರಿದ ಮಳೆ ಸೂರು ಕಳೆದುಕೊಂಡವರಲ್ಲಿ ಕಣ್ಣೀರು ತರಿಸಿತು.

ಜಮೀನುಗಳಲ್ಲಿ ಮಳೆ ನೀರು ಕೆರೆಯಂತೆ ನಿಂತಿದ್ದು, ತೋಟಗಾರಿಕೆ ಬೆಳೆಗಳು ಕೊಳೆಯಲಾರಂಭಿಸಿವೆ. ತಗ್ಗು ಪ್ರದೇಶದ ಮನೆಗಳಿಗೆ ನೀರು ನುಗಿದ್ದು, ವಿದ್ಯುತ್ ಉಪಕರಣಗಳು ಸುಟ್ಟು ಹೋಗಿವೆ. ಶ್ರೀನಿವಾಸಪುರ ತಾಲ್ಲೂಕಿನಲ್ಲೂ ಮಳೆಯಾಗಿದೆ.

ಟೊಮೆಟೊ, ಕೋಸು, ಬೀನ್ಸ್, ದಪ್ಪ ಮೆಣಸಿನಕಾಯಿ ಬೆಳೆಗಳು ನೆಲಕಚ್ಚಿವೆ. ಕೊಯ್ಲಿಗೆ ಬಂದಿದ್ದ ರಾಗಿ ಬೆಳೆ ಮಳೆಯ ಬಿರುಸಿಗೆ ನೆಲಕ್ಕೆ ಉರುಳಿದೆ. ಉತ್ತಮ ಫಸಲಿನ ನಿರೀಕ್ಷೆಯಲ್ಲಿದ್ದ ರೈತರು ಕಂಗಾಲಾಗಿದ್ದಾರೆ.

ಜಿಲ್ಲೆಯಲ್ಲಿ ಗುರುವಾರ ರಾತ್ರಿಯಿಂದ ಶುಕ್ರವಾರ ಬೆಳಿಗ್ಗೆವರೆಗೆ ಸರಾಸರಿ 30 ಮಿ.ಮೀ ಮಳೆಯಾಗಿದೆ.

ಸಿಡಿಲು ಬಡಿದು ಹಸು ಸಾವು

ತುಮಕೂರು ವರದಿ: ಜಿಲ್ಲೆಯ ಶಿರಾ, ಪಾವಗಡ, ಚಿಕ್ಕನಾಯಕನಹಳ್ಳಿ ತಾಲ್ಲೂಕಿನಲ್ಲಿ ಉತ್ತಮಯಾಗಿದೆ. ತೋವಿನಕೆರೆಯ ಅಂಬೇಡ್ಕರ್ ನಗರದಲ್ಲಿ ಮನೆ ಗೋಡೆ, ಪಾವಗಡ ತಾಲ್ಲೂಕಿನಲ್ಲಿ ನಾಲ್ಕು ಮನೆಗಳು ಕುಸಿದಿವೆ. ಪಿ. ವಡ್ಡರಹಟ್ಟಿಯಲ್ಲಿ ಸಿಡಿಲು ಬಡಿದು ಹಸು ಮೃತಪಟ್ಟಿದೆ.

ಚಿಕ್ಕನಾಯಕನಹಳ್ಳಿ ತಾಲ್ಲೂಕಿನ ಅಂಕಸಂದ್ರ ಗೊಲ್ಲರಹಟ್ಟಿಯ ತೋಟದ ಮನೆ, ಮಾಳಿಗೆಹಳ್ಳಿಯ ಕೆಲವು ಮನೆಗಳಿಗೆ ನೀರು ನುಗ್ಗಿದ್ದು, ಜನರು ತೊಂದರೆ ಅನುಭವಿಸಿದರು.

ಮೈಸೂರು ವರದಿ: ನಗರದ ಕೆಲವೆಡೆ ಹಾಗೂ ತಾಲ್ಲೂಕಿನ ವರುಣಾ ಹೋಬಳಿ ವ್ಯಾಪ್ತಿಯಲ್ಲಿ ಶುಕ್ರವಾರ ಸಂಜೆ ಗುಡುಗುಸಹಿತ ಧಾರಾಕಾರ ಮಳೆಯಾಗಿದೆ. ಮೆಲ್ಲಹಳ್ಳಿ, ಹಾರೋಹಳ್ಳಿ, ಬಡಗಲಹುಂಡಿ, ಪಾಳ್ಯ, ವರಕೋಡು ಭಾಗದಲ್ಲಿ ಮಳೆಯಾಗಿದೆ.

ಜಲಾಶಯದ ನೀರಿನ ಮಟ್ಟ (ಸಮುದ್ರ ಮಟ್ಟದಿಂದ)

ಜಲಾಶಯ	ಗರಿಷ್ಠ ಮಟ್ಟ (ಅಡಿಗಳಲ್ಲಿ)	ಇಂದಿನ ಮಟ್ಟ	ಒಳಹರಿವು (ಕ್ಯುಸೆಕ್‌ಗಳಲ್ಲಿ)	ಹೊರಹರಿವು (ಕ್ಯುಸೆಕ್‌ಗಳಲ್ಲಿ)
ಕೆಆರ್‌ಎಸ್*	124.80	115.54	10,448	6,418
ಹಾರಂಗಿ	2,859	2,858.31	1,386	1,001
ಕಬಿನಿ	2284.00	2,279.36	2,100	3,500
ಹೇಮಾವತಿ	2,922	2,912.76	3,271	4,718
ಲಿಂಗನಮಕ್ಕಿ	1,819	1,816.15	4,336	-
ಸೂಪಾ (ಮೀ)	564	556.95	5,802	1,349
ಮಾಣಿ	594	587.60	457	-
ತುಂಗಭದ್ರಾ	1,633	1,632.99	40,467	39,987
ಮಲಪ್ರಭಾ	2079.5	2,079.00	9,281	6,394
ಘಟಪ್ರಭಾ	2175	2,175.00	5,950	5,950
ಭದ್ರಾ	186	185.10	4,946	2,515
ಆಲಮಟ್ಟಿ (ಮೀ)	519.6	519.60	16,066	16,066
ನಾರಾಯಣಪುರ (ಮೀ)	492.25	492.22	15,000	24,800

* ನೆಲಮಟ್ಟದಿಂದ

ಮನೆ ಕುಸಿದು ಮಹಿಳೆಗೆ ಗಾಯ: ಮೂರು ಜಾನುವಾರು ಸಾವು

ದಾವಣಗೆರೆ: ಜಿಲ್ಲೆಯ ಹರಿಹರ ತಾಲ್ಲೂಕಿನ ಕಮಲಾಪುರ ಗ್ರಾಮದಲ್ಲಿ ಮಳೆಗೆ ಶಿಥಿಲವಾಗಿದ್ದ ಮನೆ ಕುಸಿದು ನೀಲಮ್ಮ ಗಾಣಿಗೇರ ಗಾಯಗೊಂಡಿದ್ದಾರೆ. ಎರಡು ಹಸುಗಳು ಸಾವನ್ನಪ್ಪಿವೆ.

ನ್ಯಾಮತಿ ಹೊರವಲಯದ ಹಳ್ಳದಲ್ಲಿ ರೈತ ಪರಪ್ಪ ಅವರು ನೀರು ಕುಡಿಸು ನಿರ್ಮಿಸಿರುವ ಸೇತುವೆ ಬಳಿ ನೀರಿನ ರಭಸಕ್ಕೆ ಎರಡು ಎತ್ತುಗಳು ಕೊಚ್ಚಿಹೋಗಿದ್ದು, ಮತ್ತೊಂದು ಎತ್ತು ಪಾರಾಗಿ ದಡ ಸೇರಿತು.

ಶಿವಮೊಗ್ಗ ಜಿಲ್ಲೆ ಹೊಸನಗರ ತಾಲ್ಲೂಕಿನಲ್ಲಿ ಉತ್ತಮ ಮಳೆಯಾಗಿದ್ದು, ಉಳಿದೆಡೆ ಬಿಡುವು ನೀಡಿದೆ.

ಮುಳಬಾಗಿಲು ತಾಲ್ಲೂಕಿನ ಗಂಜಿಗುಂಟೆ ಗ್ರಾಮದ ಬಳಿ ಕೆರೆ ಕೋಡಿ ಹರಿದು ರಸ್ತೆ ಜಲಾವೃತಗೊಂಡಿರುವುದು

5 ಜಿಲ್ಲೆಗಳಲ್ಲಿ ಭಾರಿ ಮಳೆ ಸಾಧ್ಯತೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದ ತುಮಕೂರು, ಕೋಲಾರ, ಚಿಕ್ಕಬಳ್ಳಾಪುರ, ಚಿತ್ರದುರ್ಗ, ಬಳ್ಳಾರಿ ಜಿಲ್ಲೆಗಳಲ್ಲಿ ಅ.9ರಂದು ಭಾರಿ ಮಳೆಯ ಮುನ್ಸೂಚನೆ ಇರುವುದರಿಂದ 'ಯೆಲ್ಲೊ ಅಲರ್ಟ್' ಘೋಷಿಸಲಾಗಿದೆ ಎಂದು ಹವಾಮಾನ ಇಲಾಖೆ ತಿಳಿಸಿದೆ.

ಕರಾವಳಿಯ ಉತ್ತರ ಕನ್ನಡ, ದಕ್ಷಿಣ ಕನ್ನಡ, ಉಡುಪಿ, ದಕ್ಷಿಣ ಒಳನಾಡಿನ ಬಳ್ಳಾರಿ, ಬೆಂಗಳೂರು ನಗರ, ಬೆಂಗಳೂರು ಗ್ರಾಮಾಂತರ, ದಾವಣಗೆರೆ ಜಿಲ್ಲೆಗಳಲ್ಲಿ ಅ.10ರಿಂದ ಹಾಗೂ ಉತ್ತರ ಒಳನಾಡಿನ ಬಾಗಲಕೋಟೆ, ಬೆಳಗಾವಿ, ಧಾರವಾಡ, ಗದಗ, ಹಾವೇರಿ, ಕೊಪ್ಪಳ, ವಿಜಯಪುರ ಜಿಲ್ಲೆಗಳಲ್ಲಿ ಇದೇ 12ರಿಂದ ಹೆಚ್ಚು ಮಳೆಯಾಗುವ ಸಾಧ್ಯತೆ ಇದೆ.

ಉಳಿದ ಜಿಲ್ಲೆಗಳಲ್ಲಿ ಗುಡುಗು, ಸಿಡಿಲು ಹೆಚ್ಚಾಗಿ ಇರಲಿದೆ. ಕೆಲ ಪ್ರದೇಶಗಳಲ್ಲಿ ಸಾಧಾರಣ ಮಳೆಯಾಗಬಹುದು ಎಂದು ತಿಳಿಸಿದೆ.

ಮಳೆ ಎಲ್ಲಿ, ಎಷ್ಟು?: ಕೊಪ್ಪಳ, ಚಿಂತಾಮಣಿಯಲ್ಲಿ ತಲಾ 9 ಸೆಂ.ಮೀ ಗರಿಷ್ಠ ಮಳೆಯಾಗಿದೆ. ಶಿರಾ 8, ಪಾವಗಡ 7, ಬೆಳ್ತಂಗಡಿ, ಹುಕ್ಕೇರಿ, ಮಧುಗಿರಿ 5, ನಿಪ್ಪಾಣಿ, ಕೋಲಾರ 4, ದಾವಣಗೆರೆ , ಶಿಡ್ಲಘಟ್ಟ 3, ಗೌರಿಬಿದನೂರು 2, ಚಿಕ್ಕೋಡಿ, ತೊಂಡೆಬಾವಿ, ಅರಕಲಗೂಡು ಹಾಗೂ ಹೊಸಪೇಟೆಯಲ್ಲಿ ತಲಾ 1 ಸೆಂ.ಮೀ ಮಳೆಯಾಗಿದೆ.

ಶಿರಾಲಿಯಲ್ಲಿ 33 ಡಿಗ್ರಿ ಸೆಲ್ಸಿಯಸ್ ಗರಿಷ್ಠ ತಾಪಮಾನ ಹಾಗೂ ಬೀದರ್‌ನಲ್ಲಿ 19 ಡಿಗ್ರಿ ಸೆಲ್ಸಿಯಸ್ ಕನಿಷ್ಠ ತಾಪಮಾನ ದಾಖಲಾಗಿದೆ.

ಕಲ್ಯಾಣ ಕರ್ನಾಟಕದ 25 ಸಾವಿರ ಹುದ್ದೆಗಳ ಭರ್ತಿ: ಶ್ರೀರಾಮುಲು



ಸಿಂಧನೂರು (ರಾಯಚೂರು ಜಿಲ್ಲೆ): 'ಕಲ್ಯಾಣ ಕರ್ನಾಟಕ ಭಾಗದ ವಿವಿಧ ಇಲಾಖೆಗಳಲ್ಲಿ ಖಾಲಿ ಇರುವ 25 ಸಾವಿರ ಹುದ್ದೆಗಳ ಭರ್ತಿಗೆ ರಾಜ್ಯ ಸರ್ಕಾರ ಶೀಘ್ರ ಕ್ರಮ ಕೈಗೊಳ್ಳಲಿದೆ' ಎಂದು 371 (ಜೆ) ಅನುಷ್ಠಾನಕ್ಕೆ ಸಂಬಂಧಿಸಿದ ಸಂಪುಟ ಉಪ ಸಮಿತಿಯ ಅಧ್ಯಕ್ಷರೂ ಆಗಿರುವ ಸಾರಿಗೆ ಸಚಿವ ಬಿ.ಶ್ರೀರಾಮುಲು ಹೇಳಿದರು. ಶುಕ್ರವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ಈ ಭಾಗದ ಸಮಗ್ರ ಅಭಿವೃದ್ಧಿಗೆ ಸರ್ಕಾರ ಬದ್ಧವಾಗಿದೆ. 371(ಜೆ) ಅನುಷ್ಠಾನದಲ್ಲಿ ಲೋಪ ಮಾಡುವ ಅಧಿಕಾರಿಗಳ ವಿರುದ್ಧ ಕ್ರಮ ಜರುಗಿಸಲಾಗುವುದು' ಎಂದರು.

'ಆರ್‌ಎಸ್‌ಎಸ್ ಬಗ್ಗೆ ಜೆಡಿಎಸ್ ವರಿಷ್ಠ ಎಚ್.ಡಿ. ದೇವೇಗೌಡ ಅವರಿಗೆ ಗೊತ್ತಿದೆ. ಹೀಗಾಗಿ ಅವರು ಹೊಗಳುತ್ತಾರೆ. ಆದರೆ ಅವರ ಪುತ್ರ ಎಚ್.ಡಿ. ಕುಮಾರಸ್ವಾಮಿ ಅವರಿಗೆ ಸರಿಯಾಗಿ ಗೊತ್ತಿಲ್ಲ. ಹೀಗಾಗಿ ಕೇವಲ ಪ್ರಚಾರಕ್ಕಾಗಿ ಅವರು ಹೇಳಿಕೆ ನೀಡುತ್ತಿದ್ದಾರೆ' ಎಂದು ಪ್ರತಿಕ್ರಿಯಿಸಿದರು.

'ಗ್ರೋಯಿಂಗ್ ಅಪ್ ಕಾರಂತ' ಕೃತಿ ಕುರಿತ ಕಾರ್ಯಕ್ರಮ: ತಂದೆ ಜತೆಗಿನ ಒಡನಾಟ ಬಿಚ್ಚಿಟ್ಟ ಮಕ್ಕಳು

'ಶಿವರಾಮ ಕಾರಂತರು ಕಲ್ಪವೃಕ್ಷವಾಗಿದ್ದರು'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಶಿವರಾಮ ಕಾರಂತರು ಎಂದಿಗೂ ಆಲದ ಮರವಾಗಲಿಲ್ಲ. ಬದಲಾಗಿ ಕಲ್ಪವೃಕ್ಷವಾಗಿದ್ದರು. ಮಕ್ಕಳನ್ನು ನಿಯಂತ್ರಿಸುವ ಪ್ರಯತ್ನ ಮಾಡಲಿಲ್ಲ'

'ಕಡಲ ತೀರದ ಭಾರ್ಗವ' ಡಾ.ಕೆ. ಶಿವರಾಮ ಕಾರಂತ ಅವರ ಜತೆಗಿನ ಆತ್ಮೀಯ ಒಡನಾಟವನ್ನು ಮಕ್ಕಳು ಹಂಚಿಕೊಂಡಿದ್ದು ಹೀಗೆ.

ಶಿವರಾಮ ಕಾರಂತರ ಜೀವನ ಚರಿತ್ರೆ ಕುರಿತು ಅವರ ಮಕ್ಕಳಾದ ಪರಿಸರ ತಜ್ಞ ಉಲ್ಲಾಸ ಕಾರಂತ, ಮಾಳವಿಕಾ ಕಪೂರ್ ಹಾಗೂ ಕ್ಷಮಾ ರಾವ್ ಬರೆದಿರುವ 'ಗ್ರೋಯಿಂಗ್ ಅಪ್ ಕಾರಂತ' ಕೃತಿಗೆ ಸಂಬಂಧಿಸಿದ ವಿಶೇಷ ಕಾರ್ಯಕ್ರಮದಲ್ಲಿ ಅವರ ಕುಟುಂಬ ಜೀವನವನ್ನು ಅನಾವರಣಗೊಳಿಸುವ ಪ್ರಯತ್ನ ಮಾಡಲಾಯಿತು.

ಕೃತಿ ಕುರಿತು ಮಾತನಾಡಿದ ಪತ್ರಕರ್ತ ಸುಗತ ಶ್ರೀನಿವಾಸ ರಾಜು, 'ಕೃತಿಯಲ್ಲಿ ಮಕ್ಕಳು ತಮ್ಮ ತಾಯಿ ಲೀಲಾ ಕಾರಂತ ಅವರ ಬಗ್ಗೆ ಹೆಚ್ಚು ಬರೆದಿದ್ದಾರೆ. ತಾಯಿಯ ನೋವು, ತ್ಯಾಗ, ಬದುಕಿನಲ್ಲಿ ನಡೆಸಿದ ಹೋರಾಟದ ಬಗ್ಗೆ ಪ್ರಸ್ತಾಪಿಸಲಾಗಿದೆ' ಎಂದು ವಿಶ್ಲೇಷಿಸಿದರು.

'ವ್ಯಕ್ತಿಗತ ಜೀವನ ಆಧಾರಿತವಾಗಿರುವ ಈ ಕೃತಿಯು ವಾಸ್ತವ ಅಂಶಗಳನ್ನು ಒಳಗೊಂಡಿದೆ. ತಂದೆ, ತಾಯಿ ಬಗ್ಗೆ ಬರೆಯುವುದು ಕಷ್ಟದ ಕೆಲಸ. ಆದರೆ, ಇಲ್ಲಿ ಮೂವರು ಒಮ್ಮತದಿಂದ ಬರೆದಿದ್ದಾರೆ. ತಂದೆಗೆ ಹೊರ ಜಗತ್ತಿನಲ್ಲಿ ಒಂದು ಮುಖ ಇದ್ದರೆ, ಮನೆಯಲ್ಲಿ ಇನ್ನೊಂದು ಮುಖ ಇರುತ್ತದೆ. ಮಕ್ಕಳು ವಿಭಿನ್ನ ಅಭಿಪ್ರಾಯಗಳನ್ನು ವ್ಯಕ್ತಪಡಿಸುವುದು ಸಹಜ. ತಂದೆ ಕುರಿತು ಕೃತಿಗಳನ್ನು ರಚಿಸುವ ಕುರಿತು ಕನ್ನಡದಲ್ಲಿ ಸಣ್ಣ ಪರಂಪರೆ ಇದೆ' ಎಂದು ವಿವರಿಸಿದರು.

ಉಲ್ಲಾಸ್ ಕಾರಂತ, 'ಹತ್ತು ವರ್ಷಗಳಿಂದ ಈ ಕೃತಿ ಬರೆಯುವ ಕಾರ್ಯ ಆರಂಭವಾಯಿತಾದರೂ ಕಳೆದ ಒಂದು ವರ್ಷದಲ್ಲಿ ತ್ವರಿತಗತಿಯಲ್ಲಿ ನಡೆಯಿತು. ನಂತರ, ಮೂರು ತಿಂಗಳಲ್ಲಿ ಕೃತಿ ರೂಪುಗೊಂಡಿತು. ನಾವು ಪ್ರತ್ಯೇಕವಾಗಿಯೇ ನಮ್ಮ ಅನುಭವಗಳನ್ನು ಬರೆದಿದ್ದೇವೆ' ಎಂದರು.

'ಹಲವು ತಿಂಗಳ ಕಾಲ ವಿಷಯಗಳನ್ನು ಸಂಗ್ರಹಿಸಿ ನೆನಪಿನಲ್ಲಿಟ್ಟುಕೊಳ್ಳುತ್ತಿದ್ದ ತಂದೆ, ಕೇವಲ 8ರಿಂದ 10 ದಿನಗಳಲ್ಲಿ ಕಾದಂಬರಿ ಬರೆಯುತ್ತಿದ್ದರು. ಅವರಲ್ಲಿ ಎಂದಿಗೂ ಆತ್ಮವಿಶ್ವಾಸದ ಕೊರತೆಯಾಗಲಿಲ್ಲ' ಎಂದು ಅಪ್ಪನ ವ್ಯಕ್ತಿತ್ವವನ್ನು ವಿವರಿಸಿದರು.

ಮಾಳವಿಕಾ ಕಪೂರ್ ಮಾತನಾಡಿ, 'ಶಿವರಾಮ ಕಾರಂತರಿಗೆ ತಾಯಿ ಲೀಲಾ ಎಲ್ಲ ರೀತಿಯ ಬೆಂಬಲ ನೀಡಿದ್ದರು. ಹಣಕಾಸಿನ ಸಮಸ್ಯೆ ಮತ್ತು ಬದುಕಿನಲ್ಲಿ ಎದುರಾದ ಹಲವು ಸವಾಲುಗಳನ್ನು ಸಮರ್ಥವಾಗಿ ಎದುರಿಸಿದ್ದರು' ಎಂದು ಹೇಳಿದರು.

ಮಾಜಿ ಐಎಎಸ್ ಅಧಿಕಾರಿ ಚಿರಂಜೀವಿ ಸಿಂಗ್, 'ಕರ್ನಾಟಕದ ಸಂಸ್ಕೃತಿಗೆ ಅಪಾರ ಕೊಡುಗೆ ನೀಡಿರುವ ಶಿವರಾಮ ಕಾರಂತ ಅವರು, ಭಾಷೆಯನ್ನು ವಿಸ್ತರಿಸುವ ಕಾರ್ಯದಲ್ಲೂ ಅಪಾರ ಕೊಡುಗೆ ನೀಡಿದ್ದಾರೆ' ಎಂದು ಹೇಳಿದರು.

ಕಾದಂಬರಿಕಾರ ವಿವೇಕ ಶಾನಭಾಗ, 'ಶಿವರಾಮ ಕಾರಂತರ ಬಗ್ಗೆ ಏನೇ ಬರೆದರೂ ಸಾಂಸ್ಕೃತಿಕ ಇತಿಹಾಸವನ್ನು ಪ್ರತಿಬಿಂಬಿಸುತ್ತದೆ' ಎಂದು ಹೇಳಿದರು.

ಕ್ಷಮಾ ರಾವ್, ಲೇಖಕಿ ಶೋಭಾ ನಾರಾಯಣ ಇದ್ದರು.

'ಗ್ರೋಯಿಂಗ್ ಅಪ್ ಕಾರಂತ' ಕೃತಿಯ ಬಿಡುಗಡೆ ಕಾರ್ಯಕ್ರಮದಲ್ಲಿ (ಎಡದಿಂದ) ಸುಗತ ಶ್ರೀನಿವಾಸರಾಜು, ಶೋಭಾ ನಾರಾಯಣ್, ಕ್ಷಮಾ ರಾವ್, ಮಾಳವಿಕಾ ಕಪೂರ್, ಉಲ್ಲಾಸ್ ಕಾರಂತ್, ಚಿರಂಜೀವಿ ಸಿಂಗ್, ವಿವೇಕ್ ಶಾನಭಾಗ್ ಮತ್ತು ಇತಿಹಾಸಕಾರ ರಾಮಚಂದ್ರ ಗುಹಾ ಇದ್ದರು ಪ್ರಜಾವಾಣಿ ಚಿತ್ರ

ಖಾನಾಪುರದ ಮುಸ್ಲಿಂ ಯುವಕನ ಕೊಲೆ ಪ್ರಕರಣ

ಶ್ರೀರಾಮಸೇನಾ ಹಿಂದೂಸ್ತಾನ ಮುಖಂಡ ಸೇರಿ 10 ಮಂದಿ ಸೆರೆ

ಪ್ರಜಾವಾಣಿ ವಾರ್ತೆ

ಬೆಳಗಾವಿ: ಖಾನಾಪುರದ ಅರ್ಬಾಜ್ ಮುಲ್ಲಾ (24) ಕೊಲೆ ಪ್ರಕರಣವನ್ನು ಪೊಲೀಸರು ಭೇದಿಸಿದ್ದಾರೆ. ಆ ಯುವಕ ಪ್ರೀತಿಸುತ್ತಿದ್ದ ಯುವತಿಯ ತಂದೆ–ತಾಯಿ ಸೇರಿದಂತೆ 10 ಮಂದಿ ಆರೋಪಿಗಳನ್ನು ಶುಕ್ರವಾರ ಬಂಧಿಸಿದ್ದಾರೆ.

ಪುಂಡಲೀಕ ಮುತಗೇಕರ

ಘಟನೆ ನಡೆದು 11 ದಿನಗಳ ನಂತರ ಆರೋಪಿಗಳ ಬಂಧನವಾಗಿದೆ. 'ಪ್ರಮುಖ ಆರೋಪಿ ಪುಂಡಲೀಕನನ್ನು ವಿಚಾರಣೆಗೆ ಒಳಪಡಿಸಿದಾಗ ಪ್ರಕರಣ ಬಯಲಾಗಿದೆ' ಎಂದು ಎಸ್ಪಿ ಲಕ್ಷ್ಮಣ ನಿಂಬರಗಿ ತಿಳಿಸಿದರು.

ಅರ್ಬಾಜ್ ಮುಲ್ಲಾ

ಆರೋಪಿಗಳನ್ನು ಖಾನಾಪುರ ನ್ಯಾಯಾಲಯಕ್ಕೆ ಹಾಜರುಪಡಿಸಲಾಯಿತು. ಐವರನ್ನು ಪೊಲೀಸ್ ಕಸ್ಟಡಿಗೆ ಪಡೆಯಲಾಗಿದೆ. ಇನ್ನುಳಿದ ಐವರನ್ನು ನ್ಯಾಯಾಂಗ ಬಂಧನಕ್ಕೆ ನೀಡಲಾಗಿದೆ

ಯುವತಿಯ ತಂದೆ ಖಾನಾಪುರದ ಮಾರುತಿನಗರದ ಈರಪ್ಪ ಕುಂಬಾರ ಮತ್ತು ತಾಯಿ ಸುಶೀಲಾ ಕುಂಬಾರ, 'ಶ್ರೀರಾಮ ಸೇನಾ ಹಿಂದೂಸ್ತಾನ' ಸಂಘಟನೆ ಖಾನಾಪುರ ತಾಲ್ಲೂಕು ಘಟಕದ ಪುಂಡಲೀಕ ಅಲಿಯಾಸ್ ಮಹಾರಾಜ ಮುತಗೇಕರ, ಕುತುಬುದ್ದೀನ್ ಬೇಪಾರಿ, ಮಾರುತಿ ಸುಗತೆ, ಮಂಜುನಾಥ ಗೊಂಧಳಿ, ಗಣಪತಿ ಸುಗತೆ, ಪ್ರಶಾಂತ ಪಾಟೀಲ, ಪ್ರವೀಣ ಪೂಜಾರಿ ಅಲಿಯಾಸ್ ಬಿರ್ಜೆ ಮತ್ತು ಶ್ರೀಧರ ಡೋಣಿ ಬಂಧಿತರು.

ಯುವಕನ ಶವ ಖಾನಾಪುರ ಹೊರವಲಯದ ರೈಲು ಹಳಿಯಲ್ಲಿ ಸೆ. 28ರಂದು ಪತ್ತೆಯಾಗಿತ್ತು. ರುಂಡ, ಮುಂಡ ಕತ್ತರಿಸಿ ಬಿಸಾಡಲಾಗಿತ್ತು. ಅವರ ತಾಯಿ, ಉರ್ದು ಸರ್ಕಾರಿ ಶಾಲೆಯ ಶಿಕ್ಷಕಿ ನಾಜಿಮಾ ಶೇಖ್ ನೀಡಿದ ದೂರಿನ ಮೇರೆಗೆ ಸೆ. 29ರಂದು ರೈಲ್ವೆ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿತ್ತು. ಯುವತಿಯ ತಂದೆ, ತಾಯಿ, ಪುಂಡಲೀಕ ಹಾಗೂ ಬಿರ್ಜೆ ಕೊಲೆ ಮಾಡಿದ್ದಾರೆ ಎಂದು ದೂರು ನೀಡಿದ್ದರು. ಪ್ರಕರಣದಲ್ಲಿ ಇನ್ನೂ ಕೆಲವರು ಭಾಗಿಯಾಗಿರುವ ಶಂಕೆ ಇದ್ದು, ಅವರನ್ನು ಬಂಧಿಸಲು ಪೊಲೀಸರು ತನಿಖೆ ಮುಂದುವರಿಸಿದ್ದಾರೆ.

ಸ್ವಾರ್ಥಕ್ಕೆ ಬಳಕೆ...

ಎರಡು ಕುಟುಂಬಗಳ ನಡುವಿನ ವಿಷಯವನ್ನು ಸ್ವಾರ್ಥಕ್ಕೆ ಬಳಸಲು ಸಂಘಟನೆ ಮುಖಂಡರು ಯತ್ನಿಸಿದ್ದಾರೆ ಎನ್ನುವ ಸಂಗತಿ ತನಿಖೆಯಿಂದ ಹೊರಬಿದ್ದಿದೆ' ಎಂದು ಪೊಲೀಸ್ ಮೂಲಗಳು ತಿಳಿಸಿವೆ.

'ಒಂದೇ ಗಲ್ಲಿಯಲ್ಲಿದ್ದ ಯುವಕ–ಯುವತಿ ಎರಡು ವರ್ಷಗಳಿಂದ ಪ್ರೀತಿಸುತ್ತಿದ್ದರು. ವಿಷಯ ತಿಳಿದ ಯುವತಿಯ ಪೋಷಕರು ಅರ್ಬಾಜ್‌ಗೆ ಎಚ್ಚರಿಸಿದ್ದರು. ಪುಂಡಲೀಕ ಹಾಗೂ ಸಹಚರರ ಮೂಲಕ ತೊಂದರೆ ಕೊಡಿಸುತ್ತಿದ್ದರು. ಹೀಗಾಗಿ, 2 ತಿಂಗಳ ಹಿಂದೆ ಅರ್ಬಾಜ್ ಮತ್ತು ಅವರ ತಾಯಿ ಬೆಳಗಾವಿಗೆ ಸ್ಥಳಾಂತರಗೊಂಡಿದ್ದರು. ಈ ನಡುವೆಯೂ ಪ್ರೀತಿ ಮುಂದುವರಿದಿದ್ದು ತಿಳಿದಿದ್ದರಿಂದ ಯುವತಿಯ ತಂದೆ–ತಾಯಿ ಅರ್ಬಾಜ್ ಕೊಲೆಗೆ ಸುಪಾರಿ ಕೊಟ್ಟಿದ್ದರು. ಏನೇ ಆದರೂ ನಾವು ಮುಂದಿರುತ್ತೇವೆ ಎಂದಿದ್ದರು ಎಂಬುದು ತನಿಖೆಯಿಂದ ತಿಳಿದುಬಂದಿದೆ' ಎಂದು ಪೊಲೀಸರು ತಿಳಿಸಿದ್ದಾರೆ.

ವಿಡಿಯೊ ನೋಡಲು ಕೋಡ್ ಸ್ಕ್ಯಾನ್ ಮಾಡಿ

ಪ್ರಜಾವಾಣಿ ನೋಡಿಯೊ

https://bit.ly/2YDFqhl

ನ್ಯಾಯಮೂರ್ತಿಗಳ ಹುದ್ದೆಗೆ ನಾಲ್ವರು ವಕೀಲರ ಹೆಸರು ಶಿಫಾರಸು

ಪ್ರಜಾವಾಣಿ ವಾರ್ತೆ

ನವದೆಹಲಿ: ಕರ್ನಾಟಕದ ನಾಲ್ವರು ಸೇರಿದಂತೆ ಒಟ್ಟು 11 ಹಿರಿಯ ವಕೀಲರನ್ನು ಹೈಕೋರ್ಟ್ ನ್ಯಾಯಮೂರ್ತಿಗಳನ್ನಾಗಿ ನೇಮಿಸಲು ಮುಖ್ಯ ನ್ಯಾಯಮೂರ್ತಿ ಎನ್.ವಿ. ರಮಣ ನೇತೃತ್ವದ ಸುಪ್ರೀಂ ಕೋರ್ಟ್‌ನ ಕೊಲಿಜಿಯಂ ಶಿಫಾರಸು ಮಾಡಿದೆ.

ರಾಜ್ಯದ ಹಿರಿಯ ವಕೀಲರಾದ ಅನಂತ ರಾಮನಾಥ ಹೆಗಡೆ, ಚೆಪ್ಪುಡಿರ ಮೋನಪ್ಪ ಪೂಣಚ್ಚ, ಸಿದ್ದಯ್ಯ ರಾಚಯ್ಯ ಹಾಗೂ ಕೆ.ಎಸ್. ಹೇಮಲೇಖಾ ಅವರ ಹೆಸರುಗಳನ್ನು ಕರ್ನಾಟಕ ಹೈಕೋರ್ಟ್ ನ್ಯಾಯಮೂರ್ತಿಗಳನ್ನಾಗಿ ನೇಮಿಸಲು ಕಳೆದ ಬುಧವಾರ ನಡೆದ ಕೊಲಿಜಿಯಂ ಸಭೆಯಲ್ಲಿ ಶಿಫಾರಸು ಮಾಡಲಾಗಿದೆ.

ಐವರನ್ನು ರಾಜಸ್ಥಾನ ಹಾಗೂ ತಲಾ ಒಬ್ಬರನ್ನು ಕಲ್ಕತ್ತಾ ಮತ್ತು ಅಲಹಾಬಾದ್ ಹೈಕೋರ್ಟ್ ನ್ಯಾಯಮೂರ್ತಿಗಳನ್ನಾಗಿ ನೇಮಿಸುವ ಸಂಬಂಧ ಶಿಫಾರಸು ಮಾಡಲು ಸಭೆಯಲ್ಲಿ ನಿರ್ಧರಿಸಲಾಗಿದೆ.

ವಕೀಲರ ಸಂಘಕ್ಕೆ ಆಡಳಿತಾಧಿಕಾರಿ ನೇಮಕ: ಹೈಕೋರ್ಟ್ ತಡೆಯಾಜ್ಞೆ

ಬೆಂಗಳೂರು: ಬೆಂಗಳೂರು ವಕೀಲರ ಸಂಘಕ್ಕೆ ಆಡಳಿತಾಧಿಕಾರಿ ನೇಮಿಸಿರುವ ಸರ್ಕಾರದ ಆದೇಶಕ್ಕೆ ತಡೆಯಾಜ್ಞೆ ನೀಡಿರುವ ಹೈಕೋರ್ಟ್, ಮುಂದಿನ ಚುನಾವಣೆಯವರೆಗೂ ಈಗಿರುವ ಕಾರ್ಯಕಾರಿ ಸಮಿತಿಯೇ ಮುಂದುವರಿಯಲಿ ಎಂದು ಆದೇಶಿಸಿದೆ ಎಂದು ವಕೀಲರ ಸಂಘದ ಅಧ್ಯಕ್ಷ ಎ.ಪಿ. ರಂಗನಾಥ್ ತಿಳಿಸಿದ್ದಾರೆ.

'ವಕೀಲರ ಸಂಘಕ್ಕೆ ಆಡಳಿತಾಧಿಕಾರಿ' ನೇಮಕ ಎಂಬ ಶೀರ್ಷಿಕೆಯಡಿ ಪತ್ರಿಕೆಯಲ್ಲಿ ಶುಕ್ರವಾರ ಪ್ರಕಟವಾಗಿರುವ ಸುದ್ದಿಗೆ ಸ್ಪಷ್ಟನೆ ನೀಡಿರುವ ಅವರು, 'ವಕೀಲರ ಸಂಘಕ್ಕೆ ನಗರದ ಜಿಲ್ಲಾಧಿಕಾರಿ ಜೆ. ಮಂಜುನಾಥ್ ಅವರನ್ನು ಆಡಳಿತಾಧಿಕಾರಿಯಾಗಿ ನೇಮಿಸಿ ಸರ್ಕಾರ ಆದೇಶ ಹೊರಡಿಸಿತ್ತು. ಅದಕ್ಕೆ ತಡೆಯಾಜ್ಞೆ ಕೊಟ್ಟಿರುವ ಹೈಕೋರ್ಟ್, ಇದೇ ಡಿಸೆಂಬರ್ 22ರೊಳಗೆ ಸಂಘದ ಪದಾಧಿಕಾರಿಗಳ ಆಯ್ಕೆಗೆ ಚುನಾವಣೆ ನಡೆಸುವಂತೆ ಆದೇಶಿಸಿದೆ' ಎಂದು ತಿಳಿಸಿದ್ದಾರೆ.

ತಿದ್ದುಪಡಿ ಬಳಿಕ ರಾಜ್ಯದಲ್ಲಿ ಮೊದಲ ಪ್ರಕರಣ

ಆನ್‌ಲೈನ್ ಗೇಮ್; 'ಡ್ರೀಮ್–11' ವಿರುದ್ಧ ಎಫ್‌ಐಆರ್ ದಾಖಲು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಆನ್‌ಲೈನ್ ಜೂಜು ನಿಷೇಧಿಸಿ ಕರ್ನಾಟಕ ಪೊಲೀಸ್ ಕಾಯ್ದೆಗೆ ಇತ್ತೀಚೆಗಷ್ಟೇ ತಿದ್ದುಪಡಿ ತರಲಾಗಿದ್ದು, ಈ ಹೊಸ ತಿದ್ದುಪಡಿ ಅನ್ವಯ 'ಡ್ರೀಮ್–11' ಆ್ಯಪ್ ವಿರುದ್ಧ ರಾಜ್ಯದಲ್ಲಿ ಮೊದಲ ಎಫ್‌ಐಆರ್ ದಾಖಲಾಗಿದೆ.

ಆನ್‌ಲೈನ್ ಗೇಮ್‌ಗಳ ಮೂಲಕ ಅಕ್ರಮವಾಗಿ ಜೂಜು ನಡೆಸುತ್ತಿರುವ ಆರೋಪದಡಿ 'ಡ್ರೀಮ್–11' ಆ್ಯಪ್ ವಿರುದ್ಧ ಬೆಂಗಳೂರಿನ ಅನ್ನಪೂರ್ಣೇಶ್ವರಿನಗರ ಠಾಣೆ ಪೊಲೀಸರು ಪ್ರಕರಣ ದಾಖಲಿಸಿಕೊಂಡಿದ್ದಾರೆ.

'ನಾಗರಬಾವಿ ನಿವಾಸಿಯಾಗಿರುವ ಚಾಲಕ ಮಂಜುನಾಥ್ ಎಂಬುವರು ದೂರು ನೀಡಿದ್ದಾರೆ. 'ಡ್ರೀಮ್–11' ಆ್ಯಪ್ ನಿರ್ವಹಣೆ ಮಾಡುತ್ತಿರುವ 'ಸ್ಪೋರ್ಟಾ ಟೆಕ್ನಾಲಜೀಸ್' ಕಂಪನಿಯ ಸಂಸ್ಥಾಪಕರಾದ ಮುಂಬೈನ ಭವಿತ್ ಸೇಠ್ ಮತ್ತು ಹರೀಶ್ ಜೈನ್ ಅವರನ್ನು ಆರೋಪಿಯನ್ನಾಗಿ ಮಾಡಲಾಗಿದೆ' ಎಂದು ಪೊಲೀಸ್ ಅಧಿಕಾರಿಯೊಬ್ಬರು ಹೇಳಿದರು.

'ಕ್ರಿಕೆಟ್, ಹಾಕಿ, ಫುಟ್‌ಬಾಲ್, ಕಬಡ್ಡಿ ಹಾಗೂ ಬ್ಯಾಸ್ಕೆಟ್‌ಬಾಲ್ ಆಟಗಳನ್ನು ಆ್ಯಪ್‌ನಲ್ಲಿ ಸೇರಿಸಲಾಗಿದೆ. ಈ ಆಟಗಳ ಮೇಲೆ ತಂಡಗಳನ್ನು ರಚಿಸಿಕೊಳ್ಳಲು ಅವಕಾಶ ನೀಡಲಾಗಿದೆ. ಇದೇ ತಂಡಗಳ ಮೂಲಕ ಕೋಟಿ ಕೋಟಿ ಹಣ ಗೆಲ್ಲಬಹುದೆಂದು ಆಮಿಷವೊಡ್ಡಿ ಜನರನ್ನು ಪ್ರಚೋದಿಸಲಾಗುತ್ತಿದೆ. ಈ ಸಂಗತಿ ದೂರಿನಲ್ಲಿದೆ' ಎಂದೂ ತಿಳಿಸಿದರು.

'ಆ್ಯಪ್ ಜಾಹೀರಾತು ನಂಬಿ ಹಲವರು, ಹಣ ಕಳೆದುಕೊಳ್ಳುತ್ತಿದ್ದಾರೆ. ಆನ್‌ಲೈನ್ ಗೇಮ್‌ನಲ್ಲಿ ಗೆದ್ದವರಿಗೂ ಹಣ ನೀಡದೇ, ಮತ್ತೊಂದು ಮಗದೊಂದು ಗೇಮ್ ಮೇಲೆ ಹಣ ಕಟ್ಟಿಸಿಕೊಳ್ಳಲಾಗುತ್ತಿದೆ. ಬಹುತೇಕರು ಆ್ಯಪ್ ಮೂಲಕ ಹಣ ಠೇವಣಿ ಇರಿಸಿ ಆಟವಾಡುತ್ತಿದ್ದಾರೆ. ಅವರೆಲ್ಲರೂ ಆನ್‌ಲೈನ್ ಗೇಮ್‌ನಿಂದಾಗಿ ಹಣ ಕಳೆದುಕೊಳ್ಳುತ್ತಿದ್ದಾರೆ. ಆ್ಯಪ್ ಮೂಲಕ ಜನರ ದಿಕ್ಕು ತಪ್ಪಿಸುವ ಉದ್ದೇಶ ಆರೋಪಿಗಳದ್ದು ಎಂಬುದಾಗಿ ದೂರುದಾರರು ಹೇಳಿದ್ದಾರೆ' ಎಂದೂ ಅಧಿಕಾರಿ ವಿವರಿಸಿದರು.

ಕಾಯ್ದೆ ಅನ್ವಯ ನೋಟಿಸ್ ಜಾರಿ: 'ಕರ್ನಾಟಕ ಪೊಲೀಸ್ ಕಾಯ್ದೆ ಕಲಂ 79 ಹಾಗೂ 80 ಅನ್ವಯ ಪ್ರಕರಣ ದಾಖಲಿಸಿಕೊಳ್ಳಲಾಗಿದೆ. ಆರೋಪಿಗಳಾದ ಭವಿತ್ ಸೇಠ್ ಹಾಗೂ ಹರೀಶ್ ಜೈನ್ ಅವರಿಗೆ ನೋಟಿಸ್ ನೀಡಿ ವಿಚಾರಣೆ ನಡೆಸಲಾಗುವುದು. ಹೇಳಿಕೆ ಪಡೆದ ನಂತರ ಮುಂದಿನ ಕಾನೂನು ಕ್ರಮ ಕೈಗೊಳ್ಳಲಾಗುವುದು' ಎಂದೂ ಪೊಲೀಸ್ ಅಧಿಕಾರಿ ಹೇಳಿದರು.

ಹಣವನ್ನು ಪಣವಾಗಿರಿಸಿ ಆನ್‌ಲೈನ್ ಮೂಲಕ ಆಡುವ ಎಲ್ಲ ಬಗೆಯ ಜೂಜುಗಳ ವಿರುದ್ಧ ಕ್ರಮ ಜರುಗಿಸಲು ಕರ್ನಾಟಕ ಪೊಲೀಸ್ ಕಾಯ್ದೆಗೆ ತಿದ್ದುಪಡಿ ತರಲಾಗಿದೆ.

'ಬೆಟ್ಟಿಂಗ್‌ಗೆ ಆ್ಯಪ್ ವೇದಿಕೆ'

'ಐಪಿಎಲ್ ಹಾಗೂ ಇತರೆ ಪಂದ್ಯಾವಳಿಗಳು ಆರಂಭವಾದರೆ, ಡ್ರೀಮ್ – 11 ಆ್ಯಪ್ ಬಳಕೆದಾರರ ಸಂಖ್ಯೆ ಹೆಚ್ಚಿರುತ್ತದೆ. ಬಹುಮಾನಗಳ ಆಮಿಷವೊಡ್ಡಿ ಜನರಿಂದ ಹಣ ಕಟ್ಟಿಸಿಕೊಂಡು ಬೆಟ್ಟಿಂಗ್ ಸಹ ನಡೆಸಲಾಗುತ್ತದೆ. ಇದು ನಿಯಮ ಬಾಹಿರವಾಗಿದ್ದು, ಈ ಬಗ್ಗೆಯೂ ದೂರುದಾರರು ತಮ್ಮ ದೂರಿನಲ್ಲಿ ಉಲ್ಲೇಖಿಸಿದ್ದಾರೆ' ಎಂದು ಪೊಲೀಸ್ ಅಧಿಕಾರಿ ಹೇಳಿದರು.

ಶಾಸಕ ಪುಟ್ಟರಾಜು ಮನೆಗೆ ಕಲ್ಲೆಸೆದ ಕಿಡಿಗೇಡಿಗಳು

ಪ್ರಜಾವಾಣಿ ವಾರ್ತೆ

ಪಾಂಡವಪುರ: ಮದ್ಯದ ಅಮಲಿನಲ್ಲಿದ್ದ ಕಿಡಿಗೇಡಿಗಳ ಗುಂಪೊಂದು ಗುರುವಾರ ಮಧ್ಯರಾತ್ರಿ ಶಾಸಕ ಸಿ.ಎಸ್.ಪುಟ್ಟರಾಜು ಮನೆಯ ಕಿಟಕಿ ಸೇರಿದಂತೆ ವಿವಿಧೆಡೆ ಅಂಗಡಿ ಮುಂಗಟ್ಟು, ವಾಹನಗಳ ಮೇಲೆ ಕಲ್ಲು ತೂರಾಟ ನಡೆಸಿದ್ದಾರೆ.

ಘಟನೆಗೆ ಸಂಬಂಧ ಬೆಳ್ಳಾಳೆ ಗ್ರಾಮದ ಕುಷ್ಯಂತ್‌ಗೌಡ, ಪಾಂಡವಪುರ ಭೋವಿ ಕಾಲೊನಿಯ ವೆಂಕಟೇಶ್ ಎಂಬುವವರನ್ನು ಪೊಲೀಸರು ವಶಕ್ಕೆ ಪಡೆದು ವಿಚಾರಣೆ ನಡೆಸುತ್ತಿದ್ದಾರೆ.

ಪಟ್ಟಣದ ಕೃಷ್ಣಾ ನಗರದಲ್ಲಿರುವ ಶಾಸಕ ಸಿ.ಎಸ್.ಪುಟ್ಟರಾಜು ಅವರ ಮನೆಯ ಮೊದಲ ಅಂತಸ್ತಿನ ಕಿಟಕಿ ಗಾಜುಗಳು ಪುಡಿಯಾಗಿವೆ. ಹೊಂಡಾ ಶೋ ರೂಂ, ಪೆಟ್ರೋಲ್ ಬಂಕ್, ಸರ್ಕಾರಿ ಆಸ್ಪತ್ರೆ, ಖಾಸಗಿ ಬಸ್, ಮೊಬೈಲ್ ಅಂಗಡಿಗಳು ಸೇರಿದಂತೆ ಹಲವಾರು ಕಡೆ ಕಲ್ಲು ತೂರಾಟ ನಡೆದಿದೆ.

ಕಾರಿನ ಗಾಜು ಪುಡಿಪುಡಿಯಾಗಿದೆ

ಪೊಲೀಸ್ ಠಾಣೆಯ ಮುಂಭಾಗದಲ್ಲಿದ್ದ ಕಾರುಗಳನ್ನೂ ಜಖಂಗೊಳಿಸಲಾಗಿದೆ. ಮಿನಿ ವಿಧಾನಸೌಧದ ಮುಂಭಾಗ ಶಾಸಕ ಪುಟ್ಟರಾಜು ಜನ್ಮದಿನದ ಅಂಗವಾಗಿ ಅವರ ಅಭಿಮಾನಿಗಳು ಹಾಕಿದ್ದ ಫ್ಲೆಕ್ಸ್ ಹರಿಯಲಾಗಿದೆ.

ಈ ಕುರಿತು ಪ್ರತಿಕ್ರಿಯಿಸಿರುವ ಶಾಸಕ ಸಿ.ಎಸ್.ಪುಟ್ಟರಾಜು 'ಇದು ಕಿಡಿಗೇಡಿಗಳ ಕೃತ್ಯ. ರಾಜಕೀಯ ಪ್ರೇರಿತವಲ್ಲ. ಜೆಡಿಎಸ್ ಕಾರ್ಯಕರ್ತರು ಸಂಯಮದಿಂದ ವರ್ತಿಸಬೇಕು' ಎಂದು ತಿಳಿಸಿದ್ದಾರೆ.

ಗಿರಿಯಾಸ್ 100ನೇ ಮೆಗಾ ಸ್ಟೋರ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ಥಣಿಸಂದ್ರದ 'ಭಾರತೀಯ ಸಿಟಿ'ಯ ಭಾರತೀಯ ಮಾಲ್‌ನಲ್ಲಿ ಗಿರಿಯಾಸ್ ಷೋ ರೂಂ ಅನ್ನು ಶುಕ್ರವಾರ ಉದ್ಘಾಟಿಸಲಾಯಿತು.

ಗಿರಿಯಾಸ್‌ನ 100ನೇ ಮೆಗಾ ಸ್ಟೋರ್ ಇದಾಗಿದೆ. 1971ರಲ್ಲಿ ಕೇವಲ 200 ಚದರ ಅಡಿಯಲ್ಲಿ ಆರಂಭವಾದ ಗಿರಿಯಾಸ್, ಇಂದು ಬೃಹದಾಕಾರ ಸಂಸ್ಥೆಯಾಗಿ ಬೆಳೆದಿದೆ. 50 ವರ್ಷದ ಈ ಸಂಸ್ಥೆಯು ಇಂದು ಮೂರು ರಾಜ್ಯಗಳ 49 ನಗರಗಳಲ್ಲಿ 100 ಮೆಗಾ ಸ್ಟೋರ್‌ಗಳನ್ನು ಹೊಂದಿದೆ.

'ವಿಶ್ವಾಸಾರ್ಹತೆಗೆ ಮತ್ತು ಗುಣಮಟ್ಟಕ್ಕೆ ಗಿರಿಯಾಸ್ ಸಂಸ್ಥೆ ಹೆಸರುವಾಸಿಯಾಗಿದೆ. ಗ್ರಾಹಕರ ವಿಶ್ವಾಸ, ಬೆಂಬಲ, ನಿಷ್ಠೆ ಮತ್ತು ಪ್ರೀತಿಯಿಂದ ಈ ಸಂಸ್ಥೆ ಬೆಳೆದಿದ್ದು, ದೇಶದಲ್ಲಿ ಗ್ರಾಹಕರ ಉತ್ಪನ್ನಗಳ ವ್ಯಾಪಾರ ವಹಿವಾಟಿನಲ್ಲಿ ಮುಂಚೂಣಿ ಸ್ಥಾನದಲ್ಲಿದೆ' ಎಂದು ಪ್ರಕಟಣೆ ತಿಳಿಸಿದೆ.

ಕರ್ನಾಟಕ, ತಮಿಳುನಾಡು ಮತ್ತು ಪುದುಚೇರಿಯಲ್ಲಿ ಎಲೆಕ್ಟ್ರಾನಿಕ್ಸ್ ಮತ್ತು ಗೃಹಪಯೋಗಿ ವಸ್ತುಗಳ ಶಾಪಿಂಗ್‌ಗೆ ಗಿರಿಯಾಸ್ ಖ್ಯಾತಿ ಪಡೆದಿದೆ.

ನಗರದ ಥಣಿಸಂದ್ರದ 'ಭಾರತೀಯ ಮಾಲ್'ನಲ್ಲಿ ಗಿರಿಯಾಸ್ ಮೆಗಾ ಸ್ಟೋರ್ ಅನ್ನು ಶುಕ್ರವಾರ ಉದ್ಘಾಟಿಸಲಾಯಿತು. ಕಂಪನಿ ನಿರ್ದೇಶಕರಾದ ಕೆ.ಎಲ್. ಗಿರಿಯಾ ಮತ್ತು ಇತರ ಗಣ್ಯರು ಇದ್ದರು

'ಅತಿ ಕಡಿಮೆ ಬೆಲೆಯ ಉತ್ಪನ್ನಗಳ ಜತೆಗೆ ಮಾರಾಟದ ಬಳಿಕವೂ ಸೇವೆ ಒದಗಿಸುವುದು ಗಿರಿಯಾಸ್‌ನ ವಿಶೇಷವಾಗಿದೆ. ಶೇಕಡ 98.3ರಷ್ಟು ಉತ್ಪನ್ನಗಳನ್ನು ಖರೀದಿಸಿದ ದಿನವೇ ಗ್ರಾಹಕರಿಗೆ ತಲುಪಿಸುವುದು ಗಿರಿಯಾಸ್‌ನ ಇನ್ನೊಂದು ವೈಶಿಷ್ಟ್ಯ' ಎಂದು ಪ್ರಕಟಣೆ ಹೇಳಿದೆ.

'ಗಿರಿಯಾಸ್‌ನ ಪ್ರತಿಯೊಂದು ಮಳಿಗೆಗಳು 5,000 ಚದರ ಅಡಿ ಜಾಗದಲ್ಲಿದ್ದು, ಹವಾನಿಯಂತ್ರಿತ ವ್ಯವಸ್ಥೆಯನ್ನು ಹೊಂದಿವೆ. ಹೀಗಾಗಿ, ಗ್ರಾಹಕರು ಆರಾಮವಾಗಿ ಶಾಪಿಂಗ್ ಮಾಡಬಹುದು. ಎಲ್ಲ ಸಿಬ್ಬಂದಿಗೂ ತರಬೇತಿ ನೀಡಲಾಗಿದ್ದು, ಸೇವಾ ಮನೋಭಾವ ಹೊಂದಿದ್ದಾರೆ' ಎಂದು ತಿಳಿಸಿದೆ.

50ನೇ ವಾರ್ಷಿಕೋತ್ಸವ ಮತ್ತು 100ನೇ ಸ್ಟೋರ್ ಆರಂಭಿಸಿರುವ ಸಂಭ್ರಮದ ಅಂಗವಾಗಿ ಗ್ರಾಹಕರಿಗೆ ಹಲವು ಕೊಡುಗೆಗಳನ್ನು ನೀಡಲಾಗುತ್ತಿದೆ. '50 ವರ್ಷಗಳು 50 ಅಪಾರ ಕೊಡುಗೆಗಳು' ಮತ್ತು ₹5000ವರೆಗೆ ಕಾಣಿಕೆಯ ವೋಚರ್‌ಗಳನ್ನು ಸಹ ನೀಡಲಾಗುತ್ತಿದೆ. ಖ್ಯಾತ ಬ್ರ್ಯಾಂಡ್‌ಗಳ ಉತ್ಪನ್ನಗಳ ಮೇಲೆ ಖಚಿತವಾದ ಕೊಡುಗೆಗಳನ್ನು ಘೋಷಿಸಲಾಗಿದೆ.

ಅನಿರ್ದಿಷ್ಟಾವಧಿ ಧರಣಿಗೆ ಸಾರಿಗೆ ನೌಕರರ ನಿರ್ಧಾರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸೇವೆಯಿಂದ ವಜಾ ಮಾಡಿರುವ ಸಾರಿಗೆ ಸಂಸ್ಥೆಗಳ ನೌಕರರ ಪುನರ್ ನೇಮಕಕ್ಕೆ ಒತ್ತಾಯಿಸಿ ಅ.27ರಿಂದ ಅನಿರ್ದಿಷ್ಟ ಧರಣಿ ಆರಂಭಿಸಲು ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮಗಳ ನೌಕರರ ಫೆಡರೇಷನ್‌ನ (ಸಿಐಟಿಯು ಸಂಯೋಜಿತ) ನಿರ್ಧರಿಸಿದೆ.

'ಸಾರಿಗೆ ಸಚಿವರು ನೀಡಿದ್ದ ಭರವಸೆ ಈಡೇರಿಸಲು ವಿಳಂಬ ಮಾಡುತ್ತಿರುವುದನ್ನು ಖಂಡಿಸಿ ಬಿಎಂಟಿಸಿ ಕೇಂದ್ರ ಕಚೇರಿ ಬಳಿ ಧರಣಿ ಆರಂಭಿಸಲು ಗುರುವಾರ ನಡೆದ ಸಭೆಯಲ್ಲಿ ತೀರ್ಮಾನಿಸಲಾಗಿದೆ' ಎಂದು ಫೆಡರೇಷನ್ ಅಧ್ಯಕ್ಷ ಎಚ್‌.ಡಿ. ರೇವಪ್ಪ ತಿಳಿಸಿದ್ದಾರೆ.

'ಮುಷ್ಕರ ನಡೆಸಿದ್ದಕ್ಕೆ ಸೇಡಿನ ಕ್ರಮವಾಗಿ ಬಿಎಂಟಿಸಿಯಲ್ಲೇ 1,200 ತರಬೇತಿ ಅವಧಿಯ ಸಿಬ್ಬಂದಿ ಸೇರಿ 2 ಸಾವಿರಕ್ಕೂ ಹೆಚ್ಚು ನೌಕರರನ್ನು ವಜಾಗೊಳಿಸಲಾಗಿದೆ. 5 ತಿಂಗಳು ಕಳೆದರೂ ಸೇವೆಯಿಂದ ವಜಾ ಆದವರನ್ನು ಪುನರ್ ನೇಮಕ ಮಾಡಿಲ್ಲ. ಹಲವು ಬಾರಿ ಪ್ರತಿಭಟನೆ ನಡೆಸಿ ಮನವಿ ಸಲ್ಲಿಸಿದ್ದರೂ ಸರ್ಕಾರ ಸ್ಪಂದಿಸುತ್ತಿಲ್ಲ. ಸಾರಿಗೆ ಸಚಿವರು ನೀಡಿದ ಭರವಸೆ ಇನ್ನೂ ಈಡೇರಿಲ್ಲ' ಎಂದು ಅಸಮಾಧಾನ ವ್ಯಕ್ತಪಡಿಸಿದ್ದಾರೆ.

'ವರ್ಗಾವಣೆ ಮಾಡಿರುವ ಎಲ್ಲರನ್ನೂ ಅದೇ ಸ್ಥಾನಕ್ಕೆ ಮರಳಿ ನೇಮಿಸಬೇಕು. ಅಮಾನತು ಆದವರು ವಾಪಸ್ ಬರಲು ಅವಕಾಶ ನೀಡಬೇಕು. ಶಿಸ್ತು ಪ್ರಕಿಯೆಗಳನ್ನು ರದ್ದುಮಾಡಬೇಕು. ಮುಷ್ಕರದ ಅವಧಿಯನ್ನು ಗೈರು ಹಾಜರಿ ಎಂದು ಪರಿಗಣಿಸಿ ₹2 ಸಾವಿರದಿಂದ ₹10 ಸಾವಿರ ತನಕ ದಂಡ ವಿಧಿಸುವುದನ್ನು ನಿಲ್ಲಿಸಬೇಕು. ಅಧಿಕಾರಿಗಳ ದೌರ್ಜನ್ಯದ ಆಡಳಿತಕ್ಕೆ ಕಡಿವಾಣ ಹಾಕಬೇಕು' ಎಂದು ಒತ್ತಾಯಿಸಿದ್ದಾರೆ.

ಶನಿವಾರ • ಅಕ್ಟೋಬರ್ 9, 2021 ಪ್ರಜಾವಾಣಿ

ಮಹಾಕವಿ ಕುವೆಂಪು ರಸ್ತೆಯಲ್ಲಿ ದ್ವಿಚಕ್ರ ವಾಹನ ಸಂಚಾರ ಪ್ರಯಾಸ– ದುರಸ್ತಿಗೆ ಸ್ಥಳೀಯರ ಒತ್ತಾಯ

ಗುಂಡಿ ಮುಚ್ಚಿದ ವಾರದಲ್ಲೇ ಕಿತ್ತು ಹೋದ ರಸ್ತೆ

• ವಿಜಯಕುಮಾರ್ ಎಸ್.ಕೆ.

ಬೆಂಗಳೂರು: ಮಲ್ಲೇಶ್ವರದಿಂದ ರಾಜಾಜಿನಗರ ಸಂಪರ್ಕಿಸುವ ಪ್ರಮುಖ ರಸ್ತೆಯಾಗಿರುವ ಮಹಾಕವಿ ಕುವೆಂಪು ರಸ್ತೆ ಗುಂಡಿಗಳ ಮಯವಾಗಿದ್ದು, ವಾಹನ ಚಾಲನೆ ಮಾಡುವುದೇ ದುಸ್ತರವಾಗಿದೆ.

ಸಂಪಿಗೆ ರಸ್ತೆಯಿಂದ ನವರಂಗ್ ಚಿತ್ರ ಮಂದಿರದ ವೃತ್ತದ ಕಡೆಗೆ ಹೋಗುವ ರಸ್ತೆ ಇದಾಗಿದೆ. ಸಂಪಿಗೆ ರಸ್ತೆಯಿಂದ ಕೆ.ಸಿ.ಜನರಲ್ ಆಸ್ಪತ್ರೆ ತನಕ ಹೊಸದಾಗಿ ಡಾಂಬರ್ ಹಾಕಲಾಗಿದ್ದು, ಅದರಿಂದ ಮುಂದಕ್ಕೆ ನವರಂಗ್ ವೃತ್ತದ ತನಕ ರಸ್ತೆ ಸಂಪೂರ್ಣವಾಗಿ ಹಾಳಾಗಿದೆ. ಕಳೆದ ವಾರ ಗುಂಡಿಗಳನ್ನು ಮುಚ್ಚಿದ್ದರೂ ಕೆಲವೇ ದಿನಗಳಲ್ಲಿ ಮತ್ತೆ ಹಾಳಾಗಿದೆ. ಎಂ ಸ್ಯಾಂಡ್ ಮತ್ತು ಜಲ್ಲಿ ಹಾಕಿ ಮುಚ್ಚಿದ್ದ ಗುಂಡಿಗಳು ಮತ್ತೆ ಬಾಯ್ತೆರೆದು ಕೊಂಡಿವೆ.

ರೈಲ್ವೆ ಮೇಲ್ಸೇತುವೆ ದಾಟಿ ಇಳಿಯುತ್ತಿದ್ದಂತೆ ಗುಂಡಿಗಳ ದರ್ಶನ ವಾಗುತ್ತದೆ. ಸದಾ ಸಂಚಾರ ದಟ್ಟಣೆ ಇರುವ ಈ ರಸ್ತೆಯಲ್ಲಿ ಗುಂಡಿಗಳನ್ನು ತಪ್ಪಿಸಿ ಚಾಲನೆ ಮಾಡುವುದೇ ಕಷ್ಟವಾಗಿದೆ. ಹರಿಶ್ಚಂದ್ರ ಘಾಟ್, ದೇವಯ್ಯಪಾರ್ಕ್, ಮಹಾಕವಿ ಕುವೆಂಪು ರಸ್ತೆ ಮೆಟ್ರೊ ನಿಲ್ದಾಣದ ಬಳಿಯಂತೂ ದೊಡ್ಡ ದೊಡ್ಡ ಗುಂಡಿಗಳು ಬಿದ್ದಿವೆ.

ಮಳೆ ಬಂದರೆ ಗುಂಡಿಗಳಲ್ಲಿ ನೀರು ತುಂಬಿಕೊಳ್ಳುತ್ತಿದ್ದು, ಬಿಸಿಲಿದ್ದರೆ ದೂಳು ಕಣ್ಣಿಗೆ ತುಂಬಿಕೊಂಡು ದ್ವಿಚಕ್ರ ವಾಹನ ಸವಾರರು ನಿತ್ಯ ಪರದಾಡುತ್ತಿದ್ದಾರೆ. ನವರಂಗ್ ವೃತ್ತದಿಂದ ಮಲ್ಲೇಶ್ವರದ ಕಡೆಗೆ ಬರುವ ಮಾರ್ಗದಲ್ಲಿ ಅಷ್ಟಾಗಿ ಗುಂಡಿಗಳಿಲ್ಲ. ಇನ್ನೊಂದು ಬದಿಯಲ್ಲಿ ಮಾತ್ರ ಹೆಚ್ಚಿನ ಗುಂಡಿಗಳಿವೆ.

ಮೆಜೆಸ್ಟಿಕ್‌ನಿಂದ ತುಮಕೂರು ರಸ್ತೆ ಕಡೆಗೆ ಹೋಗುವ ಎಲ್ಲ ಖಾಸಗಿ ಬಸ್‌ಗಳು ಇದೇ ಮಾರ್ಗದಲ್ಲಿ ಸಂಚರಿಸುತ್ತವೆ. ಅದರಲ್ಲೂ ರಾತ್ರಿ ವೇಳೆ ಈ ಬಸ್‌ಗಳ ಸಂಖ್ಯೆ ಹೆಚ್ಚು. ದ್ವಿಚಕ್ರ ವಾಹನ ಸವಾರರು ಗುಂಡಿ ತಪ್ಪಿಸಲು ಯತ್ನಿಸಿದರೆ ಹಿಂದಿನಿಂದ ವೇಗವಾಗಿ ಬರುವ ಬಸ್‌ಗಳು ಡಿಕ್ಕಿ ಹೊಡೆಯುವ ಸಾಧ್ಯತೆಗಳೇ ಹೆಚ್ಚು. ಬಸ್ ಹಿಂಬದಿಯಲ್ಲಿ ಹೋದರೆ ದೂಳು ತುಂಬಿಕೊಂಡು ರಸ್ತೆಯೇ ಕಾಣಿಸದೆ ಗುಂಡಿಯಲ್ಲಿ ಬೀಳುವ ಅಪಾಯವೂ ಇದೆ. ಬೈಕ್ ಸವಾರರು ಆಗಾಗ ಗುಂಡಿಯಲ್ಲಿ ಬಿದ್ದು ಪೆಟ್ಟು ಮಾಡಿಕೊ-ಳ್ಳುತ್ತಿದ್ದು, ಕೂಡಲೇ ರಸ್ತೆ ದುರಸ್ತಿಪಡಿಸಬೇಕು ಎಂದು ಸ್ಥಳೀಯರು ಒತ್ತಾಯಿಸಿದ್ದಾರೆ.

ಮಹಾಕವಿ ಕುವೆಂಪು ರಸ್ತೆ ಮಧ್ಯದಲ್ಲೇ ಕುಸಿದಿರುವುದು (ಎಡಚಿತ್ರ) ಹಾಳಾಗಿರುವ ಮಹಾಕವಿ ಕುವೆಂಪು ರಸ್ತೆ –ಪ್ರಜಾವಾಣಿ ಚಿತ್ರಗಳು/ಎಂ.ಎಸ್.ಮಂಜುನಾಥ್

15 ದಿನಗಳಲ್ಲಿ ಡಾಂಬರೀಕರಣ

'ಮಹಾಕವಿ ಕುವೆಂಪು ರಸ್ತೆ ಹಾಳಾಗಿರುವುದು ಗಮನದಲ್ಲಿದ್ದು, 15 ದಿನಗಳಲ್ಲಿ ಡಾಂಬರೀಕರಣ ಕಾಮಗಾರಿ ಕೈಗೆತ್ತಿಕೊಳ್ಳಲಾಗುವುದು' ಎಂದು ಬಿಬಿಎಂಪಿ ಕಾರ್ಯಪಾಲಕ ಎಂಜಿನಿಯರ್ (ಪಶ್ಚಿಮ) ಮಾರ್ಕಂಡೇಯ ತಿಳಿಸಿದರು.

ತುಮಕೂರು ರಸ್ತೆ ಕಡೆಯಿಂದ ಕಾಮಗಾರಿ ಆರಂಭವಾಗಿದೆ. ರಾಜ್‌ಕುಮಾರ್ ರಸ್ತೆ ನಂತರ ಮಹಾಕವಿ ಕುವೆಂಪು ರಸ್ತೆ ಡಾಂಬರೀಕರಣ ಕಾಮಗಾರಿ ನಡೆಯಲಿದೆ. ರಸ್ತೆ ಗುಂಡಿ ಸಮಸ್ಯೆ ಪರಿಹಾರವಾಗಲಿದೆ ಎಂದರು.

ಪ್ರಜಾವಾಣಿ ವಿಶೇಷ

ರಸ್ತೆ ಮಧ್ಯದಲ್ಲೇ ಕುಸಿತ

ಒಂದು ಬದಿಯ ರಸ್ತೆ ಮಧ್ಯದಲ್ಲೇ ಭೂಕುಸಿತ ಉಂಟಾಗಿದ್ದು, ದುರಸ್ತಿ ಕಾರ್ಯವನ್ನು ಬಿಬಿಎಂಪಿ ಆರಂಭಿಸಿದೆ. ಕಾಮಗಾರಿ ನಿರ್ವಹಿಸಲು ರಸ್ತೆಯ ಒಂದು ಬದಿಯನ್ನು ಶುಕ್ರವಾರ ಬಂದ್ ಮಾಡಲಾಗಿದ್ದು, ವಾಹನ ದಟ್ಟಣೆಗೆ ಕಾರಣವಾಗಿದೆ.

ಜಲಮಂಡಳಿ ಪೈಪ್‌ಲೈನ್ ಹಾದು ಹೋಗಿರುವ ಜಾಗದಲ್ಲಿ ಈ ಕುಸಿತ ಉಂಟಾಗಿದೆ. ಕಾಮಗಾರಿ ನಿರ್ವಹಿಸಿದಾಗ ರಸ್ತೆ ಮರು ನಿರ್ಮಾಣವನ್ನು ಸಮರ್ಪಕವಾಗಿ ಮಾಡದಿರುವ ಕಾರಣ ಕುಸಿತವಾಗಿದೆ ಎಂದು ಬಿಬಿಎಂಪಿ ಅಧಿಕಾರಿಗಳು ಹೇಳಿದರು.

ಕುಸಿತದ ಮಾಹಿತಿ ದೊರೆತ ಕೂಡಲೇ ದುರಸ್ತಿ ಕಾಮಗಾರಿ ಆರಂಭಿಸಲಾಗಿದೆ ಎಂದು ಬಿಬಿಎಂಪಿ ಮುಖ್ಯ ಎಂಜಿನಿಯರ್(ರಸ್ತೆ) ಬಿ.ಎಸ್. ಪ್ರಹ್ಲಾದ್ ತಿಳಿಸಿದರು.

ಹೆಣ್ಣೂರಿನ ಸೊಣ್ಣಪ್ಪ ಬಡಾವಣೆಯಲ್ಲಿ ಭೂಗತ ಕೇಬಲ್ ಅಳವಡಿಕೆಗೆ ರಸ್ತೆ ಅಗೆದು ಬಿಟ್ಟಿರುವುದು

ಸುದ್ದಿ 2 ನಿಮಿಷ

ಶಶಿಕಲಾ ಪ್ರಕರಣ: ವರದಿ ಸಲ್ಲಿಸಲು 2 ವಾರ ಅವಕಾಶ

ಬೆಂಗಳೂರು: ತಮಿಳುನಾಡಿನ ಮಾಜಿ ಮುಖ್ಯಮಂತ್ರಿ ಜಯಲಲಿತಾ ಆಪ್ತೆ ವಿ.ಕೆ. ಶಶಿಕಲಾ ಅವರಿಗೆ ಪರಪ್ಪನ ಅಗ್ರಹಾರ ಜೈಲಿನಲ್ಲಿ ವಿಶೇಷ ಸೌಲಭ್ಯ ಪಡೆಯಲು ಅಧಿಕಾರಿಗಳಿಗೆ ಲಂಚ ಪಡೆದ ಆರೋಪಕ್ಕೆ ಸಂಬಂಧಿಸಿದಂತೆ ತನಿಖಾ ವರದಿ ಸಲ್ಲಿಸಲು ರಾಜ್ಯ ಸರ್ಕಾರಕ್ಕೆ ಹೈಕೋರ್ಟ್ ಎರಡು ವಾರಗಳ ಕಾಲಾವಕಾಶ ನೀಡಿದೆ.

ಈ ಸಂಬಂಧ ಸಾರ್ವಜನಿಕ ಹಿತಾಸಕ್ತಿ ಅರ್ಜಿ ಸಲ್ಲಿಸಿದ್ದ ಚೆನ್ನೈನ ಕೆ.ಎಸ್.ಗೀತಾ, 'ಪ್ರಕರಣದ ಬಗ್ಗೆ ಸಾಕಷ್ಟು ಮಾಹಿತಿ ಇದ್ದರೂ ಎಸಿಬಿ ತನಿಖೆ ಪೂರ್ಣಗೊಳಿಸಿಲ್ಲ' ಎಂದು ಆರೋಪಿಸಿದ್ದರು. ಹಂಗಾಮಿ ಮುಖ್ಯ ನ್ಯಾಯಮೂರ್ತಿ ಸತೀಶ್ ಚಂದ್ರ ಶರ್ಮ ನೇತೃತ್ವದ ವಿಭಾಗೀಯ ಪೀಠ ವಿಚಾರಣೆ ನಡೆಸಿತು.

'30 ದಿನಗಳಲ್ಲಿ ವಿಚಾರಣಾ ವರದಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಬೇಕು. ತಪ್ಪಿದರೆ ಮುಂದಿನ ವಿಚಾರಣೆಗೆ ಗೃಹ ಇಲಾಖೆ ಕಾರ್ಯದರ್ಶಿ ಖುದ್ದು ಹಾಜರಾಗಬೇಕು' ಎಂದು ಈ ಹಿಂದಿನ ವಿಚಾರಣೆ ವೇಳೆ ಪೀಠ ತಾಕೀತು ಮಾಡಿತ್ತು.

ಸರ್ಕಾರದ ಪರ ಹಾಜರಾಗಿದ್ದ ವಕೀಲರು, 'ಗೃಹ ಇಲಾಖೆ ಕಾರ್ಯದರ್ಶಿ ಅವರೇ ವಿಚಾರಣೆಗೆ ಹಾಜರಾಗಬೇಕಿತ್ತು, ಆದರೆ, ವೈಯಕ್ತಿಕ ಕಾರಣಗಳಿಂದ ಹಾಜರಾಗಲು ಸಾಧ್ಯವಾಗಿಲ್ಲ' ಎಂದರು.

'ರಾಜತಾಂತ್ರಿಕ ಕೌಶಲಗಳಿಂದ ದೇಶಗಳ ಯಶಸ್ಸು'

ಬೆಂಗಳೂರು: 'ಭಾರತವು ತನ್ನ ಸಾಂಸ್ಕೃತಿಕ ರಾಜತಾಂತ್ರಿಕತೆಯ ಮುಖೇನ ಇಡೀ ವಿಶ್ವದ ಮೇಲೆ ಪ್ರಭಾವ ಬೀರಿದೆ. ವಿಶ್ವವನ್ನು ಮುನ್ನಡೆಸಲು ರಾಜತಾಂತ್ರಿಕತೆ ಒಂದು ಬಲವಾದ ಸಾಧನ' ಎಂದು ವಿಶ್ವಸಂಸ್ಥೆಯ ಅಂತರ-ರಾಷ್ಟ್ರೀಯ ಕಾನೂನು ಆಯೋಗದ ಸದಸ್ಯ ಅನಿರುದ್ಧ ರಜಪೂತ್ ತಿಳಿಸಿದರು.

ಬೆಂಗಳೂರು ವಿಶ್ವವಿದ್ಯಾಲಯದ ಕಾನೂನು ಕಾಲೇಜು ವತಿಯಿಂದ ಶುಕ್ರವಾರ ಆಯೋಜಿಸಿದ್ದ 'ಮಾದರಿ ವಿಶ್ವಸಂಸ್ಥೆಯ ಸಮ್ಮೇಳನ'ದ ಉದ್ಘಾಟನಾ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

'ಇಲ್ಲಿನ ಯೋಗ ಇಂದು ಬಹುತೇಕ ರಾಷ್ಟ್ರಗಳಲ್ಲಿ ಅನುಸರಿಸಲಾಗುತ್ತಿದ್ದು, ಅಂತರರಾಷ್ಟ್ರೀಯ ಯೋಗ ದಿನವಾಗಿ ಹಬ್ಬಿದೆ. ದೇಶದ ಚಲನಚಿತ್ರ ಗೀತೆಗಳನ್ನು ಬೇರೆ ದೇಶದ ಜನ ಹಾಡುತ್ತಾರೆ. ರೂಪಾಂತರಗೊಂಡಿರುವ ರಾಜತಾಂತ್ರಿಕ ಕೌಶಲಗಳಿಂದಲೇ ಇಂದು ಹಲವು ದೇಶಗಳು ಯಶಸ್ಸನ್ನು ಕಂಡಿವೆ' ಎಂದರು.

ಬೆಂಗಳೂರು ವಿಶ್ವವಿದ್ಯಾಲಯದ ಕುಲಪತಿ ಕೆ.ಆರ್.ವೇಣುಗೋಪಾ-ಲ್,'ಮಾದರಿ ವಿಶ್ವಸಂಸ್ಥೆಯ ಸಮ್ಮೇಳನಕ್ಕೆ ವಿಶ್ವವಿದ್ಯಾಲಯದ ವಿದ್ಯಾರ್ಥಿಗಳು ಸಜ್ಜಾಗಿದ್ದಾರೆ. ಮಾದರಿ ಸಮ್ಮೇಳನದಿಂದ ವಿಶ್ವಸಂಸ್ಥೆಯಲ್ಲಿ ಯಾವ ರೀತಿ ಚರ್ಚೆಗಳು ನಡೆಯುತ್ತವೆ? ಅಲ್ಲಿನ ವ್ಯವಸ್ಥೆಗಳ ಕುರಿತಾದ ಅನುಭವವನ್ನು ವಿದ್ಯಾರ್ಥಿಗಳು ಪಡೆಯಲಿದ್ದಾರೆ' ಎಂದು ಹೇಳಿದರು.

ವಿಶ್ವವಿದ್ಯಾಲಯ ಕಾನೂನು ಕಾಲೇಜಿನ ಪ್ರಾಂಶುಪಾಲ ಸುರೇಶ್ ವಿ.ನಾಡಗೌಡರ್, ಪ್ರೊ.ವಿ.ಸುದೇಶ್, ಪ್ರೊ.ದಶರಥ್, ವಿಶ್ವನಾಥ್ ಗೌಡ, ಜ್ಯೋತಿ ವಿಶ್ವನಾಥ್ ಹಾಗೂ ಸಿಬ್ಬಂದಿ ಭಾಗವಹಿಸಿದ್ದರು.

ಹೊಂಡದಲ್ಲಿ ಬಿದ್ದು ಬಾಲಕ ಸಾವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಲ್ಲಸಂದ್ರದ ಉದ್ಯಾನ-ದಲ್ಲಿರುವ ಹೊಂಡದಲ್ಲಿ ಬಿದ್ದು ಪ್ರತಾಪ್ (8) ಎಂಬಾತ ಮೃತಪಟ್ಟಿರುವ ದಾರುಣ ಘಟನೆ ಶುಕ್ರವಾರ ಮಧ್ಯಾಹ್ನ ನಡೆದಿದೆ.

'ಸ್ಥಳೀಯ ನಿವಾಸಿ ಪ್ರತಾಪ್, ಸ್ನೇಹಿತರ ಜೊತೆ ಆಟವಾಡಲೆಂದು ಉದ್ಯಾನಕ್ಕೆ ಹೋಗಿದ್ದಾಗ ಈ ಅವಘಡ ಸಂಭವಿಸಿದೆ. ಹೊಂಡದಿಂದ ಮೃತದೇಹವನ್ನು ಹೊರಗೆ ತೆಗೆದು ಮರಣೋತ್ತರ ಪರೀಕ್ಷೆಗಾಗಿ ಆಸ್ಪತ್ರೆಗೆ ಸಾಗಿಸಲಾಗಿದೆ. ಘಟನೆ ಸಂಬಂಧ ಪ್ರಕರಣ ದಾಖಲಿಸಿಕೊಂಡು, ತನಿಖೆ ಮುಂದುವರಿಸಲಾಗಿದೆ' ಎಂದು ಬಾಗಲಗುಂಟೆ ಪೊಲೀಸರು ಹೇಳಿದರು.

'ಪ್ರತಾಪ್‌ನ ತಂದೆ– ತಾಯಿ, ಗಾರ್ಮೆಂಟ್ಸ್ ಕಾರ್ಖಾನೆಯಲ್ಲಿ ಕೆಲಸ ಮಾಡುತ್ತಾರೆ. ಶುಕ್ರವಾರವೂ ಬೆಳಿಗ್ಗೆ ಅವರಿಬ್ಬರು ಕೆಲಸಕ್ಕೆ ಹೋಗಿದ್ದರು. ಈ ವೇಳೆ ಬಾಲಕ ಮಾತ್ರ ಮನೆಯಲ್ಲಿದ್ದ.'

'ಮಧ್ಯಾಹ್ನ ಮನೆಯಿಂದ ಹೊರಬಂದಿದ್ದ ಬಾಲಕ, ಆಟವಾಡುತ್ತ ಉದ್ಯಾನಕ್ಕೆ ತೆರಳಿದ್ದ. ಆಟವಾಡುವಾಗ ಚಪ್ಪಲಿಯೊಂದು ಕಳಚಿ ಹೊಂಡದೊಳಗೆ ಬಿದ್ದಿತ್ತು. ತೇಲುತ್ತಿದ್ದ ಚಪ್ಪಲಿಯನ್ನು ತೆಗೆದುಕೊಳ್ಳಲು ಬಾಲಕ ಯತ್ನಿಸಿದ್ದ. ಇದೇ ಸಂದರ್ಭದಲ್ಲೇ ಕಾಲು ಜಾರಿ ಹೊಂಡದೊಳಗೆ ಬಿದ್ದಿದ್ದಾನೆ. ಹೊಂಡದಲ್ಲಿದ್ದ ನೀರಿನಲ್ಲಿ ಮುಳಗಿ ಆತ ಅಸುನೀಗಿದ್ದಾನೆ ಎಂಬುದು ತನಿಖೆಯಿಂದ ಗೊತ್ತಾಗಿದೆ' ಎಂದೂ ಪೊಲೀಸರು ತಿಳಿಸಿದರು.

ಮಳೆ ನೀರಿನಿಂದ ತುಂಬಿದ್ದ ಹೊಂಡ: 'ಬಿಬಿಎಂಪಿ ಅಧೀನದ ಉದ್ಯಾನದಲ್ಲಿ ಹಲವು ವರ್ಷಗಳಿಂದ ಹೊಂಡವಿದೆ. ಸುತ್ತಲೂ ಯಾವುದೇ ಮುಂಜಾಗ್ರತಾ ಕ್ರಮಗಳನ್ನು ಕೈಗೊಂಡಿರಲಿಲ್ಲ. ಗುರುವಾರ ರಾತ್ರಿ ಸುರಿದ ಮಳೆಯಿಂದಾಗಿ ಹೊಂಡದಲ್ಲಿ ಹೆಚ್ಚಿನ ನೀರು ಸಂಗ್ರಹವಾಗಿತ್ತು. ಅಪಾಯಕ್ಕೆ ಆಹ್ವಾನ ನೀಡುತ್ತಿತ್ತು' ಎಂದೂ ಸ್ಥಳೀಯರೊಬ್ಬರು ಹೇಳಿದರು.

'ಬಾಲಕನ ಸಾವಿಗೆ ಬಿಬಿಎಂಪಿ ಅಧಿಕಾರಿಗಳೇ ಹೊಣೆ. ಕೂಡಲೇ ಎಚ್ಚೆತ್ತು, ಹೊಂಡ ಬಳಿ ಮುಂಜಾಗ್ರತಾ ಕ್ರಮಗಳನ್ನು ಕೈಗೊಳ್ಳಬೇಕು' ಎಂದೂ ಒತ್ತಾಯಿಸಿದರು.

50 ಸಾವಿರ ಧನಸಹಾಯ: ಮಗುವಿನ ಪೋಷಕರಿಗೆ ದಾಸರಹಳ್ಳಿ ಶಾಸಕ ಆರ್.ಮಂಜುನಾಥ್ ₹50 ಸಾವಿರ ಧನಸಹಾಯ ಮಾಡಿದರು. ಕುಟುಂಬಕ್ಕೆ ಸರ್ಕಾರದಿಂದ ಮನೆ ಮಂಜೂರು ಮಾಡಿಸುವುದಾಗಿ ಭರವಸೆ ನೀಡಿದರು.

ಗುಂಡಿಯಿಂದಾಗಿ ಅಪಘಾತ ಪ್ರಾಣ ಬಿಟ್ಟ ಬಾಲಕಿ

ಒಂದನೇ ಪುಟದಿಂದ...

'ಬೆಳಿಗ್ಗೆ 11.15ರ ಸುಮಾರಿಗೆ ಚಿಕ್ಕಗೊಲ್ಲರಹಟ್ಟಿಯ ಸಾಯಿ ಗಾರ್ಮೆಂಟ್ಸ್ ಕಾರ್ಖಾನೆ ಬಳಿ ವಾಹನ ಚಲಾಯಿಸಿಕೊಂಡು ಬಂದಿದ್ದ ಹರಾನ್, ರಸ್ತೆಯಲ್ಲಿದ್ದ ಗುಂಡಿಗಳನ್ನು ತಪ್ಪಿಸಲು ಮುಂದಾಗಿದ್ದರು. ಇದೇ ಸಂದರ್ಭದಲ್ಲೇ ಸ್ಕಿಡ್ ಆಗಿ ವಾಹನ ರಸ್ತೆಯಲ್ಲೇ ಉರುಳಿಬಿದ್ದಿತ್ತು. ಮೂವರು ರಸ್ತೆಗೆ ಬಿದ್ದಿದ್ದರು. ಇದೇ ಸಂದರ್ಭದಲ್ಲೇ ಎದುರಿನಿಂದ ಅತೀ ವೇಗವಾಗಿ ಬಂದಿದ್ದ ಟಿಪ್ಪರ್ ಲಾರಿ, ನುಬಿಯಾಳ ಮೈ ಮೇಲೆಯೇ ಹರಿಯಿತು' ಎಂದೂ ತಿಳಿಸಿವೆ.

'ತೀವ್ರ ರಕ್ತಸ್ರಾವವಾಗಿ ನುಬಿಯಾ ಸ್ಥಳದಲ್ಲೇ ಅಸುನೀಗಿದರು. ಗಾಯಗೊಂಡಿದ್ದ ಹರಾನ್ ಹಾಗೂ ಆಫ್ರಿನ್ ಅವರನ್ನು ಸ್ಥಳೀಯರೇ ಆಸ್ಪತ್ರೆಗೆ ದಾಖಲಿಸಿದ್ದಾರೆ. ಅವರ ಹೇಳಿಕೆ ಪಡೆದು ಪ್ರಕರಣ ದಾಖಲಿಸಿಕೊಳ್ಳಲಾಗಿದೆ' ಎಂದೂ ಹೇಳಿವೆ.

ಲಾರಿ ಚಾಲಕ ವಶಕ್ಕೆ: 'ಅತೀ ವೇಗವಾಗಿ ನಿರ್ಲಕ್ಷ್ಯದಿಂದ ಟಿಪ್ಪರ್ ಲಾರಿ ಚಲಾಯಿಸಿದ್ದ ಚಾಲಕನನ್ನು ವಶಕ್ಕೆ ಪಡೆಯಲಾಗಿದೆ. ಮೃತ ನುಬಿಯಾಳ ಮೃತದೇಹದ ಮರಣೋತ್ತರ ಪರೀಕ್ಷೆ ನಡೆಸಬೇಕಿದೆ' ಎಂದು ಪೊಲೀಸರು ಹೇಳಿದರು.

ಜೈಲಿನಿಂದ ಹೊರಬಂದು ಡ್ರಗ್ಸ್ ಮಾರಾಟ: ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದಲ್ಲಿ ಡ್ರಗ್ಸ್ ಮಾರುತ್ತಿದ್ದ ಆರೋಪದಡಿ ನೈಜೀರಿಯಾ ಪ್ರಜೆ ಸೇರಿ ಇಬ್ಬರನ್ನು ಸಿಸಿಬಿ ಪೊಲೀಸರು ಬಂಧಿಸಿದ್ದು, ಅವರಿಂದ ₹ 3 ಲಕ್ಷ ಮೌಲ್ಯದ ಎಕ್ಸ್‌ಟೆಸಿ ಮಾತ್ರೆಗಳನ್ನು ಜಪ್ತಿ ಮಾಡಿದ್ದಾರೆ.

'ಹಲವು ವರ್ಷಗಳ ಹಿಂದೆ ನಗರಕ್ಕೆ ಬಂದಿದ್ದ ನೈಜೀರಿಯಾ ಪ್ರಜೆ, ವೀಸಾ ಅವಧಿ ಮುಗಿದರೂ ವಾಪಸು ದೇಶಕ್ಕೆ ಹೋಗಿರಲಿಲ್ಲ. ಡ್ರಗ್ಸ್ ಮಾರಾಟ ಪ್ರಕರಣದಲ್ಲಿ ಆತ ಏಪ್ರಿಲ್‌ನಲ್ಲಿ ಜೈಲಿಗೂ ಹೋಗಿದ್ದ. ಜಾಮೀನು ಮೇಲೆ ಹೊರಬಂದಿದ್ದ ಆತ, ಪುನಃ ಡ್ರಗ್ಸ್ ಮಾರಾಟದಲ್ಲಿ ತೊಡಗಿದ್ದ. ಈತನ ಕೃತ್ಯಕ್ಕೆ ಸ್ಥಳೀಯ ನಿವಾಸಿಯೂ ಸಹಕಾರ ನೀಡುತ್ತಿದ್ದ' ಎಂದು ಸಿಸಿಬಿ ಅಧಿಕಾರಿ-ಯೊಬ್ಬರು ಹೇಳಿದರು.

'ಕೊಡಿಗೇಹಳ್ಳಿ ಠಾಣೆ ವ್ಯಾಪ್ತಿಯಲ್ಲಿ ಸುತ್ತಾಡುತ್ತಿದ್ದ ಆರೋಪಿಗಳು, ಡ್ರಗ್ಸ್ ಮಾರಲು ಯತ್ನಿಸುತ್ತಿದ್ದರು. ಈ ಬಗ್ಗೆ ಮಾಹಿತಿ ಬರುತ್ತಿದ್ದಂತೆ ದಾಳಿ ಮಾಡಿ ಆರೋಪಿಗಳನ್ನು ಬಂಧಿಸಲಾಯಿತು. ಅವರಿಬ್ಬರ ದ್ವಿಚಕ್ರ ವಾಹನಗಳು ಹಾಗೂ ಮೊಬೈಲ್‌ಗಳನ್ನೂ ಜಪ್ತಿ ಮಾಡಲಾಗಿದೆ' ಎಂದು ತಿಳಿಸಿದರು.

'ತಮ್ಮದೇ ಜಾಲ ರಚಿಸಿಕೊಂಡಿದ್ದ ಆರೋಪಿಗಳು, ಅದರ ಮೂಲಕ ಡ್ರಗ್ಸ್ ಮಾರುತ್ತಿದ್ದರು. ಕೆಲ ಕಾಲೇಜು ವಿದ್ಯಾರ್ಥಿಗಳು, ಕೆಲ ಖಾಸಗಿ ಕಂಪನಿಗಳ ಉದ್ಯೋಗಿಗಳು ಹಾಗೂ ಇತರರು ಆರೋಪಿಗಳ ಬಳಿ ಡ್ರಗ್ಸ್ ಖರೀದಿಸುತ್ತಿದ್ದರು. ಗ್ರಾಹಕರ ಹೇಳಿಕೆ ಪಡೆಯಲು ಪ್ರಯತ್ನಿಸಲಾಗುತ್ತಿದೆ' ಎಂದು ವಿವರಿಸಿದರು.

ಡ್ರ್ಯಾಗರ್‌ನಿಂದ ಇರಿದು ಯುವಕನ ಕೊಲೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಎಚ್‌ಎಎಲ್ ಠಾಣೆ ವ್ಯಾಪ್ತಿಯ ಲಾಲ್ ಬಹದ್ದೂರ್ ಶಾಸ್ತ್ರಿ ನಗರದಲ್ಲಿ ಲಿಖಿತ್ (21) ಎಂಬುವರನ್ನು ಡ್ರ್ಯಾಗರ್‌ನಿಂದ ಇರಿದು ಶುಕ್ರವಾರ ಕೊಲೆ ಮಾಡಲಾಗಿದೆ.

'ಸ್ಥಳೀಯ ನಿವಾಸಿ ಲಿಖಿತ್ ಅವರನ್ನು ಹಳೇ ವೈಷಮ್ಯದಿಂದಾಗಿ ಕೊಲೆ ಮಾಡಿ ರುವ ಅನುಮಾನವಿದೆ. ಕೊಲೆ ನಂತರ ಆರೋಪಿಗಳು ಪರಾರಿಯಾಗಿದ್ದರು. ಅವರಿಗಾಗಿ ಶೋಧ ನಡೆದಿದೆ' ಎಂದು ಎಚ್‌ಎಎಲ್ ಪೊಲೀಸರು ಹೇಳಿದರು.

'ಅಲ್ ಖೈದಾ ಬೇಸ್ ಮೂವ್‌ಮೆಂಟ್' ಸಂಘಟನೆಯ ಮೂವರು ಉಗ್ರರು ದೋಷಿಗಳು

ಮೈಸೂರು ಸ್ಫೋಟ ಪ್ರಕರಣ: 11ಕ್ಕೆ ಶಿಕ್ಷೆ ಪ್ರಕಟ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮೈಸೂರು ಕೋರ್ಟ್ ಆವರಣದ ಸಾರ್ವಜನಿಕ ಶೌಚಾಲಯ ದಲ್ಲಿ ಸಂಭವಿಸಿದ್ದ ಬಾಂಬ್ ಸ್ಫೋಟ ಪ್ರಕರಣದಲ್ಲಿ, 'ಅಲ್ ಖೈದಾ-ಬೇಸ್ ಮೂವ್‌ಮೆಂಟ್' ಉಗ್ರ ಸಂಘಟನೆಯ ಮೂವರ ವಿರುದ್ಧ ದಾಖಲಿಸಿದ್ದ ಆರೋಪಗಳು ಸಾಬೀತಾಗಿವೆ. ನಗರದ ಎನ್‌ಐಎ ವಿಶೇಷ ನ್ಯಾಯಾಲಯ ಅ. 11ರಂದು ಶಿಕ್ಷೆ ಪ್ರಮಾಣ ಪ್ರಕಟಿಸಲಿದೆ.

ಮೈಸೂರಿನ ಲಕ್ಷ್ಮೀಪುರಂ ಠಾಣೆಯಲ್ಲಿ ದಾಖಲಾಗಿದ್ದ ಪ್ರಕರಣ ವಿಚಾರಣೆಯನ್ನು ವಿಶೇಷ ನ್ಯಾಯಾಲಯ ನಡೆಸಿತ್ತು.

'ಬಾಂಬ್ ಸ್ಫೋಟ ಪ್ರಕರಣದಲ್ಲಿ ತಮಿಳುನಾಡಿನ ನೈನಾರ್ ಅಬ್ಬಾಸ್ ಅಲಿ ಅಲಿಯಾಸ್ ಲೈಬ್ರರಿ ಅಬ್ಬಾಸ್, ಎಂ. ಸಮಸೂನ್ ಕರೀಂ ರಾಜ್ ಅಲಿಯಾಸ್ ಅಬ್ದುಲ್ ಕರೀಂ ಹಾಗೂ ದಾವೂದ್ ಸುಲೈಮಾನ್ ಭಾಗಿಯಾಗಿದ್ದರು. ಈ ಮೂವರು ದೋಷಿಗಳೆಂದು ನ್ಯಾಯಾಲಯ ತೀರ್ಮಾನಿಸಿದೆ' ಎಂದು ಮೂಲಗಳು ಹೇಳಿವೆ.

ಅಪರಾಧ ಸುದ್ದಿ

ಪ್ರಕರಣವೇನು?: 2016ರ ಆಗಸ್ಟ್ 1ರಂದು ಮೈಸೂರು ಕೋರ್ಟ್ ಆವರಣ ದಲ್ಲಿರುವ ಸಾರ್ವಜನಿಕ ಶೌಚಾಲಯದಲ್ಲಿ ಬಾಂಬ್ ಸ್ಫೋಟಗೊಂಡಿತ್ತು. ಸೆ. 20ರಂದು ಪ್ರಕರಣದ ತನಿಖೆ ಕೈಗೆತ್ತಿಕೊಂಡಿದ್ದ ಎನ್‌ಐಎ, ಮೂವರ ವಿರುದ್ಧ ನ್ಯಾಯಾಲಯಕ್ಕೆ ದೋಷಾರೋಪ ಪಟ್ಟಿ ಸಲ್ಲಿಸಿತ್ತು.

'ಅಲ್ ಖೈದಾ' ಮಾದರಿಯಲ್ಲಿ 'ಬೇಸ್ ಮೂವ್‌ಮೆಂಟ್' ಎಂಬ ಉಗ್ರ ಸಂಘಟನೆಯನ್ನು 2015ರಲ್ಲಿ ರಚಿಸಿಕೊಂಡಿದ್ದ ಆರೋಪಿಗಳು, ಕಾನೂನುಬಾಹಿರ ಚಟುವಟಿಕೆ ನಡೆ-ಸುತ್ತಿದ್ದರು. ಒಸಾಮಾ ಬಿನ್ ಲಾಡೆನ್ ತತ್ವಗಳನ್ನು ಪಾಲಿಸುತ್ತಿದ್ದರು. ತಮ್ಮದೇ ಸಮುದಾಯದ ಯುವಕರನ್ನು ಸಂಘಟನೆಗೆ ನೇಮಕಾತಿ ಮಾಡಿಕೊ-ಳ್ಳುತ್ತಿದ್ದರು. ಸರ್ಕಾರದ ಕಚೇರಿ ಹಾಗೂ ಕೋರ್ಟ್‌ಗಳಲ್ಲಿ ಬಾಂಬ್‌ಗಳನ್ನು ಸ್ಫೋಟಿಸಿ ಜನರಲ್ಲಿ ಭಯವನ್ನುಂಟು ಮಾಡುವುದು ಅವರ ಉದ್ದೇಶವಾಗಿ-ತ್ತು' ಎಂಬುದನ್ನು ಆರೋಪ ಪಟ್ಟಿಯಲ್ಲಿ ಎನ್‌ಐಎ ತಿಳಿಸಿತ್ತು.

'ಆಂಧ್ರಪ್ರದೇಶದ ನೆಲ್ಲೂರಿನ ಕೋರ್ಟ್ ಆವರಣದಲ್ಲಿ ಸಂಭವಿಸಿದ್ದ ಬಾಂಬ್ ಸ್ಫೋಟ ಪ್ರಕರಣದಲ್ಲೂ ಈ ಉಗ್ರರು ಭಾಗಿಯಾಗಿದ್ದರು. ಮೈಸೂರು ಕೋರ್ಟ್ ಆವರಣದ ಶೌಚಾಲಯದಲ್ಲೂ ಬಾಂಬ್ ಇರಿಸಿ ಸ್ಫೋಟಿಸಿದ್ದರು' ಎಂಬುದಾಗಿಯೂ ಪಟ್ಟಿಯಲ್ಲಿ ಉಲ್ಲೇಖಿಸಿತ್ತು.

ಆನೆ ದಂತಗಳ ಮಾರಾಟಕ್ಕೆ ಯತ್ನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಆನೆ ದಂತಗಳನ್ನು ಮಾರಲು ಯತ್ನಿಸುತ್ತಿದ್ದ ಆರೋಪದಡಿ ಇಬ್ಬರನ್ನು ಅನ್ನಪೂರ್ಣೇಶ್ವರಿನಗರ ಠಾಣೆ ಪೊಲೀಸರು ಬಂಧಿಸಿದ್ದಾರೆ.

'ಮಡಿಕೇರಿಯ ಸುಹೇಬ್ ಹಾಗೂ ಮೊಹಮ್ಮದ್ ಕೈಫ್ ಬಂಧಿತರು. ಇವರಿಬ್ಬರು ಪದವೀಧರರು. ನಗರದಲ್ಲಿ ಕೆಲಸ ಮಾಡುತ್ತಿದ್ದರು. ಅಕ್ರಮವಾಗಿ ಹಣ ಗಳಿಸಲು ಕೃತ್ಯ ಎಸಗಿದ್ದರು.

ಇಬ್ಬರಿಂದಲೂ ಎರಡು ದಂತಗಳನ್ನು ವಶಕ್ಕೆ ಪಡೆಯಲಾಗಿದೆ' ಎಂದು ಪೊಲೀಸರು ಹೇಳಿದರು.

'ತಮ್ಮೂರಿನಿಂದ ದಂತಗಳನ್ನು ತಂದಿದ್ದ ಆರೋಪಿಗಳು, ನಗರದಲ್ಲಿ ಗ್ರಾಹಕರಿಗಾಗಿ ಹುಡುಕಾಡುತ್ತಿದ್ದರು. ಅನುಮಾನಾಸ್ಪದವಾಗಿ ಓಡಾಡುತ್ತಿದ್ದ ಅವರಿಬ್ಬರ ಬಗ್ಗೆ ಭಾತ್ಮಿದಾರರೊ-ಬ್ಬರು ಮಾಹಿತಿ ನೀಡಿದ್ದರು. ವಶಕ್ಕೆ ಪಡೆದು ವಿಚಾರಣೆ ನಡೆಸಿದಾಗ ಕೃತ್ಯ ಬಯಲಾಯಿತು' ಎಂದು ಅವರು ತಿಳಿಸಿದರು.

'ವನ್ಯಜೀವಿ ಸಂರಕ್ಷಣಾ ಕಾಯ್ದೆಯಡಿ ಆರೋಪಿಗಳ ವಿರುದ್ಧ ಪ್ರಕರಣ ದಾಖಲಿಸಿಕೊಳ್ಳಲಾಗಿದೆ' ಎಂದರು.

'ಪಿಎಸ್‌ಐ' ಹುದ್ದೆ ಆಮಿಷ: ₹ 18 ಲಕ್ಷ ವಂಚನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪೊಲೀಸ್ ಸಬ್ ಇನ್‌ಸ್ಪೆಕ್ಟರ್ (ಪಿಎಸ್‌ಐ) ಹುದ್ದೆ ಕೊಡಿಸು ವುದಾಗಿ ಹೇಳಿ ಮಹಿಳಾ ಅಭ್ಯರ್ಥಿಯೊ-ಬ್ಬರ ತಂದೆಯಿಂದ ₹ 18 ಲಕ್ಷ ಪಡೆದು ವಂಚಿಸಲಾಗಿದ್ದು, ಈ ಸಂಬಂಧ ಸದಾಶಿವನಗರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

'ಹಣ ಕೊಟ್ಟು ವಂಚನೆಗೀಡಾ-ಗಿರುವ ತುಮಕೂರಿನ ಪುಟ್ಟರಾಜು ದೂರು ನೀಡಿದ್ದಾರೆ. ಆರೋಪಿ ಶ್ರೀನಿವಾಸ್ ಹಾಗೂ ಇತರರ ವಿರುದ್ಧ ಎಫ್‌ಐಆರ್ ದಾಖಲಿಸಿಕೊಳ್ಳ-ಲಾಗಿದೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

'ಪುಟ್ಟರಾಜು ಅವರ ಮಗಳು, ಪಿಎಸ್‌ಐ ಹುದ್ದೆ ನೇಮಕಾತಿಗಾಗಿ ಅರ್ಜಿ ಸಲ್ಲಿಸಿದ್ದರು. ದೈಹಿಕ ಪರೀಕ್ಷೆಯಲ್ಲಿ ಉತ್ತೀರ್ಣವಾಗಿ, ಲಿಖಿತ ಪರೀಕ್ಷೆ ಬರೆ ಯಲು ಸಿದ್ಧವಾಗಿದ್ದರು. ಈ ವಿಷಯ ವನ್ನು ಪುಟ್ಟರಾಜು, ಪರಿಚಯಸ್ಥ ಕೃಷ್ಣಪ್ಪ ಅವರಿಗೆ ತಿಳಿಸಿದ್ದರು.'

'ಬೆಂಗಳೂರಿನಲ್ಲಿರುವ ಪರಿಚಯಸ್ಥ ಶ್ರೀನಿವಾಸ್, ಪೊಲೀಸ್ ಇಲಾಖೆಯ ಹಿರಿಯ ಅಧಿಕಾರಿಗಳ ಜೊತೆ ಒಡನಾಟ ಹೊಂದಿದ್ದಾನೆ. ಪಿಎಸ್‌ಐ ಹುದ್ದೆ ಕೊಡಿಸುವುದಾಗಿ ಹೇಳಿರುವ ಆತ, ಯಾರಾದರೂ ಅಭ್ಯರ್ಥಿಗಳು ಇದ್ದರೆ ತಿಳಿಸುವಂತೆ ಕೋರಿದ್ದಾನೆ. ಆತನನ್ನು ಸಂಪರ್ಕಿಸಿದರೆ, ಮಗಳಿಗೆ ಪಿಎಸ್‌ಐ ಕೆಲಸ ಸಿಗುವುದು ಖಚಿತ' ಎಂಬುದಾಗಿ ಕೃಷ್ಣಪ್ಪ ಹೇಳಿದ್ದರು. ಜೊತೆಗೆ, ಪುಟ್ಟ ರಾಜು ಅವರಿಗೆ ಶ್ರೀನಿವಾಸ್‌ನ ಪರಿಚಯ ಮಾಡಿಸಿದ್ದರು' ಎಂದು ಮೂಲಗಳು ತಿಳಿಸಿವೆ.

'ಅ. 2ರಂದು ಪುಟ್ಟರಾಜು ಅವರನ್ನು ಭೇಟಿಯಾಗಿದ್ದ ಶ್ರೀನಿವಾಸ್, '₹70 ಲಕ್ಷ ಕೊಟ್ಟರೆ ಪಿಎಸ್‌ಐ ಹುದ್ದೆ ಕೊಡಿಸುತ್ತೇನೆ' ಎಂದಿದ್ದರು. ಅಷ್ಟು ಹಣ ಆಗುವುದಿಲ್ಲವೆಂದು ಪುಟ್ಟರಾಜು ಹೇಳಿದ್ದರು. ಬಳಿಕ ₹ 55 ಲಕ್ಷಕ್ಕೆ ಮಾತುಕತೆ ಮುಗಿದಿತ್ತು. ಮುಂಗಡವಾಗಿ ₹ 18 ಲಕ್ಷ ನೀಡಿದ್ದ ದೂರುದಾರ, ಕೆಲಸ ಖಾತ್ರಿಯಾದ ನಂತರ ಉಳಿದ ಹಣ ಕೊಡುವುದಾಗಿ ತಿಳಿಸಿದ್ದರು.'

'ಹಣ ಪಡೆದ ನಂತರ ಶ್ರೀನಿವಾಸ್ ಯಾವುದೇ ಕೆಲಸ ಕೊಡಿಸಿರಲ್ಲ. ಆತ ಹಲವರನ್ನು ವಂಚಿಸಿದ್ದ ಸಂಗತಿ ಸ್ನೇಹಿತರೊಬ್ಬರ ಮೂಲಕ ಪುಟ್ಟರಾಜು ಅವರಿಗೆ ಗೊತ್ತಾಗಿತ್ತು. ಬಳಿಕವೇ ಅವರು ಠಾಣೆಗೆ ಬಂದು ದೂರು ನೀಡಿದ್ದಾರೆ' ಎಂದೂ ಪೊಲೀಸ್ ಮೂಲಗಳು ಹೇಳಿವೆ.

ಬಹುಮಹಡಿ ಕಟ್ಟಡ ಕುಸಿತ; ಮಹಿಳೆ ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಸ್ತೂರಿನಗರದ ಡಾಕ್ಟರ್ಸ್ ಬಡಾವಣೆಯಲ್ಲಿದ್ದ 'ಸನ್‌ಶೈನ್' ಅಪಾರ್ಟ್‌ಮೆಂಟ್ ಸಮುಚ್ಚಯ ಕುಸಿದು ಬಿದ್ದಿರುವ ಪ್ರ-ಕರಣದಲ್ಲಿ, ಕಟ್ಟಡದ ಮಾಲೀಕರಾದ ಆಯೇಷಾ ಬೇಗ್ ಅವರನ್ನು ರಾಮಮೂರ್ತಿನಗರ ಪೊಲೀಸರು ಬಂಧಿಸಿದ್ದಾರೆ.

ಬೆನ್ನಿಗಾನಹಳ್ಳಿ (ವಾರ್ಡ್ ನಂ.50) ವ್ಯಾಪ್ತಿಯಲ್ಲಿರುವ ಡಾಕ್ಟರ್ಸ್ ಬಡಾವಣೆಯ 2ನೇ ಅಡ್ಡರಸ್ತೆಯಲ್ಲಿ ಎ.ಎನ್. ಬಿಲ್ಡರ್ಸ್ ಅಡಿಯಲ್ಲಿ ಕಟ್ಟಡ ನಿರ್ಮಿಸಲಾಗಿತ್ತು. ಪಿಲ್ಲರ್‌ಗಳಲ್ಲಿ ಬಿರುಕು ಕಾಣಿಸಿಕೊಂಡು ಗುರುವಾರ ಮಧ್ಯಾಹ್ನ ಕಟ್ಟಡ ಕುಸಿದು ಬಿದ್ದಿತ್ತು.

'ಕಟ್ಟಡ ನಿರ್ಮಾಣದ ವೇಳೆ ಯಾವುದೇ ನಿಯಮಗಳನ್ನು ಪಾಲಿಸಿರಲಿಲ್ಲ. ಎ.ಎನ್. ಬಿಲ್ಡರ್ಸ್‌ನ ಆಯೇಷಾ ಬೇಗ್, ಮೊಹಮ್ಮದ್ ಆಸೀಫ್ ಹಾಗೂ ಮೊಹಮ್ಮದ್ ಇಯಾಸುದ್ದೀನ್ ವಿರುದ್ಧ ಬಿಬಿಎಂಪಿ ಅಧಿಕಾರಿಗಳು ದೂರು ನೀಡಿದ್ದರು. ಮೂವರ ವಿರುದ್ಧವೂ ಎಫ್‌ಐಆರ್ ದಾಖಲಿಸಿಕೊಳ್ಳಲಾಗಿತ್ತು. ಇದೀಗ ಆಯೇಷಾ ಬೇಗ್ ಅವರನ್ನು ಬಂಧಿಸ ಲಾಗಿದ್ದು, ಇನ್ನಿಬ್ಬರು ತಲೆಮರೆಸಿ-ಕೊಂಡಿದ್ದಾರೆ' ಎಂದು ಪೊಲೀಸ್ ಅಧಿಕಾರಿಯೊಬ್ಬರು ಹೇಳಿದರು.

ಕಟ್ಟಡ ತೆರವು ಕಾರ್ಯಾಚರಣೆ: ಮೂರು ಅಂತಸ್ತಿನ ಕಟ್ಟಡ ನಿರ್ಮಾಣ ಕ್ಕೆ ಅನುಮತಿ ಪಡೆದು, ನಾಲ್ಕು ಅಂತಸ್ತಿನ ಕಟ್ಟಡ ನಿರ್ಮಿಸಲಾಗಿತ್ತು. ಇದೀಗ, ಕುಸಿದು ಬಿದ್ದಿರುವ ಕಟ್ಟಡದ ತೆರವು ಕಾರ್ಯಾಚರಣೆಯನ್ನು ಬಿಬಿಎಂಪಿ ಆರಂಭಿಸಿದೆ.

'ಗುರುವಾರ ಮಧ್ಯಾಹ್ನದಿಂದಲೇ ಕಾರ್ಯಾಚರಣೆ ನಡೆಯು ತ್ತಿದೆ. ಮಳೆಯಿಂದಾಗಿ ರಾತ್ರಿ ಕಾರ್ಯಾ ಚರಣೆ ಸ್ಥಗಿತಗೊಳಿಸಲಾಗಿತ್ತು. ಶುಕ್ರವಾರ ಪುನಃ ಕಾರ್ಯಾಚರಣೆ ಶುರು ಮಾಡಲಾಗಿದೆ. ಸಂಪೂರ್ಣ ವಾಗಿ ತೆರವು ಮಾಡಲು ಎರಡು ದಿನ ಬೇಕಾಗಬಹುದು' ಎಂದು ಬಿಬಿಎಂಪಿ ಅಧಿಕಾರಿಯೊಬ್ಬರು ಹೇಳಿದರು.

ಯುಜಿಸಿ ಅಧ್ಯಕ್ಷ ಪ್ರೊ.ಡಿ.ಪಿ.ಸಿಂಗ್ ಸಲಹೆ

'ಸಮಗ್ರ ಶಿಕ್ಷಣಕ್ಕೆ ಆದ್ಯತೆ ನೀಡಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಉನ್ನತ ಶಿಕ್ಷಣ ಸಂಸ್ಥೆಗಳು ಮಾನವೀಯ ಮೌಲ್ಯಗಳು ಮತ್ತು ವೃತ್ತಿಪರ ನೈತಿಕತೆ ಅಳವಡಿಕೆಯ ಮೂಲಕ ಸಮಗ್ರ ಶಿಕ್ಷಣದತ್ತ ಹೆಚ್ಚಿನ ಗಮನ ಹರಿಸಬೇಕು' ಎಂದು ವಿಶ್ವ-ವಿದ್ಯಾಲಯ ಅನುದಾನ ಆಯೋಗದ (ಯುಜಿಸಿ) ಅಧ್ಯಕ್ಷ ಪ್ರೊ.ಡಿ.ಪಿ.ಸಿಂಗ್ ತಿಳಿಸಿದರು.

ಹೈದರಾಬಾದ್‌ನ ಐಸಿಎಫ್‌ಎಐ ಉನ್ನತ ಶಿಕ್ಷಣ ಪ್ರತಿಷ್ಠಾನವು ಆನ್‌ಲೈನ್ ಮೂಲಕ ಹಮ್ಮಿಕೊಂಡಿದ್ದ ಘಟಿಕೋತ್ಸವದಲ್ಲಿ ಅವರು ಮಾತನಾಡಿದರು.

'ರಾಷ್ಟ್ರೀಯ ಶಿಕ್ಷಣ ನೀತಿಯಿಂದ (ಎನ್‌ಇಪಿ) ಇಂದು ಶಿಕ್ಷಣದ ಮೂಲಕ ರೂಪಾಂತರ ಮತ್ತು ಪರಿವರ್ತನೆ ಎರಡನ್ನೂ ನೋಡು ತ್ತಿದ್ದೇವೆ. ಈ ನೀತಿಯ ಮಾರ್ಗಸೂಚಿ ಗಳು ಉದ್ಯೋಗದ ಬೆಂಬಲವನ್ನು ಪಠ್ಯಕ್ರಮದಲ್ಲಿ ಅಳವಡಿಸಿವೆ' ಎಂದು ಅವರು ಹೇಳಿದರು.



ಘಟಿಕೋತ್ಸವದಲ್ಲಿ ಪದಕ ಪಡೆದ ವಿದ್ಯಾರ್ಥಿಗಳು. ಕುಲಪತಿ ರಂಗರಾಜನ್, ಉಪ ಕುಲಪತಿ ಜೆ.ಮಹೇಂದರ್ ರೆಡ್ಡಿ ಹಾಗೂ ಇತರರು ಇದ್ದಾರೆ.

ಐಸಿಎಫ್ಎಐ ಕುಲಪತಿ ರಂಗರಾಜನ್, 'ದೇಶದ ಒಟ್ಟು ದಾಖಲಾತಿ ಅನುಪಾತವು ಅಭಿವೃದ್ಧಿ ಹೊಂದಿದ ದೇಶಗಳಿಗಿಂತ ಕಡಿಮೆ ಇದೆ. ಶಿಕ್ಷಣದಲ್ಲಿ ಗುಣಮಟ್ಟವ-ನ್ನು ಉತ್ತೇಜಿಸುವಾಗ ಕಡಿಮೆ ಸೌಲಭ್ಯ ಹೊಂದಿರುವ ಸಮುದಾಯಗಳನ್ನು ಶಿಕ್ಷಣದ ವ್ಯಾಪ್ತಿಗೆ ತರುವುದು ಅಗತ್ಯ. ಕಾಲೇಜುಗಳು ಮತ್ತು ವಿಶ್ವ-ವಿದ್ಯಾಲಯಗಳು ಪ್ರಯೋಗ ಮತ್ತು ಹೊಸತನಕ್ಕೆ ಅವಕಾಶ ನೀಡಬೇಕು' ಎಂದರು.

2,287 ವಿದ್ಯಾರ್ಥಿಗಳಿಗೆ ಪದವಿ ಪ್ರದಾನ: ಘಟಿಕೋತ್ಸವದಲ್ಲಿ ವಿಶ್ವವಿದ್ಯಾಲಯದ 2,287 ವಿದ್ಯಾರ್ಥಿಗಳಿಗೆ ಪದವಿ ಮತ್ತು ಆರು ಮಂದಿಗೆ ಪಿಎಚ್.ಡಿ ಪ್ರದಾನ ಮಾಡಲಾಯಿತು. 1,198 ಎಂಬಿಎ, 10 ಎಲ್‌ಎಲ್‌ಎಂ, 95 ಬಿಬಿಎ-ಎಲ್‌ಎಲ್‌ಬಿ, 23 ಬಿಎ-ಎಲ್‌ಎಲ್‌ಬಿ, 264 ಬಿ.ಟೆಕ್, 674 ಬಿಬಿಎ ಹಾಗೂ 17 ಮಂದಿಗೆ ಎಂಎಂಎಸ್ ದೂರ ಶಿಕ್ಷಣ ಪದವಿ ಪ್ರದಾನ ನಡೆಯಿತು.

ಮರಳಿ ಬೋಧನಾ ಕ್ಷೇತ್ರಕ್ಕೆ ಮುಖ್ಯ ಆರ್ಥಿಕ ಸಲಹೆಗಾರ

ನವದೆಹಲಿ (ಪಿಟಿಐ): ಕೇಂದ್ರ ಸರ್ಕಾರದ ಮುಖ್ಯ ಆರ್ಥಿಕ ಸಲಹೆ-ಗಾರರಾಗಿರುವ (ಸಿಇಎ) ಕೆ.ವಿ. ಸುಬ್ರಹ್ಮಣಿಯನ್ ಅವರು ಮೂರು ವರ್ಷದ ತಮ್ಮ ಅವಧಿಯನ್ನು ಪೂರೈಸಿದ ಬಳಿಕ ಹಣಕಾಸು ಸಚಿವಾಲಯದಿಂದ ನಿರ್ಗಮಿಸ ಲಿದ್ದು, ಬೋಧನಾ ಕ್ಷೇತ್ರಕ್ಕೇ ಮರಳಲು ನಿರ್ಧರಿಸಿದ್ದಾರೆ.

ಹೈದರಾಬಾದ್‌ನಲ್ಲಿ ಪ್ರೊಫೆಸರ್ ಆಗಿದ್ದ ಸುಬ್ರಹ್ಮಣಿ-ಯನ್ ಅವರನ್ನು ಕೇಂದ್ರ ಸರ್ಕಾರ 2018ರ ಡಿಸೆಂಬರ್‌ನಲ್ಲಿ ಸಿಇಎ ಆಗಿ ನೇಮಿಸಿತ್ತು. ಅರವಿಂದ್ ಸುಬ್ರಹ್ಮಣಿಯನ್ ಸ್ಥಾನದಲ್ಲಿ ಇವರು ನೇಮಕಗೊಂಡಿದ್ದರು. ಮತ್ತೊಂದು ಅವಧಿಗೆ ವಿಸ್ತರಣೆ ಆಗುವ ಸಾಧ್ಯತೆ ಇದ್ದರೂ ಬೋಧನಾ ಕ್ಷೇತ್ರಕ್ಕೆ ಮರಳಲು ತೀರ್ಮಾನಿಸಿದ್ದಾರೆ.

ಪ್ರಧಾನಿ ನರೇಂದ್ರ ಮೋದಿ ಟ್ವೀಟ್ ಮೂಲಕ ಇವರಿಗೆ ಶುಭ ಕೋರಿದ್ದಾರೆ.ಸುಬ್ರಹ್ಮಣಿಯನ್ ಅವರ ಜೊತೆಗೂಡಿ ಕೆಲಸ ಮಾಡುವುದು ಖುಷಿಯ ವಿಚಾರ.



ಸುಬ್ರಹ್ಮಣಿಯನ್

ಅವರ ಶೈಕ್ಷಣಿಕ ಅರಿವು ಅಪಾರ. ಆರ್ಥಿಕತೆ, ನೀತಿ ಕುರಿತಂತೆ ವಿಭಿನ್ನ ದೃಷ್ಟಿಕೋನವಿತ್ತು. ಗಣನೀಯ ಸುಧಾರಣೆ ಕುರಿತು ಒಲವು ಹೊಂದಿದ್ದರು ಎಂದು ಹೇಳಿದ್ದಾರೆ.

ಕೋವಿಡ್ ಪಿಡುಗಿನ ಪರಿಣಾಮವು ದಟ್ಟವಾಗಿರುವ ಈಗಿನ ಸಂದರ್ಭದಲ್ಲಿ ನಿರ್ಣಾಯಕವಾದ ಈ ಸ್ಥಾನಕ್ಕಾಗಿ ಸರ್ಕಾರ ಈಗ ಹೊಸ ಮುಖವನ್ನು ಹುಡುಕಬೇಕಾಗಿದೆ. ಜನವರಿಯಲ್ಲಿ ಸಂಸತ್ತಿನ ಮುಂದೆ ಇಡಬೇಕಾದ ಆರ್ಥಿಕ ಸಮೀಕ್ಷೆಯನ್ನು ರೂಪಿಸುವ ಸವಾಲೂ ಹೊಸದಾಗಿ ಈ ಸ್ಥಾನಕ್ಕೆ ನೇಮಕಗೊಳ್ಳುವವರ ಮೇಲಿದೆ.

ಕಲಬುರಗಿ, ಬೀದರ್ ಜಿಲ್ಲೆಯಲ್ಲಿ ಅತಿವೃಷ್ಟಿ: ನಷ್ಟದ ದವಡೆಗೆ ಸಿಲುಕಿದ ರೈತರು

2.64 ಲಕ್ಷ ಹೆಕ್ಟೇರ್ ಬೆಳೆ ನೀರುಪಾಲು

• ಚಂದ್ರಕಾಂತ ಮಸಾನಿ/ ಸಂತೋಷ ಈ.ಚಿನಗುಡಿ

ಕಲಬುರಗಿ ತಾಲ್ಲೂಕಿನ ಪಟ್ಟಣ ಗ್ರಾಮದಲ್ಲಿ ತೊಗರಿ ಹೊಲದಲ್ಲಿ ಮಳೆ ನೀರು ಸಂಗ್ರಹಗೊಂಡಿದೆ

ಪ್ರಜಾವಾಣಿ ವಿಶೇಷ

ಕಲಬುರಗಿ: ಕಲಬುರಗಿ ಹಾಗೂ ಬೀದರ್ ಜಿಲ್ಲೆಗಳಲ್ಲಿ ಈ ಬಾರಿ ಅತಿವೃಷ್ಟಿಯ ಕಾರಣ ರೈತರು ಅಪಾರ ಸಂಕಷ್ಟ ಎದುರಿಸುತ್ತಿದ್ದಾರೆ. ಎರಡೂ ಜಿಲ್ಲೆಗಳಲ್ಲಿ ಈ ವರೆಗೆ 2.64 ಲಕ್ಷ ಹೆಕ್ಟೇರ್‌ನಲ್ಲಿ ಬೆಳೆ ಹಾನಿಯಾಗಿದೆ.

ಕಲಬುರಗಿ ಜಿಲ್ಲೆಯಲ್ಲಿ ಮುಂಗಾರು ಹಂಗಾಮಿನಲ್ಲಿ 5.3 ಲಕ್ಷ ಹೆಕ್ಟೇರ್‌ನಲ್ಲಿ ಬಿತ್ತನೆ ಮಾಡಲಾಗಿದ್ದು, 1.04 ಲಕ್ಷ ಹೆಕ್ಟೇರ್ ಬೆಳೆ ಹಾನಿಯಾಗಿದೆ. ಮೊದಲ ಹಂತದ ಬೆಳೆಹಾನಿ ಸಮೀಕ್ಷೆ ಮುಗಿದಿದೆ. ಎರಡನೇ ಹಂತದ ಸಮೀಕ್ಷೆ ನಡೆದಿದ್ದು, ಜಮೀನುಗಳಲ್ಲಿ ನೀರು ನಿಂತಿರುವುದು ಹಾಗೂ ಕೆಸರಿನಿಂದಾಗಿ ಸಮೀಕ್ಷೆಗೆ ಹಿನ್ನಡೆಯಾಗಿದೆ.

ಈ ಬಾರಿ ವಾಡಿಕೆಗಿಂತ ಶೇ 30ರಷ್ಟು ಹೆಚ್ಚು ಮಳೆ ಬಿದ್ದಿದೆ. ಜುಲೈ, ಆಗಸ್ಟ್ ಹಾಗೂ ಸೆಪ್ಟೆಂಬರ್‌ನಲ್ಲಿ ಹೆಚ್ಚಿನ ಮಳೆಯಾದ್ದರಿಂದ ತೊಗರಿ, ಹೆಸರು, ಸಜ್ಜೆ, ಕಬ್ಬು, ಸೊಯಾಬೀನ್, ಸೂರ್ಯಕಾಂತಿ ಬೆಳೆ ಹಾನಿಯಾಗಿದೆ. ಹತ್ತಿ ಹೊಲದಲ್ಲಿ ನೀರು ನಿಂತಿದ್ದರಿಂದ ಕಾಯಿ ಅರಳುತ್ತಿಲ್ಲ.

'ಚಿಂಚೋಳಿ, ಕಾಳಗಿ, ಚಿತ್ತಾಪುರ, ಜೇವರ್ಗಿ, ಅಫಜಲಪುರ, ಸೇಡಂ, ಯಡ್ರಾಮಿ ತಾಲ್ಲೂಕುಗಳ ರೈತರೇ ಹೆಚ್ಚು ಸಂಕಷ್ಟ ಎದುರಿಸುತ್ತಿದ್ದಾರೆ. ಜಿಲ್ಲೆಯ ಕೃಷಿ ಭೂಮಿಯ ಶೇ 80ರಷ್ಟು ಪ್ರದೇಶದಲ್ಲಿ ತೊಗರಿಯನ್ನೇ ಬೆಳೆಯುವುದು ವಾಡಿಕೆ. ಇದು ಶುಷ್ಕ ಪ್ರದೇಶದ ಬೆಳೆ. ಅತಿವೃಷ್ಟಿಯ ಕಾರಣ ಮಣ್ಣಿನಲ್ಲಿ ತೇವಾಂಶ ಹೆಚ್ಚಾಗಿದ್ದು ಇಳುವರಿ ಕುಂಠಿತವಾಗುವ ಸಾಧ್ಯತೆ ಇದೆ' ಎನ್ನುವುದು ಕಲಬುರಗಿ ಜಂಟಿ ಕೃಷಿ ನಿರ್ದೇಶಕ ರತೇಂದ್ರನಾಥ ಸೂಗೂರ ಅವರ ಹೇಳಿಕೆ.

ಬೀದರ್ ಜಿಲ್ಲೆಯಲ್ಲಿ ಬಿತ್ತನೆ ಮಾಡಿದ್ದ 3.70 ಲಕ್ಷ ಹೆಕ್ಟೇರ್‌ನಲ್ಲಿ 1.60 ಲಕ್ಷ ಹೆಕ್ಟೇರ್ ಬೆಳೆ ನೀರು ನಿಂತು ಹಾಳಾಗಿದೆ. ಒಂದೆಡೆ ವಿಪರೀತ ಮಳೆ, ಇನ್ನೊಂದೆಡೆ ಮಹಾರಾಷ್ಟ್ರದ ಧನೇಗಾಂವ್ ಜಲಾಶಯದಿಂದ ಹರಿದುಬಿಡುವ ಲಕ್ಷಾಂತರ ಕ್ಯುಸೆಕ್ ನೀರು ರೈತರನ್ನು ಕಂಗೆಡಿಸಿದೆ.

ಸೆಪ್ಟೆಂಬರ್ ತಿಂಗಳಲ್ಲೇ ಸರಾಸರಿ 179 ಮಿ.ಮೀ ಮಳೆಯಾಗಬೇಕಿತ್ತು. ಆದರೆ 261 ಮಿ.ಮೀ ಮಳೆಯಾಯಿತು. ಇದರಿಂದ ಈ ಒಂದೇ ತಿಂಗಳಲ್ಲಿ 1 ಲಕ್ಷ ಹೆಕ್ಟೇರ್‌ನಷ್ಟು ಹೆಚ್ಚು ಬೆಳೆ ನಷ್ಟವಾಯಿತು. ಔರಾದ್, ಕಮಲನಗರ, ಬೀದರ್, ಭಾಲ್ಕಿ ತಾಲ್ಲೂಕಿನಲ್ಲಿ ಇಳುವರಿ ನಿರೀಕ್ಷೆಯನ್ನೇ ಕೈಬಿಟ್ಟ ರೈತರು ಈಗ ಪರಿಹಾರಕ್ಕೆ ಎದುರು ನೋಡುತ್ತಿದ್ದಾರೆ.

'ಹಾನಿ ಸಮೀಕ್ಷೆ ನಡೆದಿದೆ. ಮುಂಗಾರು ಬಿತ್ತನೆಯಾದ ಪ್ರದೇಶದ ಶೇ 45ರಷ್ಟು ಹಾಳಾಗಿದೆ. ಹೆಸರು, ಉದ್ದು, ಸೋಯಾ, ತೊಗರಿ ಬೆಳೆ ನಾಶವಾಗಿದೆ' ಎನ್ನುತ್ತಾರೆ ಬೀದರ್‌ನ ಜಂಟಿ ಕೃಷಿ ನಿರ್ದೇಶಕಿ ಜಿ.ಎಚ್. ತಾರಾಮಣಿ.

ವಿಡಿಯೊ ನೋಡಲು ಕೋಡ್ ಸ್ಕ್ಯಾನ್ ಮಾಡಿ
ಪ್ರಜಾವಾಣಿ ನೋಡಿಯಾ
https://bit.ly/3uTK5Y8

ನಾಲ್ಕು ಎಕರೆಯಲ್ಲಿ ಬೆಳೆದಿದ್ದ ತೊಗರಿ ನೀರು ಪಾಲಾಗಿದೆ. ಸೂಕ್ತ ಪರಿಹಾರವೂ ಬರುತ್ತಿಲ್ಲ. ಬೆಳೆ ಇಲ್ಲದ್ದಕ್ಕೆ ಸಾಲವೂ ಸಿಗುತ್ತಿಲ್ಲ
ಸಾಬಣ್ಣ ಸುಗ್ಗ, ಪಾಣೇಗಾಂವ ಗ್ರಾಮದ ರೈತ

ಆರ್ಯನ್‌ಗೆ ಜಾಮೀನು ನಿರಾಕರಣೆ

ಮುಂಬೈ (ಪಿಟಿಐ): ಬಾಲಿವುಡ್ ನಟ ಶಾರುಖ್ ಖಾನ್ ಮಗ, ಡ್ರಗ್ಸ್ ಸೇವನೆ ಆರೋಪ ಹೊತ್ತಿರುವ ಆರ್ಯನ್ ಖಾನ್ ಮತ್ತು ಇತರ ಇಬ್ಬರು ಆರೋಪಿಗಳ ಜಾಮೀನು ಅರ್ಜಿಗಳನ್ನು ಇಲ್ಲಿಯ ಹೆಚ್ಚುವರಿ ಮುಖ್ಯ ಮೆಟ್ರೊಪಾಲಿಟನ್ ಮ್ಯಾಜಿಸ್ಟ್ರೇಟ್ ಆರ್.ಎಂ. ನೆರ್ಲೀಕರ್ ಶುಕ್ರವಾರ ತಿರಸ್ಕರಿಸಿದರು.

ಮಾದಕ ಪದಾರ್ಥ ನಿಯಂತ್ರಣ ಘಟಕದ (ಎನ್‌ಸಿಬಿ) ಪರವಾಗಿ ಕೋರ್ಟ್‌ಗೆ ಹಾಜರಾಗಿದ್ದ ಹೆಚ್ಚುವರಿ ಸಾಲಿಸಿಟರ್ ಜನರಲ್ ಅನಿಲ್ ಸಿಂಗ್ ಅವರು ಆರ್ಯನ್ ಖಾನ್ ಮತ್ತು ಇನ್ನಿಬ್ಬರು ಆರೋಪಿಗಳ ಜಾಮೀನು ಅರ್ಜಿಗಳನ್ನು ವಿರೋಧಿಸಿದರು. ವಾದಗಳನ್ನು ಆಲಿಸಿದ ಬಳಿಕ ಆರ್ಯನ್ ಖಾನ್, ಮುನ್‌ಮುನ್ ಧಮೇಚ ಮತ್ತು ಅರ್ಬಾಜ್ ಮರ್ಚೆಂಟ್ ಅವರಿಗೆ ಜಾಮೀನು ನೀಡಲು ಮ್ಯಾಜಿಸ್ಟ್ರೇಟ್ ನಿರಾಕರಿಸಿದರು. ಆರ್ಯನ್ ಖಾನ್ ಮತ್ತು ಇತರ ಏಳು ಜನ ಆರೋಪಿಗಳ ಎನ್‌ಸಿಬಿ ಕಸ್ಟಡಿ ಮುಕ್ತಾಯವಾದ ಕಾರಣ ಕೋರ್ಟ್ ಅವರನ್ನು 14 ದಿನಗಳ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿತ್ತು.

ಅ.3ರಂದು ಮುಂಬೈ ಕರಾವಳಿ ತೀರದಲ್ಲಿ ಐಷಾರಾಮಿ ಹಡಗಿನ ಮೇಲೆ ನಡೆಸಿದ ದಾಳಿಯಲ್ಲಿ ಆರ್ಯನ್ ಖಾನ್ ಅವರನ್ನು ಬಂಧಿಸಲಾಗಿತ್ತು. ಪ್ರಕರಣದಲ್ಲಿ ಈ ವರೆಗೆ 18 ಜನರನ್ನು ವಶಕ್ಕೆ ತೆಗೆದುಕೊಳ್ಳಲಾಗಿದೆ ಎಂದು ಎನ್‌ಸಿಬಿ ಹೇಳಿದೆ.

ಕೋವಿಡ್: ಐದಕ್ಕಿಳಿದ ಸಾವಿನ ಸಂಖ್ಯೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ ಕೋವಿಡ್ ಮೃತರ ಸಂಖ್ಯೆ ಇಳಿಮುಖವಾಗಿದೆ. ಶುಕ್ರವಾರ 5 ಮಂದಿ ಅಸುನೀಗಿದ್ದಾರೆ. ಮರಣ ಪ್ರಮಾಣ ದರವು ಶೇ 1.25ಕ್ಕೆ ತಗ್ಗಿದೆ.

ಕೋವಿಡ್ ಹೊಸ ಪ್ರಕರಣಗಳ ಸಂಖ್ಯೆಯೂ ಇಳಿದಿದೆ. ಒಂದು ದಿನದಲ್ಲಿ 397 ಜನರಲ್ಲಿ ಸೋಂಕು ಕಾಣಿಸಿಕೊಂಡಿದೆ. ಈವರೆಗೆ ಸೋಂಕಿಗೊಳಪಟ್ಟವರ ಸಂಖ್ಯೆ 29.80 ಲಕ್ಷದಷ್ಟಿದೆ. ಕೋವಿಡ್ ದೃಢ ಪ್ರಮಾಣವು ಶೇ 0.43ರಷ್ಟು ವರದಿಯಾಗಿದೆ.

ಸೋಂಕಿತರ ಪೈಕಿ 603 ಮಂದಿಗೆ ಕಾಯಿಲೆ ವಾಸಿಯಾಗಿದ್ದು, ಈವರೆಗೆ ಚೇತರಿಸಿಕೊಂಡವರ ಸಂಖ್ಯೆ 29.30 ಲಕ್ಷಕ್ಕೆ ಹೆಚ್ಚಿದೆ. ಸಕ್ರಿಯ ಪ್ರಕರಣಗಳ ಸಂಖ್ಯೆ ಮತ್ತಷ್ಟು ತಗ್ಗಿದೆ. ಸದ್ಯ 11,408 ಜನ ಆಸ್ಪತ್ರೆ ಸೇರಿದಂತೆ ವಿವಿಧೆಡೆ ಚಿಕಿತ್ಸೆ ಪಡೆಯುತ್ತಿದ್ದಾರೆ.

ಬೆಂಗಳೂರಿನಲ್ಲಿ ಮೂವರು ಸಾವಿಗೀಡಾಗಿದ್ದಾರೆ. ತುಮಕೂರು ಮತ್ತು ಉತ್ತರ ಕನ್ನಡ ಜಿಲ್ಲೆಗಳಲ್ಲಿ ತಲಾ ಒಬ್ಬರು ಅಸುನೀಗಿದ್ದಾರೆ. ರಾಜ್ಯದಲ್ಲಿ ಈವರೆಗೆ ಮೃತರಾದವರ ಸಂಖ್ಯೆ 37,866ಕ್ಕೆ ಹೆಚ್ಚಿದೆ.

ಬೆಂಗಳೂರಿನಲ್ಲಿ ಹೊಸದಾಗಿ 140 ಜನರಿಗೆ ಸೋಂಕು ತಗುಲಿದೆ. ಮೈಸೂರಿನಲ್ಲಿ 53 ಪ್ರಕರಣಗಳು ವರದಿಯಾಗಿವೆ. ದಕ್ಷಿಣ ಕನ್ನಡ (39), ಹಾಸನ (27), ತುಮಕೂರು (20), ಉಡುಪಿ (23), ಉತ್ತರ ಕನ್ನಡ (23), ಚಿಕ್ಕಮಗಳೂರು (12) ಹಾಗೂ ಶಿವಮೊಗ್ಗದಲ್ಲಿ (11) ಹತ್ತಕ್ಕಿಂತ ಹೆಚ್ಚು ಪ್ರಕರಣಗಳು ದಾಖಲಾಗಿವೆ. ಬಾಗಲಕೋಟೆ, ಗದಗ, ಹಾವೇರಿ, ಕೊಪ್ಪಳ, ರಾಯಚೂರು ಹಾಗೂ ಯಾದಗಿರಿಯಲ್ಲಿ ಹೊಸ ಪ್ರಕರಣಗಳು ವರದಿಯಾಗಿಲ್ಲ. 15 ಜಿಲ್ಲೆಗಳಲ್ಲಿ ಇದು ಒಂದಂಕಿಯಷ್ಟಿದೆ.

ಕೋವಿಡ್ ಪರೀಕ್ಷೆ ಕಡಿಮೆಯಾಗುತ್ತಲೇ ಇದ್ದು, ಹಿಂದಿನ 24 ಗಂಟೆಗಳಲ್ಲಿ 91,772 ಮಾದರಿಗಳನ್ನಷ್ಟೇ ಪರೀಕ್ಷಿಸಲಾಗಿದೆ.



ಬೆಂಗಳೂರು ನಗರ ವ್ಯವಹಾರ: ವಿಶ್ವಾಸಕ್ಕೆ ತೆಗೆದುಕೊಳ್ಳದ, ಮೂಗು ತೂರಿಸುವ ಆರೋಪ

ಸಚಿವ ಅಶೋಕ ಮೇಲೆ ಬಿಜೆಪಿ ಶಾಸಕರ ಮುನಿಸು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಂಗಳೂರಿನ ಮೇಲೆ ಹಿಡಿತ ಸಾಧಿಸಲು ಕಂದಾಯ ಸಚಿವ ಆರ್.ಅಶೋಕ ಪ್ರಯತ್ನ ನಡೆಸುತ್ತಿರುವ ಬೆನ್ನಲ್ಲೇ, ಅವರ ವಿರುದ್ಧ ಬಿಜೆಪಿಯ ನಗರದ ಬಹುತೇಕ ಶಾಸಕರು ಅಸಮಾಧಾನಗೊಂಡಿದ್ದಾರೆ.



ಆರ್. ಅಶೋಕ

ಅಶೋಕ ಕಾರ್ಯವೈಖರಿ, ಶಾಸಕರನ್ನು ವಿಶ್ವಾಸಕ್ಕೆ ತೆಗೆದುಕೊಳ್ಳದೇ ಇರುವುದು ಮತ್ತು ಎಲ್ಲದ್ದಕ್ಕೂ ತಾವೇ ಪ್ರಮುಖರು ಎಂಬ ಧೋರಣೆಯಿಂದಾಗಿ ಶಾಸಕರು ಮಾತ್ರವಲ್ಲದೆ, ಬಿಜೆಪಿಯ ಮಾಜಿ ಕಾರ್ಪೊರೇಟರ್‌ಗಳೂ ಸಿಟ್ಟಿಗೆದ್ದಿದ್ದಾರೆ ಎಂದು ಮೂಲಗಳು ಹೇಳಿವೆ.

ಬಿಡಿಎ ಅಧ್ಯಕ್ಷರೂ ಆಗಿರುವ ಎಸ್.ಆರ್.ವಿಶ್ವನಾಥ್ ಅವರು ಇತ್ತೀಚೆಗಷ್ಟೇ ಅಶೋಕ ಬಗ್ಗೆ ಅಸಮಾಧಾನ ವ್ಯಕ್ತಪಡಿಸಿದ್ದರು. ಇನ್ನೂ ಕೆಲವು ಶಾಸಕರು ಪರಸ್ಪರ ಮಾತುಕತೆಯ ವೇಳೆ ಹಿರಿಯ ಸಚಿವರ ನಡವಳಿಕೆಯ ಬಗ್ಗೆ ಬೇಸರ ವ್ಯಕ್ತಪಡಿಸಿದ್ದಾರೆ.

'ಅಶೋಕ ಅವರಿಗೆ ಕೋವಿಡ್ ಉಸ್ತುವಾರಿ ನೀಡಲಾಗಿದೆಯೇ ಹೊರತು, ಜಿಲ್ಲೆಯ ಉಸ್ತುವಾರಿ ನೀಡಿಲ್ಲ. ಆದರೆ, ಬಿಡಿಎ, ಬಿಬಿಎಂಪಿ ವಿಚಾರಗಳಲ್ಲಿ ತಲೆಹಾಕುತ್ತಿರುವುದು ಸರಿಯಲ್ಲ. ಬಿಡಿಎಯಿಂದ ವಿಶ್ವನಾಥ್ ಅವರನ್ನು ತೆಗೆಸುತ್ತೇನೆ ಎಂದು ಹೇಳಿದ್ದಾರೆ. ಹಾಗಿದ್ದರೆ ನಾನೇ ರಾಜೀನಾಮೆ ನೀಡುತ್ತೇನೆ ಎಂದು ಮುಖ್ಯಮಂತ್ರಿ ಬೊಮ್ಮಾಯಿ ಅವರಿಗೆ ತಿಳಿಸಿದ್ದೆ' ಎಂದು ವಿಶ್ವನಾಥ್ ತಮ್ಮ ಆಪ್ತರ ಬಳಿ ಹೇಳಿಕೊಂಡಿದ್ದಾರೆ ಎಂದು ಮೂಲಗಳು ಹೇಳಿವೆ.

ಬಿಡಿಎಗೆ ಸಂಬಂಧಿಸಿದಂತೆ ವಿಶ್ವನಾಥ್‌ಗೆ ಕಡಿವಾಣ ಹಾಕಲು ಅಶೋಕ ಕೆಲವು ಮಾತುಗಳನ್ನು ಆಡಿರಲೂಬಹುದು. ಆದರೆ, ಇತರ ಶಾಸಕರನ್ನು ನಡೆಸಿಕೊಳ್ಳುತ್ತಿರುವ ರೀತಿ ಸರಿ ಇಲ್ಲ. ಎಲ್ಲದರಲ್ಲೂ ಮೂಗು ತೂರಿಸುತ್ತಿದ್ದಾರೆ. ಇದರಿಂದ ಅಶೋಕ ಪರ ಮತ್ತು ವಿರುದ್ಧ ಎಂಬ ಎರಡು ಗುಂಪುಗಳಾಗುವ ಅಪಾಯವಿದೆ ಎಂದು ಶಾಸಕರೊಬ್ಬರು ತಿಳಿಸಿದರು.

'ವಿಶ್ವಾಸಕ್ಕೆ ತೆಗೆದುಕೊಂಡೇ ಕೆಲಸ'

'ನನ್ನ ಬಗ್ಗೆ ಶಾಸಕರು ಬೇಸರಗೊಂಡಿದ್ದಾರೆ ಎಂಬುದು ಸರಿಯಲ್ಲ. ಯಾರಿಗೂ ಅಸಮಾಧಾನವಿಲ್ಲ. ಹಿರಿಯ ಸಚಿವನಾದ ನಾನು ಎಲ್ಲರನ್ನೂ ವಿಶ್ವಾಸಕ್ಕೆ ತೆಗೆದುಕೊಂಡೇ ಕೆಲಸ ಮಾಡುತ್ತಿದ್ದೇನೆ' ಎಂದು ಸಚಿವ ಅಶೋಕ 'ಪ್ರಜಾವಾಣಿ'ಗೆ ಹೇಳಿದ್ದಾರೆ.

'ಎಸ್.ಆರ್.ವಿಶ್ವನಾಥ್ ಅವರು ನನ್ನ ಜತೆ ಬಂದು ಮಾತನಾಡಿಕೊಂಡು ಹೋಗಿದ್ದಾರೆ. ನಾನು ಯಾವುದೇ ಹೇಳಿಕೆ ನೀಡಿಲ್ಲ, ಮಾಧ್ಯಮಗಳಲ್ಲಿ ಕೆಲವರು ಅಪಪ್ರಚಾರ ಮಾಡುತ್ತಿದ್ದಾರೆ ಎಂದು ವಿಶ್ವನಾಥ್ ನನಗೆ ಹೇಳಿದ್ದಾರೆ. ಇವತ್ತು ಇಬ್ಬರೂ ಜತೆಗೇ ಇದ್ದೆವು' ಎಂದರು.

'ಇನ್ಯಾರೂ ಬೇಸರಗೊಂಡಿಲ್ಲ, ರಘು, ಎಸ್.ಸುರೇಶ್‌ಕುಮಾರ್, ಉದಯ್ ಗರುಡಾಚಾರ್, ಎಲ್.ಎ.ರವಿ ಸುಬ್ರಹ್ಮಣ್ಯ, ಎಂ.ಕೃಷ್ಣಪ್ಪ... ಹೀಗೆ ಎಲ್ಲರೂ ನಮ್ಮ ಜತೆಗೇ ಇದ್ದಾರೆ. ಪಾರ್ಟಿಯಲ್ಲಿ ನಾನೇ ಸೀನಿಯರ್ ಅಲ್ವಾ. ಹೀಗಾಗಿ ಎಲ್ಲರೂ ಬೇರೆ ಬೇರೆ ಕೆಲಸಗಳಿಗೆ ನನ್ನ ಬಳಿ ಬಂದೇ ಬರುತ್ತಾರೆ. ಯಾರಿಗೂ ಅಸಮಾಧಾನ ಇಲ್ಲ' ಎಂದು ಅಶೋಕ ಹೇಳಿದರು.

ಶಾಸಕರ ಬೇಸರಕ್ಕೆ ಕಾರಣಗಳೇನು?

ಅಶೋಕ ಮೇಲೆ ತಮ್ಮ ಬೇಸರಕ್ಕೆ ಕಾರಣಗಳೇನು ಎಂಬುದನ್ನು ಹೆಸರು ಹೇಳಲು ಬಯಸದ ಶಾಸಕರೊಬ್ಬರು ಈ ರೀತಿ ಪಟ್ಟಿ ಮಾಡಿದ್ದಾರೆ.

- ನಗರಕ್ಕೆ ಸಂಬಂಧಿಸಿದಂತೆ ಸಭೆಗಳನ್ನು ನಡೆಸುತ್ತಾರೆ ಮತ್ತು ನಿರ್ಧಾರಗಳನ್ನು ಅವರೇ ತೆಗೆದುಕೊಳ್ಳುತ್ತಾರೆ. ಶಾಸಕರನ್ನು ವಿಶ್ವಾಸಕ್ಕೂ ತೆಗೆದುಕೊಳ್ಳುವುದಿಲ್ಲ ಮತ್ತು ಅಭಿಪ್ರಾಯಗಳನ್ನು ಕೇಳುವುದಿಲ್ಲ.
- ಗುತ್ತಿಗೆದಾರರನ್ನು ನೇರವಾಗಿ ಮುಖ್ಯಮಂತ್ರಿಯವರ ಬಳಿ ಕರೆದೊಯ್ಯುತ್ತಾರೆ. ಅನುದಾನ ಬಿಡುಗಡೆ ವಿಚಾರದಲ್ಲೂ ಯಾರ ಜತೆಗೂ ಚರ್ಚಿಸುವುದಿಲ್ಲ. ನೇರವಾಗಿ ಅವರೇ ಬಿಡುಗಡೆ ಮಾಡಿಸುತ್ತಾರೆ.
- ಬೆಂಗಳೂರಿಗೆ ಸಂಬಂಧಿಸಿದ ನಿಗಮ– ಮಂಡಳಿಗಳಲ್ಲಿ ಸದಸ್ಯರ ಬದಲಾವಣೆಗೆ ಸಂಬಂಧಿಸಿದಂತೆ ಅಶೋಕ ತಮಗೆ ಬೇಕಾದವರ ಪಟ್ಟಿಯನ್ನೇ ನೀಡಿದ್ದಾರೆ. ಈ ಸಂಬಂಧ ಪಕ್ಷದಲ್ಲಿ ಸಮಿತಿ ರಚಿಸಲಾಗಿದ್ದು, ಅದರಲ್ಲಿ ಅಶೋಕ, ಲಕ್ಷ್ಮಣ ಸವದಿ ಮತ್ತು ನಿರ್ಮಲ್ ಕುಮಾರ್ ಸುರಾನ ಇದ್ದಾರೆ.
- ತಾವು ಮಾತ್ರ ಮುಖ್ಯಮಂತ್ರಿಯವರಿಗೆ ಆಪ್ತ ಎಂದು ಬಿಂಬಿಸಿಕೊಳ್ಳುತ್ತಿದ್ದಾರೆ.

'ವಿದ್ಯಾರ್ಥಿ ಸ್ನೇಹಿ ಬದಲಾವಣೆಗೆ ತಕರಾರಿಲ್ಲ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಸರ್ಕಾರ ಯಾವುದೇ ಬದಲಾವಣೆಗೆ ಮುಂದಾದರೂ ಅದು ವಿದ್ಯಾರ್ಥಿ ಸ್ನೇಹಿಯಾಗಿರಬೇಕು. ಅವರ ಬೌದ್ಧಿಕ ಮತ್ತು ಶೈಕ್ಷಣಿಕ ಕ್ಷಮತೆ ಹೆಚ್ಚಿಸುವಂತಿರಬೇಕು. ಆ ನಿಟ್ಟಿನಲ್ಲಿ ಹೆಜ್ಜೆ ಇಡಬೇಕು' ಎಂದು ಹಂಪಿ ಕನ್ನಡ ವಿಶ್ವವಿದ್ಯಾಲಯದ ವಿಶ್ರಾಂತ ಕುಲಪತಿ ಪ್ರೊ.ಎ.ಮುರಿಗೆಪ್ಪ ತಿಳಿಸಿದರು.

ಅಖಿಲ ಭಾರತ ಶಿಕ್ಷಣ ಉಳಿಸಿ ಸಮಿತಿ ಹಮ್ಮಿಕೊಂಡಿದ್ದ 'ತರಾತುರಿಯಲ್ಲಿ ಜಾರಿಯಾಗುತ್ತಿರುವ ರಾಷ್ಟ್ರೀಯ ಶಿಕ್ಷಣ ನೀತಿ–2020ರಿಂದ ಆಗುತ್ತಿರುವ ಸಮಸ್ಯೆಗಳು! ಒಂದು ಚರ್ಚೆ' ಕುರಿತ ವೆಬಿನಾರ್‌ನಲ್ಲಿ ಶುಕ್ರವಾರ ಮಾತನಾಡಿದರು.

'ಹೊಸ ಶಿಕ್ಷಣ ನೀತಿಯ ಅಗತ್ಯ ಖಂಡಿತವಾಗಿಯೂ ಇದೆ. ವಿದ್ಯಾರ್ಥಿಗಳನ್ನು ಔದ್ಯೋಗಿಕವಾಗಿ ಸ್ವತಂತ್ರರನ್ನಾಗಿಸಲು ಇದು ತುಂಬಾ ಅಗತ್ಯ. ಎಷ್ಟು ಕೋರ್ಸ್‌ಗಳನ್ನು ಕಲಿಸಬೇಕು. ಅದಕ್ಕೆ ಅಗತ್ಯವಿರುವ ಮಾನವ ಸಂಪನ್ಮೂಲ ನಮ್ಮಲ್ಲಿದೆಯೇ ಎಂಬುದನ್ನು ಯೋಚಿಸಬೇಕು. ಹಳತನ್ನೇ ಸರಿಪಡಿಸದೆ ಹೊಸ ಪದ್ಧತಿ ಅನುಷ್ಠಾನಗೊಳಿಸಲು ಹೊರಟಿರುವುದು ಎಷ್ಟು ಸರಿ ಎಂಬುದರ ಕುರಿತು ಸ್ವಯಂ ವಿಮರ್ಶೆ ಮಾಡಿಕೊಳ್ಳಬೇಕು' ಎಂದರು.

'ನೂತನ ರಾಷ್ಟ್ರೀಯ ಶಿಕ್ಷಣ ನೀತಿಯ ಬಗ್ಗೆ ಯಾರಿಗೂ ತಕರಾರಿಲ್ಲ. ಅದನ್ನು ತರಾತುರಿಯಲ್ಲಿ ಅನುಷ್ಠಾನಗೊಳಿಸುತ್ತಿರುವುದರ ಬಗ್ಗೆ ವಿರೋಧವಿದೆ. ಈ ನೀತಿಯ ಬಗ್ಗೆ ಎಲ್ಲ ವಲಯಗಳಲ್ಲೂ ಚರ್ಚೆಯಾಗಬೇಕು. ಅದಕ್ಕೆ ಸರ್ಕಾರ ಅವಕಾಶ ನೀಡಬೇಕು' ಎಂದು ತಿಳಿಸಿದರು.

ಕವಯಿತ್ರಿ ಪ್ರೀತಿ ಶುಭಚಂದ್ರ, 'ಹೊಸ ಪದ್ಧತಿಯ ಶಿಕ್ಷಣ ವ್ಯವಸ್ಥೆ ಜಾರಿಗೊಳ್ಳುವ ಮೊದಲು ಅದರ ಬಗ್ಗೆ ಭಯ ಹಾಗೂ ಗೊಂದಲಗಳು ಇರುವುದು ಸಹಜ. ಹೊಸ ಪದ್ಧತಿಗೆ ಅಡಿ ಇಡಬೇಕಾದರೆ ಅದರ ಸಾಧಕ ಬಾಧಕಗಳ ಬಗ್ಗೆ ವಿಶ್ಲೇಷಣೆ ನಡೆಸಬೇಕಾದದ್ದು ಅಗತ್ಯ. ತರಾತುರಿಯಲ್ಲಿ ಯಾವುದೇ ನಿರ್ಣಯ ಕೈಗೊಳ್ಳಬಾರದು. ನೂತನ ರಾಷ್ಟ್ರೀಯ ಶಿಕ್ಷಣ ನೀತಿಯಲ್ಲಿ ವಿದ್ಯಾರ್ಥಿಗಳಿಗೆ ಸೀಮಿತ ಸ್ವಾತಂತ್ರ್ಯ ಒದಗಿಸಲಾಗಿದೆ. ಈ ಶಿಕ್ಷಣ ನೀತಿಯ ಅಡಿಯಲ್ಲಿ ಪಡೆದ ಪ್ರಮಾಣ ಪತ್ರ ಕೊಟ್ಟರೆ ಉದ್ಯೋಗ ಸಿಗುತ್ತದೆಯೇ ಎಂಬ ಪ್ರಶ್ನೆ ಕಾಡುತ್ತಿದೆ. ಹೊಸ ಶಿಕ್ಷಣ ನೀತಿಯು ಶಿಕ್ಷಣ ಹಾಗೂ ಉದ್ಯೋಗದ ನಡುವೆ ಸಂಪರ್ಕ ಬೆಸೆಯುವಂತಿರಬೇಕು. ಆ ಕೆಲಸ ಈಗ ಆಗಿಲ್ಲ. ಹೀಗಾಗಿ ಎಲ್ಲರಲ್ಲೂ ಆತಂಕ ಮನೆಮಾಡಿದೆ' ಎಂದರು.

ಮಂಗಳೂರು ವಿಶ್ವವಿದ್ಯಾಲಯದ ನಿವೃತ್ತ ಪ್ರಾಧ್ಯಾಪಕ ಪ್ರೊ. ಸೋಮಶೇಖರಪ್ಪ, ಅಖಿಲ ಭಾರತ ಶಿಕ್ಷಣ ಉಳಿಸಿ ಸಮಿತಿ–ಕರ್ನಾಟಕ ಅಧ್ಯಕ್ಷ ಅಲ್ಲಮಪ್ರಭು ಬೆಟ್ಟದೂರ ಇದ್ದರು.

ಮೆಟ್ರೊ ಸಂಚಾರದಲ್ಲಿ ವ್ಯತ್ಯಯ ಇಂದು

ಬೆಂಗಳೂರು: ನಗರದ ಎಂ.ಜಿ. ರಸ್ತೆ ನಿಲ್ದಾಣದಿಂದ ಬೈಯಪ್ಪನಹಳ್ಳಿ ನಿಲ್ದಾಣದವರೆಗೆ ಮೆಟ್ರೊ ರೈಲು ಸಂಚಾರ ಸೇವೆಯು ಅ.9ರಂದು ಮಧ್ಯಾಹ್ನ 4 ಗಂಟೆಯಿಂದ ಅ.10ರ ಬೆಳಿಗ್ಗೆ 6ರವರೆಗೆ ತಾತ್ಕಾಲಿಕವಾಗಿ ಸ್ಥಗಿತವಾಗಲಿದೆ.

ನೇರಳೆ ಮಾರ್ಗದ ಟ್ರಿನಿಟಿ ಮತ್ತು ಹಲಸೂರು ನಿಲ್ದಾಣಗಳ ನಡುವೆ ದುರಸ್ತಿ ಕಾರ್ಯ ಕೈಗೊಂಡಿರುವುದರಿಂದ ಸಂಚಾರದಲ್ಲಿ ವ್ಯತ್ಯಯವಾಗಲಿದೆ ಎಂದು ಬಿಎಂಆರ್‌ಸಿಎಲ್ ಮುಖ್ಯ ಸಾರ್ವಜನಿಕ ಸಂಪರ್ಕಾಧಿಕಾರಿ ಬಿ.ಎಲ್. ಯಶವಂತ್ ಚವ್ಹಾಣ್ ತಿಳಿಸಿದ್ದಾರೆ.

ಈ ಅವಧಿಯಲ್ಲಿ ಎಂ.ಜಿ. ರಸ್ತೆ ಮತ್ತು ಕೆಂಗೇರಿ ಮೆಟ್ರೊ ನಿಲ್ದಾಣಗಳ ನಡುವೆ ಮಾತ್ರ ಮೆಟ್ರೊ ಸಂಚಾರವಿರುತ್ತದೆ. ಅ.10ರಿಂದ ಎಂದಿನಂತೆ ಮೆಟ್ರೊ ರೈಲು ಸೇವೆಯು ನೇರಳೆ ಮಾರ್ಗದಲ್ಲಿ ಪ್ರಯಾಣಿಕರಿಗೆ ಮತ್ತೆ ಲಭ್ಯವಾಗಲಿದೆ ಎಂದು ತಿಳಿಸಿದ್ದಾರೆ.

ಹಸಿರು ಮಾರ್ಗದಲ್ಲಿ ಅ.9ರಂದು ಮೆಟ್ರೊ ರೈಲು ಸೇವೆಯು ಎಂದಿನಂತೆ ಇರುತ್ತದೆ ಎಂದು ಅವರು ತಿಳಿಸಿದ್ದಾರೆ.

ದಾಸರಹಳ್ಳಿ ಕ್ಷೇತ್ರದ ಗೃಹಲಕ್ಷ್ಮಿ ಬಡಾವಣೆಯ ಸರ್ಕಾರಿ ಪ್ರಾಥಮಿಕ ಶಾಲೆಯಲ್ಲಿ ಯೂರೋಫಿನ್ಸ್ ಅಡ್ವಾನ್ಸ್ ಸಂಸ್ಥೆಯ ಸಹಯೋಗದಲ್ಲಿ ನಿರ್ಮಿಸಿರುವ ಶಾಲಾ ಕೊಠಡಿಯನ್ನು ಶಾಸಕ ಆರ್.ಮಂಜುನಾಥ್ ಹಾಗೂ ಸಂಸ್ಥೆಯ ನಿರ್ದೇಶಕ ರಾಜೀವ್ ಮಲ್ಲಿಕ್ ಶುಕ್ರವಾರ ಉದ್ಘಾಟಿಸಿರು. ಕ್ಷೇತ್ರ ಶಿಕ್ಷಣಾಧಿಕಾರಿ ರಮೇಶ್, ಸ್ಥಳೀಯ ಮುಖಂಡರಾದ ಮುನಿಸ್ವಾಮಣ್ಣ, ಚಿನ್ನಗಿರಿಯಪ್ಪ ಹಾಗೂ ಇತರರು ಇದ್ದರು.

'ಕನ್ನಡದಲ್ಲಿ ಯುಪಿಎಸ್‌ಸಿ' ಟ್ವಿಟರ್ ಅಭಿಯಾನ ನಾಳೆ

ಬೆಂಗಳೂರು: 'ಯುಪಿಎಸ್‌ಸಿ ಪರೀಕ್ಷೆಗಳನ್ನು ಈ ಬಾರಿಯೂ ಕನ್ನಡದಲ್ಲಿ ಬರೆಯಲು ಅವಕಾಶ ನೀಡದ ಕೇಂದ್ರ ಸರ್ಕಾರದ ವಿರುದ್ಧ ಅ.10ರಂದು ಬೆಳಿಗ್ಗೆ 10.10ರಿಂದ 'ಕನ್ನಡದಲ್ಲಿ ಯುಪಿಎಸ್‌ಸಿ' ಎಂಬ ಟ್ವಿಟರ್ ಅಭಿಯಾನ ಹಮ್ಮಿಕೊಳ್ಳಲಾಗಿದೆ' ಎಂದು ಕರ್ನಾಟಕ ರಕ್ಷಣಾ ವೇದಿಕೆ ಅಧ್ಯಕ್ಷ ಟಿ.ಎ.ನಾರಾಯಣಗೌಡ ತಿಳಿಸಿದರು.

'ಅ.10ರಂದು ಯುಪಿಎಸ್‌ಸಿ ಪರೀಕ್ಷೆಗಳು ನಡೆಯಲಿದ್ದು, ಪರೀಕ್ಷೆಯಲ್ಲಿ ಕನ್ನಡಕ್ಕೆ ಮಾನ್ಯತೆ ನೀಡದೆ, ಕನ್ನಡಿಗರನ್ನು ಎರಡನೇ ದರ್ಜೆಯ ಪ್ರಜೆಗಳಂತೆ ನೋಡಲಾಗುತ್ತಿದೆ. ಇದನ್ನು ಖಂಡಿಸಿ ಕನ್ನಡಿಗರ ಹಕ್ಕೊತ್ತಾಯದ ಸರಣಿ ಅಭಿಯಾನ ಆರಂಭಿಸಿದ್ದೇವೆ. ಈ ಮೂಲಕ ಕರ್ನಾಟಕದ ಜನಪ್ರತಿನಿಧಿಗಳ ಮೇಲೆ ಒತ್ತಡ ಹೇರಲಿದ್ದೇವೆ' ಎಂದರು.

'ಅಭಿಯಾನದ ಭಾಗವಾಗಿ ಅ.10ರಂದು #ಕನ್ನಡದಲ್ಲಿUPSC, #UPSCInKannada ಎಂಬ ಹ್ಯಾಶ್ ಟ್ಯಾಗ್ ಬಳಸುವ ಮೂಲಕ ಟ್ವಿಟರ್‌ನಲ್ಲಿ ದನಿ ಎತ್ತಲಿದ್ದೇವೆ. ಅಭಿಯಾನದಲ್ಲಿ ರಾಜ್ಯದ ಜನ ಭಾಗವಹಿಸಬಹುದು. ಕೇಂದ್ರ ಸರ್ಕಾರದ ಎಲ್ಲ ಹಂತದ ಪರೀಕ್ಷೆಗಳೂ ಕನ್ನಡದಲ್ಲಿ ಬರೆಯಲು ಅವಕಾಶ ನೀಡಬೇಕೆಂದು ಒತ್ತಾಯಿಸಿ ವಿಚಾರ ಸಂಕಿರಣ, ಚಿತ್ರ ಚಳವಳಿ, ಪತ್ರ ಚಳವಳಿಗಳನ್ನೂ ಹಮ್ಮಿಕೊಳ್ಳಲಿದ್ದೇವೆ' ಎಂದರು.

ರಾಜೀವ್ ಗಾಂಧಿ ವಿವಿ ಕುಲಪತಿ ಹುದ್ದೆ: ಮೂವರ ಹೆಸರು ಶಿಫಾರಸು

ಬೆಂಗಳೂರು: ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯದ(ಆರ್‌ಜಿಯುಎಚ್‌ಎಸ್) ಕುಲಪತಿ ಹುದ್ದೆಗೆ ಮೂವರ ಹೆಸರನ್ನು ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯದ ಕುಲಪತಿ ಎಸ್. ವಿದ್ಯಾಶಂಕರ್ ನೇತೃತ್ವದ ಶೋಧನಾ ಸಮಿತಿ ಶಿಫಾರಸು ಮಾಡಿದೆ.

ಆರ್‌ಜಿಯುಎಚ್‌ಎಸ್ ಹಂಗಾಮಿ ಕುಲಪತಿ ಡಾ.ಎಸ್.ಎಂ. ಜಯಕರ, ರಾಷ್ಟ್ರೀಯ ವೈದ್ಯಕೀಯ ಆಯೋಗದ ಸ್ನಾತಕೋತ್ತರ ಮಂಡಳಿಯ ಅಧ್ಯಕ್ಷ ಡಾ. ಎಂ.ಕೆ. ರಮೇಶ್ ಮತ್ತು ಡಾ. ಕವಿತಾ ಪಾಟೀಲ ಅವರ ಹೆಸರನ್ನು ಸಮಿತಿ ಅಂತಿಮಗೊಳಿಸಿದ್ದು, ಮುಚ್ಚಿದ ಲಕೋಟೆಯಲ್ಲಿ ಸರ್ಕಾರಕ್ಕೆ ಸಲ್ಲಿಸಿದೆ ಎಂದು ಮೂಲಗಳು ತಿಳಿಸಿವೆ.

ಕುಲಪತಿ ಹುದ್ದೆಗೆ ಒಟ್ಟು 55 ಅರ್ಜಿಗಳನ್ನು ಸಲ್ಲಿಕೆ ಆಗಿದ್ದವು. ಈ ಅರ್ಜಿಗಳನ್ನು ಸಮಿತಿಯ ಸದಸ್ಯರು ಗುರುವಾರ ಸಭೆ ಸೇರಿ ಪರಿಶೀಲನೆ ನಡೆಸಿದ್ದರು.

ಈ ಮಧ್ಯೆ, ಡಾ. ಎಂ.ಕೆ. ರಮೇಶ್ ಅವರ ಹೆಸರನ್ನು ಸಮಿತಿ ಶಿಫಾರಸು ಮಾಡಿರುವ ಬಗ್ಗೆ ವ್ಯತಿರಿಕ್ತ ಅಭಿಪ್ರಾಯ ಕೇಳಿ ಬಂದಿದೆ. ಅವರು ಹಾಲಿ ಹುದ್ದೆಯಲ್ಲಿ ನಾಲ್ಕು ವರ್ಷ ಕರ್ತವ್ಯ ನಿರ್ವಹಿಸಬೇಕಿದ್ದು, ಹುದ್ದೆ ವಹಿಸಿಕೊಂಡು ಒಂದು ವರ್ಷವಷ್ಟೇ ಆಗಿದೆ. ಕುಲಪತಿ ಹುದ್ದೆಗೆ ಅರ್ಜಿ ಸಲ್ಲಿಸುವ ಮೊದಲು ಕೇಂದ್ರ ಸರ್ಕಾರದಿಂದ ನಿರಕ್ಷೇಪಣಾ ಪತ್ರ ಪಡೆಯಬೇಕಿದ್ದು, ಮೂರು ತಿಂಗಳ ನೋಟಿಸ್ ಅವಧಿಯೂ ಇರುತ್ತದೆ. ಅವರು ನಿರಾಕ್ಷೇಪಣಾ ಪತ್ರವನ್ನು ಸಲ್ಲಿಸದಿದ್ದರೂ ಅವರ ಅರ್ಜಿಯನ್ನು ಪರಿಗಣಿಸಲಾಗಿದೆ ಎಂದೂ ಮೂಲಗಳು ಹೇಳಿವೆ.

ರೆಪ್ಕೋ ಬ್ಯಾಂಕ್: ಶೇ20ರಷ್ಟು ಲಾಭಾಂಶ

ಬೆಂಗಳೂರು: ಭಾರತ ಸರ್ಕಾರದ ರೆಪ್ಕೋ ಬ್ಯಾಂಕ್ 2020–21ರ ಆರ್ಥಿಕ ವರ್ಷದಲ್ಲಿ ತನ್ನ ಷೇರುದಾರರಿಗೆ ಶೇ 20ರಷ್ಟು ಲಾಭಾಂಶವನ್ನು ಘೋಷಿಸಿದೆ.

ಚೆನ್ನೈನಲ್ಲಿ ಪ್ರಧಾನ ಕಚೇರಿ ಹೊಂದಿರುವ ಈ ಬ್ಯಾಂಕ್, 2021ರ ಮಾರ್ಚ್ ವೇಳೆಗೆ ₹16,269 ಕೋಟಿ ವಹಿವಾಟು ನಡೆಸಿದೆ.

'ಸ್ಥಿರ ಅಭಿವೃದ್ಧಿಗೆ ಆದ್ಯತೆ ನೀಡಿದ್ದು, ಈ ಆರ್ಥಿಕ ವರ್ಷದಲ್ಲಿ ₹17,500 ಕೋಟಿ ವಹಿವಾಟು ನಡೆಸುವ ಗುರಿ ಹಾಕಿಕೊಂಡಿದೆ' ಎಂದು ಬ್ಯಾಂಕಿನ ವ್ಯವಸ್ಥಾಪಕ ನಿರ್ದೇಶಕ ಆರ್.ಎಸ್. ಇಸಾಬೆಲ್ಲ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

'ಸಂಘ ಪರಿವಾರದವರಿಗೆ ಕುರ್ಚಿ ವ್ಯಾಮೋಹವಿಲ್ಲ'

ರೇಣುಕಾಚಾರ್ಯ

ಬೆಂಗಳೂರು: ರಾಷ್ಟ್ರೀಯ ಸ್ವಯಂಸೇವಕ ಸಂಘ ಯಾವತ್ತೂ ಅಧಿಕಾರಕ್ಕಾಗಿ ಹೋರಾಡಿಲ್ಲ. ಸಮಾಜ ಸೇವೆಗೆ ಸಮರ್ಪಣೆ ಮಾಡಿಕೊಂಡಿರುವ ಆರ್‌ಎಸ್‌ಎಸ್‌ಗೆ ಕುರ್ಚಿ ವ್ಯಾಮೋಹವಿಲ್ಲ ಎಂದು ಮುಖ್ಯಮಂತ್ರಿಯವರ ರಾಜಕೀಯ ಕಾರ್ಯದರ್ಶಿ ಎಂ.ಪಿ. ರೇಣುಕಾಚಾರ್ಯ ಹೇಳಿದರು.

ಆರ್‌ಎಸ್‌ಎಸ್ ಕುರಿತು ವಿರೋಧ ಪಕ್ಷಗಳ ನಾಯಕರು ಮಾಡುತ್ತಿರುವ ಟೀಕೆಗಳಿಗೆ ಶುಕ್ರವಾರ ಪ್ರತಿಕ್ರಿಯಿಸಿದ ಅವರು, 'ಸಿದ್ದರಾಮಯ್ಯ ಮತ್ತು ಎಚ್.ಡಿ. ಕುಮಾರಸ್ವಾಮಿ ಅವರಿಗೆ ಆರ್‌ಎಸ್‌ಎಸ್ ಕುರಿತು ಮಾತನಾಡುವ ನೈತಿಕತೆ ಇಲ್ಲ. ಕುರ್ಚಿ ವ್ಯಾಮೋಹ ಇರುವುದು ಕಾಂಗ್ರೆಸ್– ಜೆಡಿಎಸ್‌ನವರಿಗೆ. ಸಂಘ ಪರಿವಾರದವರಿಗೆ ಅಲ್ಲ' ಎಂದರು.

ಸಿದ್ದರಾಮಯ್ಯ ಮತ ಬ್ಯಾಂಕ್ ಸೃಷ್ಟಿಸಿಕೊಳ್ಳಲು ಟಿಪ್ಪು ಜಯಂತಿ ಮಾಡಿದ್ದರು. ಕಾಂಗ್ರೆಸ್ ಮತ್ತು ಜೆಡಿಎಸ್ ನಾಯಕರು ಮತಕ್ಕಾಗಿ ಆರ್‌ಎಸ್‌ಎಸ್ ವಿರುದ್ಧ ಟೀಕೆ ಮಾಡುತ್ತಿದ್ದಾರೆ. ತಾಲಿಬಾನ್ ಸಂಸ್ಕೃತಿ ಅವರದ್ದು, ಸಂಘ ಪರಿವಾರದ್ದಲ್ಲ ಎಂದರು.

ಬಿಎಸ್‌ವೈಗೆ ಸಂಬಂಧವಿಲ್ಲ: 'ಯಡಿಯೂರಪ್ಪ ಅವರನ್ನು ಮೂಲೆಗುಂಪು ಮಾಡಲು ಆದಾಯ ತೆರಿಗೆ ಅಧಿಕಾರಿಗಳ ದಾಳಿ ನಡೆದಿದೆ ಎಂಬುದು ಸತ್ಯಕ್ಕೆ ದೂರ. ದಾಳಿ ನಡೆದಿರುವುದು ಉಮೇಶ್ ಮೇಲೆ. ಅದಕ್ಕೂ ಯಡಿಯೂರಪ್ಪ ಅವರಿಗೂ ಸಂಬಂಧವಿಲ್ಲ' ಎಂದು ಪ್ರಶ್ನೆಯೊಂದಕ್ಕೆ ಉತ್ತರಿಸಿದರು.

ಸಂಕ್ಷಿಪ್ತ ಸುದ್ದಿ

ಪಾದಚಾರಿ ಮಾರ್ಗ ಒತ್ತುವರಿ ತೆರವು

ಬೆಂಗಳೂರು: ಮಹದೇವಪುರ ವಲಯದ ವಿವಿಧ ರಸ್ತೆಗಳಲ್ಲಿ ಪಾದಚಾರಿ ಮಾರ್ಗ ಒತ್ತುವರಿ ತೆರವು ಕಾರ್ಯಾಚರಣೆಯನ್ನು ಬಿಬಿಎಂಪಿ ನಡೆಸಿದ್ದು, 72 ತಾತ್ಕಾಲಿಕ ಮತ್ತು 2 ಶಾಶ್ವತ ಒತ್ತುವರಿ ತೆರವುಗೊಳಿಸಿದೆ.

'ಗ್ರೀನ್‌ಗ್ಲೆನ್ ಲೇಔಟ್ ರಸ್ತೆಯಲ್ಲಿ ಸುಮಾರು 3 ಕಿಲೋ ಮೀಟರ್ ಉದ್ದದ ಪಾದಚಾರಿ ಮಾರ್ಗ ಒತ್ತುವರಿಯಾಗಿತ್ತು. ಅಲ್ಲಿ ರಸ್ತೆ ಬದಿ ನಿರ್ಮಾಣವಾಗಿದ್ದ 30 ತಾತ್ಕಾಲಿಕ ಹಾಗೂ 2 ಶಾಶ್ವತ ಒತ್ತುವರಿ ತೆರವುಗೊಳಿಸಲಾಗಿದೆ' ಎಂದು ಬಿಬಿಎಂಪಿ ಮಹದೇವಪುರ ವಲಯ ಮುಖ್ಯ ಎಂಜಿನಿಯರ್ ಆರ್.ಎಲ್.ಪರಮೇಶ್ವರಯ್ಯ ತಿಳಿಸಿದ್ದಾರೆ.

ಮಾರತಹಳ್ಳಿ ಯಮಲೂರು ಸಿಗ್ನಲ್‌ನಿಂದ ಮಾರತಹಳ್ಳಿ ಮೇಲ್ಸೇತುವೆ ತನಕ ಒಂದೂವರೆ ಕಿಲೋ ಮೀಟರ್‌ನಲ್ಲಿ 22 ತಾತ್ಕಾಲಿಕ ಒತ್ತುವರಿ, ಅಯ್ಯಪ್ಪನಗರ ಮುಖ್ಯ ರಸ್ತೆಯಿಂದ ಹೂಡಿ ಮೇಲ್ಸೇತುವೆ ತನಕ 1.2 ಕಿ.ಮೀನಲ್ಲಿ 11 ತಾತ್ಕಾಲಿಕ ಒತ್ತುವರಿ, ಗರುಡಾಚಾರಿ ಪಾಳ್ಯ ಐಟಿಪಿಎಲ್ ಮುಖ್ಯ ರಸ್ತೆಯಿಂದ ಬಸವಣ್ಣನಗರ ತನಕದ 1.1 ಕಿ.ಮೀಯಲ್ಲಿ 9 ತಾತ್ಕಾಲಿಕ ಒತ್ತುವರಿ ತೆರವುಗೊಳಿಸಲಾಗಿದೆ ಎಂದು ವಿವರಿಸಿದ್ದಾರೆ.

ಭಾರತ್ ರಕ್ಷಕ್ ಫೌಂಡೇಷನ್: ತರಬೇತಿ

ಭಾರತ್ ರಕ್ಷಕ್ ಫೌಂಡೇಷನ್‌ನ ಉದ್ಘಾಟನಾ ಕಾರ್ಯಕ್ರಮದಲ್ಲಿ (ಎಡದಿಂದ)ಬ್ರಿಗೇಡಿಯರ್ ರವಿ ಮುನಿಸ್ವಾಮಿ, ಸುಜಾತಾ, ಮೇಜರ್ ಎನ್.ರಘುರಾಮ್ ರೆಡ್ಡಿ ಹಾಗೂ ರಾಜಲಕ್ಷ್ಮಿ ಭಾಗವಹಿಸಿದ್ದರು.

ಬೆಂಗಳೂರು: ಸೇನೆ ಮತ್ತು ಪೊಲೀಸ್ ಇಲಾಖೆಗೆ ಸೇರಲು ಇಚ್ಛಿಸುವ ಗ್ರಾಮೀಣ ಹಾಗೂ ನಗರ ಭಾಗದ ವಿದ್ಯಾರ್ಥಿಗಳಿಗೆ ಸೇನಾ ತರಬೇತಿ ಕೇಂದ್ರದ ಮೂಲಕ ತರಬೇತಿ ನೀಡಲು ಭಾರತ್ ರಕ್ಷಕ್ ಫೌಂಡೇಷನ್ ಮುಂದಾಗಿದೆ.

'ಮೊದಲು ಭಾರತಕ್ಕಾಗಿ ನಾವು–ನಂತರ ಭಾರತ ನಮಗಾಗಿ' ಎನ್ನುವ ಪರಿಕಲ್ಪನೆಯಡಿ ಈ ಪ್ರತಿಷ್ಠಾನ ಸ್ಥಾಪನೆಯಾಗಿದೆ. ಗ್ರಾಮೀಣ ಪ್ರದೇಶದ ಮಕ್ಕಳಿಗೆ ಸೇನೆಗೆ ಸೇರಲು ಸೂಕ್ತ ಸೈನಿಕ ತರಬೇತಿ ನೀಡುವ ಉದ್ದೇಶ ಹೊಂದಿದ್ದೇವೆ' ಎಂದು ಸಂಸ್ಥೆಯ ಜಂಟಿ ಕಾರ್ಯದರ್ಶಿ ಬ್ರಿಗೇಡಿಯರ್ ರವಿ ಮುನಿಸ್ವಾಮಿ ತಿಳಿಸಿದರು.

ಅಧ್ಯಕ್ಷ ಮೇಜರ್ ಎನ್. ರಘುರಾಮ್ ರೆಡ್ಡಿ,'ಬಡ ಮಕ್ಕಳಿಗೆ ಕೌಶಲ ಅಭಿವೃದ್ಧಿಗೆ ಆದ್ಯತೆ ನೀಡುವ ಜತೆಗೆ ಸೇನೆಯಲ್ಲಿ ಕೆಲಸ ಸಿಕ್ಕದಿದ್ದರೆ, ಕಾರ್ಖಾನೆಗಳಲ್ಲಿ ಕೆಲಸ ಕೊಡಿಸುವ ಬಗ್ಗೆಯೂ ಕ್ರಮ ಕೈಗೊಳ್ಳುತ್ತೇವೆ' ಎಂದು ಹೇಳಿದರು.

ವಿಳಾಸ:ಭಾರತ್ ರಕ್ಷಕ್ ಫೌಂಡೇಷನ್, ಚಾಮುಂಡಿ ಬಡಾವಣೆ, ವಿದ್ಯಾರಣ್ಯಪುರ.

ಸಂಪರ್ಕ:9449888085

ಇಂದಿನಿಂದ ವಿದ್ಯುತ್ ವ್ಯತ್ಯಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಸ್ಕಾಂ ವಿದ್ಯುತ್ ಕೇಂದ್ರಗಳಲ್ಲಿ ತುರ್ತು ಕಾರ್ಯನಿರ್ವಹಣೆ ಕೈಗೆತ್ತಿಕೊಂಡಿರುವುದರಿಂದ ಅ.9ರಿಂದ 12ರವರೆಗೆ ನಗರದ ವಿವಿಧೆಡೆ ವಿದ್ಯುತ್ ವ್ಯತ್ಯಯ ಆಗಲಿದೆ ಎಂದು ಪ್ರಕಟಣೆ ತಿಳಿಸಿದೆ.

ವ್ಯತ್ಯಯವಾಗುವ ಸ್ಥಳಗಳು:- 9ಮತ್ತು 10ರಂದು ಬೊಮ್ಮಸಂದ್ರ ಮುಖ್ಯರಸ್ತೆ, ತಿಮ್ಮಸಂದ್ರ, ಆದೂರು, ಮಾಯಸಂದ್ರ, ಅತ್ತಿಬೆಲೆ, 11ರಂದು ಪುಟ್ಟೇನಹಳ್ಳಿ, ಪದ್ಮನಾಭ ನಗರ, ಜೆ.ಪಿ.ನಗರ, ಬನಶಂಕರಿ 5ನೇ ಹಂತ, ಪುಟ್ಟೇನಹಳ್ಳಿ (ಬೆಳಿಗ್ಗೆ 8ರಿಂದ ಸಂಜೆ 5).

ಅ.12ರಂದು ರಾಮಗೊಂಡನಹಳ್ಳಿ, ಮಹಾಲಕ್ಷ್ಮಿ ಬಡಾವಣೆ, ಅವಲಹಳ್ಳಿ, ಸಿಂಗನಾಯಕನಹಳ್ಳಿ, ನಾಗೇನಹಳ್ಳಿ, ಕೋಗಿಲು, ಕಟ್ಟಿಗೇನಹಳ್ಳಿ, ದ್ವಾರಕಾನಗರ, ಯಲಹಂಕ ಹಳೆಯ ಟೌನ್ (ಬೆಳಿಗ್ಗೆ 10ರಿಂದ ಮಧ್ಯಾಹ್ನ 3)

ಬಾಗಲೂರಿನ ಕರ್ನಾಟಕ ಪಬ್ಲಿಕ್ ಶಾಲೆ

ಹೆಚ್ಚುವರಿ ಶಾಲಾ ಕೊಠಡಿಗಳ ಉದ್ಘಾಟನೆ

ಪ್ರಜಾವಾಣಿ ವಾರ್ತೆ

ಕರ್ನಾಟಕ ಪಬ್ಲಿಕ್ ಶಾಲೆಯ ಆವರಣದಲ್ಲಿ ಗುರುವಾರ ಉದ್ಘಾಟನೆಗೊಂಡ ಸರ್ಕಾರಿ ಪದವಿಪೂರ್ವ ಕಾಲೇಜಿನ ನೂತನ ಕಟ್ಟಡ.

ಯಲಹಂಕ: ಬಾಗಲೂರಿನ ಕರ್ನಾಟಕ ಪಬ್ಲಿಕ್ ಶಾಲೆಯ ಆವರಣದಲ್ಲಿ ₹1.70 ಕೋಟಿ ವೆಚ್ಚದಲ್ಲಿ ನೂತನವಾಗಿ ನಿರ್ಮಿಸಿರುವ ಸರ್ಕಾರಿ ಪದವಿಪೂರ್ವ ಕಾಲೇಜಿನ 10 ಹೆಚ್ಚುವರಿ ಕೊಠಡಿಗಳನ್ನು ಶಾಸಕ ಕೃಷ್ಣಬೈರೇಗೌಡ ಉದ್ಘಾಟಿಸಿದರು.

ನಂತರ ಮಾತನಾಡಿದ ಅವರು, 'ಖಾಸಗಿ ಕಾಲೇಜುಗಳ ಕೊಠಡಿಗಳನ್ನು ಮೀರಿಸುವಂತೆ ಇಲ್ಲಿ ಸುಸಜ್ಜಿತ ಕೊಠಡಿಗಳನ್ನು ನಿರ್ಮಿಸಲಾಗಿದೆ. ಕಳೆದ 4 ವರ್ಷದ ಹಿಂದೆ ಕೇವಲ 60 ಮಕ್ಕಳು ವ್ಯಾಸಂಗ ಮಾಡುತ್ತಿದ್ದ ಈ ಕಾಲೇಜಿನಲ್ಲಿ ಇಂದು 375 ಮಕ್ಕಳು ದಾಖಲಾಗಿದ್ದಾರೆ. ಏರಿಕೆಯಾದ ಮಕ್ಕಳ ಸಂಖ್ಯೆಗೆ ಅನುಗುಣವಾಗಿ ಉತ್ತಮ ಮೂಲಸೌಕರ್ಯ ಕಲ್ಪಿಸಬೇಕೆಂಬ ಉದ್ದೇಶದಿಂದ ಹೆಚ್ಚುವರಿ ಕೊಠಡಿಗಳನ್ನು ನಿರ್ಮಿಸಲಾಗಿದೆ. ಅಲ್ಲದೆ ಇನ್ನೂ 10 ಕೊಠಡಿಗಳನ್ನು ನಿರ್ಮಿಸಲು ₹2 ಕೋಟಿ ಅನುದಾನ ಮಂಜೂರು ಮಾಡಿಸಲಾಗಿದ್ದು, ಶೀಘ್ರದಲ್ಲೇ ಗುದ್ದಲಿಪೂಜೆ ನೆರವೇರಿಸಲಾಗುವುದು' ಎಂದು ತಿಳಿಸಿದರು.

ಗ್ರಾಮ ಪಂಚಾಯಿತಿ ಅಧ್ಯಕ್ಷ ಜೆ.ಮುನೇಗೌಡ ಮಾತನಾಡಿ, 'ಈ ಕಾಲೇಜಿಗೆ ಸೇರಿದ 17 ಎಕರೆ ಜಾಗವಿದ್ದು, ಇದರಲ್ಲಿ ಈಗ 13 ಎಕರೆ ಮಂಜೂರಾಗಿದೆ. ಉಳಿದಜಾಗಕ್ಕೆ ನಕಾಶೆ ತಯಾರಿಸಿ ಪದವಿ ಕಾಲೇಜಿಗಾಗಿ ಮಂಜೂರು ಮಾಡಿಸಬೇಕು' ಎಂದು ಶಾಸಕರಿಗೆ ಮನವಿ ಮಾಡಿದರು.

ಪದವಿಪೂರ್ವಶಿಕ್ಷಣ ಇಲಾಖೆಯ ಬೆಂಗಳೂರು ಉತ್ತರಜಿಲ್ಲಾ ಉಪನಿರ್ದೇಶಕ ಜಿ.ಕೆ.ಶ್ರೀರಾಮ್, ಮುಖಂಡರಾದ ಕೆ.ಅಶೋಕನ್, ದಾನೇಗೌಡ, ಬಿ.ಕೆ.ಮಂಜುನಾಥಗೌಡ, ಎಂ.ಜಯಗೋಪಾಲಗೌಡ, ಎನ್.ಎನ್.ಶ್ರೀನಿವಾಸಯ್ಯ, ಪ್ರಾಂಶುಪಾಲ ನಿಂಗರಾಜು, ಶಾಲಾಭಿವೃದ್ಧಿ ಸಮಿತಿ ಅಧ್ಯಕ್ಷ ರವಿಕುಮಾರ್ ಉಪಸ್ಥಿತರಿದ್ದರು.

ಸುಭಾಷಿತ

ಜೀವನದಲ್ಲಿ ಅನುಭವವು ಮಹತ್ತರವಾದುದು.
ತಪ್ಪುಗಳಿಗೂ ಮೌಲ್ಯ ಇರುತ್ತದೆ. –ಹೆನ್ರಿ ಫೋರ್ಡ್

ಹುಸಿ ಭರವಸೆಗಳು ಬೇಡ ಕಾಶ್ಮೀರದಲ್ಲಿ ಹಿಂಸೆ ನಿಲ್ಲಲಿ

ಪ್ರವಾಸಿಗರ ಸ್ವರ್ಗ ಎಂದೇ ಕರೆಸಿಕೊಳ್ಳುತ್ತಿದ್ದ ಕಾಶ್ಮೀರದಲ್ಲಿ ಮತ್ತೆ ಉಗ್ರರ ಹಿಂಸಾ ಪ್ರವೃತ್ತಿ ಮುಂದುವರಿದಿದೆ. ಜಮ್ಮು ಮತ್ತು ಕಾಶ್ಮೀರಕ್ಕೆ ಸಂವಿಧಾನದ 370ನೇ ವಿಧಿ ಅಡಿ ನೀಡಲಾಗಿದ್ದ ವಿಶೇಷ ಸ್ಥಾನವನ್ನು 2019ರ ಆಗಸ್ಟ್‌ನಲ್ಲಿ ರದ್ದುಗೊಳಿಸಿದ ಬಳಿಕ 'ಕಾಶ್ಮೀರದಲ್ಲಿ ಬದಲಾವಣೆಯ ಗಾಳಿ ಬೀಸಲಿದೆ' ಎಂದು ಕೇಂದ್ರ ಸರ್ಕಾರ ನೀಡಿದ್ದ ಭರವಸೆ ಹುಸಿಯಾಗಿದೆ. ಎಲ್ಲ ರೀತಿಯ ಉಗ್ರ ಚಟುವಟಿಕೆಗಳನ್ನು ಮಟ್ಟ ಹಾಕುವ ಭರವಸೆ ನೀಡಿದ್ದ ಸರ್ಕಾರ, ಅದನ್ನು ಈಡೇರಿಸುವಲ್ಲಿ ವಿಫಲವಾಗಿದೆ. ಕಾಶ್ಮೀರ ಕಣಿವೆಯಲ್ಲಿ ನಾಗರಿಕರ ಹತ್ಯೆ ಪ್ರಕರಣಗಳು ಆಗಾಗ ವರದಿಯಾಗುತ್ತಲೇ ಇವೆ. ಈ ವರ್ಷ ಉಗ್ರರ ಗುಂಡಿಗೆ ಬಲಿಯಾದ ನಾಗರಿಕರ ಸಂಖ್ಯೆ 25ಕ್ಕೂ ಹೆಚ್ಚು ಎನ್ನುವುದು ಅಲ್ಲಿ ನಡೆದಿರುವ ಹಿಂಸಾಚಾರಕ್ಕೆ, ಅದನ್ನು ತಡೆಯಲು ಸರ್ಕಾರ ವಿಫಲವಾದುದಕ್ಕೆ ಸಾಕ್ಷಿ. ಐದು ದಿನಗಳಲ್ಲಿ ಏಳು ಮಂದಿ ನಾಗರಿಕರ ಹತ್ಯೆಯಾಗಿದೆ. ಅದರಲ್ಲೂ ಶ್ರೀನಗರ ಮತ್ತು ಬಂಡಿಪೊರಾ ಪ್ರದೇಶಗಳಲ್ಲಿ 48 ಗಂಟೆಗಳಲ್ಲಿ ಮೂವರು ನಾಗರಿಕರನ್ನು ಹತ್ಯೆ ಮಾಡಲಾಗಿದೆ. ನಾಗರಿಕರ ಜೊತೆಗೆ ಈ ವರ್ಷ ಭದ್ರತಾ ಪಡೆಯ 20 ಸಿಬ್ಬಂದಿ ಸಹ ಹತ್ಯೆಗೀಡಾಗಿದ್ದಾರೆ. ಈ ಎಲ್ಲ ಘಟನೆಗಳು, ಕೇಂದ್ರ ಸರ್ಕಾರ ಹೇಳಿಕೊಳ್ಳುತ್ತಿರುವಂತೆ ಅಲ್ಲಿನ ಪರಿಸ್ಥಿತಿಯಲ್ಲಿ ಮಹತ್ವದ ಬದಲಾವಣೆ ಆಗಿಲ್ಲ ಎಂಬುದನ್ನು ಹೇಳುತ್ತವೆ. ಜಮ್ಮು ಮತ್ತು ಕಾಶ್ಮೀರಕ್ಕೆ ನೀಡಿದ್ದ ವಿಶೇಷ ಸ್ಥಾನಮಾನವನ್ನು ರದ್ದುಗೊಳಿಸಿ ಈ ರಾಜ್ಯವನ್ನು ವಿಭಾಗಿಸಿ ಕೇಂದ್ರಾಡಳಿತ ಪ್ರದೇಶಗಳನ್ನಾಗಿ ಮಾಡಿದ ಬಳಿಕ ಅಭಿವೃದ್ಧಿಯ ಮಹಾಪರ್ವವನ್ನೇ ನಡೆಸಲಾಗಿದೆ, ಶಾಂತಿ ನೆಲೆಸುವಂತೆ ನೋಡಿಕೊಳ್ಳಲಾಗಿದೆ ಎಂಬ ಕೇಂದ್ರ ಸರ್ಕಾರದ ಮಾತು ಸಂಪೂರ್ಣ ಸತ್ಯವಲ್ಲ ಎನ್ನುವುದು ಎದ್ದು ಕಾಣುತ್ತದೆ.

ಕಾಶ್ಮೀರ ಕಣಿವೆಯಲ್ಲಿ ಶಾಂತಿ ಸ್ಥಾಪನೆ ಮಾಡುವುದು ಅತ್ಯಂತ ಜರೂರಿನ ಕೆಲಸ. ಅದನ್ನು ಕೇಂದ್ರ ಸರ್ಕಾರ ಆದ್ಯತೆಯ ಮೇಲೆ ಮಾಡಬೇಕು

ಕೇಂದ್ರ ಸಚಿವರು ನಿರಂತರವಾಗಿ ಕಾಶ್ಮೀರಕ್ಕೆ ಭೇಟಿ ನೀಡುತ್ತಲೇ ಇದ್ದಾರೆ. ಜೊತೆಗೆ ಭದ್ರತೆಯನ್ನೂ ವಿಪರೀತ ಎನ್ನುವಷ್ಟರ ಮಟ್ಟಿಗೆ ಹೆಚ್ಚಿಸಲಾಗಿದೆ. ಆದರೂ ನಾಗರಿಕರ ಹತ್ಯೆ ನಡೆಯುತ್ತಿರುವುದನ್ನು ಭದ್ರತೆಯ ಲೋಪ ಎನ್ನದೇ ವಿಧಿ ಇಲ್ಲ. ದಾಳಿಯನ್ನು ಮುಂಚಿತವಾಗಿ ಗ್ರಹಿಸುವಷ್ಟು ಬೇಹುಗಾರಿಕೆ ಕೂಡ ಚುರುಕಿನಿಂದ ಕೂಡಿಲ್ಲ ಎನ್ನುವುದನ್ನೂ ಇದು ತೋರಿಸುತ್ತದೆ. 2019ರಲ್ಲಿ 36 ನಾಗರಿಕರು, 78 ಭದ್ರತಾ ಸಿಬ್ಬಂದಿ, 2020ರಲ್ಲಿ 33 ನಾಗರಿಕರು, 46 ಭದ್ರತಾ ಸಿಬ್ಬಂದಿ ಉಗ್ರರಿಂದ ಹತ್ಯೆಗೀಡಾಗಿದ್ದಾರೆ. ಕಾಶ್ಮೀರ ಬೂದಿ ಮುಚ್ಚಿದ ಕೆಂಡದಂತೆ ಇದೆಯೇ ವಿನಾ ಅಲ್ಲಿ ನಿಜವಾದ ಶಾಂತಿ ಸ್ಥಾಪನೆಯಾಗಿಲ್ಲ ಎನ್ನುವುದಕ್ಕೆ ಬೇರೆ ಯಾವ ಪುರಾವೆ ಬೇಕು? ಕಾಶ್ಮೀರಕ್ಕೆ ಬರುವ ಪ್ರವಾಸಿಗರು ಹಾಗೂ ನಾಗರಿಕರಿಗೆ ಉಗ್ರರು ತೊಂದರೆ ಕೊಡುವುದಿಲ್ಲ ಎಂದೇ ಭಾವಿಸಲಾಗಿತ್ತು. ಈಗ ಆ ನಂಬಿಕೆಯೂ ಸುಳ್ಳಾಗಿದೆ. ಪಾಕಿಸ್ತಾನ ಕೇಂದ್ರಿತವಾಗಿ ಕಾರ್ಯಾಚರಣೆ ನಡೆಸುವ ಲಷ್ಕರ್ ಎ ತಯಬಾ ಉಗ್ರಗಾಮಿ ಸಂಘಟನೆಯ ದಿ ರೆಸಿಸ್ಟೆನ್ಸ್ ಫ್ರಂಟ್ (ಟಿಆರ್‌ಎಫ್) ಎಂಬ ಗುಂಪು ಈ ವರ್ಷ ಕಾಶ್ಮೀರದಲ್ಲಿ ನಡೆದ ನಾಗರಿಕರ ಹತ್ಯೆಯ ಹೊಣೆಯನ್ನು ಹೊತ್ತುಕೊಂಡಿದೆ. 'ಟಿಆರ್‌ಎಫ್ ಕರಾಚಿಯಿಂದ ಕಾರ್ಯನಿರ್ವಹಿಸುತ್ತಿದೆ. ಅದನ್ನು ಮಟ್ಟ ಹಾಕಲಾಗುವುದು' ಎಂದು ಜಮ್ಮು ಮತ್ತು ಕಾಶ್ಮೀರದ ಪೊಲೀಸ್ ಪಡೆ ಮುಖ್ಯಸ್ಥ ದಿಲ್‌ಬಾಗ್ ಸಿಂಗ್ ಹೇಳಿದ್ದಾರೆ. ನಾಗರಿಕರ ಹತ್ಯೆ ನಡೆದಾಗಲೆಲ್ಲಾ ಪೊಲೀಸರು ಮತ್ತು ಭದ್ರತಾ ಪಡೆಗಳು ಇಂತಹ ಹೇಳಿಕೆ ನೀಡುವುದು ಮಾಮೂಲಾಗಿದೆ. ಕಣಿವೆಯ ನಾಗರಿಕರು ಮಾತ್ರ ಉಗ್ರರ ಗುಂಡಿಗೆ ಬಲಿಯಾಗುತ್ತಲೇ ಇದ್ದಾರೆ. ಉಗ್ರರನ್ನು ಮಟ್ಟ ಹಾಕಲು ಕೇಂದ್ರ ಸರ್ಕಾರ ಕಠಿಣ ಕ್ರಮ ಕೈಗೊಳ್ಳಬೇಕು. ನಾಗರಿಕರಿಗೆ ಭದ್ರತೆ ಒದಗಿಸುವುದು ಸರ್ಕಾರದ ಪಾಲಿಗೆ ಬಾಯಿ ಉಪಚಾರದ ಮಾತಾಗದೆ ತಳಮಟ್ಟದಲ್ಲಿ ಕ್ರಿಯೆಯಲ್ಲಿ ಕಾಣಬೇಕು. ಕಾಶ್ಮೀರದ ಜನತೆಯಲ್ಲಿ ವಿಶ್ವಾಸವನ್ನು ಮೂಡಿಸುವ ಕೆಲಸವನ್ನೂ ಮಾಡಬೇಕು. ಈ ಪ್ರದೇಶದಲ್ಲಿ ಪ್ರಜಾಸತ್ತಾತ್ಮಕ ಪ್ರಕ್ರಿಯೆಗಳು ನಡೆಯುವಂತೆಯೂ ನೋಡಿಕೊಳ್ಳಬೇಕು. ಜಮ್ಮು, ಕಾಶ್ಮೀರವನ್ನು ಕಟ್ಟುವ ಕೆಲಸದಲ್ಲಿ ನಾಗರಿಕರನ್ನೂ ಬಳಸಿಕೊಳ್ಳಬೇಕು. ಮಿಲಿಟರಿ ಪ್ರಯೋಗದಿಂದಲೇ ಅಲ್ಲಿ ಶಾಂತಿ ಸ್ಥಾಪನೆ ಮಾಡಲಾಗುವುದು ಎಂಬ ಭ್ರಮೆಯನ್ನು ಬಿಡಬೇಕು. ಸೌಹಾರ್ದ ನಡೆಗಳ ಮೂಲಕ ಹೊಸ ಬೆಳಕು ಮೂಡುವಂತೆ ಮಾಡಬೇಕು. ಅಂದಾಗಲಷ್ಟೇ ಅಲ್ಲಿ ಶಾಂತಿ ನೆಲೆಸಲು ಸಾಧ್ಯ.

ಕಾಶ್ಮೀರಿ ಪಂಡಿತರು ಮತ್ತೆ ಕಾಶ್ಮೀರಕ್ಕೆ ಬರುತ್ತಿರುವುದರಿಂದ ನಾಗರಿಕರ ಹತ್ಯೆ ನಡೆಯುತ್ತಿದೆ, ಈ ಪ್ರದೇಶದಲ್ಲಿ ಕೋಮು ಸೌಹಾರ್ದ ಹಾಳುಗೆಡಹುವುದಕ್ಕಾಗಿಯೂ ಇಂತಹ ಕೃತ್ಯಗಳು ನಡೆಯುತ್ತಿವೆ ಎಂಬ ಮಾತುಗಳೂ ಕೇಳಿಬರುತ್ತಿವೆ. ಇವುಗಳ ಸತ್ಯಾಸತ್ಯತೆಯನ್ನು ಮನಗಾಣಬೇಕು. ನಮ್ಮ ಪಕ್ಕದ ದೇಶವಾದ ಅಫ್ಗಾನಿಸ್ತಾನದಲ್ಲಿ ಇತ್ತೀಚೆಗೆ ನಡೆದ ರಾಜಕೀಯ ವಿದ್ಯಮಾನಗಳೂ ಕಾಶ್ಮೀರದ ಈಗಿನ ಅವಘಡಗಳಿಗೆ ಕಾರಣ ಎಂದೂ ಹೇಳಲಾಗುತ್ತಿದೆ. ಇಂತಹ ಘಟನೆಗಳನ್ನು ಎಲ್ಲ ನೆಲೆಗಳಿಂದಲೂ ವಿಶ್ಲೇಷಣೆಗೆ ಒಳಪಡಿಸಬೇಕು. ಜಮ್ಮು ಮತ್ತು ಕಾಶ್ಮೀರದ ಜನರಿಗೆ ಹಿಂಸೆ ಬೇಕಾಗಿಲ್ಲ. ಶಾಂತಿ ಬೇಕು. ಕಣಿವೆಯಲ್ಲಿ ಶಾಂತಿ ಸ್ಥಾಪನೆ ಮಾಡುವುದು ಅತ್ಯಂತ ಜರೂರಿನ ಕೆಲಸ. ಅದನ್ನು ಕೇಂದ್ರ ಸರ್ಕಾರ ಆದ್ಯತೆಯ ಮೇಲೆ ಮಾಡಬೇಕು. ಎಲ್ಲ ರೀತಿಯ ರಾಜತಾಂತ್ರಿಕ ಕಸರತ್ತುಗಳನ್ನು ನಡೆಸಿ ಈ ಗುರಿ ತಲುಪಬೇಕು.

ಪಾರಂಪರಿಕ ವಿವೇಕದ ಮರೆವು, ವಿಜ್ಞಾನದ ಅವಗಣನೆ ಹಾಗೂ ಧ್ವಂಸಗೊಳ್ಳುತ್ತಿರುವ ಸಂವಿಧಾನದ ಆಶಯ

ಬದುಕು ಭಕ್ಷಿಸುವ ಅಭಿವೃದ್ಧಿ ಮಾಯೆ

ವಿಶ್ಲೇಷಣೆ

ಡಾ. ಕೇಶವ ಎಚ್. ಕೊರ್ಸೆ

ಗೋಡೆಯ ಮೇಲಣ ಬರಹ ಸ್ಪಷ್ಟವಾಗಿದೆ. ಪರಿಸರ ವಿಜ್ಞಾನಿಗಳು ಹಾಗೂ ಸಮಾಜಮುಖಿ ಚಿಂತಕರು ಈವರೆಗೆ ಹೇಳುತ್ತಿದ್ದ 'ಪರಿಸರನಾಶವು ನಮ್ಮನ್ನು ವಿನಾಶಕ್ಕೆ ಒಯ್ಯುತ್ತಲಿದೆ' ಎಂಬ ಮಾತನ್ನು, ಇದೀಗ ಅರ್ಥಶಾಸ್ತ್ರಜ್ಞರೇ ಖಚಿತವಾಗಿ ಹೇಳುತ್ತಿದ್ದಾರೆ. ಅಂತರರಾಷ್ಟ್ರೀಯ ಮಾನ್ಯತೆಯ 'ಕಾರ್ಬನ್ ಡಿಸ್‌ಕ್ಲೋಸರ್ ಪ್ರಾಜೆಕ್ಟ್' (ಸಿ.ಡಿ.ಪಿ.) ಸಂಸ್ಥೆಯ ಅರ್ಥಶಾಸ್ತ್ರಜ್ಞರ ಅಧ್ಯಯನ ವರದಿಯು ಇತ್ತೀಚೆಗೆ ಪ್ರಕಟವಾಗಿದೆ. ಅದರ ಪ್ರಕಾರ, ನಮ್ಮ ದೇಶದ ಒಟ್ಟೂ ತಲಾದಾಯದ ಶೇ 12.7ರಷ್ಟು ಹವಾಮಾನ ಬದಲಾವಣೆಯ ಪರಿಣಾಮವಾಗಿ ಈಗಾಗಲೇ ನಷ್ಟವಾಗುತ್ತಿದೆ ಹಾಗೂ ಪ್ರಕೃತಿ ವಿಕೋಪದಿಂದಾಗಿ ಮುಂದಿನ ಐದು ದಶಕಗಳ ಕಾಲ ಒಟ್ಟೂ ಆದಾಯದ ಕನಿಷ್ಠ ಶೇ 5.5ರಷ್ಟು ಪ್ರತಿವರ್ಷ ಕುಸಿಯಲಿದೆ.

ನಮ್ಮ ಆರ್ಥಿಕತೆಯ ಮೂಲಸ್ತಂಭಗಳಾದ ಕೃಷಿ (ಶೇ 20), ಕೈಗಾರಿಕೆ (ಶೇ 26) ಹಾಗೂ ಸೇವಾಕ್ಷೇತ್ರ (ಶೇ 54) ಎಲ್ಲವೂ ನಷ್ಟ ಅನುಭವಿಸಲಿವೆ ಎಂಬುದನ್ನು ನೀತಿ ಆಯೋಗವೂ ಒಪ್ಪಿದೆ. ಅಂದರೆ, ಸರ್ಕಾರವು ಸಾಧಿಸಲು ಯತ್ನಿಸುತ್ತಿರುವ ವೇಗದ ಆರ್ಥಿಕ ಅಭಿವೃದ್ಧಿ ದರದ ಆಶಯಗಳೆಲ್ಲವೂ ನೆರೆ-ಬರ, ಭೂಕುಸಿತ, ಸಾಂಕ್ರಾಮಿಕಗಳು, ಸಿಹಿನೀರಿನ ಕೊರತೆ, ತಾಪಮಾನ ಹೆಚ್ಚಳ, ಬಿಸಿಗಾಳಿಯಂತಹ ಪ್ರಾಕೃತಿಕ ವಿಕೋಪಗಳೆದುರು ಕರಗಿಹೋಗುತ್ತಿವೆ. ನಿಸರ್ಗನಾಶದ ಪರಿಣಾಮವನ್ನು ದಕ್ಕಿಸಿಕೊಂಡೂ ಆರ್ಥಿಕವಾಗಿ ಬೆಳೆಯಬಹುದೆಂಬ ಭ್ರಮೆಯ ಬಲೂನುಗಳು ಒಡೆಯುತ್ತಿವೆ!

ಕಳೆದ ಮೂರು ದಶಕಗಳಲ್ಲಾದ ಸಾಮಾಜಿಕ-ಆರ್ಥಿಕ ವಿಪ್ಲವಗಳನ್ನು ಬಲ್ಲ ಯಾರಿಗೂ ಅರ್ಥಶಾಸ್ತ್ರಜ್ಞರ ಈ ಎಚ್ಚರ ಆಶ್ಚರ್ಯ ಉಂಟುಮಾಡುತ್ತಿಲ್ಲ. ನೈಸರ್ಗಿಕ ಸಂಪನ್ಮೂಲಗಳ ಚಲನೆಯ ಚಕ್ರೀಯ ವ್ಯವಸ್ಥೆಗಳನ್ನು ಮುರಿಯುತ್ತ, ನಿಸರ್ಗದ ಧಾರಣಾ ಸಾಮರ್ಥ್ಯವನ್ನೂ ಮೀರಿ ಆರ್ಥಿಕತೆ ಬೆಳೆಯತೊಡಗಿ ದಶಕಗಳೇ ಕಳೆದಿವೆ. ಬಹು ಆಯಾಮಗಳ ಸಂಶೋಧನೆಗಳು ಇವನ್ನು ದಾಖಲಿಸುತ್ತಲೇ ಇವೆ. ಅವುಗಳ ಆಧಾರದಲ್ಲಿ, ಪರಿಸರನಾಶವನ್ನು ತಗ್ಗಿಸುವ ಹಲವು ಜಾಗತಿಕ ಒಪ್ಪಂದಗಳು ಹಾಗೂ ರಾಷ್ಟ್ರೀಯ ಕಾನೂನುಗಳು ಜಾರಿಗೆ ಬಂದಿವೆ. ಆದರೆ, ಆ ಸುಸ್ಥಿರ ಅಭಿವೃದ್ಧಿ ಆಶಯಗಳನ್ನೆಲ್ಲ ಯೋಜನೆಗಳ ತಳಮಟ್ಟದ ಅನುಷ್ಠಾನದಲ್ಲಿ ಅಳವಡಿಸಲು ಬೇಕಾದ ಶ್ರದ್ಧೆ ಹಾಗೂ ಕಾರ್ಯತಂತ್ರಗಳು ಸರ್ಕಾರಿ ಯಂತ್ರದಲ್ಲಿ ಕಳೆದುಹೋಗಿವೆ. ಅದನ್ನು ಎಚ್ಚರಿಸಲು ಪ್ರಯತ್ನಿಸಬೇಕಿದ್ದ ನಾಗರಿಕ ಜಗತ್ತು ಹಾಗೂ ಮಾಧ್ಯಮಗಳ ನೈಜ ಧ್ವನಿಗಳು ಸಹ, ಆರ್ಥಿಕ ಉದಾರೀಕರಣ ತಂದಿಡುತ್ತಿರುವ ಭೋಗಸಂಸ್ಕೃತಿಯಲ್ಲಿ ಉಡುಗಿಹೋಗುತ್ತಿವೆ. ಜನಸಾಮಾನ್ಯರಾದರೋ ಅತ್ತ ನಿಸರ್ಗಸ್ನೇಹಿ ಜೀವನದ ಪಾರಂಪರಿಕ ಮೌಲ್ಯಗಳನ್ನೂ ಕಳೆದುಕೊಂಡು, ಇತ್ತ ವಾಸ್ತವ ಎದುರಿಸಲು ಬೇಕಿರುವ ಹೊಸ ಜ್ಞಾನಶಿಸ್ತಿಗೂ ತೆರೆದುಕೊಳ್ಳದೆ ತ್ರಿಶಂಕುಗಳಾಗುತ್ತಿದ್ದಾರೆ.

ಸಮಾಜ, ಶೈಕ್ಷಣಿಕ ಜಗತ್ತು ಹಾಗೂ ಸರ್ಕಾರ- ಈ ಮೂರೂ ಬೆಪ್ಪುಬಡಿದಂತೆ ಏಕಮುಖಿ ಮಾರುಕಟ್ಟೆ ಆರ್ಥಿಕತೆ ಪ್ರವಾಹದಲ್ಲಿ ತೇಲಿಹೋಗುತ್ತಿರುವುದರ ಕುರಿತು ಚಿಂತಿಸಲೇಬೇಕಾದ ಜರೂರತ್ತಿದೆ ಈಗ.

ಭಾರತೀಯ ಸಮಾಜವನ್ನು ಸಹಸ್ರಾರು ವರ್ಷಗಳಿಂದ ಪೊರೆದಿರುವುದು, ನಿಸರ್ಗವನ್ನು ಹಿತಮಿತವಾಗಿ ಬಳಸಿ ಬದುಕು ಕಟ್ಟಿಕೊಳ್ಳುವ ಪ್ರಕೃತಿ ಆರಾಧನೆಯ ಪಾರಂಪರಿಕ ಮೌಲ್ಯ ಹಾಗೂ ವಿವೇಕ. ಆದರೆ, ಆರ್ಥಿಕತೆಯ ಉದಾರೀಕರಣ ಹಾಗೂ ಜಾಗತೀಕರಣದ ಪರಿಣಾಮವಾಗಿ ಈವರೆಗಿದ್ದ ಕೌಟುಂಬಿಕ- ಸಾಮಾಜಿಕ ನಿಸರ್ಗಸ್ನೇಹಿ ಮೌಲ್ಯಗಳು ವೇಗವಾಗಿ ಕರಗುತ್ತಿವೆ. ಇಲ್ಲವಾದಲ್ಲಿ, ಕರಾವಳಿಯ ಅಳಿವೆ-ಸಮುದ್ರಗಳಲ್ಲಿ ಬೃಹತ್ ಯಾಂತ್ರೀಕೃತ ದೋಣಿ ಬಳಸಿ ಮೀನುಗಳನ್ನೆಲ್ಲ ಒಮ್ಮೆಲೇ ಹಿಡಿಯುವ ದುರಾಸೆಗೆ ಉದ್ಯಮಿಗಳು ಮುಂದಾಗುತ್ತಿದ್ದರೆ? ಮಲೆನಾಡಿನ ದೇವರಕಾಡನ್ನು ಅತಿಕ್ರಮಿಸಿ ಮರ ಕಡಿದು ನೆಡುತೋಪು ಬೆಳೆಸುವ ವಿದ್ಯಮಾನ ವ್ಯಾಪಕವಾಗುತ್ತಿತ್ತೇ? ಬಯಲುನಾಡಿನ ನೀರಿನ ಕಣಜಗಳಾದ ಕೆರೆಯಂಗಳಗಳು ವಾಣಿಜ್ಯ ಸೈಟುಗಳಾಗುತ್ತಿದ್ದವೇ? ನದಿ-ಕೆರೆ, ಗಿಡ-ಮರ, ನೆಲ-ಕಾಡನ್ನೆಲ್ಲ ಪೂಜಿಸುತ್ತಿದ್ದ ಪರಂಪರೆಯ ವಿವೇಕವೆಲ್ಲ, ಹೊಸ ತಲೆಮಾರಿನಲ್ಲಿ ವಿಸ್ಮೃತಿಗೆ ಜಾರುತ್ತಿರುವುದರ ಪರಿಣಾಮವಿದು.

ಹಳೆಯ ಮೌಲ್ಯಗಳೇನೋ ಮರೆಯಾದವು. ಆದರೆ, ವಿಜ್ಞಾನ ಕಟ್ಟಿಕೊಡುತ್ತಿರುವ ಆಧುನಿಕ ಜ್ಞಾನವಾದರೂ ಬದುಕನ್ನು ಪುನರ್‌ಕಟ್ಟಿಕೊಳ್ಳಲು ದಾರಿ ತೋರಬೇಕಿತ್ತು. ಜನಸಾಮಾನ್ಯರ ಬದುಕು ಹಾಗೂ ಆಡಳಿತ ನೀತಿಗೆ ಅವನ್ನು ತಲುಪಿಸುವ ಕಾರ್ಯವನ್ನು ಶೈಕ್ಷಣಿಕ ಹಾಗೂ ಸಂಶೋಧನಾ ಕ್ಷೇತ್ರಗಳು ಮಾಡಬೇಕಿತ್ತು. ಆದರೆ, ಈ ಕುರಿತ ಬಹುತೇಕ ಸಂಶೋಧನೆಗಳೆಲ್ಲ ಸೀಮಿತ ವೈಜ್ಞಾನಿಕ ವಲಯಗಳಲ್ಲಿ ಅಥವಾ ಸರ್ಕಾರಕ್ಕೆ ಸಲ್ಲಿಸಿದ ಶಿಫಾರಸುಗಳಲ್ಲಿ ಬಂದಿಯಾಗುತ್ತಿವೆ.

ನಿಷೇಧಿತ ಕ್ರಿಮಿನಾಶಕಗಳನ್ನು ಬಳಸಬಾರದೆಂದೋ ಅಂತರ್ಜಲ ಕುಸಿದ ಪ್ರದೇಶಗಳಲ್ಲಿ ಕೊಳವೆಬಾವಿಗಳಿಗೆ ಮಿತಿಯಿರಬೇಕೆಂದೋ ಮಲೆನಾಡಿನಂಚಿನ ಕಣಿವೆಗಳಲ್ಲಿ ಕಾಡು ಕಡಿದು, ಲಂಬವಾಗಿ ಗುಡ್ಡ ಕಡಿದು ಅವೈಜ್ಞಾನಿಕವಾಗಿ ಹೆದ್ದಾರಿ ನಿರ್ಮಿಸಬಾರದೆಂದೋ ಗಟ್ಟಿ ದನಿಯಲ್ಲಿ ಎಚ್ಚರಿಸಬೇಕಿದ್ದ ಸ್ವತಂತ್ರ ಶೈಕ್ಷಣಿಕ ವಲಯವೇ ಇಲ್ಲವಾಗುತ್ತಿದೆ. ಅರಣ್ಯ ಹಾಗೂ ಪರಿಸರದ ಸುಸ್ಥಿರ ನಿರ್ವಹಣೆ ಸಾಧಿಸುವ ಉದ್ದೇಶದ ವಿವಿಧ ಸರ್ಕಾರಿ ತಜ್ಞ ಸಮಿತಿಗಳು, ಕಾರ್ಯಪಡೆಗಳು, ಸಲಹಾ ಸಮಿತಿಗಳೆಲ್ಲ ಅಸ್ತಿತ್ವವನ್ನೇ ಕಳೆದುಕೊಳ್ಳುತ್ತಿವೆ. ವೈಜ್ಞಾನಿಕ ತತ್ವಗಳ ಆಧಾರದಲ್ಲಿಯೇ ಹಲವು ಹಂತಗಳಲ್ಲಿ ರೂಪಿತವಾಗಿರುವ ಸರ್ಕಾರಿ ನಿಯಮಗಳನ್ನೆಲ್ಲ ನುಸುಳಿ, ಮಾಲಿನ್ಯಕಾರಕ ಕೈಗಾರಿಕೆಗಳು ಹಾಗೂ ಉದ್ದಿಮೆಗಳು ಹೆಚ್ಚುತ್ತಲೇ ಇವೆಯೆಂದರೆ, ಏನರ್ಥ? ಸರ್ಕಾರ ಹಾಗೂ ಸಮಾಜದ ವಿವೇಕ ಕಾಯಬೇಕಿದ್ದ ದೇಶದ ಬೌದ್ಧಿಕಲೋಕಕ್ಕೇ ಮಂಕು ಬಡಿಯುತ್ತಿದೆ!



ಇನ್ನು ಸಂವಿಧಾನದ ತತ್ವಗಳ ಆಧಾರದಲ್ಲಿ ಭವಿಷ್ಯದ ನೀತಿ-ನಿಯಮ ರೂಪಿಸಬೇಕಾದ ಸರ್ಕಾರದ ಶಾಸಕಾಂಗ ಹಾಗೂ ಕಾರ್ಯಾಂಗ. ಪ್ರತಿಯೋರ್ವರಿಗೂ ಶುದ್ಧ ಗಾಳಿ, ಶುಚಿಯಾದ ಕುಡಿಯುವ ನೀರು, ಸುಸ್ಥಿರ ನೆಲೆಯನ್ನು ಒದಗಿಸುವ ಹಾಗೂ ಪರಿಸರ ಸುರಕ್ಷತೆ ಕಾಪಾಡುವ ಹೊಣೆಯನ್ನು ಮೂಲಭೂತ ಹಕ್ಕು ಹಾಗೂ ಕರ್ತವ್ಯಗಳಲ್ಲಿ ಸಂವಿಧಾನವೇ ಗುರುತಿಸಿದೆ. ಯೋಜನೆಯೊಂದರ ಅನುಷ್ಠಾನದಲ್ಲಿ ಅದರ ಭವಿಷ್ಯದ ಪರಿಣಾಮದ ಕುರಿತು ಮುನ್ನೆಚ್ಚರಿಕೆ ವಹಿಸುವುದು, ಅಪಾಯ ತಡೆಗಟ್ಟುವುದು, ಮಾಲಿನ್ಯ ಉಂಟುಮಾಡುವವರೇ ಅದನ್ನು ತಡೆಗಟ್ಟಲೂ ಪ್ರಯತ್ನಿಸುವುದು, ಸುಸ್ಥಿರ ಅಭಿವೃದ್ಧಿ ಸಾಧಿಸುವುದು- ಈ ಎಲ್ಲ ತತ್ವಗಳ ಆಧಾರದಲ್ಲಿಯೇ ನಮ್ಮೆಲ್ಲ ಕಾನೂನುಗಳು ಹಾಗೂ ನಿಯಮಗಳನ್ನು ರೂಪಿಸಲಾಗಿದೆ. ಆದರೆ, ಸಂವಿಧಾನದಡಿಯಲ್ಲಿ ಕೆಲಸ ಮಾಡುವ ಶಾಸಕಾಂಗ ಮತ್ತು ಕಾರ್ಯಾಂಗ ಮಾತ್ರ ತಮ್ಮ ಹೊಣೆಗಾರಿಕೆ ಕೈಬಿಡುವ ಸಂದರ್ಭಗಳೇ ಹೆಚ್ಚುತ್ತಿವೆ.

ಇಂದಿನ ವಿದ್ಯಮಾನಗಳನ್ನೇ ಒಮ್ಮೆ ಗಮನಿಸಿ. ಕಾರವಾರದಲ್ಲಿ ಉಳಿದಿರುವ ಏಕೈಕ ಸಮುದ್ರತೀರವನ್ನು ಮೀನುಗಾರರು ಹಾಗೂ ಸ್ಥಳೀಯರ ಒಕ್ಕೊರಲ ವಿರೋಧದ ಹೊರತಾಗಿಯೂ ವಾಣಿಜ್ಯ ಬಂದರಿನ ನಿರ್ಮಾಣಕ್ಕಾಗಿ ಸರ್ಕಾರ ನೀಡುತ್ತಿದೆ. ರಾಜ್ಯದೆಲ್ಲೆಡೆ ಬಹಳಷ್ಟು ಕ್ವಾರಿಗಳು ಸಂಪೂರ್ಣವಾಗಿ ಅಕ್ರಮವೆಂದು ನಿರೂಪಿತವಾಗಿದ್ದರೂ ಸರ್ಕಾರ ಅವನ್ನು ನಿಲ್ಲಿಸುತ್ತಿಲ್ಲ. ಕಾಡು ಹಾಗೂ ಸಾಮೂಹಿಕ ಭೂಮಿಗಳನ್ನು ಬಲಾಢ್ಯರು ವ್ಯಾಪಕವಾಗಿ ಅತಿಕ್ರಮಿಸುತ್ತಿದ್ದರೂ ಅಧಿಕಾರ ರಾಜಕಾರಣ ಅದನ್ನು ತಡೆಯುತ್ತಿಲ್ಲ. ಹೊಳೆ-ಕೆರೆ, ಅರಣ್ಯ, ಗೋಮಾಳ ಇತ್ಯಾದಿ ಸಾಮೂಹಿಕ ಆಸ್ತಿಯನ್ನು ಸ್ಥಳೀಯರ ಸಹಭಾಗಿತ್ವದಲ್ಲಿ ನಿರ್ವಹಿಸುವ ತಳಮಟ್ಟದ ಆಡಳಿತ ವ್ಯವಸ್ಥೆಯನ್ನು ಪೋಷಿಸಲು ಚುನಾವಣಾ ರಾಜಕೀಯ ಬಿಡುತ್ತಿಲ್ಲ!

ಸೌರ ವಿದ್ಯುತ್, ಸುಸ್ಥಿರ ತ್ಯಾಜ್ಯ ನಿರ್ವಹಣೆ, ಜಲಾನಯನ ಅಭಿವೃದ್ಧಿ, ಮಳೆನೀರು ಸಂಗ್ರಹ, ಕೃಷಿಅರಣ್ಯ, ಸಾವಯವ ಕೃಷಿ- ಇತ್ಯಾದಿ ಹಲವು ಬಗೆಯ ವಿಕೇಂದ್ರೀಕೃತ ಮತ್ತು ಪರಿಸರಸ್ನೇಹಿ ಅಭಿವೃದ್ಧಿ ಮಾರ್ಗಗಳು ಲಭ್ಯವಿದ್ದಾಗ್ಯೂ ಕೇಂದ್ರೀಕೃತ ಹಾಗೂ ಗುತ್ತಿಗೆದಾರರನ್ನು ಓಲೈಸುವ ಬೃಹತ್ ಕಾಮಗಾರಿ ಯೋಜನೆಗಳಿಗೇ ಸರ್ಕಾರ ಮಣೆಹಾಕುತ್ತಿದೆ. ಈ ಕುರಿತು ಧ್ವನಿಯೆತ್ತುವವರನ್ನೆಲ್ಲ 'ಪರಿಸರವ್ಯಾಧಿಗಳು' ಎಂದು ಸಾರ್ವಜನಿಕವಾಗಿ ದೂಷಿಸುವ ಹಂತಕ್ಕೂ ಜನರಿಂದಲೇ ಆಯ್ಕೆಯಾದ ಕೆಲವು ಅಧಿಕಾರಸ್ಥರು ಬೆಳೆದು ನಿಂತಿದ್ದಾರೆ! ಸ್ವತಂತ್ರ ಭಾರತದ ಅಮೃತ ಮಹೋತ್ಸವದ ಸಂದರ್ಭದಲ್ಲಿ, ನಾಡು ತಲುಪಿರುವ ಅವಸ್ಥೆ ತೋರಬಲ್ಲ ಕೈಗನ್ನಡಿಯಿದು.

ಅರಣ್ಯ ಮತ್ತು ಪರಿಸರದ ಸುಸ್ಥಿರ ನಿರ್ವಹಣೆಯು ಈ ಕಾಲದ ತುರ್ತು ಅಗತ್ಯ. ಇದನ್ನೇ ಹೀಗಳೆಯುವ 'ಅಭಿವೃದ್ಧಿ ಮಾಯೆ'ಯ ಹಿಂದಿನ ಅಧಿಕಾರ ರಾಜಕಾರಣ ಹಾಗೂ ಮಾರುಕಟ್ಟೆ ಆರ್ಥಿಕತೆಯ ಆಮಿಷಗಳನ್ನು ಗುರುತಿಸತೊಡಗಿದರೆ, ಮುಂದಣ ದಾರಿ ತೋರೀತು.

ಲೇಖಕ: ನಿರ್ದೇಶಕ, ಸಂರಕ್ಷಣಾ ಜೀವಶಾಸ್ತ್ರ ಮತ್ತು ಸುಸ್ಥಿರ ಅಭಿವೃದ್ಧಿ ಅಧ್ಯಯನ ಕೇಂದ್ರ, ಶಿರಸಿ

ಚುರುಮುರಿ

ಗೊಂಬೆ ಹೇಳುತ್ತೈತೆ...

• ಸಿ.ಎನ್.ರಾಜು

ಅನು ಗೊಂಬೆ ಅಲಂಕಾರ ಮಾಡಿದ್ದಳು. ಗೊಂಬೆಗಿಂತ ಚೆನ್ನಾಗಿ ತಾನು ಅಲಂಕಾರ ಮಾಡಿಕೊಂಡಿದ್ದಳು. ಮನೆಗೆ ಬಂದ ಹೆಂಗಸರು ಅನು ಅಲಂಕಾರ ನೋಡಿ ಖುಷಿ ವ್ಯಕ್ತಪಡಿಸಿದರೂ ಒಳಗೊಳಗೇ ಅಸೂಯೆಪಟ್ಟರು.

'ಈ ಬಾರಿ ನಾನು ಪುರಾಣ, ಪುಣ್ಯಕಥೆಗಳ ಗೊಂಬೆ ಅಲಂಕಾರ ಮಾಡಿಲ್ಲ, ಪ್ರಚಲಿತ ಫಜೀತಿಗಳ ದೃಶ್ಯಾವಳಿ ರೂಪಿಸಿದ್ದೇನೆ' ಎಂದಳು ಅನು.

'ಇದು ಕೊರೊನಾ ಕಾಲದಲ್ಲಿ ಮಕ್ಕಳು ಆನ್‌ಲೈನ್ ಶಿಕ್ಷಣ ಕಲಿಯಲು ಮೊಬೈಲ್ ಹಿಡಿದು ಮೂಲೆಯಲ್ಲಿ ಕುಳಿತಿರುವ ದೃಶ್ಯ. ಪಕ್ಕದಲ್ಲಿ ಇದೆಯಲ್ಲ ಅದು ಮೊಬೈಲ್‌ನಿಂದ ಕಣ್ಣು ಮಂಜಾದ ಮಕ್ಕಳಿಗೆ ಶಾಲೆಯಲ್ಲಿ ನೇತ್ರ ತಪಾಸಣಾ ಶಿಬಿರ ನಡೆಸುತ್ತಿರುವ ದೃಶ್ಯ' ಎಂದಳು.

'ಗಂಡಸೊಬ್ಬ ಅಡುಗೆ ಮಾಡುತ್ತಿರುವ ಈ ದೃಶ್ಯ ಏನು?' ಒಬ್ಬಾಕೆ ಕೇಳಿದಳು.

'ಕೊರೊನಾ ರಜೆಯಲ್ಲಿ ಸ್ಕೂಲ್ ಮೇಷ್ಟ್ರಿಗೆ ಅವರ ಪತ್ನಿ ಹೋಂವರ್ಕ್ ನೀಡಿದ್ದಾರೆ. ಮೇಷ್ಟ್ರು ಮನೆಯಲ್ಲಿ ಬಿಸಿಯೂಟ ಸಿದ್ಧಮಾಡುತ್ತಿದ್ದಾರೆ'.

'ಈ ದೃಶ್ಯದಲ್ಲಿ ಅಡುಗೆ ಮನೆಯಲ್ಲಿ ಗ್ಯಾಸ್ ಸ್ಟವ್ ಉರಿಯುತ್ತಿಲ್ಲ, ಆದರೂ ಮಹಿಳೆಯ ಬಟ್ಟೆಗೆ ಬೆಂಕಿ ಹೊತ್ತಿಕೊಂಡಿದೆಯಲ್ಲ ಏನಿದು?' ಕೇಳಿದಳು ಇನ್ನೊಬ್ಬಳು.

'ಬಟ್ಟೆಯಲ್ಲ, ಗ್ಯಾಸ್ ಬೆಲೆ ದುಬಾರಿಯಾಗಿ ಸ್ಟವ್ ಬದಲು ಹೊಟ್ಟೆ ಉರಿಯುತ್ತಿದೆ ಎಂದು ಹೇಳುವ ಸನ್ನಿವೇಶ ಇದು...' ಎಂದಳು ಸುಮಿ.

'ರಾಜಕಾರಣಿಗಳು ಸಭೆ ನಡೆಸುತ್ತಿರುವ ಈ ದೃಶ್ಯಾವಳಿ ಏನು?' ಮತ್ತೊಬ್ಬಳ ಪ್ರಶ್ನೆ.

'ಇದು ಅಸೆಂಬ್ಲಿ ಮೀಟಿಂಗ್... ದಿನಬಳಕೆ ಪದಾರ್ಥಗಳ ಬೆಲೆ ಇಳಿಸುವ ವಿಚಾರದಲ್ಲಿ ಆಡಳಿತ-ವಿರೋಧ ಪಕ್ಷದವರ ಮಾರಾಮಾರಿ ಚರ್ಚೆಯ ದೃಶ್ಯ'.

'ಪಕ್ಕದಲ್ಲಿರುವ ಗೊಂಬೆಗಳು ನಾಡಿನ ಪ್ರಜೆಗಳೇ?'

'ಹೌದು, ಚರ್ಚೆ ಮಾಡುವ ಜನನಾಯಕರು ಬೆಲೆ ಇಳಿಸ್ತಾರೋ ಅಥವಾ ತಮ್ಮ ಬೆಲೆ ಏರಿಸಿಕೊಳ್ತಾರೋ ಅಂತ ತಿಳಿಯದೆ ಪ್ರಜೆಗಳು ಕನ್‌ಫ್ಯೂಸ್ ಆಗಿರುವ ದೃಶ್ಯ ಕಣ್ರೀ...' ಎಂದು ತನ್ನ ಕಲಾಪ್ರತಿಭೆ ವಿವರಿಸುತ್ತಾ ತಾನೇ ರೋಮಾಂಚನಗೊಂಡಳು ಅನು.

ದಿನದ ಟ್ವೀಟ್

ನೆಲದ ಪ್ರತಿಭೆಗಿರಲಿ ಪ್ರೋತ್ಸಾಹ

ಯುಪಿಎಸ್‌ಸಿ ಪೂರ್ವಭಾವಿ ಪರೀಕ್ಷೆ ಬರುವ ಭಾನುವಾರದಂದು ನಡೆಯಲಿದೆ. ಎಂದಿನಂತೆಯೇ ಇಂಗ್ಲಿಷ್ & ಹಿಂದಿಯಲ್ಲಿ ಮಾತ್ರ ಪ್ರಶ್ನೆಪತ್ರಿಕೆ ಇರಲಿದೆ. ಈ ಎರಡು ಭಾಷೆ ಹೊರತುಪಡಿಸಿ ಸಂವಿಧಾನದ ಇತರ ಅನುಸೂಚಿತ ಭಾಷೆಗಳಲ್ಲಿ ಶಿಕ್ಷಣ ಪಡೆದ ಅಭ್ಯರ್ಥಿಗಳಿಗೆ ದೊಡ್ಡ ತೊಡಕಾಗಿದೆ. ಈ ಪರೀಕ್ಷಾ ಮಾಧ್ಯಮ ಬದಲಾಗದೆ ನೆಲದ ಪ್ರತಿಭೆಗಳು ಅರಳಲು ಸಾಧ್ಯವಿಲ್ಲ.

ಕೆ.ಬಿ.ಕೆ. ಸ್ವಾಮಿ, ವಕೀಲ

ಕಿಡಿನುಡಿ



ನಾನು ಆರ್‌ಎಸ್‌ಎಸ್ ಅನ್ನು ಹೊಗಳಿದ್ದೆ ಎಂಬುದು ಅಪ್ಪಟ ಸುಳ್ಳು. ಎಲ್.ಕೆ. ಅಡ್ವಾಣಿಯವರು ಬಂದಿದ್ದಾಗ ವಿಧಾನಸೌಧದ ಬ್ಯಾಂಕ್ವೆಟ್ ಹಾಲ್‌ನಲ್ಲಿ ಸಭೆ ನಡೆಸಿದ್ದೆವು. ತುರ್ತು ಪರಿಸ್ಥಿತಿಯ ದಿನಗಳಲ್ಲಿ ಜೈಲುವಾಸ ಅನುಭವಿಸಿದ್ದ ಕುರಿತು ಆ ಸಭೆಯಲ್ಲಿ ಚರ್ಚಿಸಿದ್ದೆವು. ಸಭೆಯನ್ನು ದುರುಪಯೋಗ ಮಾಡಿಕೊಳ್ಳುವುದು ಸರಿಯಲ್ಲ ಎಂದು ಆ ದಿನವೇ ಹೇಳಿದ್ದೆ. ನನಗೂ ಆರ್‌ಎಸ್‌ಎಸ್‌ಗೂ ಏನು ಸಂಬಂಧ? ಅದರ ಗಂಧಗಾಳಿಯೇ ಗೊತ್ತಿಲ್ಲ. ಸುಳ್ಳು ಹೇಳುವುದಕ್ಕೂ ಒಂದು ಮಿತಿ ಇರಬೇಕು.

ಎಚ್.ಡಿ.ದೇವೇಗೌಡ, ಜೆಡಿಎಸ್ ರಾಷ್ಟ್ರೀಯ ಅಧ್ಯಕ್ಷ

25 ವರ್ಷಗಳ ಹಿಂದೆ
ಬುಧವಾರ, 9-10-1996

• **ಯೂರಿಯ ಹಗರಣ: ಸ್ವಿಸ್ ಖಾತೆಯಲ್ಲಿ 27 ಕೋಟಿ ಪತ್ತೆ**

ನವದೆಹಲಿ, ಅ. 8 (ಯುಎನ್‌ಐ)– ಪ್ರಮುಖ ಬೆಳವಣಿಗೆಯೊಂದರಲ್ಲಿ 133 ಕೋಟಿ ರೂಪಾಯಿಯ ಯೂರಿಯ ಹಗರಣಕ್ಕೆ ಸಂಬಂಧಪಟ್ಟ 27 ಕೋಟಿ ರೂಪಾಯಿ ಹಣವನ್ನು ತುರ್ಕಿ ದೇಶದ ಕರ್ಸನ್ ಸಂಸ್ಥೆಯ ಇಬ್ಬರು ಅಧಿಕಾರಿಗಳ ಸ್ವಿಸ್ ಬ್ಯಾಂಕ್ ಖಾತೆಯಲ್ಲಿ ಸಿಬಿಐ ಪತ್ತೆ ಮಾಡಿದೆ.

ಕಿಕ್ಕಿರಿದ ಪತ್ರಿಕಾಗೋಷ್ಠಿಯಲ್ಲಿ ಈ ವಿಷಯವನ್ನು ಬಹಿರಂಗಪಡಿಸಿದ ಸಿಬಿಐ ನಿರ್ದೇಶಕ ಜೋಗಿಂದರ್ ಸಿಂಗ್ ಅವರು, ಈ ಹಣವನ್ನು ಮರಳಿಸುವಂತೆ ಸ್ವಿಸ್ ಅಧಿಕಾರಿಗಳಿಗೆ ಔಪಚಾರಿಕ ಕೋರಿಕೆ ಸಲ್ಲಿಸಲಾಗಿದೆ, ನವೆಂಬರ್ ಅಂತ್ಯದಲ್ಲಿ ಈ ಹಣ ಬಿಡುಗಡೆಯಾಗುವುದನ್ನು ನಿರೀಕ್ಷಿಸಲಾಗಿದೆ ಎಂದು ತಿಳಿಸಿದರು.

• **ಅತಿವೃಷ್ಟಿ: 50 ಕೋಟಿ ಪರಿಹಾರಕ್ಕೆ ಮನವಿ**

ಮೈಸೂರು, ಅ. 8– ಅತಿವೃಷ್ಟಿಯಿಂದಾಗಿ ಕರ್ನಾಟಕದಲ್ಲಾಗಿರುವ ನಷ್ಟಕ್ಕೆ ಪರಿಹಾರ ಒದಗಿಸಲು ಕೇಂದ್ರ ಸರ್ಕಾರವನ್ನು ಐವತ್ತು ಕೋಟಿ ರೂ. ನೀಡುವಂತೆ ಕೋರಲಾಗಿದೆ ಎಂದು ಮುಖ್ಯಮಂತ್ರಿ ಜೆ.ಎಚ್.ಪಟೇಲ್ ಅವರು ಇಂದಿಲ್ಲಿ ತಿಳಿಸಿದರು.

50 ವರ್ಷಗಳ ಹಿಂದೆ
ಶನಿವಾರ, 9-10-1971

• **ವಿದೇಶದಿಂದ ಬಂದ ಸ್ವದೇಶಿ**

ಸಿಮ್ಲಾ, ಅ. 8– ವಿದೇಶೀಯವಾದದ್ದು ಏನೇ ಇರಲಿ, ಅದಕ್ಕಾಗಿ ತೀವ್ರವಾಗಿ ಅಪೇಕ್ಷೆಪಡುವ ತಮ್ಮ ದೇಶದ ಕೆಲವರನ್ನು ಪ್ರಧಾನಿ ಶ್ರೀಮತಿ ಇಂದಿರಾ ಗಾಂಧಿ ಅವರು ಟೀಕಿಸಿದರು.

ಭಾರತದಿಂದ ಲಂಡನ್ನಿಗೆ ಹೋದವರೊಬ್ಬರು ಅಲ್ಲಿ ಉಣ್ಣೆ ಬಟ್ಟೆಗಳನ್ನು ಕೊಂಡುಕೊಂಡರೆಂದೂ, ಆ ಬಟ್ಟೆಗಳೆಲ್ಲಾ ಪಂಜಾಬಿನಲ್ಲಿ ತಯಾರಾದವೆಂಬುದು ಹಿಂದಿರುಗಿದ ನಂತರ ಅವರಿಗೆ ಗೊತ್ತಾಯಿತೆಂದೂ ನಗುವಿನ ಮಧ್ಯೆ ಶ್ರೀಮತಿ ಗಾಂಧಿ ಅವರು ಇಲ್ಲಿನ ಮಹಿಳಾ ಸಮ್ಮೇಳನದಲ್ಲಿ ಹೇಳಿದರು.

• **ಆಡಳಿತ ಕಾಂಗ್ರೆಸ್ಸಿನ ಚುನಾವಣಾ ಸಮಿತಿಗೆ ಹಣಾಹಣಿ ಅನಿವಾರ್ಯ**

ಕೈಲಾಸನಗರ, ಅ. 8– 'ಯಂಗ್ ಟರ್ಕ್' ಗುಂಪಿನ ನಾಯಕ ಚಂದ್ರಶೇಖರ್ ಮತ್ತು ಇತರ ಕೆಲವರು ನಾಮಪತ್ರ ಸಲ್ಲಿಸಿರುವುದರಿಂದ ಆಡಳಿತ ಕಾಂಗ್ರೆಸ್ಸಿನ ಕೇಂದ್ರ ಚುನಾವಣಾ ಸಮಿತಿಗೆ 7 ಸದಸ್ಯರ ಆಯ್ಕೆಯಲ್ಲಿ ಸ್ಪರ್ಧೆ ಅನಿವಾರ್ಯವೆಂದು ಕಂಡುಬರುತ್ತಿದೆ.

ಇವರಲ್ಲಿ ಹೈಕಮಾಂಡ್ ಕೃಪೆಗೊಳಗಾಗದವರಲ್ಲಿ ಒಬ್ಬರಾದ ಚಂದ್ರಶೇಖರ್ ಸಹ ಸೇರಿದ್ದಾರೆ.

ಸಂಗತ

ಕಬ್ಬು ಬಾಕಿ ಪಾವತಿಗೆ ಡಿಜಿಟಲ್ ಪರಿಹಾರ!

ಕಬ್ಬು ಬೆಳೆಗಾರರ ಸಂಕಷ್ಟ ಪರಿಹಾರಕ್ಕೆ ಡಿಜಿಟಲ್ ತಂತ್ರಜ್ಞಾನದ ಅಳವಡಿಕೆಯು ಪರಿಣಾಮಕಾರಿ ವಿಧಾನ

• ಮಲ್ಲಿಕಾರ್ಜುನ ಹೆಗ್ಗಳಗಿ

ರೈತರು ವರ್ಷವಿಡೀ ಕಷ್ಟಪಟ್ಟು ಬೆಳೆದ ಕಬ್ಬನ್ನು ಸಕ್ಕರೆ ಕಾರ್ಖಾನೆಗಳಿಗೆ ಉದ್ರಿ ಮಾರಾಟ ಮಾಡುವ ಕೆಟ್ಟ ಸಂಪ್ರದಾಯ ಜಾರಿಯಲ್ಲಿದೆ. ಕಬ್ಬು ಪೂರೈಸಿದ 14 ದಿನಗಳ ಒಳಗಾಗಿ ಬಾಕಿ ಹಣ ಪಾವತಿಸಬೇಕು, ಇದಕ್ಕೆ ತಪ್ಪಿದಲ್ಲಿ ಶೇ 15ರಷ್ಟು ಬಡ್ಡಿ ಕೊಡಬೇಕು ಎಂಬ ಕಾನೂನನ್ನು, ರೈತರು ಹೋರಾಟ ಮಾಡಿದ ಮೇಲೆ ರೂಪಿಸಲಾಯಿತು. ಯಾವ ಸಕ್ಕರೆ ಕಾರ್ಖಾನೆಯೂ ಈ ನಿಯಮ ಪಾಲಿಸುವುದಿಲ್ಲ. ವರ್ಷ, ಎರಡು ವರ್ಷ ಬಾಕಿ ಉಳಿಸಿಕೊಂಡರೂ ಆ ಹಣಕ್ಕೆ ಬಡ್ಡಿ ಸೇರಿಸಿ ಕೊಟ್ಟ ಉದಾಹರಣೆ ಇಲ್ಲ.

'ಉದ್ರಿ ಕೊಟ್ಟವನು ಕೋಡಂಗಿ ಪಡ್ಕೊಂಡವನು ವೀರಭದ್ರ' ಎಂಬ ಮಾತೊಂದಿದೆ. ಮುಧೋಳದ ರನ್ನ ಸಹಕಾರಿ ಕಾರ್ಖಾನೆ ಮತ್ತು ತೇರದಾಳದ ಸಾವರಿನ್ ಕಾರ್ಖಾನೆಯು ಎರಡು ವರ್ಷಗಳಿಂದ ಬಾಗಿಲು ಮುಚ್ಚಿವೆ. ಈ ಕಾರ್ಖಾನೆಗಳಿಗೆ ಕಬ್ಬು ಪೂರೈಸಿದ ರೈತರು ಹಣ ಬರದೇ ಪರಿತಪಿಸುತ್ತಿದ್ದಾರೆ.

ಕಬ್ಬಿನಿಂದ ಬೆಲ್ಲ, ಸಕ್ಕರೆ ಅಷ್ಟೇ ಅಲ್ಲ ಇಥೆನಾಲ್, ಆಲ್ಕೊಹಾಲ್, ವಿದ್ಯುತ್, ಸಾವಯವ ಗೊಬ್ಬರ, ಔಷಧ ಹೀಗೆ ಬೆಲೆಯುಳ್ಳ ಉತ್ಪನ್ನಗಳು ಉತ್ಪಾದನೆಯಾಗುತ್ತವೆ. ಇಥೆನಾಲ್ ಮತ್ತು ಆಲ್ಕೊಹಾಲ್ ಸಕ್ಕರೆಗಿಂತ ಹೆಚ್ಚು ಆದಾಯ ತರುವ ಉತ್ಪಾದನೆಗಳಾಗಿವೆ. ಸಕ್ಕರೆ ಹಾಗೂ ಇತರ ಉತ್ಪನ್ನಗಳ ಮಾರಾಟದಿಂದ ಬರುವ ಒಟ್ಟು ಆದಾಯದಲ್ಲಿ ಶೇ 70ರಷ್ಟು ಭಾಗ ಕಬ್ಬಿನ ಬೆಲೆಯಾಗಿ ಪಾವತಿ ಮಾಡಬೇಕು ಎಂದು ತಜ್ಞರ ಸಮಿತಿಯ ವರದಿ ಆಧರಿಸಿ ಕಾನೂನು ರಚಿಸಲಾಗಿದೆ. ಇದು ಕಾರ್ಖಾನೆಗಳು ಕಬ್ಬಿಗೆ ಕೊಡಬೇಕಾದ ಕನಿಷ್ಠ ಬೆಲೆಯ ಸೂತ್ರವಾಗಿದೆ.

ರೈತರು ಪ್ರಸಕ್ತ ಮತ್ತು ವಾಸ್ತವ ಸಂಗತಿಗಳನ್ನು ಪರಿಗಣಿಸಿ ನ್ಯಾಯಸಮ್ಮತ ಹಾಗೂ ಪ್ರೋತ್ಸಾಹದಾಯಕ (ಎಫ್.ಆರ್.ಪಿ) ಬೆಲೆಯನ್ನು ಚರ್ಚಿಸುವ ಮೂಲಕ ಪಡೆಯಲು ಅವಕಾಶವಿದೆ. ಕಬ್ಬಿನ ಬಿಲ್ ಪಾವತಿಗೆ ಹಳೆಯ ವಿಧಾನಗಳನ್ನೇ ಅನುಸರಿಸಲಾಗುತ್ತಿದೆ. ಈ ವ್ಯವಹಾರವೆಲ್ಲ ಮಾಲೀಕರ ಮರ್ಜಿಯ ಮೇಲೆ ನಡೆಯುತ್ತದೆ. ರೈತರು ಕಾಡಿ ಬೇಡಿ ಬಿಲ್ ಪಡೆದುಕೊಳ್ಳುವ ಸ್ಥಿತಿ ಇದೆ.

ಡಿಜಿಟಲ್ ತಂತ್ರಜ್ಞಾನವು ಪರಿಣಾಮಕಾರಿಯಾಗಿ ಬೆಳೆದಿದೆ. ಕೇಂದ್ರ ಸರ್ಕಾರದ ಪರಿಹಾರಧನ ಕ್ಷಣಾರ್ಧದಲ್ಲಿ ದೇಶದಾದ್ಯಂತ ರೈತರ ಬ್ಯಾಂಕ್ ಖಾತೆಗೆ ಜಮಾ ಆಗಿ ಸಂದೇಶ ಕೂಡ ಬರುತ್ತದೆ. ಸಕ್ಕರೆ ಕಾರ್ಖಾನೆಗಳು ಸಕ್ಕರೆ ಹಾಗೂ ಇತರ ಉತ್ಪನ್ನಗಳ ಮಾರಾಟದಿಂದ ಬಂದ ಆದಾಯದಲ್ಲಿ ಶೇ 70ರಷ್ಟನ್ನು ಡಿಜಿಟಲ್ ತಂತ್ರಜ್ಞಾನದ ಮೂಲಕ ಕಬ್ಬು ಬೆಳೆಗಾರರಿಗೆ ಕಡ್ಡಾಯವಾಗಿ ಪಾವತಿಸಬೇಕು. ಈ ವಿಧಾನವನ್ನು ತಂತ್ರಜ್ಞರ ಸಹಾಯದಿಂದ ಅಭಿವೃದ್ಧಿಪಡಿಸುವುದು ಸುಲಭ. ಆದರೆ ಇದಕ್ಕೆ ಮುಖ್ಯವಾಗಿ ಸರ್ಕಾರದ ದಿಟ್ಟ ನಿಲುವು ಬೇಕು. ಈ ಬಗ್ಗೆ ರೈತರು ಕೂಡ ಆಗ್ರಹ ಪಡಿಸಬೇಕು. ಇದು ಗಂಭೀರ ಹೋರಾಟವಾಗಿ ರೂಪುಗೊಳ್ಳಬೇಕು.

ಡಿಜಿಟಲ್ ನಿಯಂತ್ರಣ ಅಳವಡಿಸಿದರೆ ರೈತರಿಗೆ ಮಾತ್ರವಲ್ಲ ಸಕ್ಕರೆ ಕಾರ್ಖಾನೆಗಳಿಗೂ ಇದು ವರದಾನವಾಗುತ್ತದೆ. ಸರಿಯಾಗಿ ಹಣ ಬಂದರೆ ರೈತರು ಚೆನ್ನಾಗಿ ಕಬ್ಬು ಬೆಳೆಯುತ್ತಾರೆ. ಎಲ್ಲಕ್ಕಿಂತಲೂ ಮುಖ್ಯವಾಗಿ ಸಕ್ಕರೆ ಕಾರ್ಖಾನೆಗಳಲ್ಲಿ ಹಣಕಾಸಿನ ಶಿಸ್ತು ಬರುತ್ತದೆ. ದುಂದುಗಾರಿಕೆಗೆ ಕಡಿವಾಣ ಬೀಳುತ್ತದೆ.

ಆಸ್ಟ್ರೇಲಿಯಾದಲ್ಲಿ ಕಬ್ಬಿನ ಬಿಲ್ ಪಾವತಿಗೆ ಕಾರ್ಖಾನೆಗಳು ಪ್ರತಿದಿನದ ಸಕ್ಕರೆ ಹಾಗೂ ಇತರ ಉತ್ಪಾದನೆಗಳನ್ನು ಶೇ 70 ಮತ್ತು 30 ಅನುಪಾತವಾಗಿ ವಿಂಗಡಿಸಿ, ರೈತರ ಶೇ 70 ಭಾಗವನ್ನು ಅದೇ ದಿನದ ಕೊನೆಯಲ್ಲಿ ರೈತ ಸಂಸ್ಥೆಗಳಿಗೆ ವರ್ಗಾಯಿಸುತ್ತವೆ. ರೈತ ಸಂಸ್ಥೆಗಳು ಮಾರುಕಟ್ಟೆ ಹುಡುಕಿ ಮಾರಾಟ ಮಾಡಿ ಬೆಳೆಗಾರರಿಗೆ ಹಣ ಪಾವತಿಸುತ್ತವೆ. ಇದರಿಂದಾಗಿ ರೈತರ ಸಹಭಾಗಿತ್ವಕ್ಕೆ ದೊಡ್ಡ ಅವಕಾಶ ದೊರೆಯುತ್ತದೆ. ಬ್ರೆಜಿಲ್, ಕೆನ್ಯಾ ಇದೇ ವಿಧಾನ ಅನುಸರಿಸತೊಡಗಿವೆ.

ಉದ್ರಿ ಕಬ್ಬು ಪೂರೈಕೆ ಒಂದು ವಿಷವರ್ತುಲ. ರೈತರು ಸಕ್ಕರೆ ಕಾರ್ಖಾನೆಯ ಬೆನ್ನೆಲುಬು. ಅವರು ಕಾರ್ಖಾನೆಗೆ ಬೇಕಾಗುವ ಮುಖ್ಯ ವಸ್ತು ಕಬ್ಬನ್ನು ಪೂರೈಸುತ್ತಾರೆ. ಅವರ ಹಿತರಕ್ಷಣೆಯಲ್ಲಿಯೇ ಕಾರ್ಖಾನೆಯ ಹಿತ ಅಡಗಿದೆ.

ರಾಷ್ಟ್ರಮಟ್ಟದಲ್ಲಿ ಹಾಗೂ ರಾಜ್ಯಮಟ್ಟದಲ್ಲಿ ಸಕ್ಕರೆ ಲಾಬಿ ಬಹಳ ಶಕ್ತಿಶಾಲಿಯಾಗಿದೆ. ಸಕ್ಕರೆ ಕಾರ್ಖಾನೆಗಳ ಮಾಲೀಕರು, ಅಧ್ಯಕ್ಷರು ಸಕ್ರಿಯ ರಾಜಕಾರಣಿಗಳಾಗಿದ್ದಾರೆ. ಅವರನ್ನು ಎದುರು ಹಾಕಿಕೊಳ್ಳುವುದಕ್ಕೆ ಸರ್ಕಾರ ಮತ್ತು ಅಧಿಕಾರಿಗಳು ಗಟ್ಟಿಮನಸ್ಸು ಮಾಡುವುದಿಲ್ಲ. ಡಿಜಿಟಲ್ ತಂತ್ರಜ್ಞಾನದ ಅಳವಡಿಕೆಯೊಂದೇ ಪರಿಣಾಮಕಾರಿ ವಿಧಾನವಾಗಿದೆ.

ಕಬ್ಬಿನಿಂದ ನೇರವಾಗಿ ಇಥೆನಾಲ್ ಉತ್ಪಾದನೆಗೆ ಹಾಗೂ ಶೇ 20ರಷ್ಟು ಇಥೆನಾಲ್ ಅನ್ನು ಪೆಟ್ರೋಲ್‌ನಲ್ಲಿ ಮಿಶ್ರಣ ಮಾಡಲು ಕೇಂದ್ರ ಸರ್ಕಾರ ಅನುಮತಿ ನೀಡಿದೆ. ಕಾರ್ಖಾನೆಗಳ ಸಕ್ಕರೆ ಸಂಗ್ರಹದ (ಬಫರ್ ಸ್ಟಾಕ್) ಮೇಲೆ ಬಡ್ಡಿರಹಿತ ಸಾಲವನ್ನು ನೀಡುತ್ತಿದೆ. ಕಬ್ಬು ಬೆಳೆಗಾರರ ಹಿತ ಕಾಪಾಡುವ ಉದ್ದೇಶದಿಂದ ಈ ಯೋಜನೆಗಳನ್ನು ಜಾರಿ ಮಾಡಲಾಗಿದೆ ಎಂದು ಕೇಂದ್ರ ಸರ್ಕಾರ ಹೇಳಿದೆ. ಈ ಎಲ್ಲ ಯೋಜನೆಗಳ ಪೂರ್ಣ ಲಾಭ ರೈತರಿಗೆ ದೊರೆಯಲು ಡಿಜಿಟಲ್ ನಿಯಂತ್ರಣ ಅವಶ್ಯವಾಗಿದೆ.

ಲೇಖಕ: ಬೆಳಗಾವಿಯ ಎಸ್. ನಿಜಲಿಂಗಪ್ಪ ಸಕ್ಕರೆ ಸಂಸ್ಥೆಯ ಆಡಳಿತ ಮಂಡಳಿ ಸದಸ್ಯ, ಕಬ್ಬು ಅಭಿವೃದ್ಧಿ ಮತ್ತು ಸಕ್ಕರೆ ತಂತ್ರಜ್ಞರ ಮಹಾಮಂಡಳದ ಸದಸ್ಯ

ವಾಚಕರ ವಾಣಿ

ವಿಮೆಯ ಲಾಭಾಂಶ ಬಡ್ಡಿಯಲ್ಲ

'ಜೀವ ವಿಮೆ: ಈ ವಿಚಾರ ನೆನಪಿರಲಿ' ಎಂಬ ಲೇಖನ (ಪ್ರ.ವಾ., ಅ. 4) ಕೆಲವು ಉತ್ತಮ ಸಲಹೆಗಳನ್ನು ಒಳಗೊಂಡಿದ್ದರೂ ಎಂಡೋಮೆಂಟ್, ಮನಿಬ್ಯಾಕ್ ಪಾಲಿಸಿಗಳ ಬಗ್ಗೆ ತಿಳಿಸಿರುವ ಅಭಿಪ್ರಾಯವು ಅಷ್ಟು ಸಮಂಜಸವಲ್ಲ. ಅವರು ಹೇಳುವ 'ಶೇ 3ರಿಂದ 4ರಷ್ಟು ಬಡ್ಡಿ ಲಾಭ ಮಾತ್ರ ಸಿಗುತ್ತದೆ' ಎಂಬುದು ತಪ್ಪು. ಇವುಗಳಲ್ಲಿ ಶೇ 5ರಿಂದ 6ರವರೆಗೆ ಲಾಭ ದೊರೆಯುತ್ತದೆ. ವಿಮೆಯ ಲಾಭಾಂಶವು ಬಡ್ಡಿಯಲ್ಲ ಬೋನಸ್ (ಒಬ್ಬರು ಎಲ್ಲರಿಗಾಗಿ ಮತ್ತು ಎಲ್ಲರೂ ಒಬ್ಬರಿಗಾಗಿ ಎಂಬುದು ವಿಮೆಯ ಪರಿಕಲ್ಪನೆ). ಇಂದು ಬ್ಯಾಂಕ್, ಅಂಚೆ ಕಚೇರಿ ಮುಂತಾದ ಕಡೆ ಹೂಡಿಕೆ ಮಾಡಿದರೂ ಇದಕ್ಕಿಂತ ಹೆಚ್ಚಿಗೆ ಲಾಭ ಸಿಗುವುದಿಲ್ಲ.

ಯಾವುದೇ ವಿಮೆಯಲ್ಲದ ಠೇವಣಿಗಳ ಮೇಲಿನ ಬಡ್ಡಿಯು ತೆರಿಗೆಯನ್ನು ಆಕರ್ಷಿಸುವ ವರಮಾನವಾಗಿರುತ್ತದೆ. ಆದರೆ ವಿಮಾ ಪಾಲಿಸಿಗಳಿಗೆ ನಾವು ಕಟ್ಟುವ ಪ್ರೀಮಿಯಂಗೆ ತೆರಿಗೆ ವಿನಾಯಿತಿ ಇದೆ ಮತ್ತು ಪಕ್ವತೆಯ ಮೊತ್ತವು ಎಷ್ಟೇ ಇರಲಿ ತೆರಿಗೆಮುಕ್ತವಾಗಿರುತ್ತದೆ. ಮನಿಬ್ಯಾಕ್ ಪಾಲಿಸಿಯಲ್ಲಿ ಮಧ್ಯಂತರ ಹಣ ಪಾವತಿ ಆದರೂ ವಿಮಾ ಕವರೇಜ್ ಕಡಿಮೆ ಆಗುವುದಿಲ್ಲ. ಅವಧಿ ವಿಮೆಯು ವಿಮಾ ಪರಿಕಲ್ಪನೆಯನ್ನು ಪೂರ್ಣಮಟ್ಟದಲ್ಲಿ ಬಿಂಬಿಸುವ ಪಾಲಿಸಿಯಾದರೂ ಅದರಲ್ಲಿ ಪಕ್ವತೆ ಎಂಬುದಿರುವುದಿಲ್ಲ. ಆದ್ದರಿಂದ ಕೆಳವರ್ಗ ಮತ್ತು ಮಧ್ಯಮವರ್ಗದವರನ್ನು ಆ ಪಾಲಿಸಿ ಅಷ್ಟು ಆಕರ್ಷಿಸುವುದಿಲ್ಲ. ಒಟ್ಟಿನಲ್ಲಿ ಜೀವ ವಿಮೆ ಇಂದು ಈ ಮೊದಲಿಗಿಂತ ಹೆಚ್ಚು ಎಲ್ಲರ ಆಯ್ಕೆಯಾಗಿದೆ ಎಂಬುದು ವಾಸ್ತವ ಅಷ್ಟೇ ಅಲ್ಲದೆ ಉತ್ತಮವಾದುದು ಆಗಿದೆ.

ಪು.ಸೂ.ಲಕ್ಷ್ಮೀನಾರಾಯಣ ರಾವ್, ಬೆಂಗಳೂರು

ಮೂಗು ಹಿಡಿದು ಬಾಯನ್ನೂ ಮುಚ್ಚಿದರೆ...

ಹೊಸದಾಗಿ ಕಟ್ಟುತ್ತಿರುವ ಮನೆಗೆ ಎರಡನೆಯ ತಾರಸಿ ಹಾಕುವ ಸಲುವಾಗಿ ಕಬ್ಬಿಣ ಮತ್ತು ಸಿಮೆಂಟು ತರಲು ಅಂಗಡಿಗೆ ಹೋಗಿದ್ದೆ. ಎರಡರಲ್ಲೂ ಆದ ಬೆಲೆ ಏರಿಕೆ ಕಂಡು ನನಗೆ ಆಘಾತವಾಯಿತು. ಅಂಗಡಿಯವನಿಗೆ ಕೇಳಿದರೆ, ಎಲ್ಲವೂ ಜಿಎಸ್‌ಟಿ ಹೆಚ್ಚಾಗಿರುವುದರಿಂದ ಎಂದು ಹೇಳಿದ. ಈ ರೀತಿ ಬೆಲೆ ಏರಿದರೆ ಬಡ ಹಾಗೂ ಮಧ್ಯಮ ವರ್ಗದವರು ಸ್ವಂತ ಸೂರನ್ನು ಹೊಂದಲು ಸಾಧ್ಯವೇ? ಈಗಾಗಲೇ ಅಗತ್ಯ ವಸ್ತುಗಳ ಬೆಲೆ ಏರಿಕೆಯಿಂದ ನಾವು ತತ್ತರಿಸಿಹೋಗಿದ್ದೇವೆ. ಮೂಗು ಹಿಡಿದು ಬಾಯನ್ನೂ ಮುಚ್ಚಿದರೆ ಬದುಕುವುದಾದರೂ ಹೇಗೆ?

ಪೆಟ್ರೋಲ್, ಡೀಸೆಲ್ ಬೆಲೆ ಏರಿಕೆಯ ಕಾರಣ ಪ್ರತಿಯೊಂದು ವಸ್ತುವೂ ತನ್ನ ಬೆಲೆಯನ್ನು ಹೆಚ್ಚಿಸಿಕೊಂಡಿವೆ. ಗಾಯದ ಮೇಲೆ ಬರೆ ಎಂಬಂತೆ ಈಗ ಕಬ್ಬಿಣ ಮತ್ತು ಸಿಮೆಂಟು. ಜಿಎಸ್‌ಟಿ ಎಂಬುದು ಜನತೆಯ ಪ್ರಾಣಹಿಂಡದಂತೆ ಜಿಎಸ್‌ಟಿ ಮಂಡಳಿಯು ತುರ್ತಾಗಿ ಕ್ರಮ ಕೈಗೊಂಡು ಬೆಲೆಗಳನ್ನು ನಿಯಂತ್ರಿಸಲಿ.

ಪತ್ತಂಗಿ ಎಸ್. ಮುರಳಿ, ಬೆಂಗಳೂರು

ಉದ್ಯೋಗಕ್ಕೆ ಆಹ್ವಾನ: ಬೇಕಾಗಿದೆ ಸರಳ ನೀತಿ

ರಾಜ್ಯ ಪರೀಕ್ಷಾ ಪ್ರಾಧಿಕಾರವು ಸಹಾಯಕ ಪ್ರಾಧ್ಯಾಪಕ ಹುದ್ದೆಗಳಿಗೆ ಇತ್ತೀಚೆಗೆ ಅರ್ಜಿ ಆಹ್ವಾನಿಸಿದೆ. ಈ ಅರ್ಜಿ ಶುಲ್ಕ ₹ 2,000. ಹೀಗಾದರೆ ಬಡವನಾದವನು ಹೇಗೆ ಅರ್ಜಿ ಸಲ್ಲಿಸಲು ಸಾಧ್ಯ? ರಾಜ್ಯದಲ್ಲಿರುವ ಲಕ್ಷಾಂತರ ಮಂದಿ ಪಿಎಚ್.ಡಿ. ಪದವೀಧರರು ಮತ್ತು ನೆಟ್ ಪರೀಕ್ಷೆಯಲ್ಲಿ ಉತ್ತೀರ್ಣಗೊಂಡು ಉಪನ್ಯಾಸಕ ಹುದ್ದೆಗಳಿಗೆ ಅರ್ಹರಾದವರು ತಿಂಗಳಿಗೆ ಅತ್ಯಲ್ಪ ವೇತನಕ್ಕೆ ದುಡಿಯುವಂತಹ ಸ್ಥಿತಿ ಇದೆ. ಅರ್ಜಿ ಹಾಕಿದ ಕೂಡಲೇ ನೌಕರಿ ಸಿಗುವುದೆಂಬ ಖಾತರಿಯೇನೂ ಇಲ್ಲ. ಪ್ರಾಧಿಕಾರವು ಸಾವಿರಾರು ಹುದ್ದೆಗಳಿಗೆ ಅರ್ಜಿ ಕರೆದಾಗ ಇದರಿಂದ ಸರ್ಕಾರದ ಖಜಾನೆಗೆ ಸಂದಾಯವಾಗುವ ಅರ್ಜಿ ಶುಲ್ಕದ ಮೊತ್ತವೇ ಕೋಟ್ಯಂತರ ರೂಪಾಯಿ. ಇಲಾಖೆಗಳು ಹೀಗೂ ಸರ್ಕಾರದ ಖಜಾನೆಯನ್ನು ತುಂಬಿಸಲು ಪ್ರಯತ್ನಿಸುತ್ತವೆ!

ಕೊರೊನಾದ ಈ ಕಾಲಘಟ್ಟದಲ್ಲಿ ಬಹಳಷ್ಟು ಯುವಕ, ಯುವತಿಯರು ಅತ್ಯಲ್ಪ ಆದಾಯದ ನೌಕರಿಯನ್ನೂ ಕಳೆದುಕೊಂಡು ಬೀದಿ ಪಾಲಾಗಿರುವುದು ಕಟುಸತ್ಯ. ಇಂತಹ ಕಷ್ಟ ಕಾಲದಲ್ಲಿ ಸರ್ಕಾರ ಅರ್ಜಿಗೆ ಇಷ್ಟೊಂದು ಶುಲ್ಕ ವಿಧಿಸಿದರೆ ಲಕ್ಷಾಂತರ ಪ್ರತಿಭಾವಂತ ಯುವಜನರು ಸರ್ಕಾರಿ ಹುದ್ದೆಗಳಿಗೆ ಅರ್ಜಿಯನ್ನೇ ಸಲ್ಲಿಸಲಾಗದೆ ಅದೃಷ್ಟವಂಚಿತರಾಗುವ ಸಾಧ್ಯತೆ ಇಲ್ಲದಿಲ್ಲ. ನೆರೆಯ ಕೇರಳ, ತಮಿಳುನಾಡು ಮತ್ತು ಆಂಧ್ರಪ್ರದೇಶದಲ್ಲಿ ಸರ್ಕಾರಿ ಹುದ್ದೆಗಳ ಅರ್ಜಿ ಸಲ್ಲಿಕೆಗೆ ದುಬಾರಿ ಶುಲ್ಕ ವಿಧಿಸುವುದಿಲ್ಲ. ರಾಜ್ಯ ಸರ್ಕಾರ ಇದನ್ನು ಗಂಭೀರವಾಗಿ ಪರಿಗಣಿಸಿ, ಬಡಜನರ ಉದ್ಯೋಗಕ್ಕೆ ನೆರವಾಗುವಂತಹ ಸರಳ ನೀತಿಯೊಂದನ್ನು ರೂಪಿಸಲಿ.

ಬೇ.ನ.ಶ್ರೀನಿವಾಸಮೂರ್ತಿ, ತುಮಕೂರು

ಸಹನೀಯ ಬದುಕಿಗೆ ಸಿಗಲಿ ಆದ್ಯತೆ

ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿಯವರು ಬೆಂಗಳೂರಿನ ಬಗೆಗೆ ನೀಡುತ್ತಿರುವ ಹೇಳಿಕೆಗಳನ್ನು ಗಮನಿಸಿದ್ದೇನೆ (ಉದಾ: ಪ್ರ.ವಾ., ಅ. 3 ಮತ್ತು 7). ಮುಖ್ಯವಾಗಿ ಬೆಂಗಳೂರು ಏನಾಗಬೇಕು? ಅಂತರರಾಷ್ಟ್ರೀಯ ಮಟ್ಟದ ಆಕರ್ಷಣೀಯ ಮಹಾನಗರ? (ಹಾಗೂ ಹೇಳಿದ್ದಾರೆ). 1996ರಿಂದ ಸತತವಾಗಿ ಇಲ್ಲಿ ನೆಲೆಸಿರುವ ನನಗೆ ಅನಿಸುವುದು- ಮೊದಲು ಪಾಟ್‌ಹೋಲ್ ಫ್ರೀ (ರಸ್ತೆ ಗುಂಡಿಮುಕ್ತ) ಆಗಬೇಕು, ಪಾದಚಾರಿಗಳು ಫುಟ್‌ಪಾತ್‌ನಲ್ಲೇ ನಡೆಯಲು ಆಸ್ಪದ ಆಗಬೇಕು. ಸಮೀಕ್ಷೆ ಹಲವು ಬಾರಿ ಆಗಿದೆ, ಕಾರ್ಯಪಡೆಗಳೂ ರಚಿತವಾಗಿವೆ, ಕಾರ್ಯ ತುಂಬ ಕಡಿಮೆ ಆಗಿದೆ. ಶಾಶ್ವತ ಪರಿಹಾರ ದೂರದಲ್ಲೂ ಕಾಣುತ್ತಿಲ್ಲ.

ಬೆಂಗಳೂರಿನಲ್ಲಿ ವಿವಿಧ ಆದಾಯ ವರ್ಗದ ನಿವಾಸಿಗಳಿದ್ದಾರೆ. ಅವರಿಗೆಲ್ಲ ಸಹನೀಯ ಬದುಕು ಸಾಗಿಸುವ ಹಕ್ಕು ಇದೆ. ಅದಕ್ಕೆ ಪ್ರಥಮ ಆದ್ಯತೆ ಸಿಗಬೇಕು. ಐ.ಟಿ ಕ್ಯಾಪಿಟಲ್ ಎಂದರು- ಬಾಡಿಗೆ ದರ ಗಗನಕ್ಕೆ ಏರಿತು. ಕೊರೊನಾ ಒಂದಿಷ್ಟು ಪಾಠ ಕಲಿಸಿತು. ಈಗ ಸ್ಟಾರ್ಟ್‌ಅಪ್, ಆರ್ಟಿಫಿಷಿಯಲ್ ಇಂಟೆಲಿಜೆನ್ಸ್, ಹೆಲ್ತ್ ಟೂರಿಸಂ ಎನ್ನುತ್ತಿದ್ದಾರೆ. ಘೋಷಣೆಗಳನ್ನು ಪಕ್ಕಕ್ಕಿಟ್ಟು, ಕಾಲು ಮುರಿದುಕೊಂಡು ಬಿದ್ದಿರುವ ಉದ್ಯಮಗಳು ಮತ್ತೆ ಚೇತರಿಸಿಕೊಳ್ಳಲು ಅಗತ್ಯವಾದ ಕ್ರಮಗಳನ್ನು ಮೊದಲು ಕೈಗೊಳ್ಳಬೇಕು. ಬಿಡಿಎಗೆ ಹೊಸ ಕಟ್ಟಡ ತತ್‌ಕ್ಷಣಕ್ಕಂತೂ ಬೇಕಿಲ್ಲ. ತಗ್ಗು ಪ್ರದೇಶಗಳು, ಬೀಳುವ ಸ್ಥಿತಿಯಲ್ಲಿರುವ ಕಟ್ಟಡ ಹಾಗೂ ಮರಗಳು, ಒಳಚರಂಡಿ ವ್ಯವಸ್ಥೆ ಇವುಗಳತ್ತ ತುರ್ತು ಗಮನ ಹರಿಸಬೇಕು. ಒಟ್ಟಾರೆ ಮಾಧ್ಯಮ, ಬ್ಯಾನರ್‌ಗಳಲ್ಲಿ ಮುಖ ಕಾಣಿಸುವುದಕ್ಕಿಂತ ಕೆಲಸ ಗೋಚರಿಸಲಿ.

ಎಚ್.ಎಸ್.ಮಂಜುನಾಥ, ಬೆಂಗಳೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete. © All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ರಾಷ್ಟ್ರೀಯ ಆಸ್ತಿ ನಗದೀಕರಣ ಯೋಜನೆ ಸರಿಯಾದ ಕ್ರಮವೇ?

ಕಲ್ಯಾಣ ರಾಜ್ಯದಿಂದ ಕಂಪನಿ ರಾಜ್ಯದೆಡೆಗೆ



ಭೋಗ್ಯದಾರ ಕಂಪನಿಗಳನ್ನು ಆಕರ್ಷಿಸಲು ಅತ್ಯಂತ ಕಡಿಮೆ ದರ ಸೂಚಿಸಲಾಗಿದೆ. ಕಡಿಮೆ ದರದಲ್ಲಿ ಇವುಗಳನ್ನು ಪಡೆದು ನಿರ್ವಹಣೆ ಮಾಡುವ ಖಾಸಗಿ ಕಂಪನಿಗಳು ಅನಿಯಮಿತ ಲಾಭ ಮಾಡಿಕೊಳ್ಳಲು ವಿದ್ಯುತ್, ಗ್ಯಾಸ್, ದೂರಸಂಪರ್ಕ ಮುಂತಾದ ಸೌಲಭ್ಯಗಳಿಗೆ ಅನಿಯಂತ್ರಿತವಾಗಿ ದರ ವಸೂಲಿ ಮಾಡುತ್ತವೆ. ಅಂತಿಮವಾಗಿ ಬಲಿಯಾಗುವುದು ಪ್ರಜೆಗಳು. ಈಗಿನ ಪೆಟ್ರೋಲ್ ಡೀಸೆಲ್ ಬೆಲೆ ಏರಿಸಿದಂತೆ ದಿನಕ್ಕೊಂದು ದರ ನಿಗದಿಯಾಗುತ್ತದೆ

• ಡಾ. ಸಿದ್ದನಗೌಡ ಪಾಟೀಲ

ಭಾರತ ಭೋಗ್ಯಕ್ಕಿದೆ. ಭೋಗಿದಾರ ಫಲಾನುಭವಿಗಳು ಬೃಹತ್ ಕಾರ್ಪೊರೇಟ್ ಕಂಪನಿಗಳು. ಕೇಂದ್ರದ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರು 2021ರ ಆಗಸ್ಟ್ 23ರಂದು ಈ ಯೋಜನೆ ಘೋಷಣೆ ಮಾಡಿದ್ದಾರೆ. ಅದಕ್ಕೆ ಸರ್ಕಾರಿ ಸ್ವಾಮ್ಯದ ಉದ್ದಿಮೆಗಳ 'ಆಸ್ತಿ ನಗದೀಕರಣ' (ನ್ಯಾಶನಲ್ ಮಾನಿಟೈಸೇಶನ್ ಪೈಪ್‌ಲೈನ್) ಎಂಬ ಆಕರ್ಷಕ ಹೆಸರನ್ನೂ ಕೊಟ್ಟಿದ್ದಾರೆ. 2019ರ ನೀತಿ ಆಯೋಗದ ವರದಿ ಅನುಸಾರ 2021-22ರ ಆಯವ್ಯಯದಲ್ಲಿ ಈ ಕುರಿತು ಪ್ರಸ್ತಾಪವಿದೆ. ದೇಶದ ಸಾರ್ವಜನಿಕ ವಲಯದ, ಕಳೆದ 70 ವರ್ಷಗಳಲ್ಲಿ ಜನತೆಯ ತೆರಿಗೆಯ ಹಣದಿಂದ ಕಟ್ಟಲಾದ 250ಕ್ಕೂ ಹೆಚ್ಚು ಉದ್ದಿಮೆಗಳನ್ನು ಕಾರ್ಪೊರೇಟ್ ಕಂಪನಿಗಳಿಗೆ ಭೋಗ್ಯಕ್ಕೆ (ನಿರ್ವಹಣೆಗೆ) ಕೊಟ್ಟು, ಮುಂದಿನ ನಾಲ್ಕು ವರ್ಷಗಳಲ್ಲಿ ₹6 ಲಕ್ಷ ಕೋಟಿಯನ್ನು ಅವರಿಂದ ಪಡೆದು, ಆ ಹಣವನ್ನು ದೇಶದ ಮೂಲಭೂತ ಸೌಕರ್ಯಗಳಿಗಾಗಿ ಬಳಸಲಾಗುವುದು ಎಂದು ಹೇಳಿದ್ದಾರೆ. ಇದು ಪ್ರಧಾನಿ ನರೇಂದ್ರ ಮೋದಿ ಅವರ 'ದೂರದೃಷ್ಟಿಯ ಕೊಡುಗೆ' ಎಂದೂ ಹೇಳಿದ್ದಾರೆ.

ಆಸ್ತಿ ನಗದೀಕರಣ ಯೋಜನೆಯನ್ನು ಪರಿಶೀಲಿಸುವ ಮೊದಲು ಸ್ವಲ್ಪ ಇತಿಹಾಸದ ಮೇಲೆ ಕಣ್ಣಾಡಿಸಬೇಕು. ಸ್ವಾತಂತ್ರ್ಯಪೂರ್ವದಲ್ಲಿ ನಮ್ಮ ದೇಶಕ್ಕೆ ಔಷಧಿ ಮತ್ತು ಔಷಧಿ ದ್ರವ್ಯಗಳನ್ನು ಜರ್ಮನ್ ದೇಶದಿಂದ ಹೆಚ್ಚಾಗಿ ಆಮದು ಮಾಡಿಕೊಳ್ಳಲಾಗುತ್ತಿತ್ತು. ಎರಡನೇ ಜಾಗತಿಕ ಯುದ್ಧ ಆರಂಭವಾದ ಮೇಲೆ ಅದು ನಿಂತು ಹೋಯಿತು. ಆಗ 1938ರಲ್ಲಿ ಕಾಂಗ್ರೆಸ್ ರಚಿಸಿದ ರಾಷ್ಟ್ರೀಯ ಯೋಜನಾ ಸಮಿತಿಯ ಅಧ್ಯಕ್ಷರಾಗಿದ್ದ ಜವಾಹರಲಾಲ್ ನೆಹರೂ ಅವರು ಅಂದಿನ ವೈಸ್‌ರಾಯ್ ಲಾರ್ಡ್ ಲಿನ್‌ಲಿತ್‌ಗೋ ಅವರಿಗೆ ಬ್ರಿಟಿಷ್ ಸರ್ಕಾರದಿಂದ ಭಾರತದಲ್ಲಿಯೇ ಔಷಧಿ ಉದ್ದಿಮೆಗಳನ್ನು ಆರಂಭಿಸಿದರೆ ಜನರಿಗೆ ಕಡಿಮೆ ದರದಲ್ಲಿ ಔಷಧಿ ಒದಗಿಸಬಹುದು ಎಂಬ ಸಲಹೆ ಕೊಟ್ಟರು. ಆಗ ವೈಸ್‌ರಾಯ್ ಲಿನ್‌ಲಿತ್‌ಗೋ ಅವರು 'ಸರ್ಕಾರ ವ್ಯಾಪಾರಿ ಸಂಸ್ಥೆಯಲ್ಲ' ಎಂಬ ಉತ್ತರ ಕೊಟ್ಟು ನೆಹರೂ ಅವರ ಸಲಹೆಯನ್ನು ತಿರಸ್ಕರಿಸಿದರು. ಇದಕ್ಕೆ ಕಾರಣ ಅವರು ಇಂಗ್ಲೆಂಡಿನ ಇಂಪೀರಿಯಲ್ ಕೆಮಿಕಲ್ ಇಂಡಸ್ಟ್ರೀಸ್ ಕಂಪನಿಯ ಜೊತೆ ಹೊಂದಿದ್ದ ನಂಟು. ಅದಕ್ಕೆ ಲಾಭ ಮಾಡಿಕೊಡುವ ಉದ್ದೇಶದಿಂದ 'ಸರ್ಕಾರ ವ್ಯಾಪಾರಿ ಸಂಸ್ಥೆಯಲ್ಲ' ಎಂದಿದ್ದರು. ಈಗ ಪ್ರಧಾನಿ ಮೋದಿಯವರು 'ಉದ್ದಿಮೆ ನಡೆಸುವುದು ಸರ್ಕಾರದ ಕೆಲಸವಲ್ಲ' ಎಂದು ಹೇಳಿದ್ದಾರೆ. ಇವರು ಹೊಸ ಉದ್ದಿಮೆಗಳನ್ನು ಸ್ಥಾಪಿಸುವುದಿರಲಿ, ಈಗಾಗಲೇ ಚಾಲನೆಯಲ್ಲಿರುವ, ಸುಸ್ಥಿತಿಯಲ್ಲಿ ಇರುವ, ದೇಶದ ಆರ್ಥಿಕತೆಗೆ ಅಪಾರ ಕೊಡುಗೆ ಕೊಡುತ್ತಿರುವ ಸರ್ಕಾರಿ ಸ್ವಾಮ್ಯದ ಆದಾಯ ಮತ್ತು ಆಸ್ತಿಯನ್ನು ಕಾರ್ಪೊರೇಟ್ ಕಂಪನಿಗಳಿಗೆ (ಪ್ರಧಾನವಾಗಿ ಅಂಬಾನಿ, ಅದಾನಿಗಳಿಗೆ) ನಿರ್ವಹಣೆ ಹೆಸರಿನಲ್ಲಿ 'ಕಾಣಿಕೆ'ಯ ರೂಪದಲ್ಲಿ ಕೊಡುತ್ತಿದ್ದಾರೆ.

ಈಗಾಗಲೇ ಸಾರ್ವಜನಿಕ ವಲಯದ ಕೈಗಾರಿಕೆ, ಬ್ಯಾಂಕ್ ಮತ್ತು ವಿಮಾ ವಲಯಗಳಲ್ಲಿ ಖಾಸಗೀಕರಣ ಪ್ರಕ್ರಿಯೆ ಆರಂಭವಾಗಿದೆ. ನಿರ್ಮಲಾ ಸೀತಾರಾಮನ್ ಅವರು ಈ 'ಆಸ್ತಿ ನಗದೀಕರಣ' ಯೋಜನೆಯನ್ನು ಖಾಸಗೀಕರಣವಲ್ಲ, ಆ ಆಸ್ತಿಗಳ ಒಡೆತನ ಸರ್ಕಾರಗಳ ಹೆಸರಿನಲ್ಲಿಯೇ ಇರುತ್ತದೆ. ನಿರ್ವಹಣೆ ಮಾತ್ರ ನಿಗದಿತ ಶುಲ್ಕ ಪಾವತಿಸಿದ ಕಂಪನಿಗಳದ್ದಾಗಿರುತ್ತದೆ ಎಂದು ಹೇಳಿದ್ದಾರೆ. ಈ ನಿರ್ವಹಣೆಯ ಅವಧಿ ಅಂದರೆ ಭೋಗ್ಯದ (ಲೀಸ್) ಅವಧಿ ವಿವಿಧ ಉದ್ದಿಮೆಗಳಿಗೆ ಭಿನ್ನವಾಗಿದೆ. ಅದು 25 ವರ್ಷಗಳಿಂದ 99 ವರ್ಷಗಳವರೆಗೂ ಇದೆ. ಸರ್ಕಾರಿ ಆಸ್ತಿಯನ್ನು ಅಷ್ಟು ವರ್ಷಗಳವರೆಗೆ ಭೋಗ್ಯಕ್ಕೆ ಕೊಡುವುದು ಎಷ್ಟು ನ್ಯಾಯಯುತ, ನೈತಿಕವಾಗಿ ಸರಿಯೇ ಎಂಬ ಪ್ರಶ್ನೆ ಮುಖ್ಯವಾದದ್ದು.

ನಾನು ಸ್ವಾತಂತ್ರ್ಯ ಸಂಗ್ರಾಮವನ್ನು ಮೂರು ಧಾರೆಗಳಲ್ಲಿ ಗುರುತಿಸುತ್ತೇನೆ. ಕಾಂಗ್ರೆಸ್ ನಾಯಕತ್ವವು ರಾಜಕೀಯ ಸ್ವಾತಂತ್ರ್ಯದ ಗುರಿ ಹೊಂದಿತ್ತು. ಭಗತ್‌ಸಿಂಗ್, ಸುಭಾಶ್ ಚಂದ್ರ ಬೋಸ್ ಅವರಂಥ ತೀವ್ರವಾದಿಗಳು, ಎಡಪಂಥೀಯರು ಕೇವಲ ರಾಜಕೀಯ ಮಾತ್ರವಲ್ಲ, ಅದರ ಜೊತೆ ಆರ್ಥಿಕ ಸ್ವಾತಂತ್ರ್ಯ, ಸಾಮಾಜಿಕ ಸ್ವಾತಂತ್ರ್ಯವೂ ಆದ್ಯತೆ ಪಡೆಯಬೇಕು ಎಂಬ ಆಶಯ ಹೊಂದಿದ್ದರು. ಸ್ವಾತಂತ್ರ್ಯ ಬಂದ ಮೇಲೆ ರಾಜಕೀಯ ಸ್ವಾತಂತ್ರ್ಯವೇ ಆದ್ಯತೆ ಪಡೆದರೂ ಅಂದಿನ ಪ್ರಧಾನಿ ನೆಹರೂ ದೇಶದ ಅವಶ್ಯಕತೆ, ಮೂಲಭೂತ ಸೌಕರ್ಯ ನಿರ್ಮಾಣ, ಅಭಿವೃದ್ಧಿಗಾಗಿ ಸಾರ್ವಜನಿಕ ವಲಯದ ಕೈಗಾರಿಕೆಗಳನ್ನು ಸ್ಥಾಪಿಸಿದರು. ಆ ಕಾಲದಲ್ಲಿ ಖಾಸಗಿ ವಲಯದಲ್ಲಿ ಜೆಮ್‌ಷೆಡ್‌ಪುರದಲ್ಲಿ ಟಾಟಾ ಉಕ್ಕು ಕಬ್ಬಿಣ ಕಾರ್ಖಾನೆ ಮಾತ್ರವಿತ್ತು. ಅದು ಅಂದಿನ ಅವಶ್ಯಕತೆಗಳನ್ನು ಪೂರೈಸುವ ಶಕ್ತಿ ಪಡೆದಿರಲಿಲ್ಲ. ಆ ಸಂದರ್ಭದಲ್ಲಿ ನೆಹರೂ ಅವರ ಸರ್ಕಾರ ಆರಂಭಿಸಿದ್ದ ಬೃಹತ್ ಉದ್ದಿಮೆಗಳು, ನಂತರ ಇಂದಿರಾ ಗಾಂಧಿಯವರ ಕಾಲದಲ್ಲಿ ಬ್ಯಾಂಕ್ ಮತ್ತಿತರ ಆರ್ಥಿಕ ವಲಯದ ಉದ್ದಿಮೆಗಳ ರಾಷ್ಟ್ರೀಕರಣ ದೇಶದ ಆರ್ಥಿಕ ಬೆಳವಣಿಗೆಗಳಿಗೆ ಬೆನ್ನೆಲುಬಾಗಿದ್ದವು ಎಂಬುದು ಕಳೆದ 70 ವರ್ಷಗಳಲ್ಲಿ ಸಾಬೀತಾಗಿದೆ. ಸಾರ್ವಜನಿಕ ಉದ್ದಿಮೆಯು ಆದಾಯ-ಸಂಪತ್ತಿನ ಸಾಮಾಜೀಕರಣದ ಸಂಕೇತ ಮಾತ್ರವಲ್ಲ 'ಮೀಸಲಾತಿ'ಯ ಮೂಲಕ ಅದು ಸಾಮಾಜಿಕ ನ್ಯಾಯದ ತತ್ವವನ್ನೂ ಹೊಂದಿದೆ. ನಮ್ಮ ಸಂವಿಧಾನದ ರಾಜ್ಯ ನಿರ್ದೇಶನ ತತ್ವಗಳ ಆಶಯದಂತೆ ಕಲ್ಯಾಣ ರಾಜ್ಯದ ಗುರಿ ಹೊಂದಿರದಿದ್ದರೂ ಮಿಶ್ರ ಆರ್ಥಿಕ ವ್ಯವಸ್ಥೆಯಲ್ಲಿಯೇ ಆ ಅಂಶಗಳಿದ್ದವು.

ಅಂದಿನ ಪ್ರಧಾನಿ ನೆಹರೂ ಅವರ ಸಚಿವ ಸಂಪುಟದಲ್ಲಿ ತಾರಕೇಶ್ವರಿ ಸಿನ್ಹಾ ಎಂಬ ಮಹಿಳೆ ಡೆಪ್ಯುಟಿ ಹಣಕಾಸು ಮಂತ್ರಿಯಾಗಿದ್ದರು. ಅವರು ಸಾರ್ವಜನಿಕ ಉದ್ದಿಮೆಗಳನ್ನು ಸ್ವಾಗತಿಸಿದ ರೀತಿ ಗಮನಾರ್ಹ. 'ಈಗ ಖಾಸಗಿ ಕಂಪನಿಗಳಿಗೆ ಬೃಹತ್ ಕೈಗಾರಿಕೆ ಸ್ಥಾಪಿಸುವಷ್ಟು ಆರ್ಥಿಕ ಶಕ್ತಿ ಇಲ್ಲ. ಈಗ ಸರ್ಕಾರ ಸ್ಥಾಪಿಸಿದ ಕೈಗಾರಿಕೆಗಳನ್ನು ಮುಂದೆ ಖಾಸಗಿಯವರೇ ಕೈಗೆತ್ತಿಕೊಳ್ಳುತ್ತಾರೆ' ಎಂದು ಹೇಳಿ ವ್ಯಾಪಕ ಟೀಕೆಗೊಳಗಾಗಿದ್ದರು. ತಾರಕೇಶ್ವರಿ ಸಿನ್ಹಾ ಎಂಬ ಬಲಪಂಥೀಯ ಚಿಂತನೆಯ ಸಚಿವೆಯ ಮಾತುಗಳನ್ನು ಮೋದಿಯವರ ಸರ್ಕಾರ ಮತ್ತು ಅವರ ಹಣಕಾಸು ಮಂತ್ರಿ ನಿರ್ಮಲಾ ಸೀತಾರಾಮನ್ ಜಾರಿಗೆ ತರುತ್ತಿದ್ದಾರೆ.

ಪ್ರಸ್ತುತ ಕೇಂದ್ರ ಸರ್ಕಾರ ನಗದೀಕರಣ ಯೋಜನೆಯಲ್ಲಿ ಖಾಸಗಿಯವರಿಗೆ ವಹಿಸುತ್ತಿರುವ ಸರ್ಕಾರಿ ಸ್ವಾಮ್ಯದ ಉದ್ದಿಮೆಗಳ ಪಟ್ಟಿಯನ್ನು ನೋಡಿದರೆ ಆತಂಕವಾಗುತ್ತದೆ. ಖಾಸಗಿ ಕಂಪನಿಗಳ ಭೋಗ್ಯಕ್ಕೆ ಸದ್ಯಕ್ಕೆ ಬಲಿಯಾಗುವ ಉದ್ಯಮಗಳು: 26,700 ಕಿಮೀ ಹೆದ್ದಾರಿ, 400 ರೈಲು ನಿಲ್ದಾಣಗಳು, 150 ರೈಲುಗಳು, ರೈಲು ಟ್ರಕ್‌ಗಳು, 42,300 ಕಿ.ಮೀ ವಿದ್ಯುತ್‌ಕಂಬ-ತಂತಿಗಳು, 5,000 ಮೆಗಾವ್ಯಾಟ್ ಜಲ, ಸೌರ ಮತ್ತು ವಾಯುವಿದ್ಯುತ್ ಉತ್ಪಾದನಾ ಘಟಕಗಳು, 4,000 ಕಿ.ಮೀ ಅನಿಲ ಪೈಪ್‌ಲೈನ್‌ಗಳು, ದೂರಸಂಪರ್ಕ ಸಂಸ್ಥೆಯ 16,700 ಕಿ.ಮೀ ಆಪ್ಟಿಕಲ್ ಫೈಬರ್ ಕೇಬಲ್, 17,000 ಗೋಪುರಗಳು, 21 ವಿಮಾನ ನಿಲ್ದಾಣ, 31 ಬಂದರು, 160 ಕಲ್ಲಿದ್ದಲು ಗಣಿಗಾರಿಕೆ ಯೋಜನೆಗಳು. ಇವಲ್ಲದೆ ಕೈಗಾರಿಕೆಗಳಿಗೆ ಸೇರಿದ ಕಟ್ಟಡ, ಜಮೀನು, ಮೈದಾನಗಳು ಈ ಒತ್ತೆ ಪ್ರಕ್ರಿಯೆಯಲ್ಲಿ ಸೇರಿವೆ. ಇವುಗಳನ್ನು ಲೀಸ್‌ಗೆ ಹಾಕಿ ₹6 ಲಕ್ಷ ಕೋಟಿ ಸಂಗ್ರಹಿಸುವ ಯೋಜನೆ ಹೊಂದಿದ್ದಾರೆ. ಭೋಗ್ಯದಾರ ಕಂಪನಿಗಳನ್ನು ಆಕರ್ಷಿಸಲು ಅತ್ಯಂತ ಕಡಿಮೆ ದರ ಸೂಚಿಸಲಾಗಿದೆ. ಕಡಿಮೆ ದರದಲ್ಲಿ ಇವುಗಳನ್ನು ಪಡೆದು ನಿರ್ವಹಣೆ ಮಾಡುವ ಖಾಸಗಿ ಕಂಪನಿಗಳು ಅನಿಯಮಿತ ಲಾಭ ಮಾಡಿಕೊಳ್ಳಲು ವಿದ್ಯುತ್, ಗ್ಯಾಸ್, ದೂರಸಂಪರ್ಕ ಮುಂತಾದ ಸೌಲಭ್ಯಗಳಿಗೆ ಅನಿಯಂತ್ರಿತವಾಗಿ ದರ ವಸೂಲಿ ಮಾಡುತ್ತವೆ. ಅಂತಿಮವಾಗಿ ಬಲಿಯಾಗುವುದು ಪ್ರಜೆಗಳು. ಈಗಿನ ಪೆಟ್ರೋಲ್ ಡೀಸೆಲ್ ಬೆಲೆ ಏರಿಸಿದಂತೆ ದಿನಕ್ಕೊಂದು ದರ ನಿಗದಿಯಾಗುತ್ತದೆ.

ಈ ಸರ್ಕಾರ ಪ್ರಜೆಗಳನ್ನು ಗ್ರಾಹಕರನ್ನಾಗಿ ಪರಿವರ್ತಿಸಿ, ಆ ಗ್ರಾಹಕರನ್ನು ಖಾಸಗಿ ಕಂಪನಿಗಳ ಕಪಿಮುಷ್ಠಿಗೆ ಒಪ್ಪಿಸುತ್ತಿದೆ. ಆಸ್ತಿ ನಗದೀಕರಣ ಯೋಜನೆಯನ್ನು ಜಾರಿಗೆ ತಂದ ಸಿಂಗಪುರ, ಆಸ್ಟ್ರೇಲಿಯ ಸರ್ಕಾರಗಳು ಜನರಿಂದ ತೀವ್ರ ವಿರೋಧ ಎದುರಿಸುತ್ತಿವೆ. ಸರ್ಕಾರ 'ಸೇವಾ ವಲಯ'ವನ್ನು ನಿರ್ನಾಮ ಮಾಡಿ ಎಲ್ಲ ಕ್ಷೇತ್ರಗಳಲ್ಲಿ 'ವ್ಯಾಪಾರ ವಲಯ'ವನ್ನು ನಿರ್ಮಿಸುತ್ತಿದೆ. ಕಲ್ಯಾಣ ರಾಜ್ಯ ಮಾಯವಾಗಿ ಕಂಪನಿ ರಾಜ್ಯ ಬರುತ್ತದೆ. 1757ರಲ್ಲಿ ಈಸ್ಟ್ ಇಂಡಿಯಾ ಕಂಪನಿ ವಿರುದ್ಧ ಆರಂಭವಾದ ಸಿರಾಜುದ್ದೌಲನ ಪ್ಲಾಸಿ ಕದನದಿಂದ ಆರಂಭಗೊಂಡು 'ಕ್ವಿಟ್ ಇಂಡಿಯಾ' ವರೆಗಿನ ಹೋರಾಟ 'ಕಂಪನಿ ರಾಜ್ಯ'ದ ವಿರುದ್ಧವೇ. ಈಗ ಜನತೆ ಮತ್ತೆ ಎಚ್ಚೆತ್ತುಕೊಳ್ಳಬೇಕು. 1998ರಲ್ಲಿ ಚುನಾವಣಾ ಸುಧಾರಣೆಗೆ ಸಂಬಂಧಿಸಿದ ಇಂದ್ರಜಿತ್ ಗುಪ್ತಾ ಸಮಿತಿ ವರದಿಯಲ್ಲಿ ಗುಪ್ತಾ ಅವರು ರಾಜಕೀಯ ಪಕ್ಷಗಳಿಗೆ ಕಾರ್ಪೊರೇಟ್ ಕಂಪನಿಗಳು ಕೊಡುವ ದೇಣಿಗೆಯನ್ನು ನಿಷೇಧಿಸಬೇಕು ಎಂದು ಸೂಚಿಸಿದ್ದರು. ಎಡಪಕ್ಷಗಳ ಹೊರತಾಗಿ ಸಮಿತಿಯಲ್ಲಿನ ಯಾವ ಪಕ್ಷದ ಸದಸ್ಯರೂ ಆ ಸೂಚನೆಯನ್ನು ಬೆಂಬಲಿಸಲಿಲ್ಲ. ರಾಜಕೀಯ ಪಕ್ಷಗಳಿಗೆ ದೇಣಿಗೆ ಕೊಡುವುದರ ಮೂಲಕ ಕಾರ್ಪೊರೇಟ್ ಕಂಪನಿಗಳು ಆಳುವ ವರ್ಗವನ್ನು ನಿಯಂತ್ರಿಸುತ್ತವೆ ಎಂದು ಹೇಳಿದ ಗುಪ್ತಾ ಅವರ ಮಾತು ಇಂದು ನಿತ್ಯಸತ್ಯವಾಗುತ್ತಿದೆ. ಅಂತಿಮವಾಗಿ ಖಾಸಗೀಕರಣ ನೀತಿಗಳಿಗೆ, ಅದರ ಮುಂದುವರಿದ ಭಾಗವಾದ ಸರ್ಕಾರಿ ಸ್ವಾಮ್ಯದ ಸ್ವತ್ತಿನ ನಗದೀಕರಣಗಳಂಥ ಯೋಜನೆಗಳಿಗೆ ಬಲಿಯಾಗುವ ಪ್ರಜೆಗಳು ಜಾಗೃತವಾಗಬೇಕು. ಮತಹಾಕಿ ಅಧಿಕಾರಕ್ಕೆ ತಂದ ಪ್ರಜೆಗಳನ್ನು ಗ್ರಾಹಕರಂತೆ ಕಾಣುವ ಸರ್ಕಾರಗಳಿಗೆ ಪಾಠ ಕಲಿಸಬೇಕು.

ಲೇಖಕ: ಸಿಪಿಐ ಮುಖಂಡ

ಸಚ್ಚಿದಾನಂದ ಸತ್ಯಸಂದೇಶ

ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ

ಮಾನಸಿಕ ವಿಕಲ್ಪವೇ ದ್ವೇಷ

ಸೃಷ್ಟಿಯ ಜೀವರಾಶಿಗಳಲ್ಲೆ ಮಾನವ ಸರ್ವ ಶ್ರೇಷ್ಠ. ಅವನಿಗೆ ಬೇಕಾದ್ದೆಲ್ಲವನ್ನೂ ಬುದ್ಧಿಶಕ್ತಿಯಿಂದ ಪಡೆದುಕೊಳ್ಳುವ ಯುಕ್ತಿಯನ್ನು ಸೃಷ್ಟಿಕರ್ತ ನೀಡಿದ್ದಾನೆ. ಭಗವಂತನ ಸ್ಥಾನದಲ್ಲಿ ನಿಂತು ವಿಶ್ವವನ್ನು ಮುನ್ನಡೆಸುವ ಜ್ಞಾನವಿದೆ. ಇದರಿಂದ ಇಡೀ ಭೂಮಂಡಲವನ್ನು ತನ್ನ ಅಂಗೈಮೇಲೆ ಬುಗುರಿಯಂತೆ ಆಡಿಸುವಷ್ಟು ಸರ್ವಶಕ್ತನಾಗಿದ್ದಾನೆ. ಆದರೆ, ಇಡೀ ಜಗವನ್ನೇ ಗೆಲ್ಲಬಲ್ಲ ಬಲಾಢ್ಯ ಮನುಷ್ಯ, ತನ್ನ ಮನದೊಳಗೇಳುವ ನಿಕೃಷ್ಟವಾದ ದ್ವೇಷಾಸೂಯೆಗಳನ್ನು ನಿಗ್ರಹಿಸಲಾಗದೆ ಮಾನಸಿಕ ಕ್ಲೇಷಗಳಿಂದ ತೊಳಲಾಡುತ್ತಿದ್ದಾನೆ. ಇದರಿಂದ ಸುಂದರವಾಗಿಸಬಹುದಾಗಿದ್ದ ತನ್ನ ಬದುಕನ್ನು ಕುರೂಪಗೊಳಿಸಿಕೊಳ್ಳುತ್ತಿದ್ದಾನೆ. ದ್ವೇಷದಿಂದ ಏನನ್ನೂ ಸಾಧಿಸಲಾಗದು, ಯಾವುದನ್ನೂ ಗಳಿಸಲಾಗದು ಎಂಬ ಕಟು ಸತ್ಯ ಅರಿವಿದ್ದರೂ, ಮನಸ್ಸನ್ನು ಕ್ರೋಧದ ಬೆಂಕಿಯಲ್ಲಿ ಅದ್ದಿ ಇಡೀ ಜೀವನವನ್ನು ಘಾಸಿಗೊಳಿಸಿಕೊಳ್ಳುತ್ತಿದ್ದಾನೆ.

ಅಹಂಕಾರ ಒಳ್ಳೆತನಕ್ಕೆ ಅಲಂಕಾರವಲ್ಲ. ದುರಾಸೆ-ದುರಾಚಾರಗಳು ಒಳ್ಳೆಯ ಬದುಕಿಗೆ ಭೂಷಣವಲ್ಲ ಅಂತ ಗೊತ್ತಿದ್ದರೂ, ಮನುಷ್ಯ ಕೆಟ್ಟದ್ದನ್ನೇ ಆಯ್ದುಕೊಳ್ಳುತ್ತಿರುವುದು ಆತನ ಕೇಡಿನ ಮುನ್ಸೂಚನೆಯಲ್ಲದೆ ಬೇರೇನೂ ಅಲ್ಲ. ಇದರ ದುಷ್ಪರಿಣಾಮವನ್ನು ಅವನು ಮಾತ್ರವಲ್ಲದೆ, ತನ್ನ ಸುತ್ತಲಿರುವವರಿಗೂ ಹಂಚುತ್ತಿದ್ದಾನೆ. ಅಂಟು ಜಾಢ್ಯದಂತೆ ಒಬ್ಬರಿಂದ ಒಬ್ಬರಿಗೆ ಹರಡುವ ದ್ವೇಷಾಸೂಯೆಗಳು ಇಡೀ ಸಮಾಜವನ್ನೇ ಹಾಳು ಮಾಡುತ್ತಿದೆ. ಇಂಥ ದ್ವೇಷಾಸೂಯೆಯು ಒಂದು ಮಾನಸಿಕ ವಿಕಲ್ಪ. ಬಹಳ ಜನರಿಗೆ ಇದು ಗೊತ್ತಾಗುವುದೂ ಇಲ್ಲ, ಅರ್ಥವೂ ಆಗೊಲ್ಲ. ಇಂಥವರು ಸತಿಗೆ ಒಳ್ಳೆಯ ಪತಿಯಾಗುವುದಿಲ್ಲ, ಮಕ್ಕಳಿಗೆ ಒಳ್ಳೆಯ ತಂದೆಯಾಗುವುದಿಲ್ಲ, ಬಂಧುಗಳ ಸಮೂಹದಲ್ಲಿ ಉತ್ತಮ ನಂಟನಾಗುವುದಿಲ್ಲ, ನೆರೆಹೊರೆಯಲ್ಲಿ ಉತ್ತಮ ನೆರೆಯವನಾಗುವುದಿಲ್ಲ, ಕೆಲಸದ ತಾಣದಲ್ಲಿ ಸಹೋದ್ಯೋಗಿಗಳೊಂದಿಗೆ ಸೌಹಾರ್ದವಾಗೂ ಇರುವುದಿಲ್ಲ.

ಒಬ್ಬ ವ್ಯಕ್ತಿಯ ಮನಸ್ಸು ಕೆಟ್ಟಿದೆ ಎಂಬುದನ್ನು ತಿಳಿಯಲು ಯಾವ ಶೋಧಮಾಪಕವೂ ಬೇಕಿಲ್ಲ. ಆತನ ವರ್ತನೆಯಿಂದಲೇ ಸುಲಭವಾಗಿ ಗುರುತಿಸಬಹುದು. ಒಬ್ಬರ ನೋವಿಗೆ ಮಿಡಿಯದೆ, ಸದಾ ಪರದ್ವೇಷ-ಪರನಿಂದನೆಯಲ್ಲಿ ತೊಡಗುತ್ತಾನೆಂದರೆ, ಅವನ ಮನಸ್ಸು ಕೆಟ್ಟಿದೆ ಅಂತಾನೇ ಅರ್ಥ. ಒಬ್ಬರಿಗೆ ಒಳ್ಳೆಯದು ಮಾಡುವುದರಲ್ಲಿರುವ ಆತ್ಮತೃಪ್ತಿ, ಕೆಟ್ಟದ್ದು ಮಾಡುವುದರಲ್ಲಿ ಇರುವುದಿಲ್ಲ. ಇಂಥ ಸಣ್ಣ ತಿಳಿವಳಿಕೆಯೂ ಇಲ್ಲದೆ ಅಮಾನವೀಯವಾಗಿ ಮನುಷ್ಯ ವರ್ತಿಸುತ್ತಾನೆಂದರೆ, ಅವನ ಬುದ್ಧಿ ಸ್ತಿಮಿತದಲ್ಲಿಲ್ಲವೆಂದೇ ಅರ್ಥ. ಸದಾ ಸಿಡುಕುವ, ಆಗಾಗ ದುಡುಕುವವವರನ್ನ ವೈಜ್ಞಾನಿಕವಾಗಿಯೂ ಮಾನಸಿಕ ಅಸ್ವಸ್ಥರೆಂದೇ ಪರಿಗಣಿಸಲಾಗುತ್ತದೆ. ಇಂಥ ವಿಕಲ್ಪ ಮನಸ್ಸಿನವರಿಗೆ ಮದ್ದು ಇರುವುದು ಧರ್ಮಗುರುಗಳಲ್ಲೇ ಹೊರತು, ಮದ್ದನ್ನು ಅರೆವ ವೈದ್ಯರಲ್ಲಲ್ಲ.

ಧರ್ಮ ಯಾವತ್ತೂ ಹಾದಿ ತಪ್ಪಿಲ್ಲ, ಹಾದಿ ತಪ್ಪುವವರನ್ನು ಸರಿದಾರಿಗೆ ತರುತ್ತಿದೆ. ಆದ್ದರಿಂದ ಧರ್ಮದಲ್ಲಿ ನಂಬಿಕೆ ಇಟ್ಟವರು ಉದ್ಧಾರವಾಗಿದ್ದಾರೆ. ಆದರೆ ಧರ್ಮವನ್ನು ಸರಿಯಾಗಿ ಅರ್ಥೈಸದವರು ಮಾತ್ರ ದಿಕ್ಕೆಟ್ಟಿದ್ದಾರೆ. ಧರ್ಮಶ್ರದ್ಧೆಗೂ-ಅಂಧಶ್ರದ್ಧೆಗೂ ಬಹಳ ವ್ಯತ್ಯಾಸವಿದೆ. ಧರ್ಮಾಂಧರಲ್ಲಿ ಶ್ರದ್ಧೆಗಿಂತ ಅತಿರೇಕ ವಿಕಾರಗಳೆ ಹೆಚ್ಚಿರುತ್ತವೆ. ಹೀಗಾಗಿ ಧರ್ಮಾಂಧರು ಮಾನಸಿಕ ರೋಗಿಗಳಾಗಿರುತ್ತಾರೆ. ಪರರನ್ನು ತನ್ನಂತೆ ನೋಡದವನು ಎಂಥ ದುಷ್ಟನೋ, ಪರಧರ್ಮವನ್ನೂ ತನ್ನ ಧರ್ಮದಂತೆ ಅಂತ ಭಾವಿಸದವನು ಅಷ್ಟೇ ದುಷ್ಟ. ತಾನು, ತನ್ನದು ಎಂಬ ಸ್ವಾರ್ಥ ಮಹಾಪಾಪ ಅಂತ ಎಲ್ಲಾ ಧರ್ಮಗಳೂ ಹೇಳುತ್ತವೆ. ಹಾಗೇ, ತನ್ನ ಧರ್ಮದ ಪರ ಸ್ವಾರ್ಥವಾಗಿ ವರ್ತಿಸುವುದು ಸಹ ಘನಘೋರ ಪಾಪ.

ಮನುಷ್ಯನಲ್ಲಿ ಸ್ವಾರ್ಥ ಬೆಳೆದಷ್ಟು ಮನಸ್ಸು ಅಸ್ವಸ್ಥಗೊಳ್ಳುತ್ತದೆ. ಮನಸ್ಸು ಅಸ್ವಸ್ಥಗೊಂಡಷ್ಟು ಅವನು ರಾಕ್ಷಸನಾಗುತ್ತಾನೆ. ಮನುಷ್ಯ ದ್ವೇಷಾಸೂಯೆಗಳಿಂದ ಮನಸ್ಸನ್ನು ಕೆಡಿಸಿಕೊಂಡು ಮೃಗಾವಸ್ಥೆ ತಲುಪಬಾರದೆಂಬ ಕಾರಣಕ್ಕೆ ಧರ್ಮಗಳು ಹುಟ್ಟಿವೆ. ಮನುಷ್ಯರಲ್ಲಿ ಆಗಾಗ ಭುಗಿಲೇಳುವ ದುಷ್ಟತನ ನಿಗ್ರಹಿಸಿ, ಆತ ಸದಾಕಾಲ ನೆಮ್ಮದಿ ಭಾವದಲ್ಲಿರುವಂತೆ ಮಾಡುವುದೇ ಧರ್ಮದ ಮೂಲ ಉದ್ದೇಶ. ಪ್ರತಿಯೊಬ್ಬರು ಧರ್ಮವಂತರಾಗಿ ನಡೆದಾಗ 'ಸಚ್ಚಿದಾನಂದ'ದ ಸುಂದರ ಬದುಕು ಸಾಕಾರವಾಗುತ್ತದೆ.

ಕೇಂದ್ರದ ಮೇಲೆ ರಾಜ್ಯಗಳ ಅವಲಂಬನೆ ತಗ್ಗಿಸುವ ಯೋಜನೆ

• ನಿತಿನ್ ಪೈ

ಕೋವಿಡ್ ನಂತರದ ಕಾಲದಲ್ಲಿ ಸರ್ಕಾರಗಳು ಹಣಕಾಸಿನ ಗಂಭೀರ ಸವಾಲುಗಳನ್ನು ಎದುರಿಸುತ್ತಿರುವ ಸಂದರ್ಭದಲ್ಲಿ ಆಸ್ತಿ ನಗದೀಕರಣ ಯೋಜನೆಯು ನಿಜಕ್ಕೂ ಮಹತ್ವದ್ದಾಗಿದೆ. ಪರಿಹಾರ, ಸಾರ್ವಜನಿಕ ಆರೋಗ್ಯ ಮತ್ತು ಸಾಮಾಜಿಕ ಕಲ್ಯಾಣಕ್ಕಾಗಿ ಸರ್ಕಾರಗಳು ಹೆಚ್ಚು ಹಣ ಖರ್ಚು ಮಾಡಬೇಕಾಗಿದೆ. ಆದರೆ, ಆರ್ಥಿಕ ಪ್ರಗತಿಯ ನಿಧಾನಗತಿಯಿಂದಾಗಿ ವರಮಾನ ಕಡಿಮೆಯೇ ಇದೆ. ಹಾಗಾಗಿಯೇ ಆಸ್ತಿ ನಗದೀಕರಣವು ಹೆಚ್ಚು ಮುಖ್ಯವಾಗಿದೆ

ಬೆಂಗಳೂರಿನ ಮಹಾತ್ಮ ಗಾಂಧಿ ರಸ್ತೆಯಲ್ಲಿ ಚದರ ಅಡಿ ಅಂಗಡಿ ಸ್ಥಳದ ಬಾಡಿಗೆ ₹75ಕ್ಕಿಂತ ಎಷ್ಟೋ ಹೆಚ್ಚು. ಹಾಗಿದ್ದರೂ, ಕಳೆದ ವರ್ಷದ ವರೆಗೆ ಪಾದಚಾರಿ ಮಾರ್ಗದ ಬಾಡಿಗೆ ದರ ಸೊನ್ನೆಯೇ ಆಗಿತ್ತು. ಯಾವುದೇ ವ್ಯಕ್ತಿ 100 ಚದರ ಅಡಿ ಸ್ಥಳವನ್ನು ಸುಲಭವಾಗಿ ಬಳಸಿಕೊಳ್ಳಬಹುದಿತ್ತು ಮತ್ತು ಅದಕ್ಕಾಗಿ ಸರ್ಕಾರಕ್ಕೆ ಒಂದು ರೂಪಾಯಿಯನ್ನೂ ನೀಡಬೇಕಿರಲಿಲ್ಲ. ರಸ್ತೆ ಬದಿಯಲ್ಲಿ ಕಾರು ನಿಲ್ಲಿಸಿ ಸಾರ್ವಜನಿಕ ಸ್ಥಳ ಬಳಸಿಕೊಳ್ಳಬಹುದಿತ್ತು. ನೀವು ದೊಡ್ಡ ಕಾರು ನಿಲ್ಲಿಸಿದ್ದರೆ, ಹೆಚ್ಚು ಕಾರುಗಳನ್ನು ನಿಲ್ಲಿಸಿದ್ದರೆ ಇನ್ನೂ ಹೆಚ್ಚಿನ ಸ್ಥಳವನ್ನು ಉಚಿತವಾಗಿ ಬಳಸಿಕೊಳ್ಳಬಹುದಿತ್ತು.

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯು (ಬಿಬಿಎಂಪಿ) ಸ್ಮಾರ್ಟ್ ಪಾರ್ಕಿಂಗ್ ವ್ಯವಸ್ಥೆ ಜಾರಿಗೊಳಿಸಿದ ಬಳಿಕ ಒಂದು ಕಾರು ನಿಲುಗಡೆ ಸ್ಥಳಕ್ಕೆ ಪಾಲಿಕೆಗೆ ಗಂಟೆಗೆ ₹30 ದೊರೆಯುತ್ತಿದೆ. ಇದನ್ನು ತಿಂಗಳಿಗೆ ಲೆಕ್ಕ ಹಾಕಿದರೆ ಅದು ₹22 ಸಾವಿರ ಆಗುತ್ತದೆ. ಬೆಂಗಳೂರಿನ ಕೇಂದ್ರ ಭಾಗದ ಏಳು ರಸ್ತೆಗಳಲ್ಲಿ ಪಾವತಿ ವಾಹನ ನಿಲುಗಡೆ ವ್ಯವಸ್ಥೆಯಿಂದಾಗಿ ಪಾಲಿಕೆಗೆ ₹30 ಕೋಟಿ ಸಿಗುತ್ತದೆ. ಅದಲ್ಲದೆ, ಸಂಚಾರ ದಟ್ಟಣೆ ಕಡಿಮೆಯಾಗಿದೆ ಮತ್ತು ನಿಲುಗಡೆ ಸ್ಥಳ ದೊರೆಯುವುದು ಸುಲಭವಾಗಿದೆ.

ಕಾರು ಹೊಂದಿರುವವರು ಬಡವರಲ್ಲ. ಸರ್ಕಾರದ ಸಹಾಯಧನಕ್ಕೆ ಅರ್ಹತೆ ಇಲ್ಲದ ವ್ಯಕ್ತಿಗೆ ಕಾರು ನಿಲುಗಡೆಗೆ ಸ್ಥಳ ಕೊಟ್ಟರೆ ಅದು ಸಾರ್ವಜನಿಕ ಸಂಪತ್ತಿನ ವಿವೇಚನೆ ಇಲ್ಲದ ವರ್ಗಾವಣೆ. ಸಂಪನ್ಮೂಲದ ಕೊರತೆ ಎದುರಿಸುತ್ತಿರುವ ಬಿಬಿಎಂಪಿ, ಸ್ಮಾರ್ಟ್ ಪಾರ್ಕಿಂಗ್‌ನಿಂದ ಬಂದ ವರಮಾನದಿಂದ ಸಾರ್ವಜನಿಕ ಸೇವೆಗಳ ಮೇಲೆ ಹೆಚ್ಚಿನ ವೆಚ್ಚ ಮಾಡಲು ಅವಕಾಶ ಇದೆ.

ದೇಶದಾದ್ಯಂತ, ರಸ್ತೆ ಬದಿಯ ವಾಹನ ನಿಲುಗಡೆ ಸ್ಥಳ, ನಗರ ಸ್ಥಳೀಯ ಸಂಸ್ಥೆಗಳ ಮೈದಾನಗಳು, ಜಾಹೀರಾತು ಪ್ರದರ್ಶಿಸುವ ಸಾರ್ವಜನಿಕ ಸ್ಥಳಗಳು ಎಲ್ಲರಿಗೂ ಉಚಿತ; ಶ್ರೀಮಂತ, ಪ್ರಭಾವಿ ಮತ್ತು ನಿರ್ಲಜ್ಜ ಜನರೇ ಇವುಗಳನ್ನು ಆಕ್ರಮಿಸಿಕೊಂಡಿರುತ್ತಾರೆ. ವಾಹನ ನಿಲುಗಡೆ ಸ್ಥಳ, ರೈಲ್ವೆಯ ಸೊತ್ತು, ಹೆದ್ದಾರಿ, ಕಾರ್ಖಾನೆ ಇತ್ಯಾದಿಗಳೇ ಆಗಿರಲಿ, ಇಂತಹ ಬಹಳ ಬೆಲೆ ಬಾಳುವ ಸೊತ್ತುಗಳನ್ನು ವರಮಾನವಾಗಿ ಪರಿವರ್ತಿಸಲು ಭಾರತದ ಸರ್ಕಾರಗಳಿಗೆ ಆಗಿಲ್ಲ. ನೀತಿ ಆಯೋಗದ ರಾಷ್ಟ್ರೀಯ ಆಸ್ತಿ ನಗದೀಕರಣ ಯೋಜನೆಯ ಸಾರ ಏನೆಂದರೆ, ಅದು ಸರ್ಕಾರಗಳಿಗೆ ಹೆಚ್ಚು ನಿಧಿ ಸಂಗ್ರಹಿಸುವ ಸೂತ್ರ.

ಕೋವಿಡ್ ನಂತರದ ಕಾಲದಲ್ಲಿ ಸರ್ಕಾರಗಳು ಹಣಕಾಸಿನ ಗಂಭೀರ ಸವಾಲುಗಳನ್ನು ಎದುರಿಸುತ್ತಿರುವ ಸಂದರ್ಭದಲ್ಲಿ ಇದು ನಿಜಕ್ಕೂ ಮಹತ್ವದ್ದಾಗಿದೆ. ಪರಿಹಾರ, ಸಾರ್ವಜನಿಕ ಆರೋಗ್ಯ ಮತ್ತು ಸಾಮಾಜಿಕ ಕಲ್ಯಾಣಕ್ಕಾಗಿ ಸರ್ಕಾರಗಳು ಹೆಚ್ಚು ಹಣ ಖರ್ಚು ಮಾಡಬೇಕಾಗಿದೆ. ಆದರೆ, ಆರ್ಥಿಕ ಪ್ರಗತಿಯ ನಿಧಾನಗತಿಯಿಂದಾಗಿ ವರಮಾನ ಕಡಿಮೆಯೇ ಇದೆ. ಹಾಗಾಗಿಯೇ ಆಸ್ತಿ ನಗದೀಕರಣವು ಹೆಚ್ಚು ಮುಖ್ಯವಾಗಿದೆ. ಕೆಲವು ವರ್ಷಗಳ ಹಿಂದೆಯೇ ಬಿಎಂಟಿಸಿ ತನ್ನ ಬಸ್ ನಿಲ್ದಾಣಗಳ ಮೇಲೆ ಬಹುಮಹಡಿ ಕಚೇರಿ ಕಟ್ಟಡಗಳನ್ನು ನಿರ್ಮಿಸಿ ಆಸ್ತಿ ನಗದೀಕರಣ ಮಾಡಿಕೊಂಡಿತು.

ಶಾಂತಿ-ಸುವ್ಯವಸ್ಥೆ, ಆರೋಗ್ಯ, ಶಿಕ್ಷಣ, ಸಾರಿಗೆ ಇತ್ಯಾದಿ ಸಾರ್ವಜನಿಕ ಸೇವೆಗಳು ಕಳಪೆ ಆಗಿರಲು ಭ್ರಷ್ಟಾಚಾರ ಮತ್ತು ಅದಕ್ಷತೆ ಕಾರಣ ಎಂದು ದೂರುವುದು ಸುಲಭ. ಆದರೆ, ಹಣದ ಮುಗ್ಗಟ್ಟು ಇರುವಾಗ ಮಾಡಬಹುದಾದುದಕ್ಕೆ ಮಿತಿ ಇದೆ ಎಂಬುದನ್ನು ಹೆಚ್ಚಿನ ಜನರು ಮರೆಯುತ್ತಾರೆ. ಸಾರ್ವಜನಿಕ ಹಣಕಾಸನ್ನು ಸುಸ್ಥಿರವಾಗಿ ಬೆಳೆಸದಿದ್ದರೆ ಆಡಳಿತ ಮತ್ತು ಸಾರ್ವಜನಿಕ ಸೇವೆಗಳು ಸುಧಾರಣೆಯಾಗಲು ಸಾಧ್ಯವಿಲ್ಲ ಎಂಬುದು ಸರಳ ಸತ್ಯ.

ಆಸ್ತಿ ನಗದೀಕರಣದಿಂದಾಗಿ, ಸರ್ಕಾರವು ತನ್ನ ಸೊತ್ತುಗಳ ಮೌಲ್ಯವನ್ನು ಪಡೆದುಕೊಳ್ಳಬೇಕು ಎಂಬ ಗ್ರಹಿಕೆ ಜನರಲ್ಲಿ ಮೂಡುವುದೇ ಯೋಚನಾ ಕ್ರಮದ ಪಲ್ಲಟಕ್ಕೆ ಕಾರಣವಾಗುತ್ತದೆ. ಈ ಯೋಜನೆಯು ಯಶಸ್ವಿಯಾದರೆ, ಸಾಂಕ್ರಾಮಿಕೋತ್ತರದಲ್ಲಿ ವರಮಾನ ಕೊರತೆ ಎದುರಿಸುತ್ತಿರುವ ಸರ್ಕಾರಗಳಿಗೆ ಹಣಕಾಸಿನ ಹೊಸ ಸಂಪನ್ಮೂಲವೊಂದು ದೊರೆಯುತ್ತದೆ.

ಈಗ ನಿಮ್ಮ ಯೋಚನೆ ಏನು ಎಂಬುದು ನನಗೆ ಗೊತ್ತಿದೆ. ಭ್ರಷ್ಟಾಚಾರ ಮತ್ತು ಸ್ವಜನಪಕ್ಷಪಾತದ ಬಗ್ಗೆ ಏನಂತೀರಿ ಎಂಬುದಲ್ಲವೇ? ಎಷ್ಟೇ ಸದುದ್ದೇಶ ಹೊಂದಿರಲಿ, ಗುತ್ತಿಗೆ ಕರಾರು ಎಷ್ಟೇ ಉತ್ತಮವಾಗಿ ವಿನ್ಯಾಸಗೊಂಡಿರಲಿ, ಇವುಗಳಿಂದ ತಪ್ಪಿಸಿಕೊಳ್ಳಲು ಸಾಧ್ಯವಿಲ್ಲ. ಈ ಆಕ್ಷೇಪಕ್ಕೆ ಮನ್ನಣೆ ಕೊಟ್ಟರೆ, ನಮ್ಮಲ್ಲಿ ಭ್ರಷ್ಟಾಚಾರ, ಸ್ವಜನಪಕ್ಷಪಾತ, ಕಾಪಟ್ಯವಷ್ಟೇ ಉಳಿಯುತ್ತವೆ, ಯಾವ ರೀತಿಯ ಸಾರ್ವಜನಿಕ ನೀತಿಯೂ ಇರುವುದಿಲ್ಲ. ಕಾರ್ಯಸಾಧ್ಯ ಪರಿಹಾರವೆಂದರೆ, ಎಷ್ಟು ಸಾಧ್ಯವೋ ಅಷ್ಟರ ಮಟ್ಟಿಗಿನ ಭ್ರಷ್ಟಾಚಾರನಿರೋಧಕ ನೀತಿಯನ್ನು ರೂಪಿಸುವುದು. ಪಾರದರ್ಶಕವಾಗಿರುವಂತೆ ಒತ್ತಡ ಹಾಕುವುದು, ಮಾರುಕಟ್ಟೆ ಸ್ಪರ್ಧಾತ್ಮಕತೆಗೆ ಉತ್ತೇಜನ ಕೊಡುವುದು ಮತ್ತು ತಪ್ಪಿತಸ್ಥರಿಗೆ ಶಿಕ್ಷೆ ನೀಡುವುದು.

ಸೊತ್ತುಗಳ ಖಾಸಗೀಕರಣದ ಬದಲಿಗೆ ಅವುಗಳನ್ನು ನಗದೀಕರಿಸುವುದು ರಾಜಕೀಯವಾಗಿ ಮಧ್ಯಮಮಾರ್ಗ. ಈ ರಾಜಿಯೇ ನೀತಿಯಲ್ಲಿನ ಮೂಲಭೂತ ಮಿತಿಯೂ ಹೌದು. ಬಾಡಿಗೆದಾರ ಮನೆಯನ್ನು ಮಾಲೀಕನಷ್ಟು ಚೆನ್ನಾಗಿ ನೋಡಿಕೊಳ್ಳುವುದಿಲ್ಲ ಎಂಬುದು ಮನೆಯನ್ನು ಬಾಡಿಗೆ ಕೊಟ್ಟವರಿಗೆ ಚೆನ್ನಾಗಿ ಗೊತ್ತಿರುತ್ತದೆ; ಮಾಲೀಕರು ಮತ್ತು ಬಾಡಿಗೆದಾರರಿಗೆ ಆದ್ಯತೆ ಭಿನ್ನವಾಗಿರುತ್ತದೆ.

ಆಸ್ತಿಯನ್ನು ಪಡೆದುಕೊಳ್ಳುವ ಖಾಸಗಿ ಕ್ಷೇತ್ರವು ಅದನ್ನು ಸರ್ಕಾರಕ್ಕಿಂತ ಚೆನ್ನಾಗಿ ನಿರ್ವಹಿಸಲಿದೆ ಎಂಬುದನ್ನು ಸರ್ಕಾರವು ಖಾತರಿಪಡಿಸಿಕೊಳ್ಳಬೇಕಾಗಿದೆ. ಸ್ಪರ್ಧೆ ಮತ್ತು ಮಾರುಕಟ್ಟೆ ವಿಷಯಗಳು ಸ್ವಲ್ಪ ಮಟ್ಟಿಗೆ ನೆರವಾಗಬಹುದು. ಗುತ್ತಿಗೆದಾರ ಸಂಸ್ಥೆಯು ಆಸ್ತಿ ನಿರ್ವಹಣೆ ವೆಚ್ಚ ಕಡಿತ ಮಾಡಬಹುದು. ಹಾಗಾಗಿಯೇ, ಸೊತ್ತಿನ ಉತ್ತಮ ನಿರ್ವಹಣೆಗೆ ಸಂಸ್ಥೆಗೆ ಉತ್ತೇಜನ ಇರುವ ರೀತಿಯಲ್ಲಿ ನಗದೀಕರಣ ಪ್ರಕ್ರಿಯೆಯ ವಿನ್ಯಾಸ ಇರುವಂತೆ ನೋಡಿಕೊಳ್ಳಬೇಕು.

ದೀರ್ಘಾವಧಿಯ ನಂಟಿನಲ್ಲಿ ಹೆಚ್ಚಿನ ದರ ಪಡೆಯುವುದಕ್ಕಿಂತ ಉತ್ತಮ ಹೂಡಿಕೆದಾರರನ್ನು ಆಯ್ಕೆ ಮಾಡಿಕೊಳ್ಳುವುದು ಮುಖ್ಯ. ಗರಿಷ್ಠ ಹಣ ಪಡೆಯಲು ಭಾರಿ ಉತ್ಸಾಹ ತೋರುವ ವ್ಯವಸ್ಥೆಯು ಸರಿಯಾದ ನಿರ್ಧಾರವನ್ನು ಖಾತರಿಪಡಿಸಿಕೊಳ್ಳಲು ಹೊಂದಿರುವ ಮಾನದಂಡಗಳು ಸೀಮಿತ.

ಆಸ್ತಿ ನಗದೀಕರಣವನ್ನು ಪರಿಣಾಮಕಾರಿಯಾಗಿ ಬಳಸುವ ಮೂಲಕ ಕೇಂದ್ರದಿಂದ ಬರುವ ಹಣದ ಮೇಲಿನ ಅವಲಂಬನೆಯನ್ನು ಕಡಿಮೆ ಮಾಡುವ ಅವಕಾಶ ಇರುವ ರಾಜ್ಯಗಳಲ್ಲಿ ಕರ್ನಾಟಕವೂ ಒಂದು. ರಾಜ್ಯವು ಕೇಂದ್ರದ ಮೇಲೆ ಅವಲಂಬಿತವಾಗದೇ ಇರುವುದು ಸಾರ್ವಜನಿಕ ಹಿತಾಸಕ್ತಿಯಿಂದ ಮುಖ್ಯ.

ಲೇಖಕ: ತಕ್ಷಶಿಲಾ ಇನ್‌ಸ್ಟಿಟ್ಯೂಟ್‌ನ ನಿರ್ದೇಶಕ

ಲೇಖನದ ಇಂಗ್ಲಿಷ್ ಅವತರಣಿಕೆಯು 'ಮಿಂಟ್'ನಲ್ಲಿ ಪ್ರಕಟವಾಗಿದೆ

ಪದಬಂಧ 4743

– ವಿದ್ಯಾ ವಿನಯ್

1		2	■	3	■	4	■	5
	■		■	6				
7			■		■		■	
	■	■	8	■	9	■	■	
■	■	10					■	■
11	■	■		■		■	■	12
	■	13	■	14	■	15		
16					■		■	
	■		■		■	17		

ಎಡದಿಂದ ಬಲಕ್ಕೆ

1.ಸಾಗಾಣೆ ಮೇಲಿನ ತೆರಿಗೆ (3)
6.ಉತ್ತರ ಕೊಟ್ಟದ್ದಕ್ಕೇ ಈ ಹೊಣೆಗಾರಿಕೆ! (5)
7.ವ್ಯಾಕರಣ ಶಾಸ್ತ್ರವನ್ನು ತಿಳಿದವನು (3)
10.ಸಮಯಕ್ಕೆ ಸರಿಯಾದುದು (5)
15.ನಡುವೆ ಜೇ ಎಂದಾಗಲೇ ಈ ಪೀಕಲಾಟ! (3)
16.ಈತ ದಾರಿ ತೋರುವವನು (5)
17.ದನದ ಸಲುವಾಗಿ ನಡೆದ ಹೋರಾಟ (3)

ಮೇಲಿಂದ ಕೆಳಕ್ಕೆ

1. ಗೆಲುವನ್ನು ಪಡೆದವನೀತ (4)
2.ಕರುವಿನ ಬಳಿಯಿರುವ ಭಿಕ್ಷುಕ (3)
3.ಹಳೆ ಸಾಮಾನುಗಳನ್ನು ಮಾರುವ ಅಂಗಡಿ (3)
4.ಅಂಬು ಬಿದ್ದಿರುವ ಸಮುದ್ರ (3)
5.ಕೊಬ್ಬರಿ ಇತ್ಯಾದಿಗಳನ್ನು ತುರಿಯುವ ಸಾಧನ (4)
8.ರಾಗಬದ್ಧವಾಗಿ ಕಾವ್ಯವನ್ನು ಓದುವಿಕೆ (3)
9.ಖಚಿತವಾಗಿಯೂ ಕನ್ನಡಿಗನಿಗೆ ಇದು 'ಫ್ರೀ'! (3)
11. ಮಾನದೊಡನಿರುವ ಗುಮಾನಿ (4)
12.ದಡ್ಡನು ಮನದಲ್ಲಿದ್ದಾನಲ್ಲಾ? (4)
13.ಈಕೆ ಬಲು ಚಲುವೆ (3)
14.ಕೂದಲಿಲ್ಲದೆ ಬೋಳಾದುದು (3)
15.ಫಲದ ಬಳಿಯಿರುವ ಢಾಲು (3)

ಗುಂಡಣ್ಣ

ದಿನ ಭವಿಷ್ಯ

ಶನಿವಾರ ಅಕ್ಟೋಬರ್ 9, 2021

ಶ್ರೀ ಪ್ಲವ ನಾಮ ಸಂವತ್ಸರ ದಕ್ಷಿಣಾಯಣ ಶರದೃತು ಆಶ್ವಯುಜ ಮಾಸ ಶುಕ್ಲ ಪಕ್ಷ ಮಳೆ ನಕ್ಷತ್ರ ಹಸ್ತ ತೃತೀಯಾ ಗಂ. 12-4 (ಹ. 11-05) ಶನಿವಾರ ನಿತ್ಯ ನಕ್ಷತ್ರ ವಿಶಾಖಾ ಗಂ. 36-57 (ರಾ. 9-02) ಪ್ರೀತಿ ನಾಮ ಯೋಗ ಗಂ. 42-55 ಗರಜ ಕರಣ ಗಂ. 12-4 ವಿಷ ಗಂ. 46-16 ಅಮೃತ ಗಂ 16-12 : ರಾಹುಕಾಲ ಬೆ. ಗಂ. 9-00 ರಿಂದ 10-30 ಗುಳಿಕ ಕಾಲ ಬೆ. ಗಂ 6-00 ರಿಂದ 7-30 ಯಮಗಂಡ ಮ. ಕಾಲ ಗಂ 1-30 ರಿಂದ 3-00 : ಸೂರ್ಯೋದಯ: 6-13 ಸೂರ್ಯಾಸ್ತ: 6-01 ಅದೃಷ್ಟ ಸಂಖ್ಯೆ 2 3

ಮೇಷ: ಹೊಸದಾಗಿ ಪ್ರಾರಂಭಿಸಿರುವ ಉದ್ಯಮದಲ್ಲಿ ಪ್ರಗತಿ. ಮಹಿಳೆಯರಿಗೆ ರಾಜಕೀಯದಲ್ಲಿ ಉನ್ನತ ಸ್ಥಾನಮಾನ ದೊರಕುವ ಸಾಧ್ಯತೆ. ವಿವಾಹಾಕಾಂಕ್ಷಿಗಳಿಗೆ ವಿವಾಹ ಸಂಬಂಧಿ ಮಾತುಕತೆಗಳು ನಡೆಯಲಿವೆ.

ವೃಷಭ: ಕೃಷಿ ಕ್ಷೇತ್ರದಲ್ಲಿ ದುಡಿಯುವವರಿಗೆ ಅನಿರೀಕ್ಷಿತ ಬಿಡುವಿನಿಂದಾಗಿ ಆಲಸ್ಯ. ತರಕಾರಿ, ಹೂವು ಹಣ್ಣು ವ್ಯವಹಾರಸ್ಥರಿಗೆ ವ್ಯವಹಾರದಲ್ಲಿ ಸ್ವಲ್ಪ ಮಟ್ಟಿನ ಇಳಿಕೆ. ಪ್ರಯಾಣದಲ್ಲಿ ಹಿತಾನುಭವ. ದೇವತಾದರ್ಶನ ಭಾಗ್ಯ.

ಮಿಥುನ: ಸರ್ಕಾರದಿಂದ ಆಗಬೇಕಾದ ಕೆಲಸಗಳು ವಿಳಂಬವಾಗುವ ಸಾಧ್ಯತೆ. ದಿನನಿತ್ಯದ ವ್ಯಾಪಾರ ವ್ಯವಹಾರ ಸುಗಮವಾಗಿ ಸಾಗಲಿದೆ. ನಿರೀಕ್ಷಿತ ಆದಾಯ ದೊರಕಲಿದೆ. ವಿದ್ಯಾರ್ಥಿಗಳಿಗೆ ವ್ಯಾಸಂಗದಲ್ಲಿ ಪ್ರಗತಿ.

ಕರ್ಕಾಟಕ: ಸ್ವಯಂ ಉದ್ಯೋಗ ನಡೆಸುತ್ತಿರುವವರಿಗೆ ಉತ್ತಮ ವ್ಯವಹಾರ ಹಾಗೂ ಆದಾಯ ದೊರಕಲಿದೆ. ಸಂಬಂಧಿಕರ ನೆರವಿಗಾಗಿ ಧಾವಿಸಬೇಕಾದ ಅನಿವಾರ್ಯತೆ ಉಂಟಾದೀತು. ಮಕ್ಕಳ ವಿದ್ಯಾಭ್ಯಾಸದಲ್ಲಿನ ಪ್ರಗತಿ.

ಸಿಂಹ: ಕ್ರೀಡಾಪಟುಗಳಿಗೆ ಸ್ಪರ್ಧೆಗಳಲ್ಲಿ ಹಿನ್ನಡೆ ಸಾಧ್ಯತೆ. ಸಂಶೋಧಕರು, ವಿಜ್ಞಾನಿಗಳಿಗೆ ಉದ್ಯೋಗದಲ್ಲಿ ಪ್ರಗತಿಯೊಂದಿಗೆ ಪದೋನ್ನತಿ ದೊರಕಲಿದೆ. ಸಂಗಾತಿಯ ಆರೋಗ್ಯದ ಬಗ್ಗೆ ಕಾಳಜಿ ವಹಿಸುವುದು ಅವಶ್ಯ.

ಕನ್ಯಾ: ಯಂತ್ರೋಪಕರಣಗಳ ವ್ಯವಹಾರದಲ್ಲಿ ಕೈ ಸುಟ್ಟುಕೊಳ್ಳುವ ಸಾಧ್ಯತೆ ಇದ್ದು ದಿನದ ಮಟ್ಟಿಗೆ ವ್ಯವಹಾರಕ್ಕೆ ಕೈಹಾಕದಿರುವುದು ಉತ್ತಮ. ಹಿರಿಯರ ಆರೋಗ್ಯದಲ್ಲಿ ಚೇತರಿಕೆ ಕಂಡುಬರಲಿದೆ.

ತುಲಾ: ಬ್ಯಾಂಕ್ ಮತ್ತು ಹಣಕಾಸು ಸಂಸ್ಥೆ ನಡೆಸುವವರಿಗೆ ವ್ಯವಹಾರದಲ್ಲಿ ಹೆಚ್ಚಿನ ಲಾಭ. ಚಿನ್ನ ಬೆಳ್ಳಿ ವ್ಯವಹಾರಸ್ಥರಿಗೆ ವ್ಯವಹಾರದಲ್ಲಿ ಸ್ವಲ್ಪ ಮಟ್ಟಿನ ಕೊರತೆ. ಸಂಸಾರಿಕ ನೆಮ್ಮದಿ ದೊರಕಲಿದೆ.

ವೃಶ್ಚಿಕ: ರಾಜಕೀಯ ವ್ಯಕ್ತಿಗಳಿಗೆ ವಿಶೇಷವಾಗಿ ಮಹಿಳಾ ರಾಜಕಾರಣಿಗಳಿಗೆ ಉತ್ತಮ ಕಾಲವಾಗಿದ್ದು ಉನ್ನತ ಹುದ್ದೆಯನ್ನು ಏರುವ ಸಾಧ್ಯತೆಗಳು ಕಂಡುಬರುತ್ತಿದೆ. ಸ್ವಯಂ ಉದ್ಯೋಗಿಗಳಿಗೆ ಆದಾಯದಲ್ಲಿ ಹೆಚ್ಚಳ.

ಧನು: ಆದಾಯ ತರುವ ಹೊಸ ಯಂತ್ರವೊಂದನ್ನು ಖರೀದಿಸಲಿದ್ದೀರಿ. ರೈತಾಪಿ ವರ್ಗದವರಿಗೆ ಆಶಾದಾಯಕ ವಾತಾವರಣ. ಗಡ್ಡೆ ಗೆಣಸುಗಳ ಬೆಳೆಗಾರರಿಗೆ ಹೆಚ್ಚಿನ ಆದಾಯದ ನಿರೀಕ್ಷೆ. ಆರೋಗ್ಯದಲ್ಲಿ ಸುಧಾರಣೆ ಕಂಡುಬರುವುದು.

ಮಕರ: ಯಂತ್ರೋಪಕರಣಗಳ ಖರೀದಿ ಸಾಧ್ಯತೆ. ವಾಹನಗಳ ವ್ಯವಹಾರದಿಂದಾಗಿ ಉತ್ತಮ ಲಾಭ. ಕುಟುಂಬ ಸಮೇತ ಪ್ರಯಾಣ ನಡೆಸುವ ಸಾಧ್ಯತೆ. ಪ್ರಿಯ ವ್ಯಕ್ತಿಗಳ ದರ್ಶನದಿಂದ ಸಂತಸ.

ಕುಂಭ: ತಾಂತ್ರಿಕ ಕ್ಷೇತ್ರದಲ್ಲಿ ದುಡಿಯುವವರಿಗೆ ಸ್ವಲ್ಪ ಮಟ್ಟಿನ ಬಿಡುವು ಉಂಟಾಗಲಿದೆ. ಹೊಸ ಉದ್ಯಮ ಸ್ಥಾಪನೆ ವಿಚಾರವಾಗಿ ಪರಿಣತರ ಸಲಹೆ ಪಡೆಯಲಿದ್ದೀರಿ.

ಮೀನ: ವಿವಾಹಾಕಾಂಕ್ಷಿಗಳಿಗೆ ಕಂಕಣಭಾಗ್ಯ. ಸರ್ಕಾರಿ ನೌಕರರಿಗೆ ಸಹೋದ್ಯೋಗಿಗಳಿಂದ ಉತ್ತಮ ಸಹಕಾರ ದೊರಕುವುದರಿಂದ ಕಾರ್ಯಾನುಕೂಲ. ಸಹೋದರಿಯರಿಂದ ಸಂತೋಷದ ವಿಷಯಗಳು ಕೇಳಿಬರಲಿವೆ.

ನಿಮ್ಮ ಜನ್ಮದಿನ 9-ಅಕ್ಟೋಬರ್ ಇಂದು ಅತ್ಯಂತ ಶುಭದಾಯಕವಾಗಿದ್ದು, ನಿರೀಕ್ಷಿತ ಆದಾಯವು ಹರಿದುಬರಲಿದೆ. ಆರೋಗ್ಯದಲ್ಲಿ ಸದೃಢರಾದ ನೀವು ದುಡುಕು ಸ್ವಭಾವವನ್ನು ಮೈಗೂಡಿಸಿಕೊಂಡಿರುವುದರಿಂದಾಗಿ ಸಂಕಷ್ಟಗಳು ಎದುರಾಗುವ ಸಾಧ್ಯತೆ. ಆಸ್ತಿಗೆ ಸಂಬಂಧಿಸಿದ ವ್ಯವಹಾರದಲ್ಲಿ ಹಿನ್ನಡೆಯನ್ನು ಅನುಭವಿಸಬೇಕಾದೀತು.

ವಿಷಾದ

ಅಕ್ಟೋಬರ್ 7 ಮತ್ತು 8ರ ಸಂಚಿಕೆಯಲ್ಲಿ ಪದಬಂಧದ (ಸಂಖ್ಯೆ 4741 ಮತ್ತು 4742) ಸುಳಿವುಗಳು ಪ್ರಮಾದವಶಾತ್ ಪುನರಾವರ್ತನೆಆಗಿವೆ. ಇದಕ್ಕಾಗಿ ವಿಷಾದಿಸುತ್ತೇವೆ.

-ಸಂ

ಸುಡೊಕು 5129

	7			9			6	
1		9	6	4				
	6		5		2		9	
9		2				3		6
	4			5			7	
8		7	2		4	1		9
7			4		5		2	
				2		7		4
		4	1		9		3	

5128 ಸುಡೊಕು

6	4	2	9	5	7	1	8	3
8	9	5	1	3	6	2	4	7
7	1	3	2	8	4	6	5	9
3	2	6	5	4	9	7	1	8
9	8	7	6	1	2	4	3	5
1	5	4	3	7	8	9	6	2
5	7	9	8	6	1	3	2	4
2	6	8	4	9	3	5	7	1
4	3	1	7	2	5	8	9	6

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

ಹಾನಗಲ್ ಕ್ಷೇತ್ರ: ಬಿಜೆಪಿಯ ಶಿವರಾಜ ಸಜ್ಜನರ ನಾಮಪತ್ರ ಸಲ್ಲಿಕೆ

ಸಿಂದಗಿ: ಕಾಂಗ್ರೆಸ್, ಬಿಜೆಪಿ ಶಕ್ತಿ ಪ್ರದರ್ಶನ

ಪ್ರಜಾವಾಣಿ ವಾರ್ತೆ

ಪ್ರಜಾ ಮತ ಜನತಂತ್ರದ ಹಬ್ಬ 2021

ವಿಜಯಪುರ: ಅ.30ರಂದು ನಡೆಯಲಿರುವ ಉಪಚುನಾವಣೆಗೆ ನಾಮಪತ್ರವನ್ನು ಸಲ್ಲಿಸಲು ಕೊನೆಯ ದಿನವಾಗಿದ್ದ ಶುಕ್ರವಾರ ಕಾಂಗ್ರೆಸ್ ಹಾಗೂ ಬಿಜೆಪಿ ಶಕ್ತಿ ಪ್ರದರ್ಶನಕ್ಕೆ ಸಿಂದಗಿ ವಿಧಾನಸಭಾ ಕ್ಷೇತ್ರ ಸಾಕ್ಷಿಯಾಯಿತು.

ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ, ವಿಧಾನ ಪರಿಷತ್ ವಿರೋಧ ಪಕ್ಷದ ನಾಯಕ ಎಸ್.ಆರ್.ಪಾಟೀಲ, ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್, ಕಾರ್ಯಾಧ್ಯಕ್ಷ ಈಶ್ವರ ಖಂಡ್ರೆ ನೇತೃತ್ವದಲ್ಲಿ ಕಾಂಗ್ರೆಸ್ ಅಭ್ಯರ್ಥಿ ಅಶೋಕ ಮನಗೂಳಿ ನಾಮಪತ್ರ ಸಲ್ಲಿಸಿದರು.

ಸಚಿವರಾದ ಗೋವಿಂದ ಕಾರಜೋಳ, ಕೆ.ಎಸ್.ಈಶ್ವರಪ್ಪ, ವಿ.ಸೋಮಣ್ಣ, ಬೈರತಿ ಬಸವರಾಜ್, ಶಶಿಕಲಾ ಜೊಲ್ಲೆ ನೇತೃತ್ವದಲ್ಲಿ ಬಿಜೆಪಿ ಅಭ್ಯರ್ಥಿ ರಮೇಶ ಭೂಸನೂರ ಅವರು ಮೆರವಣಿಗೆ ಮೂಲಕ ತೆರಳಿ ನಾಮಪತ್ರ ಪತ್ರ ಸಲ್ಲಿಸಿದ್ದರು. ಬಳಿಕ ನಡೆದ ಎರಡೂ ಪಕ್ಷಗಳ ಪ್ರತ್ಯೇಕ ಸಾರ್ವಜನಿಕ ಸಭೆಯಲ್ಲಿ ಅಪಾರ ಸಂಖ್ಯೆಯಲ್ಲಿ ಪಕ್ಷದ ಕಾರ್ಯಕರ್ತರು, ಬೆಂಬಲಿಗರು ಪಾಲ್ಗೊಂಡಿದ್ದರು. ಒಟ್ಟು 8 ಅಭ್ಯರ್ಥಿಗಳು ನಾಮಪತ್ರ ಸಲ್ಲಿಸಿದ್ದಾರೆ.

ಹಾನಗಲ್: ಶಿವರಾಜ ಸಜ್ಜನರ ನಾಮಪತ್ರ ಸಲ್ಲಿಕೆ

ಹಾನಗಲ್ (ಹಾವೇರಿ ಜಿಲ್ಲೆ) ವರದಿ: ಹಾನಗಲ್ ವಿಧಾನಸಭೆ ಉಪ ಚುನಾವಣೆಯ ಬಿಜೆಪಿ ಅಭ್ಯರ್ಥಿ ಶಿವರಾಜ ಸಜ್ಜನರ ಇಲ್ಲಿ ನಾಮಪತ್ರ ಸಲ್ಲಿಸಿದರು. ಈ ವೇಳೆ ಸಾವಿರಾರು ಬಿಜೆಪಿ ಕಾರ್ಯಕರ್ತರು ಸೇರಿದ್ದರು.

ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ನಳಿನ್ ಕುಮಾರ ಕಟೀಲ್, ಸಂಸದ ಶಿವಕುಮಾರ ಉದಾಸಿ, ಸಚಿವರಾದ ಶಿವರಾಮ ಹೆಬ್ಬಾರ, ಬಿ.ಸಿ.ಪಾಟೀಲ, ಮುರಗೇಶ ನಿರಾಣಿ, ಸುರಪುರ ಶಾಸಕ ರಾಜು ಗೌಡ, ಹೊಳಲ್ಕೆರೆ ಶಾಸಕ ಚಂದ್ರಪ್ಪ, ಬ್ಯಾಡಗಿ, ಶಾಸಕ ವಿರುಪಾಕ್ಷಪ್ಪ ಬಳ್ಳಾರಿ, ರಾಣೆಬೆನ್ನೂರ ಶಾಸಕ ಅರುಣಕುಮಾರ ಪೂಜಾರ, ಶಿರಹಟ್ಟಿ ಶಾಸಕ ರಾಮಣ್ಣ ಲಮಾಣಿ, ರಾಜ್ಯ ಉಗ್ರಾಣ ನಿಗಮದ ಅಧ್ಯಕ್ಷ ಯು.ಬಿ.ಬಣಕಾರ, ರಾಜ್ಯ ಬಿಜೆಪಿ ಪ್ರಧಾನ ಕಾರ್ಯದರ್ಶಿ ರವಿಕುಮಾರ, ಮಹೇಶ ಟೆಂಗಿನಕಾಯಿ, ಒಬಿಸಿ ಘಟಕದ ರಾಜ್ಯ ಉಪಾಧ್ಯಕ್ಷ ಭೋಜರಾಜ ಕರೂದಿ ಇದ್ದರು.

ಒಟ್ಟು 29 ಅಭ್ಯರ್ಥಿಗಳು ನಾಮಪತ್ರ ಸಲ್ಲಿಸಿದ್ದಾರೆ. ಅ.11ರಂದು ನಾಮಪತ್ರಗಳ ಪರಿಶೀಲನೆ ನಡೆಯಲಿದ್ದು, ಅ.13 ನಾಮಪತ್ರಗಳನ್ನು ಹಿಂಪಡೆಯಲು ಕೊನೆಯ ದಿನವಾಗಿದೆ.

ಸಿಂದಗಿ ವಿಧಾನಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಅಶೋಕ ಮನಗೂಳಿ ಶುಕ್ರವಾರ ನಾಮಪತ್ರ ಸಲ್ಲಿಸುವುದಕ್ಕೂ ಮುನ್ನ ಪಟ್ಟಣದಲ್ಲಿ ನಡೆದ ಮೆರವಣಿಗೆಯಲ್ಲಿ ಪಾಲ್ಗೊಂಡಿದ್ದ ಜನಸ್ತೋಮ –ಪ್ರಜಾವಾಣಿ ಚಿತ್ರ

ರಮೇಶ ಭೂಸನೂರ (ಸಿಂದಗಿ, ಬಿಜೆಪಿ)	
ಅಭ್ಯರ್ಥಿ	ಬಿಜೆಪಿ
ವಯಸ್ಸು	60
ವಿದ್ಯಾರ್ಹತೆ	ಬಿಎ
ವೃತ್ತಿ	ಕೃಷಿ, ಸಮಾಜ ಸೇವೆ
ಕೈಯಲ್ಲಿರುವ ನಗದು	ಸ್ವಂತ ₹3 ಲಕ್ಷ, ಪತ್ನಿ ಲಲಿತಾಬಾಯಿ ಬಳಿ ₹1ಲಕ್ಷ
ಬ್ಯಾಂಕ್ ಖಾತೆಯಲ್ಲಿ	ಸ್ವಂತ ₹16 ಲಕ್ಷ, ಪತ್ನಿ ಬಳಿ ₹11ಲಕ್ಷ
ವಿಮಾಕಂಪನಿ	₹5 ಲಕ್ಷ ಎಲ್ಐಸಿ, ಎಸ್‌ಬಿಐ ಲೈಫ್ ಇನ್ಸುರೆನ್ಸ್ ವಾರ್ಷಿಕ ಪ್ರೀಮಿಯಂ ₹5.50 ಲಕ್ಷ. ಪತ್ನಿ: ₹3 ಲಕ್ಷ ಎಲ್ಐಸಿ, ಎಸ್‌ಬಿಐ ಲೈಫ್ ಇನ್ಸುರೆನ್ಸ್ ವಾರ್ಷಿಕ ಪ್ರೀಮಿಯಂ ₹ 60 ಸಾವಿರ
ಹೂಡಿಕೆ	ಸ್ವಂತ- ರಿಲಯನ್ಸ್ ಪಾಲಿಸಿ ₹1.50 ಲಕ್ಷ, ಇಂಡಿ ತಾಲ್ಲೂಕಿನ ಮರಗೂರ ಭೀಮಾಶಂಕರ ಸಕ್ಕರೆ ಕಾರ್ಖಾನೆ ಷೇರು ₹ 2 ಸಾವಿರ
ವಾಹನಗಳು	ಮಾರುತಿ ಸ್ವಿಫ್ಟ್ ಡಿಸೈರ್ ಕಾರು(₹7.36 ಲಕ್ಷ), ಟಯೊಟಾ ಫಾರ್ಚ್ಯೂನರ್(₹36 ಲಕ್ಷ). ಪತ್ನಿ ಬಳಿ: ಸ್ಕೂಟಿ(₹30 ಸಾವಿರ), ಹೊಂಡ ಕಾರು(₹14ಲಕ್ಷ)
ಆಭರಣ	200 ಗ್ರಾಂ ಬಂಗಾರ(₹9ಲಕ್ಷ). ಪತ್ನಿ ಬಳಿ: 4 ಡೈಮಂಡ್ ಬಳೆ ಮತ್ತು 500 ಗ್ರಾಂ ಬಂಗಾರದ ಬಳೆ(₹25 ಲಕ್ಷ), 5 ಕೆ.ಜಿ. ಬೆಳ್ಳಿ(₹4ಲಕ್ಷ)
ಒಟ್ಟು ಚರಾಸ್ತಿ ಮೌಲ್ಯ	₹52.35 ಲಕ್ಷ. ಪತ್ನಿ ₹32.70 ಲಕ್ಷ
ಒಟ್ಟು ಸ್ಥಿರಾಸ್ತಿ ಮೌಲ್ಯ	ಸ್ಥಿರಾಸ್ತಿ ₹92.32 ಲಕ್ಷ. ಪತ್ನಿ ₹1.07 ಕೋಟಿ
ಸ್ವಯಾರ್ಜಿತ ಸ್ವತ್ತುಗಳು	₹36.28 ಲಕ್ಷ. ಪತ್ನಿ ₹30.67 ಲಕ್ಷ
ಬ್ಯಾಂಕ್ ಸಾಲ	₹ 29 ಲಕ್ಷ. ಪತ್ನಿ ಸಾಲ ₹4 ಲಕ್ಷ

ಅಶೋಕ ಮನಗೂಳಿ (ಸಿಂದಗಿ, ಕಾಂಗ್ರೆಸ್)	
ಅಭ್ಯರ್ಥಿ	ಕಾಂಗ್ರೆಸ್
ವಯಸ್ಸು	53
ವಿದ್ಯಾರ್ಹತೆ	ಬಿ.ಎ
ವೃತ್ತಿ	ಕೃಷಿ ಮತ್ತು ವ್ಯಾಪಾರ
ಕೈಯಲ್ಲಿರುವ ನಗದು	₹3.50 ಲಕ್ಷ, ಪತ್ನಿ ನಾಗರತ್ನ ಬಳಿ ₹ 50 ಸಾವಿರ
ಬ್ಯಾಂಕ್ ಖಾತೆಯಲ್ಲಿ	ಸ್ವಂತ ₹5,03,963, ಪತ್ನಿಯ ಬಳಿ ₹2,54,314
ವಿಮೆ	ವಾರ್ಷಿಕ ಪ್ರೀಮಿಯಂ ಮೊತ್ತ ₹ 34,451. ಪತ್ನಿಯ ವಾರ್ಷಿಕ ಪ್ರೀಮಿಯಂ ಮೊತ್ತ ₹33,398
ಸ್ವಂತ ಹೂಡಿಕೆ	ವಿವಿಧೆಡೆ ಹೂಡಿಕೆಗಳ ಷೇರಿನ ಮೊತ್ತ ₹4.88 ಲಕ್ಷ
ಪತ್ನಿ ಹೂಡಿಕೆ	ವಿವಿಧೆಡೆ ಹೂಡಿಕೆಗಳ ಷೇರಿನ ಮೊತ್ತ ₹2.63 ಲಕ್ಷ
ವಾಹನಗಳು	ಟಾಟಾ ಸಫಾರಿ (₹17 ಲಕ್ಷ). ಪತ್ನಿ ಬಳಿ ಪೋರ್ಡ್ ಕಾರು(₹45 ಲಕ್ಷ)
ಆಭರಣ	ಸ್ವಂತ 50 ಗ್ರಾಂ ಬಂಗಾರ(₹2.25ಲಕ್ಷ). ಪತ್ನಿ ಬಳಿ 200 ಗ್ರಾಂ ಬಂಗಾರ(₹9 ಲಕ್ಷ), ಬೆಳ್ಳಿ 900 ಗ್ರಾಂ(₹54 ಸಾವಿರ)
ಒಟ್ಟು ಚರಾಸ್ತಿ ಮೌಲ್ಯ	ಸ್ವಂತ ₹33,46,765, ಪತ್ನಿ ಬಳಿ ₹60,52,713
ಒಟ್ಟು ಸ್ಥಿರಾಸ್ತಿ ಮೌಲ್ಯ	₹ 6.36 ಕೋಟಿ, ಪತ್ನಿ ಬಳಿ ₹3.25 ಲಕ್ಷ
ಬ್ಯಾಂಕ್ ಸಾಲ	₹ 86,65,416, ಪತ್ನಿ ಸಾಲ ₹37,55,215

ಕೃಷಿ ಭೂಮಿ(19 ಎಕರೆ 37 ಗುಂಟೆ), ಕೃಷಿಯೇತರ ಭೂಮಿ, ವಾಣಿಜ್ಯ ಕಟ್ಟಡಗಳು, ವಸತಿ ಕಟ್ಟಡಗಳು, ನಿವೇಶನಗಳು, ಖಾಲಿ ನಿವೇಶನಗಳು ಸೇರಿದಂತೆ ಒಟ್ಟು ₹6.36 ಕೋಟಿ ಹಾಗೂ ಪತ್ನಿ ಬಳಿ ₹ 3.35 ಲಕ್ಷ ಮೊತ್ತದ ಬಾಬ್ತುಗಳಿವೆ.

‘ಬುದ್ಧಿವಂತರು ಜೆಡಿಎಸ್‌ಗೆ ಮತ ಹಾಕುವುದಿಲ್ಲ’

ವಿಜಯಪುರ: ‘ಜೆಡಿಎಸ್ ಉದ್ದೇಶ ಏನೇ ಇದ್ದರೂ ಬುದ್ಧಿವಂತ ಮತದಾರರು ಅವರಿಗೆ ಮತ ಹಾಕುವುದಿಲ್ಲ’ ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಲೇವಡಿ ಮಾಡಿದರು.

ಸಿಂದಗಿಯಲ್ಲಿ ಶುಕ್ರವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ‘ಉಪ ಚುನಾವಣೆಯು ಕಾಂಗ್ರೆಸ್‌ಗೆ ಬಯಸದೆ ಬಂದ ಭಾಗ್ಯ. ಎರಡು ಕ್ಷೇತ್ರಗಳಲ್ಲಿ ಕಾಂಗ್ರೆಸ್ ಗೆಲುವು ನಿಶ್ಚಿತ’ ಎಂದರು.

ಬಿಜೆಪಿ ನೇತೃತ್ವದ ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ದುರಾಡಳಿತದಿಂದ ಬೇಸತ್ತಿರುವ ಮತದಾರರು ಎರಡು ಕ್ಷೇತ್ರಗಳಲ್ಲಿ ಕಾಂಗ್ರೆಸ್ ಪಕ್ಷವನ್ನು ಬೆಂಬಲಿಸಲಿದ್ದಾರೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ ಅವರು, ‘ದಿ. ಎಂ.ಸಿ.ಮನಗೂಳಿ ಅವರು ನನ್ನ ಮತ್ತು ಸಿದ್ದರಾಮಯ್ಯ ಅವರನ್ನು ಭೇಟಿಯಾಗಿ ತಮ್ಮ ಪುತ್ರ ಅಶೋಕನನ್ನು ಕಾಂಗ್ರೆಸ್‌ಗೆ ಸೇರಿಸಿಕೊಂಡು ಬೆಳೆಸಲು ಮನವಿ ಮಾಡಿದ್ದರು. ಅವರ ಆಶಯದಂತೆ ಸೇರ್ಪಡೆ ಮಾಡಿಕೊಂಡು ಅಶೋಕ್ ಅವರಿಗೆ ಟಿಕೆಟ್ ನೀಡಿದ್ದೇವೆ. ಅವರ ಗೆಲ್ಲಿಸುವ ಜವಾಬ್ದಾರಿ ನಮ್ಮದು’ ಎಂದರು.

‘ಈ ಉಪಚುನಾವಣೆ ಬಿಜೆಪಿ ಸರ್ಕಾರಗಳ ವೈಫಲ್ಯಕ್ಕೆ ತಕ್ಕ ಪಾಠ ಕಲಿಸಲು ಬಂದಿದೆ. ಸಿಂದಗಿ ಮತ್ತು ಹಾನಗಲ್ ಎರಡು ಕ್ಷೇತ್ರಗಳಲ್ಲಿ ಕಾಂಗ್ರೆಸ್ 25 ಸಾವಿರ ಮತಗಳ ಅಂತರದಿಂದ ಗೆಲ್ಲಲಿದೆ’ ಎಂದು ಶಿವಕುಮಾರ್ ವಿಶ್ವಾಸ ವ್ಯಕ್ತಪಡಿಸಿದರು.

ಮುಂದಿನ ವಿಧಾನಸಭೆ ಚುನಾವಣೆಗೆ ಮೊದಲು ಕಾಂಗ್ರೆಸ್ ಎರಡು ಹೋಳಾಗಲಿದೆ. ಸಿದ್ದರಾಮಯ್ಯ, ಡಿ.ಕೆ. ಶಿವಕುಮಾರ್ ಸದ್ಯ ಅನಿವಾರ್ಯವಾಗಿ ಒಂದಾಗಿದ್ದಾರೆ

ಕೆ.ಎಸ್.ಈಶ್ವರಪ್ಪ, ಸಚಿವ

ಬಿಜೆಪಿಯವರು ಉತ್ತಮ ಆಡಳಿತ ನೀಡಲಾಗದೇ ಯಡಿಯೂರಪ್ಪ ಅವರನ್ನು ಮನೆಯಲ್ಲಿ ಇರಿಸಿದರು. ಈಗ ಯಾವ ಏಟು ಹೊಡೆಯುತ್ತಿದ್ದಾರೆ ನೀವೇ ನೋಡುತ್ತಿದ್ದಿರಿ

ಡಿ.ಕೆ.ಶಿವಕುಮಾರ್, ಅಧ್ಯಕ್ಷ ಕೆಪಿಸಿಸಿ

ಶಿವರಾಜ್ ಶರಣಪ್ಪ ಸಜ್ಜನರ (ಹಾನಗಲ್, ಬಿಜೆಪಿ)		
ವಯಸ್ಸು	63	
ವಿದ್ಯಾರ್ಹತೆ	ಬಿಎಸ್ಸಿ, ಡಿ.ಫಾರ್ಮಾ	
ವೃತ್ತಿ	ಕೃಷಿ	
ಕೈಯಲ್ಲಿರುವ ನಗದು	ಸ್ವಂತ ₹1 ಲಕ್ಷ, ಪತ್ನಿ ಹೇಮಾ ಬಳಿ	₹50 ಸಾವಿರ
ಬ್ಯಾಂಕ್ ಖಾತೆಯಲ್ಲಿ	ಸ್ವಂತ ₹16 ಲಕ್ಷ, ಪತ್ನಿ ಖಾತೆಯಲ್ಲಿ	₹24 ಲಕ್ಷ
ಹೂಡಿಕೆ	ವಿವಿಧೆಡೆ ₹1.4 ಕೋಟಿ, ಪತ್ನಿ ಹೂಡಿಕೆ ₹ 26 ಲಕ್ಷ	
ವಾಹನಗಳು	ಇನ್ನೋವಾ ಕಾರು	
ಆಭರಣ	ಸ್ವಂತ 90 ಗ್ರಾಂ	
ಒಟ್ಟು ಚರಾಸ್ತಿ ಮೌಲ್ಯ	₹16 ಲಕ್ಷ	
ಒಟ್ಟು ಸ್ಥಿರಾಸ್ತಿ ಮೌಲ್ಯ	₹ 2.82 ಕೋಟಿ	
ಸಾಲ	₹ 3 ಲಕ್ಷ	

‘ಜಾತ್ಯತೀತತೆ ಉಳಿಸಲು ಬೆಂಬಲಿಸಿ’

ರಾಮನಗರ: ‘ಜಾತ್ಯತೀತತೆ ಉಳಿಸಲು ಅಲ್ಪಸಂಖ್ಯಾತರು ಜೆಡಿಎಸ್ ಇಲ್ಲವೇ ಕಾಂಗ್ರೆಸ್ ಬೆಂಬಲಿಸಿ ಎಂದು ಮುಕ್ತವಾಗಿ ಹೇಳಿದ್ದೇನೆ’ ಎಂದು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ. ಕುಮಾರಸ್ವಾಮಿ ಹೇಳಿದರು.

‘ಎಲ್ಲಿ ಬಿಜೆಪಿಗಿಂತ ಕಾಂಗ್ರೆಸ್ ಮುಂದೆ ಇದೆಯೋ ಅಲ್ಲಿ ಕಾಂಗ್ರೆಸ್, ಎಲ್ಲಿ ಬಿಜೆಪಿಗಿಂತ ಜೆಡಿಎಸ್ ಮುಂದೆ ಇದೆಯೋ ಅಲ್ಲಿ ಜೆಡಿಎಸ್ ಬೆಂಬಲಿಸಿ ಎಂದು ಕೋರಿದ್ದೇನೆ. ಸಿದ್ದರಾಮಯ್ಯ ಥರ ಕೀಳುಮಟ್ಟದ ರಾಜಕಾರಣ ಮಾಡುತ್ತಿಲ್ಲ’ ಎಂದು ಟೀಕಿಸಿದರು.

ಸಿಂದಗಿ ಉಪ ಚುನಾವಣೆಯಲ್ಲಿ ಜೆಡಿಎಸ್ ಗೆಲ್ಲುವ ಸಾಧ್ಯತೆ ಇದೆ. ಹಾನಗಲ್ ನಲ್ಲೂ ಪೈಪೋಟಿ ನೀಡಲಿದ್ದೇವೆ ಎಂದರು.

ಪರಿಣಾಮ ಬೀರುವುದಿಲ್ಲ

ಶಿಕಾರಿಪುರ: ‘ಆಪ್ತ ಉಮೇಶ್ ಮನೆ ಮೇಲೆ ನಡೆದ ಆದಾಯ ತೆರಿಗೆ ಇಲಾಖೆ ಅಧಿಕಾರಿಗಳ ದಾಳಿ ಉಪ ಚುನಾವಣೆ ಮೇಲೆ ಪರಿಣಾಮ ಬೀರುವುದಿಲ್ಲ’ ಎಂದು ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಶುಕ್ರವಾರ ಹೇಳಿದರು.

‘ಬಿಎಸ್‌ವೈ ಮೇಲೆ ಶಂಕೆ ಬೇಡ’

ಬಾಗಲಕೋಟೆ: ‘ಯಾರ ಮೇಲೋ ಆದಾಯ ತೆರಿಗೆ (ಐಟಿ) ದಾಳಿ ನಡೆಯುವುದಕ್ಕೂ, ಯಡಿಯೂರಪ್ಪ ಅವರನ್ನು ಕಟ್ಟಿ ಹಾಕುವುದಕ್ಕೂ ಏನು ಸಂಬಂಧ’ ಎಂದು ಸಚಿವ ಕೆ.ಎಸ್.ಈಶ್ವರಪ್ಪ ಶುಕ್ರವಾರ ಪ್ರಶ್ನಿಸಿದರು.

‘ಐ.ಟಿ ದಾಳಿ ಹಿಂದೆ ಯಡಿಯೂರಪ್ಪ ಅವರನ್ನು ಕಟ್ಟಿ ಹಾಕುವ ತಂತ್ರವಿದೆಯೇ’ ಎಂಬ ಪ್ರಶ್ನೆಗೆ ಅವರು, ‘ದಾಳಿ ಆಗಿದೆ ಅಂದರೆ ತಪ್ಪಾಗಿದೆ ಅಂತ ಅರ್ಥವಲ್ಲ. ಯಡಿಯೂರಪ್ಪನವರ ಬಗ್ಗೆ ಅನುಮಾನ ಪಡೋದು ಸರಿಯಲ್ಲ’ ಎಂದು ಸಮರ್ಥಿಸಿಕೊಂಡರು. ‘ಐ.ಟಿಯವರು ದಾಳಿ ಮಾಡಿದ್ದ ಉಮೇಶ ತನ್ನ ಆಪ್ತ ಅಂತ ಯಡಿಯೂರಪ್ಪನವರೇ ಹೇಳಿದ್ದಾರೆ. ಬೊಮ್ಮಾಯಿ ಅವರನ್ನು ಮುಂದುವರಿಸಿದ್ದರು. ಈಗ ತೆಗೆದಿದ್ದಾರೆ ತಪ್ಪು ಯಾರೇ ಮಾಡಿದ್ದರೂ ತಪ್ಪೆ. ತಪ್ಪಿದ್ದರೆ ಕ್ರಮ ಆಗುತ್ತದೆ’ ಎಂದರು.

‘ಐ.ಟಿ ದಾಳಿ ಕೇವಲ ಕಾಂಗ್ರೆಸ್‌ನವರ ಮೇಲೆ ಆಗುತ್ತದೆ ಎನ್ನುತ್ತಿದ್ದವರು ಈಗ್ಯಾಕೆ ಬಾಯಿ ಬಿಡುತ್ತಿಲ್ಲ?’ ಎಂದದು ಕಿಚಾಯಿಸಿದ ಅವರು, ‘ಕಾಂಗ್ರೆಸ್ ಮಾತ್ರ ಅಲ್ಲ, ಯಾರ ಮೇಲೆ ಅನುಮಾನ ಇದೆಯೋ ಅವರ ಮೇಲೆಲ್ಲಾ ಐ.ಟಿ ದಾಳಿ ಆಗಲಿದೆ’ ಎಂದು ಹೇಳಿದರು.ಕೇವಲ ಕಾಂಗ್ರೆಸ್ ಪಕ್ಷದವರನ್ನು ಗುರಿಯಾಗಿಸಿ ದಾಳಿಯಾಗುತ್ತದೆ ಎನ್ನುತ್ತಿದ್ದ ಆ ಪಕ್ಷದ ಮುಖಂಡರು ಈಗ ರಾಜ್ಯದ ಜನರ ಕ್ಷಮೆ ಯಾಚಿಸಬೇಕು ಎಂದರು.

ನಮ್ಮ ಅಭ್ಯರ್ಥಿ ಕದ್ದೊಯ್ದಿದ್ದಾರೆ ಎಚ್.ಡಿ,ದೇವೇಗೌಡ

ಬೆಂಗಳೂರು: ‘ಸಿಂದಗಿ ಕ್ಷೇತ್ರದಲ್ಲಿ ನಮ್ಮ ಅಭ್ಯರ್ಥಿಯಾಗಬೇಕಿದ್ದ ಅಶೋಕ ಮನಗೂಳಿ ಅವರನ್ನು ಕಾಂಗ್ರೆಸ್‌ನವರು ಹೊತ್ತೊಯ್ದಿದ್ದಾರೆ’ ಎಂದು ಜೆಡಿಎಸ್ ರಾಷ್ಟ್ರೀಯ ಘಟಕದ ಅಧ್ಯಕ್ಷ ಎಚ್. ಡಿ.ದೇವೇಗೌಡ ಶುಕ್ರವಾರ ದೂರಿದರು.

ಜೆಡಿಎಸ್ ಪ್ರಧಾನ ಕಚೇರಿ ಜೆ.ಪಿ. ಭವನದಲ್ಲಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ‘ಬಿಜೆಪಿ ಗೆಲ್ಲಿಸಲು ಜೆಡಿಎಸ್‌ನವರು ಮುಸ್ಲಿಂ ಅಭ್ಯರ್ಥಿ ಕಣಕ್ಕಿಳಿಸಿದ್ದಾರೆ ಎಂದು ಸಿದ್ದರಾಮಯ್ಯ ಹೇಳಿದ್ದಾರೆ. ಬಿಜೆಪಿ ಗೆಲ್ಲಿಸಲು ನಾವು ಸ್ಪರ್ಧಿಸಿಲ್ಲ. ನಮ್ಮ ಪಕ್ಷದ ಅಭ್ಯರ್ಥಿಯನ್ನು ನೀವು ಹೊತ್ತೊಯ್ದರೆ ನಾವು ಸುಮ್ಮನೆ ಇರಬೇಕಾ’ ಎಂದು ಪ್ರಶ್ನಿಸಿದರು.

‘ಎಂ.ಸಿ.ಮನಗೂಳಿ ಅವರನ್ನು ಮನೆ ಮಗನಂತೆ ಬೆಳೆಸಿದ್ದೆ. ಸಂಕಷ್ಟದ ಸಂದರ್ಭದಲ್ಲೂ ಸಚಿವರನ್ನಾಗಿ ಮಾಡಿದ್ದೆ. ಆದರೆ, ಅವರು ನಿಧನರಾದ ಬಳಿಕ ಮನಗೂಳಿ ಅವರ ಮಗ ಕಾಂಗ್ರೆಸ್ ಸೇರಿದ್ದಾರೆ. ಸಿಂದಗಿಗೆ ನೀರಾವರಿ ಸೌಲಭ್ಯ ಕಲ್ಪಿಸುವುದಕ್ಕಾಗಿ ಆ ಪಕ್ಷ ಸೇರಿದ್ದಾರೆ. ನಿಮಗೆ ನಮ್ಮ ಅಭ್ಯರ್ಥಿಯೇ ಬೇಕಾ’ ಎಂದು ಕೇಳಿದರು.

ಬಸವಕಲ್ಯಾಣ ಕ್ಷೇತ್ರದಲ್ಲೂ ಜೆಡಿಎಸ್ ಮುಸ್ಲಿಂ ಅಭ್ಯರ್ಥಿಯನ್ನು ಕಣಕ್ಕಿಳಿಸಿತ್ತು. ಸಿಂದಗಿ ಮತ್ತು ಹಾನಗಲ್ ಕ್ಷೇತ್ರಗಳಲ್ಲೂ ಮುಸ್ಲಿಂ ಅಭ್ಯರ್ಥಿಗಳನ್ನು ಕಣಕ್ಕಿಳಿಸಲಾಗಿದೆ. ಸಿದ್ದರಾಮಯ್ಯ ಅವರೇನು ಮುಸ್ಲಿಮರನ್ನು ಗುತ್ತಿಗೆಗೆ ಪಡೆದಿಲ್ಲ. ತಾವು ಬೆಳೆಸಿದ್ದ ಮುಸ್ಲಿಂ ಮುಖಂಡ ಈಗ ಅವರಿಗೆ ಬಲಗೈ ಆಗಿದ್ದಾರೆ ಎಂದು ದೇವೇಗೌಡ ಹೇಳಿದರು.

ವಿಜಯಪುರದಲ್ಲಿ ಕಾಂಗ್ರೆಸ್ ಎಷ್ಟು ಮಂದಿ ಮುಸ್ಲಿಂ ಮುಖಂಡರನ್ನು ಗೆಲ್ಲಿಸಿದ್ದಾರೆ. ಇವರೆಲ್ಲರೂ ಈಗ ಅಲ್ಪಸಂಖ್ಯಾತರ ಕುರಿತು ಮಾತನಾಡುತ್ತಿದ್ದಾರೆ. ಈ ಚುನಾವಣೆಯಲ್ಲಿ ಸಿಂದಗಿಯಲ್ಲಿ ಹೆಚ್ಚು ಪ್ರಚಾರದಲ್ಲಿ ಭಾಗಿಯಾಗಲು ತೀರ್ಮಾನಿಸಲಾಗಿದೆ. ಆ ಭಾಗದ ಅಭಿವೃದ್ಧಿಗೆ ಕೆಲಸ ಮಾಡಿರುವ ತಮಗೆ ಅಲ್ಲಿನ ಜನರ ಮತ ಕೇಳುವ ಹಕ್ಕಿದೆ ಎಂದರು. ‘ನೀವು ಬೆಳೆದ ಪಕ್ಷಕ್ಕೆ ಅಪಪ್ರಚಾರ ಮಾಡಬೇಡಿ. ಕಾಂಗ್ರೆಸ್ ಪಕ್ಷದ ಕುರಿತು ನಾನು ಲಘುವಾಗಿ ಮಾತನಾಡುವುದಿಲ್ಲ. ನಾನು ಕೂಡ ಕಾಂಗ್ರೆಸ್ ಪಕ್ಷದಿಂದಲೇ ಬಂದವನು’ ಎಂದು ಸಿದ್ದರಾಮಯ್ಯ ಅವರನ್ನುದ್ದೇಶಿಸಿ ಹೇಳಿದರು. ಕಾಂಗ್ರೆಸ್‌ನ ಪರಿಸ್ಥಿತಿ ಏನಾಗಿದೆ ಎಂಬುದು ಗೊತ್ತಿದೆ. ಯಾವ ರಾಜ್ಯಗಳಲ್ಲಿ ಅದರ ಸ್ಥಿತಿ ಏನು ಎಂಬುದು ತಿಳಿದಿದೆ. ತಮ್ಮನ್ನು ಕೆಣಕುವುದು ಬೇಡ. ಕೆಣಕಿದರೆ ಸರಿ ಇರುವುದಿಲ್ಲ ಎಂದರು.

ಬಹು ಮಾಧ್ಯಮ ಪ್ರಜಾವಾಣಿ LIVE www.prajavani.net
Prajavani.net Prajavani Prajavani
ಫೇಸ್‌ಬುಕ್, ಯೂಟ್ಯೂಬ್, ಟ್ವಿಟರ್‌ನಲ್ಲಿ ಏಕಕಾಲಕ್ಕೆ ನೇರಪ್ರಸಾರ
ಇಂದು
ಸೆಲೆಬ್ರಿಟಿ LIVE
ಸಂಜೆ 4 ರಿಂದ 5
ಮುಖಾಮುಖಿ: ಕವಿ, ನಾಟಕಕಾರ, ಜ್ಞಾನಪೀಠ ಪ್ರಶಸ್ತಿ ಪುರಸ್ಕೃತ ಸಾಹಿತಿ, ಕೇಂದ್ರ ಸಾಹಿತ್ಯ ಅಕಾಡೆಮಿ ಅಧ್ಯಕ್ಷ ಚಂದ್ರಶೇಖರ ಕಂಬಾರ ಅವರ ಜೊತೆಗೆ

ಜಸ್ಟ್ ಮ್ಯೂಸಿಕ್
ಗಾಯಕರ ಸ್ಫೂರ್ತಿಯ ಬಿ.ವಿ.ಶ್ರೀನಿವಾಸ್
ಪಾಡ್‌ಕಾಸ್ಟ್: ಪ್ರತೀ ದಿನ: ಬೆಳಿಗ್ಗೆ 7 ವಚನವಾಣಿ, ಬೆ. 7.30 ದಿನದ ಸೂಕ್ತಿ, ಬೆಳಿಗ್ಗೆ 8, ಮಧ್ಯಾಹ್ನ 2, ರಾತ್ರಿ 8 ಪ್ರಜಾವಾಣಿ ವಾರ್ತೆ ಬುಲೆಟಿನ್, ಬೆಳಿಗ್ಗೆ 9.30 ಸಂಪಾದಕೀಯ, ಬೆಳಿಗ್ಗೆ 9 ಪ್ರಚಲಿತ
ಪ್ರಜಾವಾಣಿ ಕನ್ನಡ ಧ್ವನಿ
ಮೈಸೂರು ದಸರಾ ನೇರ ಪ್ರಸಾರ Live
ಸಂಜೆ 6 ಸಂಗೀತ್ ದರ್ಬಾರ್ ಮೈಸೂರಿನ ಎಚ್.ಎನ್. ಭಾಸ್ಕರ್ ಮತ್ತು ತಂಡ
ಸಂಜೆ 7 ನಾಲ್ವಡಿ ನಲ್ಮುಡಿ ಭಾವ ಸಂಭ್ರಮ ಹಂಸಲೇಖ ಮತ್ತು ತಂಡ
ನಾಳೆ
ಕ್ಲಬ್ ಹೌಸ್
ಹಾಡು ಮತ್ತು ಮಾತುಗಳ ಜುಗಲ್ ಬಂದಿ
ಮಾತು ಕತೆ...
ಕನ್ನಡ ಸಿನಿಮಾ ಹಾಡುಗಳ ಸಾಹಿತ್ಯ ಎತ್ತ ಸಾಗುತ್ತಿದೆ?
ಎನ್. ಎಸ್. ಶಂಕರ್, ಚಿತ್ರ ನಿರ್ದೇಶಕ
ಕವಿರಾಜ್, ಚಿತ್ರಸಾಹಿತಿ
ಎಂ.ಡಿ.ಪಲ್ಲವಿ, ಜನಪ್ರಿಯ ಗಾಯಕಿ.
ಸಂಧ್ಯಾರಾಣಿ, ಲೇಖಕಿ, ಚಿತ್ರಸಾಹಿತಿ
ಪ್ರಜಾವಾಣಿ ಆಲದಮರ
10.30 ರಿಂದ 12.30

‘ಬಹಿರಂಗ ಚರ್ಚೆಗೆ ಸಿದ್ಧ’

ಪ್ರಜಾವಾಣಿ ವಾರ್ತೆ

ರಾಮನಗರ: ‘ಆರ್‌ಎಸ್‌ಎಸ್ ಕುರಿತು ಹೇಳಿರುವ ಹೇಳಿಕೆಗೆ ಈಗಲೂ ಬದ್ಧನಾಗಿದ್ದೇನೆ. ಈ ಬಗ್ಗೆ ಬಹಿರಂಗ ಚರ್ಚೆಗೆ ಸಿದ್ಧನಿದ್ದೇನೆ’ ಎಂದು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ. ಕುಮಾರಸ್ವಾಮಿ ಹೇಳಿದರು.

ಚನ್ನಪಟ್ಟಣದಲ್ಲಿ ಶುಕ್ರವಾರ ಪತ್ರಕರ್ತರ ಜೊತೆ ಮಾತನಾಡಿದ ಅವರು, ‘ಬಿಜೆಪಿಯು ಆರ್‌ಎಸ್‌ಎಸ್ ಜೊತೆ ಸೇರಿಕೊಂಡು ಕಾಶ್ಮೀರವನ್ನು ಹಾಳು ಮಾಡುತ್ತಿದೆ’ ಎಂದರು. ಕೆಲ ದಿನಗಳ ಹಿಂದಷ್ಟೇ ಕಾಶ್ಮೀರದಲ್ಲಿ ಉಗ್ರರು ಶಾಲೆಗೆ ನುಗ್ಗಿ ಶಿಕ್ಷಕರನ್ನು ಕೊಂದು ಹಾಕಿದ್ದಾರೆ. ಕಾಶ್ಮೀರಿ ಪಂಡಿತರ ಹತ್ಯೆ ಮುಂದುವರಿದಿದೆ. ಈ ವರ್ಷ ಗಡಿಯಲ್ಲಿ ಹೆಚ್ಚು ಸೈನಿಕರ ಸಾವಾಗಿದೆ. ಇದೇನಾ ಆರ್‌ಎಸ್‌ಎಸ್ ನಿಮಗೆ ಸರ್ಕಾರ ನಡೆಸುವುದು ಹೇಗೆ ಎಂದು ಹೇಳಿಕೊಟ್ಟಿರುವ ಪಾಠ ಎಂದು ಪ್ರಶ್ನಿಸಿದರು. ‘ಸ್ವಾತಂತ್ರ್ಯ ಬಂದಾಗ ಆರ್‌ಎಸ್‌ಎಸ್ ಇಲ್ಲದಿದ್ದರೆ ಭಾರತವು ಪಾಕಿಸ್ತಾನ ಆಗುತ್ತಿತ್ತು’ ಎಂಬ ಸಚಿವ ಈಶ್ವರಪ್ಪ ಹೇಳಿಕೆಗೆ ಅವರು, ‘ಸ್ವಾತಂತ್ರ್ಯ ಬಂದಾಗ ಈಶ್ವರಪ್ಪ ಹುಟ್ಟಿದ್ದರಾ?’ ಎಂದರು.

ಎಚ್.ಡಿ.ಕೆ ತಾಲಿಬಾನ್ ಪಾರ್ಟಿ: ವ್ಯಂಗ್ಯ

ಸಿಂದಗಿ (ವಿಜಯಪುರ): ‘ದೇಶಭಕ್ತಿ, ಯುವಕರಿಗೆ ಸಂಸ್ಕಾರ ನೀಡುವ ಆರ್‌ಎಸ್‌ಎಸ್ ಟೀಕಿಸುವ ಮಾಜಿ ಮುಖ್ಯಮಂತ್ರಿ ಎಚ್.ಡಿ.ಕುಮಾರಸ್ವಾಮಿ ತಾಲಿಬಾನ್ ಪಾರ್ಟಿ’ ಎಂದು ಶಾಸಕ ಬಸನಗೌಡ ಪಾಟೀಲ ಯತ್ನಾಳ ವ್ಯಂಗ್ಯವಾಡಿದರು. ಸಿಂದಗಿಯಲ್ಲಿ ಮಾತನಾಡಿದ ಅವರು, ‘ಬಿಜೆಪಿಯನ್ನು ಟೀಕಿಸಿ, ಸಚಿವರನ್ನು ಟೀಕಿಸಿ. ಆರ್‌ಎಸ್‌ಎಸ್ ಅನ್ನು ಯಾವತ್ತೂ ಟೀಕಿಸಬೇಡಿ. ಅದು ಇರದಿದ್ದರೆ ದೇಶ ತಾಲಿಬಾನ್ ಆಗುತ್ತಿತ್ತು. ಟೀಕಿಸುವುದಿದ್ದರೆ ನಮ್ಮ ಜತೆ ಕುಸ್ತಿಗೆ ಬರ್ಲಿ’ ಎಂದರು.

‘ವಿಶ್ವದ ನಾಯಕ ಪ್ರಧಾನಿ ನರೇಂದ್ರ ಮೋದಿ, ವಿಶ್ವದ ಜೋಕರ್ ರಾಹುಲ್ ಗಾಂಧಿ. ಕಾಂಗ್ರೆಸ್‌ನವರು ಪ್ರಧಾನಿ ಮೋದಿ ಅವರ ಅಭಿವೃದ್ಧಿ ಕಾರ್ಯವನ್ನು ಚರ್ಚಿಸದೇ ಬರೀ ಡೀಸೆಲ್, ಪೆಟ್ರೋಲ್ ಬಗ್ಗೆ ಚರ್ಚಿಸುತ್ತಾರೆ. ಯಾವ ಒಬ್ಬನಾದರೂ ಕಾಂಗ್ರೆಸ್ ಗಂಡಸುಮಗ ಪ್ರಧಾನಿ ವಿರುದ್ಧ ಭ್ರಷ್ಟಾಚಾರ ಆರೋಪ ಮಾಡಲಿ ನೋಡೋಣ’ ಎಂದು ಸವಾಲು ಹಾಕಿದರು.

ಆರ್‌ಎಸ್‌ಎಸ್‌ಗೂ ರಾಜಕೀಯಕ್ಕೂ ಸಂಬಂಧವಿಲ್ಲ: ಎ.ನಾರಾಯಣಸ್ವಾಮಿ

ಚಿತ್ರದುರ್ಗ: ‘ರಾಜಕೀಯಕ್ಕೂ ಆರ್‌ಎಸ್‌ಎಸ್‌ಗೂ ಸಂಬಂಧವಿಲ್ಲ. ಅಧಿಕಾರ ವ್ಯವಸ್ಥೆಯಲ್ಲಿ ಆರ್‌ಎಸ್‌ಎಸ್ ಹಸ್ತಕ್ಷೇಪ ಮಾಡುವುದಿಲ್ಲ’ ಎಂದು ಕೇಂದ್ರದ ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ ರಾಜ್ಯ ಸಚಿವ ಎ.ನಾರಾಯಣಸ್ವಾಮಿ ಹೇಳಿದರು.

ಜೆಡಿಎಸ್ ನಾಯಕ ಎಚ್.ಡಿ.ಕುಮಾರಸ್ವಾಮಿ ಅವರ ಹೇಳಿಕೆಗೆ ಶುಕ್ರವಾರ ಅವರು ಪ್ರತಿಕ್ರಿಯಿಸಿದರು.

‘ಆರ್‌ಎಸ್‌ಎಸ್ ಇಲ್ಲದಿದ್ದರೆ ನಾಲ್ಕೈದು ಪಾಕಿಸ್ತಾನ ಆಗುತ್ತಿತ್ತು’

ಹುಬ್ಬಳ್ಳಿ: ‘ದೇಶ ರಕ್ಷಣೆಗೆ ಬದ್ಧವಾಗಿರುವ ಆರ್‌ಎಸ್‌ಎಸ್ ಇಲ್ಲದೇ ಹೋಗಿದ್ದರೆ, ಭಾರತದಲ್ಲಿ ಈ ವೇಳೆಗಾಗಲೇ ನಾಲ್ಕೈದು ಪಾಕಿಸ್ತಾನಗಳು ನಿರ್ಮಾಣವಾಗಿರುತ್ತಿದ್ದವು. ಒಗ್ಗಟ್ಟು, ಏಕತೆ ಮೂಡಿಸುವ ಕೆಲಸವನ್ನು ಆರ್‌ಎಸ್‌ಎಸ್ ಮಾಡುತ್ತಿದೆ’ ಎಂದು ಶಾಸಕ ಜಗದೀಶ ಶೆಟ್ಟರ್ ಶುಕ್ರವಾರ ಇಲ್ಲಿ ಹೇಳಿದರು.

‘ಹಿಂದಿನ ಸಂಘವೇ ಬೇರೆ, ಈಗಿನ ಸಂಘವೇ ಬೇರೆ’ ಎಂದು ಕುಮಾರಸ್ವಾಮಿ ಹೇಳಿಕೆಗೆ ಪ್ರತಿಕ್ರಿಯಿಸಿದ ಶೆಟ್ಟರ್ ‘ರಾಜಕಾರಣದಲ್ಲಿ ಹಿಂದಿನ ಜನತಾ ಪರಿವಾರ ಬೇರೆ, ಈಗಿನ ಜೆಡಿಎಸ್ ಬೇರೆ ಎಂದರೆ ನಂಬಬಹುದು. ಹಿಂದಿನ ಕಾಂಗ್ರೆಸ್ ಹಾಗೂ ಇಂದಿನ ಕಾಂಗ್ರೆಸ್ ಬೇರೆ ಬೇರೆ ಎಂದರೂ ಒಪ್ಪಬಹುದು. ಆರ್‌ಎಸ್‌ಎಸ್‌ನಲ್ಲಿ ವ್ಯಕ್ತಿಗಳು ಬದಲಾಗಬಹುದು. ಆದರೆ, ವಿಚಾರಧಾರೆಗಳು ಹಾಗೂ ತತ್ವ ಎಂದಿಗೂ ಒಂದೇ‘ ಎಂದು ತಿರುಗೇಟು ನೀಡಿದರು.

ಬಿ.ಎಸ್.ಯಡಿಯೂರಪ್ಪ ಆಪ್ತರ ಮನೆ ಮೇಲೆ ಐಟಿ ದಾಳಿ ಕುರಿತ ಪ್ರಶ್ನೆಗೆ ‘ಇದಕ್ಕೆ ರಾಜಕಾರಣದ ನಂಟು ಅಂಟಿಸಬೇಡಿ. ಕಾನೂನು ರೀತಿ ಏನು ಆಗುತ್ತದೆಯೋ ಆಗಲಿ ಎಂದು ಖುದ್ದು ಯಡಿಯೂರಪ್ಪ ಅವರೇ ಹೇಳಿದ್ದಾರೆ’ ಎಂದರು.

ಕರ್ನಾಟಕ ಸರಕಾರ
ಕಾರ್ಯನಿರ್ವಾಹಕ ಅಭಿಯಂತರ ಕಛೇರಿ ಗ್ರಾಮೀಣ ಕುಡಿಯುವ ನೀರು ಸರಬರಾಜು ಮತ್ತು ನೈರ್ಮಲ್ಯ ವಿಭಾಗ, ರಾಯಚೂರು
ಸಂ. ಕಾನಿಅ/ಗ್ರಾನೀಸ&ನೈ/ವಿರಾ/ತಾ.ಶಾ/KKRDB/ಇ-ಟೆಂಡರ/2021-22/977 ದಿನಾಂಕ: 04-10-2021
:: ಇ-ಪ್ರೋಕ್ಯೂರಮೆಂಟ ಅಲ್ಪಾವಧಿ ಟೆಂಡರ ಪ್ರಕಟಣೆ ::
ಕರ್ನಾಟಕ ಸರ್ಕಾರದ ಮಾನ್ಯ ರಾಜ್ಯಪಾಲರ ಪರವಾಗಿ ಕಾರ್ಯನಿರ್ವಾಹಕ ಅಭಿಯಂತರರು, ಗ್ರಾಮೀಣ ಕುಡಿಯುವ ನೀರು ಸರಬರಾಜು ಮತ್ತು ನೈರ್ಮಲ್ಯ ವಿಭಾಗ, ರಾಯಚೂರು ಇವರು KW-1, 2 & 3 (Standard Bid Document) ನಿಬಂಧನೆಗಳೊಪಟ್ಟಂತೆ ಪಂಚಾಯತ ರಾಜ ಇಂಜಿನೀಯರಿಂಗ ಇಲಾಖೆಯಲ್ಲಿ ಸಿವ್ಹಿಲ್ ನೊಂದಾಯಿತ ಹಾಗೂ ಇ-ಗುತ್ತಿಗೆ ಕುರಿತು ಇ-ಪ್ರೋಕ್ಯೂರಮೆಂಟ ಇವರಿಂದ ನೊಂದಾಯಿಸಿದ ಅರ್ಹ ಗುತ್ತಿಗೆದಾರರುಗಳಿಂದ ಈ ವಿಭಾಗ ವ್ಯಾಪ್ತಿಯಲ್ಲಿ ಬರುವ 2021-22ನೇ ಸಾಲಿನ KKRDB ಯೋಜನೆ ಅಡಿಯಲ್ಲಿ ಕುಡಿಯುವ ನೀರು ಸರಬರಾಜು ಯೋಜನೆ ಕಾಮಗಾರಿಗೆ ಐಟಂವಾರು ಟರ್ನಕೀ ಆಧಾರದ ಮೇಲೆ ಇ-ಟೆಂಡರ ಆಹ್ವಾನಿಸಲಾಗಿದೆ.
1] E-Payment/NEFT ಮುಖಾಂತರ ಅರ್ಜಿ ಸ್ವೀಕರಿಸುವ ದಿನಾಂಕ : **05-10-2021,** 2] ಶೆಡ್ಯೂಲಗಳನ್ನು Online ನಲ್ಲಿ ಬಿಡುವ ದಿನಾಂಕ : **05-10-2021,** 3] ಭರ್ತಿ ಮಾಡಿದ ಟೆಂಡರಗಳನ್ನು ಸ್ವೀಕರಿಸುವ ಕೊನೆಯ ದಿನಾಂಕ : **21-10-2021 ಸಂಜೆ 5:30 ಗಂಟೆವರೆಗೆ,** 4] ತಾಂತ್ರಿಕ ಬಿಡ್ ತೆರೆಯುವ ದಿನಾಂಕ **23-10-2021** ಮುಂಜಾನೆ 11:00 ಗಂಟೆ ಸಾಧ್ಯವಿದ್ದಲ್ಲಿ,
Indent Nos.: Manvi : **35218 (SC), 35219, 35232, 35233,** Raichur : **35220,** Sindanur : **35221 (SC), 35222, 35223, 35224 (SC),**
ಕಾಮಗಾರಿಗಳ ವಿವರ, ಷರತ್ತು ಹಾಗೂ ನಿಬಂಧನೆಗಳಿಗಾಗಿ ಈ ಕಛೇರಿಗೆ ಕಛೇರಿ ವೇಳೆಯಲ್ಲಿ ಸಂಪರ್ಕಿಸಿ ಹಾಗೂ ವೆಬ್‌ಸೈಟ್: http://eproc.karnataka.gov.in ಸಂಪರ್ಕಿಸಬಹುದಾಗಿದೆ.
ಸಹಿ/- ಕಾರ್ಯನಿರ್ವಾಹಕ ಅಭಿಯಂತರರು, ಗ್ರಾನೀ.ಸ & ನೈ ವಿಭಾಗ, ರಾಯಚೂರು.
ವಾ.ಸಾ.ಸಂ.ಇ/ರಾಯಚೂರ/379/ಎಂ.ಸಿ&ಎ/2021-22

ದಾವಣಗೆರೆ-ಹರಿಹರ ನಗರಾಭಿವೃದ್ಧಿ ಪ್ರಾಧಿಕಾರ, ದಾವಣಗೆರೆ.
ಶ್ರೀ ಡಿ. ದೇವರಾಜ ಅರಸು ಬಡಾವಣೆ, ‘ಎ’ ಬ್ಲಾಕ್, ಪಿ.ಬಿ.ರಸ್ತೆ, ದಾವಣಗೆರೆ-06
ನಂ:ದಾಹನಪ್ರಾ:ತಾಶಾ:ಕಿಅ:ಇಪ್ರ:ಟೆಂಪ್ರ:07:2021-22/1205 ದಿನಾಂಕ:07-10-2021.
ಅಲ್ಪಾವಧಿ ಟೆಂಡರ್ ಪ್ರಕಟಣೆ (ಇ-ಪ್ರಕ್ಯೂರ್‌ಮೆಂಟ್ ಮೂಲಕ)
ಕರ್ನಾಟಕ ರಾಜ್ಯಪಾಲರ ಪರವಾಗಿ ಆಯುಕ್ತರು, ದಾವಣಗೆರೆ-ಹರಿಹರ ನಗರಾಭಿವೃದ್ಧಿ ಪ್ರಾಧಿಕಾರ, ದಾವಣಗೆರೆ ವ್ಯಾಪ್ತಿಯಲ್ಲಿ ಬರುವ ಕೆಳಕಂಡ ಕಾಮಗಾರಿಗಳಿಗೆ ಲೋಕೋಪಯೋಗಿ ಇಲಾಖೆಯಿಂದ ನೋಂದಾಯಿತ ಅರ್ಹ ಹಾಗೂ ಇ-ಟೆಂಡರ್ ಪ್ರೊಕ್ಯೂರ್‌ಮೆಂಟ್‌ನಲ್ಲಿ ನೋಂದಾಯಿಸಿಲ್ಪಟ್ಟ ಗುತ್ತಿಗೆದಾರರಿಂದ ಪ್ರಾಧಿಕಾರದ ನಿಯಮಾವಳಿ ಮೇರೆಗೆ ಇ-ಪ್ರೊಕ್ಯೂರ್‌ಮೆಂಟ್ ಮುಖಾಂತರ ಐಟಂವಾರು ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ.

ಕ್ರ. ಸಂ	ಕಾಮಗಾರಿಯ ಹೆಸರು	ಅಂದಾಜು ಮೊತ್ತ ರೂ. ಲಕ್ಷಗಳಲ್ಲಿ	ಟೆಂಡರ್‌ಗೆ ಇಟ್ಟಿರುವ ಮೊತ್ತ ರೂ.ಲಕ್ಷಗಳಲ್ಲಿ
1	ದಾವಣಗೆರೆ ನಗರದ ವೀರ ಮದಕರಿ ನಾಯಕ ವೃತ್ತವನ್ನು ಅಭಿವೃದ್ಧಿಪಡಿಸಿ ನೀರಿನ ಕಾರಂಜಿ ಅಳವಡಿಸುವುದು ಹಾಗೂ ಶಿವಾಜಿ ಸರ್ಕಲ್‌ನಲ್ಲಿ ನೀರಿನ ಕಾರಂಜಿ ಅಳವಡಿಸುವುದು.	20.00	15.63
2	ಶ್ರೀ ಜೆ.ಹೆಚ್.ಪಟೇಲ್ ಬಡಾವಣೆಯ ಎ, ಬಿ, ಸಿ, ಡಿ ಮತು ಇ ಬ್ಲಾಕ್ ರಸ್ತೆಗಳಿಗೆ, ರಸ್ತೆಗಳ ಹೆಸರುಗಳನ್ನು ಸೂಚಿಸಲು ನಾಮಫಲಕಗಳನ್ನು ಅಳವಡಿಸುವುದು.	24.90	22.75
3	ದಾವಣಗೆರೆ ಮಹಾನಗರಪಾಲಿಕೆಯ ವಾರ್ಡ್ ನಂ: 44 ವ್ಯಾಪ್ತಿಯ ಎಸ್.ಎಸ್ ಲೇಔಟ್ ಬಿ ಬ್ಲಾಕ್ 4ನೇ ಮುಖ್ಯ ರಸ್ತೆ 14ನೇ ಅಡ್ಡ ರಸ್ತೆಗೆ ಕೂಡುವ ರಸ್ತೆಗಳಿಗೆ ಅಭಿವೃದ್ಧಿ ಕಾಮಗಾರಿ.	45.00	36.76
4	ದಾವಣಗೆರೆ ನಗರದ ಎಸ್. ಎಸ್. ಲೇಔಟ್ ಬಿ ಬ್ಲಾಕ್, 4ನೇ ಮುಖ್ಯ ರಸ್ತೆ 3ಹೆಚ್ ಅಡ್ಡ ರಸ್ತೆಯಿಂದ ಡಬಲ್ ರಸ್ತೆವರೆಗೆ ಮತ್ತು 13ನೇ ಅಡ್ಡ ರಸ್ತೆ ಕೂಡುವಲ್ಲಿ ರಸ್ತೆ ಅಭಿವೃದ್ಧಿ ಕಾಮಗಾರಿ.	89.00	72.76
5	ದಾವಣಗೆರೆ ನಗರದ ಎಸ್. ಎಸ್. ಲೇಔಟ್ ಬಿ ಬ್ಲಾಕ್, 4ನೇ ಮುಖ್ಯ ರಸ್ತೆ 12ನೇ ಅಡ್ಡ ರಸ್ತೆಯಲ್ಲಿ ಒಳಚರಂಡಿ ಕಾಮಗಾರಿ ಹಾಗೂ 12 ಹಾಗೂ 14ನೇ ಅಡ್ಡ ರಸ್ತೆಯಲ್ಲಿ ರಸ್ತೆ ಅಭಿವೃದ್ಧಿ ಕಾಮಗಾರಿ.	91.00	73.69

ಈ ಮೇಲ್ಕಂಡ ಕಾಮಗಾರಿಗಳ ಮುಂಗಡ ಹಣ ಠೇವಣಿ (ಇ.ಎಂ.ಡಿ.) ರೂ.ಗಳಲ್ಲಿ:-0 ಹಾಗೂ ಷರಾ: 3ನೇ ದರ್ಜೆ ಮತ್ತು ಮೇಲ್ಪಟ್ಟ ಸಿವಿಲ್ ಗುತ್ತಿಗೆದಾರರು. ಟೆಂಡರ್ ದಿನಾಂಕಗಳು : 1) ಟೆಂಡರ್ ದಾಖಲೆಗಳನ್ನು ಇ-ಪ್ರೋಕ್ಯೂರ್‌ಮೆಂಟ್ ಪೋರ್ಟಲ್ https://eproc.karnataka.gov.in ನಂದಡೌನ್‌ಲೋಡ್ ಮಾಡಿಕೊಳ್ಳಬಹುದು. 2) ಟೆಂಡರ್‌ಗಳನ್ನು ಸ್ವೀಕರಿಸಲು ಕೊನೆಯ ದಿನಾಂಕ ಮತ್ತು ಸಮಯ : 21-10-2021ರ ಸಂಜೆ 4.00 ಗಂಟೆವರೆಗೆ. 3) ಟೆಂಡರ್ ದಾಖಲೆ ತೆರೆಯುವ ದಿನಾಂಕ:25-10-2021ರ ಬೆಳಿಗ್ಗೆ 11.00 ಗಂಟೆಗೆ ಹೆಚ್ಚಿನ ವಿವರಗಳನ್ನು ಮೇಲ್ಕಂಡ ಕಛೇರಿಯಿಂದ ಕೆಲಸದ ವೇಳೆಯಲ್ಲಿ ಅಥವಾ ವೆಬ್‌ಸೈಟ್ https://eproc.karnataka.gov.in ನಲ್ಲಿ ಪಡೆದುಕೊಳ್ಳಬಹುದಾಗಿದೆ.
ವಾಸಾಇ/ದಾವಣಗೆರೆ/440/ಎಂಸಿಎ/2021-22 ಸಹಿ/- ಆಯುಕ್ತರು, ದಾ-ಹ ನಗರಾಭಿವೃದ್ಧಿ ಪ್ರಾಧಿಕಾರ, ದಾವಣಗೆರೆ.

ಪ್ರಜಾವಾಣಿ
ಫೋನ್-ಇನ್ ಕಾರ್ಯಕ್ರಮ

ಕರೆ ಮಾಡಿ-ಸಮಸ್ಯೆ ಹೇಳ್ಕೊಳ್ಳಿ
• ‘ಉದ್ಯಮಿಯಾಗಿ, ಉದ್ಯೋಗ ಕೊಡು’ ಎಂಬ ಯೋಜನೆಯ ಪರಿಕಲ್ಪನೆ ಹೇಗೆ?
• ಉದ್ಯಮಿಯಾಗಲು ಸರ್ಕಾರದಿಂದ ಯಾವ ರೀತಿಯ ನೆರವು ಸಿಗಲಿದೆ?
• ಬಹು ಹಂತದ ಅನುಮತಿ ಪ್ರಕ್ರಿಯೆಗಳಿಂದಾಗಿ ಕೈಗಾರಿಕೆಗಳ ಸ್ಥಾಪನೆ ವಿಳಂಬವಾಗುತ್ತಿದೆಯೇ?
• ಉದ್ಯಮ ಸ್ಥಾಪನೆಗೆ ಕಿರಿಕಿರಿ ಇದೆಯೇ?
• ಮೂಲಸೌಕರ್ಯ ಸಮಸ್ಯೆಯಿಂದ ಯೋಜನೆ ಅನುಷ್ಠಾನಕ್ಕೆ ಅಡ್ಡಿಯಾಗಿದೆಯೇ
ನಿಮ್ಮ ಅಹವಾಲುಗಳಿಗೆ ಸ್ಪಂದಿಸಲಿದ್ದಾರೆ

ಮುರುಗೇಶ ಆರ್ ನಿರಾಣಿ, ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವ
10.10.2021, ಭಾನುವಾರ
ಸಮಯ: ಸಂಜೆ 4 ಗಂಟೆಯಿಂದ 5 ಗಂಟೆಯವರೆಗೆ
ದೂರವಾಣಿ ಸಂಖ್ಯೆ 08045557230
facebook LIVE Prajavani
ಫೇಸ್‌ಬುಕ್, ಯೂಟ್ಯೂಬ್‌ನಲ್ಲಿ ನೇರ ಪ್ರಸಾರ

ಪಠ್ಯಪುಸ್ತಕ ಪರಿಷ್ಕರಣೆ: ದೋಷ ಸರಿಪಡಿಸಲು ಸಮಿತಿ

ಉಡುಪಿ: ‘ಶಾಲಾ ಪಠ್ಯ ಪುಸ್ತಕಗಳಲ್ಲಿರುವ ದೋಷಗಳನ್ನು ಸಾರ್ವಜನಿಕರು ಗಂಭೀರವಾಗಿ ಗಮನಿಸಿದ್ದರೆ, ಸಂಬಂಧಪಟ್ಟವರ ಮೇಲೆ ಹಲ್ಲೆ ಮಾಡುತ್ತಿದ್ದರು’ ಎಂದು ಶಿಕ್ಷಣ ಸಚಿವ ಬಿ.ಸಿ. ನಾಗೇಶ್ ಹೇಳಿದರು.ರೋಹಿತ್ ತೀರ್ಥ ಅವರನ್ನು ಪಠ್ಯಪುಸ್ತಕ ಪರಿಷ್ಕರಣಾ ಸಮಿತಿ ಅಧ್ಯಕ್ಷ ಸ್ಥಾನದಿಂದ ಕೈಬಿಡಬೇಕು ಎಂಬ ಒತ್ತಾಯ ಕೇಳಿಬಂದಿರುವುದಕ್ಕೆ ಸಂಬಂಧಿಸಿ ಪ್ರತಿಕ್ರಿಯಿಸಿದ ಸಚಿವರು ಈ ಮಾತು ಹೇಳಿದರು.

ಕೋವಿಡ್ ಪಾಸಿಟಿವಿಟಿ ದರ ಕಡಿಮೆಯಾಗಿರುವ ಕಾರಣ ದಸರಾ ಮುಗಿದ ಕೂಡಲೇ 1 ರಿಂದ 5ನೇ ತರಗತಿವರೆಗಿನ ತರಗತಿಗಳನ್ನು ತೆರೆಯಲಾಗುವುದು.

ಬಿ.ಸಿ. ನಾಗೇಶ್, ಶಿಕ್ಷಣ ಸಚಿವ

‘ಪಠ್ಯ ಪುಸ್ತಕಗಳಲ್ಲಿ ಬಹಳಷ್ಟು ತಪ್ಪುಗಳಿದ್ದರೂ ಹಿಂದಿನ ಪಠ್ಯ ಪರಿಷ್ಕರಣಾ ಸಮಿತಿ ತಿದ್ದುವ ಕೆಲಸ ಮಾಡಲಿಲ್ಲ. ಪಠ್ಯದಲ್ಲಿ ವಿವೇಕಾನಂದರ ಭಾಷಣ ತಿರುಚಲಾಗಿದ್ದು, ಕುವೆಂಪು ಕುರಿತ ಪಾಠ ಕೈಬಿಡಲಾಗಿದೆ. ಮಹರ್ಷಿ ವಾಲ್ಮೀಕಿ ಕುರಿತು ಏಕವಚನ ಬಳಸಲಾಗಿದೆ. ಈ ತಪ್ಪುಗಳನ್ನು ಸರಿಪಡಿಸಲು ದೂರುಗಳು ಬಂದ ಕಾರಣಕ್ಕೆ ಸಮಿತಿ ರಚಿಸಲಾಗಿದೆ’ ಎಂದರು.

ಬಂಧನಕ್ಕೆ ಹಿಂದೇಟು: ‘ಸುಪ್ರೀಂ’ ತರಾಟೆ

ಒಂದನೇ ಪುಟದಿಂದ

ಈಗಿನ ಅಧಿಕಾರಿಗಳ ನಡವಳಿಕೆಯನ್ನು ಗಮನಿಸಿದರೆ ಉತ್ತಮ ತನಿಖೆ ನಡೆಯುವುದು ಸಾಧ್ಯವಿಲ್ಲ ಎಂದು ಅನಿಸುತ್ತದೆ. ಅವರು ಸಾಕ್ಷ್ಯಗಳನ್ನು ಸಂಪೂರ್ಣವಾಗಿ ನಾಶ ಮಾಡದಂತೆ ನೋಡಿಕೊಳ್ಳಿ. ಬೇರೊಂದು ಸಂಸ್ಥೆಯು ತನಿಖೆ ಕೈಗೆತ್ತಿಕೊಳ್ಳುವವರೆಗೆ ಸಾಕ್ಷ್ಯಗಳನ್ನು ಸಂರಕ್ಷಿಸಲು ಪೊಲೀಸ್ ಮಹಾನಿರ್ದೇಶಕರಿಗೆ ಸೂಚಿಸಿ ಎಂದು ಪೀಠವು ಹೇಳಿದೆ. ‘ಗೃಹ ಕಾರ್ಯದರ್ಶಿ ಮತ್ತು ಪೊಲೀಸ್ ಮಹಾನಿರ್ದೇಶಕರ ಜತೆಗೆ ನಾನೇ ನೇರವಾಗಿ ಮಾತನಾಡುತ್ತೇನೆ. ವಿಶ್ವಾಸ ಉಳಿಸಿಕೊಳ್ಳಲು ಹೇಳುತ್ತೇನೆ. ಇದಕ್ಕಿಂತ ಹೆಚ್ಚು ಏನನ್ನೂ ಹೇಳಲಾರೆ’ ಎಂದು ಸಾಳ್ವೆ ಪೀಠಕ್ಕೆ ತಿಳಿಸಿದರು.

ಇದೇ 20ರಂದು ಮುಂದಿನ ವಿಚಾರಣೆ ನಡೆಯಲಿದೆ.

ನೋವಿನ ಕುಲುಮೆಯಲ್ಲಿ ನಿತ್ಯ ಬೇಯುವ ಕಾರ್ಮಿಕರು; ಆರ್ಥಿಕ ಸಂಕಷ್ಟದಿಂದ ದಿಕ್ಕೆಟ್ಟ ಕುಟುಂಬಗಳು

ಮನೆಗೆಲಸದವರಿಗೆ ಪರಿಹಾರ ಮರೀಚಿಕೆ

• ಮಂಜುಶ್ರೀ ಎಂ. ಕಡಕೋಳ

ಬೆಂಗಳೂರು: ಅವರಿವರ ಮನೆಯಲ್ಲಿ ಕಸ-ಮುಸುರೆ ಕೆಲಸ ಮಾಡಿ ತಮ್ಮ ಕುಟುಂಬಗಳನ್ನು ಸಲಹುತ್ತಿದ್ದ ಸಾವಿರಾರು ಗೃಹ ಕಾರ್ಮಿಕರ (ಮನೆಗೆಲಸದವರು) ಬದುಕು ಕೋವಿಡ್ ನಿಂದ ಸಂಕಷ್ಟಕ್ಕೆ ಸಿಲುಕಿ ಪತರಗುಟ್ಟಿಹೋಗಿದೆ. ತಮ್ಮಂತೆ ತಮ್ಮ ಮಕ್ಕಳ ಜೀವನ ಆಗಬಾರದು ಎಂದುಕೊಂಡಿದ್ದ ಈ ಮಹಿಳೆಯರಿಗೆ ಶಾಲಾ- ಕಾಲೇಜು ಶುಲ್ಕ ಕಟ್ಟುವುದಿರಲಿ, ಮಕ್ಕಳ ಬಸ್‌ಪಾಸ್‌ಗೆ ಹಣ ಹೊಂದಿಸುವುದೂ ಕಷ್ಟವಾಗಿದೆ.

ಕೋವಿಡ್ ಮೊದಲ ಮತ್ತು ಎರಡನೇ ಅಲೆಯಲ್ಲಿ ತೀವ್ರ ಆರ್ಥಿಕ ಸಂಕಷ್ಟಕ್ಕೆ ಸಿಲುಕಿರುವ ಗೃಹಕಾರ್ಮಿಕರಿಗೆ ಸರ್ಕಾರ ಘೋಷಿಸಿರುವ ಒಂದು ಬಾರಿಯ ₹ 2 ಸಾವಿರ ಪರಿಹಾರ ಧನವೂ ಎಟುಕುತ್ತಿಲ್ಲ. ಕಷ್ಟವನ್ನೇ ನೆಂಚಿಕೊಂಡು ಎರಡೊತ್ತಿನ ಊಟಕ್ಕೂ ಪರದಾಡುವ ಬಹುತೇಕ ಮನೆಗೆಲಸದವರ ಬದುಕು ನಿತ್ಯ ನೋವಿನ ಕುಲುಮೆಯಲ್ಲಿ ಬೇಯುವಂಥ ಸ್ಥಿತಿಯಂತಾಗಿದೆ.

‘ಕೊರೊನಾ ಮೊದಲ ಅಲೆ ವೇಳೆಯಲ್ಲಿ ಸೊಸೈಟಿಯಲ್ಲಿ ಅಕ್ಕಿ ಸಿಕ್ಕಿದ್ದರಿಂದ ಹೇಗೋ ಜೀವನ ನಡೀತು. ಈಗಲೂ ಮನೆಬಾಡಿಗೆ, ಊಟಕ್ಕೆ ತುಂಬಾ ಕಷ್ಟವಾಗಿದೆ. ಗಂಡ ಆಟೋರಿಕ್ಷಾ ಡ್ರೈವರ್. ಅವರಿಗೂ ಆದಾಯವಿಲ್ಲ. ಗಾಡಿಯ ಸಾಲ ಇನ್ನೂ ತೀರಿಲ್ಲ. ಮುಂಚೆ ಎರಡು ಮನೆಯಿಂದ ₹ 10 ಸಾವಿರ ಸಿಗುತ್ತಿತ್ತು. ಈಗ ತಿಂಗಳಿಗೆ ₹ 5 ಸಾವಿರ ಸಿಗೋದೂ ಕಷ್ಟ. ಹಲವು ಮನೆಗಳಿಗೆ ಹೋಗಿ ಕೆಲಸ ಮಾಡುವುದರಿಂದ ಕೋವಿಡ್ ಭಯದಿಂದ ಇತರರು ಮನೆಗೆಲಸಕ್ಕೆ ಕರೆಯುತ್ತಿಲ್ಲ. ಕೆಲಸಕ್ಕೆ ಬರಬೇಡ ಅಂದಿದ್ದಾರೆ. ಹಾಗಾಗಿ, ನಮ್ಮ ಸಂಬಳಕ್ಕೆ ಹೊಡೆತ ಬಿದ್ದಿದೆ. ಎಸ್‌ಎಸ್‌ಎಲ್‌ಸಿ ಪಾಸಾಗಿರುವ ಮಗ ತನ್ನ ಸ್ನೇಹಿತರಂತೆ ಖಾಸಗಿ ಕಾಲೇಜಿಗೆ ಸೇರಬೇಕು ಅಂತಾನೆ. ನಮ್ಮ ಕಷ್ಟ ಅರ್ಥ ಮಾಡಿಕೊಳ್ಳುತ್ತಿಲ್ಲ...’ ಎಂದು ದುಃಖ ತೋಡಿಕೊಂಡರು ಬೆಂಗಳೂರಿನ ಲಗ್ಗೆರೆಯ ಪೂರ್ಣಿಮಾ.

‘ಮೊದಲು 8 ಮನೆಗಳಲ್ಲಿ ಕೆಲಸ ಮಾಡ್ತಾ ಇದ್ದೆ. ಈಗ 2 ಮನೆಗಳಲ್ಲಿ ಕೆಲಸ ಮಾಡ್ತಾ ಇದ್ದೀನಿ. ಕೆಲಸ ಮಾಡುತ್ತಿದ್ದ ಮನೆಗಳಲ್ಲಿ ಕೆಲವರಿಗೆ ಕೋವಿಡ್ ಬಂತು. ಮಕ್ಕಳಿರೋ ನೀನು ಕೆಲಸಕ್ಕೆ ಬರಬೇಡ ಅಂತ ಬಿಡಿಸಿದರು. ಮತ್ತೆ ಕೆಲಸಕ್ಕೆ ಕರೆಯಲೇ ಇಲ್ಲ. ಈಗ ಎರಡೂ ಮನೆಗಳಿಂದ ₹ 4,300 ಸಂಬಳ ಸಿಗುತ್ತೆ. ಮನೆ ಬಾಡಿಗೆಯೇ ಮೂರೂವರೆ ಸಾವಿರ ರೂಪಾಯಿ. ಸಂಘದ ಸಾಲ ಬೇರೆ. ಎಸ್‌ಎಸ್‌ಎಲ್‌ಸಿ ಓದುತ್ತಿದ್ದ ಮಗನಿಗೆ ಮೊಬೈಲ್ ಕೂಡಾ ಕೊಡಿಸಲು ಆಗಲಿಲ್ಲ ನಮ್ಮ ಕೈಲಿ’ ಎಂದರು ತುಮಕೂರಿನ ಮಾಲಾ.

‘ಮನೆಯಲ್ಲಿ ನಾನೊಬ್ಬಳೇ ದುಡಿಯುವವಳು. ಗಂಡ ತೀರಿಹೋಗಿದ್ದಾರೆ. ಮಕ್ಕಳಿನ್ನೂ ಓದುತ್ತಿದ್ದಾರೆ. ತಾಯಿಗೆ ವಯಸ್ಸಾಗಿದೆ. ಕೊರೊನಾ ಮೊದಲ ಅಲೆಯಲ್ಲಿ ಹೇಗೆ ದಿನ ಕಳೆದೆವು ಅನ್ನೋದು ಆ ದೇವರಿಗೇ ಗೊತ್ತು. ಹಾಲು ಕೊಳ್ಳಲೂ ₹ 10 ಕೈಲಿರಲಿಲ್ಲ. ಆಗ ರೇಷನ್ ಕಿಟ್ ಕೂಡಾ ಸಿಗಲಿಲ್ಲ. ಕೋವಿಡ್ ಬರುವ ಮುನ್ನ 5 ಮನೆಗಳಲ್ಲಿ ಕೆಲಸ ಮಾಡಿ ತಿಂಗಳಿಗೆ ₹ 8 ಸಾವಿರ ಗಳಿಸುತ್ತಿದ್ದೆ. ಕೋವಿಡ್ ಮುಗಿಯುವ ತನಕ ಕೆಲಸಕ್ಕೆ ಬರಬೇಡ ಅಂತ ಹೇಳಿದರು. ಕೆಲಸವಿಲ್ಲದೇ ಬೀದಿಯಲ್ಲಿ ಬಿದ್ದೆವು. ಸರ್ಕಾರದಿಂದ ಹಾಲು ಕೊಡ್ತಾರೆ ಅಂತ ಹೇಳಿದ್ದರು. ಆದರೆ, ಉಳ್ಳವರಿಗೇ ಕೊಟ್ಟರು. ಹಾಲಿಗಾಗಿ ಜಗಳ ಮಾಡಿದ್ದಕ್ಕೆ ಎರಡು ದಿನ ಕೊಟ್ಟರು. ಆದರೆ, ಮೂರನೇ ದಿನ ಮತ್ತೆ ಉಪವಾಸ. ಬರುವ ಅಲ್ಪಸಂಬಳದಲ್ಲಿ ಜೀವನ ನಡೆಸುವುದು ಕಷ್ಟ’ ಎಂದು ತಮ್ಮ ನೋವು ಬಿಚ್ಚಿಟ್ಟರು ದಾವಣಗೆರೆಯ ಮಮತಾ.

ಮಮತಾ

ಪರಿಶೀಲಿಸಿ ಹಣ ಬಿಡುಗಡೆ: ‘ಸಮೀಕ್ಷೆ ನಡೆಸಿರದ ಕಾರಣ, ರಾಜ್ಯದ ಒಟ್ಟು ಗೃಹ ಕಾರ್ಮಿಕರ ಸಂಖ್ಯೆಯ ಮಾಹಿತಿಯು ಲಭ್ಯವಿಲ್ಲ. ಸರ್ಕಾರದಿಂದ ನೀಡಲಾಗುವ ₹ 2 ಸಾವಿರ ನೆರವು ಕೋರಿ ಬಾಕಿ ಉಳಿದ ಅರ್ಜಿಗಳು ಪರಿಶೀಲನಾ ಹಂತದಲ್ಲಿದ್ದು, ಪರಿಶೀಲನೆ ಪೂರ್ಣಗೊಂಡ ಬಳಿಕ ಅರ್ಹರಿಗೆ ನೆರವಿನ ಮೊತ್ತವನ್ನು ಬಿಡುಗಡೆ ಮಾಡಲಾಗುವುದು’ ಎಂದು ಕಾರ್ಮಿಕ ಇಲಾಖೆಯ ಹಿರಿಯ ಅಧಿಕಾರಿಯೊಬ್ಬರು ಮಾಹಿತಿ ನೀಡಿದರು.

ಬದುಕು ಬೀದಿಗೆ ತಂದ ಕೋವಿಡ್

ಗೃಹ ಕಾರ್ಮಿಕರಿಗೆ ಸರ್ಕಾರವು ಘೋಷಿಸಿದ ₹ 2 ಸಾವಿರ ಪರಿಹಾರ ನಿಧಿಯು ಶೇ 95ರಷ್ಟು ಮಹಿಳೆಯರಿಗೆ ಮರೀಚಿಕೆಯಾಗಿದೆ. ದಿನಬಳಕೆಯ ಅಗತ್ಯ ವಸ್ತುಗಳ ಬೆಲೆಯೇರಿಕೆ ಹಿನ್ನೆಲೆಯಲ್ಲಿ ಸರ್ಕಾರ ಈ ಕೂಡಲೇ ಪರಿಹಾರ ಹಣವನ್ನು ಬಿಡುಗಡೆ ಮಾಡಬೇಕು ಹಾಗೂ ಬಡತನ-ದಲ್ಲಿರುವ ಈ ಕುಟುಂಬಗಳಿಗೆ ಆರೋಗ್ಯದ ಸೌಲಭ್ಯ, ಮಕ್ಕಳಿಗೆ ಉಚಿತ ಶಿಕ್ಷಣ ನೀಡಬೇಕು

ಶೋಭಾ ಎಸ್, ಕಾರ್ಯದರ್ಶಿ ಎಐಎಂಎಸ್‌ಎಸ್, ಗೃಹ ಕಾರ್ಮಿಕರ ಹಕ್ಕುಗಳ ಹೋರಾಟಗಾರ್ತಿ

ಮಗನ ಬಸ್‌ಪಾಸ್‌ಗೂ ಕಾಸಿಲ್ಲ

‘ಸದ್ಯಕ್ಕೆ ಒಂದೇ ಮನೆಯಲ್ಲಿ ಕೆಲಸ ಮಾಡ್ತೀದ್ದೀನಿ. ಗಂಡನಿಗೂ ಕೆಲಸವಿಲ್ಲ. ಮಗನನ್ನು ಓದಿಸಲು ಆಗುತ್ತಿಲ್ಲ. ಬೆಂಗಳೂರಿನಲ್ಲಿ ಖರ್ಚು ಹೆಚ್ಚು, ಬಸ್ ಪಾಸ್ ಮಾಡಿಸೋಕೂ ಆಗ್ತಿಲ್ಲ. ಹಾಗಾಗಿ, ಮಗನನ್ನು ತಾಯಿ ಮನೆ ಚನ್ನಪಟ್ಟಣಕ್ಕೆ ಕಳಿಸಿದ್ದೀನಿ’ ಎಂದರು ಬೆಂಗಳೂರಿನ ಮಹಾಲಕ್ಷ್ಮೀ ಲೇಔಟ್‌ನ ಶಾರದಾ.

ಸೊಸೈಟಿ ಅಕ್ಕಿಯೇ ಜೀವನಾಧಾರ

ರತ್ನಾ

‘ಕೋವಿಡ್ ಬರುವ ಮುನ್ನ 4 ಮನೆಗಳಿಗೆ ಕೆಲಸ ಮಾಡುತ್ತಿದ್ದೆ. ಬೇರೆ ಮನೆಗಳಲ್ಲಿ ಕೆಲಸ ಮಾಡಿ ಬರ್ತೀರಿ. ಬೇಡ ಅಂತ ಹೇಳಿ ಕೆಲಸ ಬಿಡಿಸಿದ್ರು. ಈಗ ಒಂದೇ ಮನೆಗೆ ಹೋಗಿ ಬಾಗಿಲಿಗೆ ನೀರು ಹಾಕಿ ಬರ್ತೀನಿ. ಒಳಗಿನ ಕೆಲಸವಿಲ್ಲ. ತಿಂಗಳಿಗೆ ₹ 1 ಸಾವಿರ ಕೊಡ್ತಾರೆ. ಸೊಸೈಟಿಯಲ್ಲಿ ಅಕ್ಕಿ ಕೊಡ್ತಾರೆ ಹೆಂಗೋ ಜೀವನ ನಡೆಸ್ತಾ ಇದ್ದೀನಿ. ಪರಿಹಾರ ಧನ ಕೋರಿ ಅರ್ಜಿ ಹಾಕಿ 2 ತಿಂಗಳಾಗಿದೆ ಇನ್ನೂ ಪರಿಹಾರ ಬಂದಿಲ್ಲ’ ಎಂದು ಅಳಲು ತೋಡಿಕೊಂಡರು ಬೆಂಗಳೂರಿನ ಮುತ್ಯಾಲನಗರದ ರತ್ನಾ.

‘ಈಗ ಒಂದೇ ಮನೆಯಲ್ಲಿ ಕೆಲಸ ಮಾಡ್ತಾ ಇದ್ದೀನಿ. ಅಲ್ಲಿ ಸಿಗುವ ₹ 3 ಸಾವಿರದಲ್ಲಿ ಮನೆ ಬಾಡಿಗೆ ಕಟ್ಟೋದಿರಲಿ ಊಟಕ್ಕೂ ಕಷ್ಟವಾಗಿದೆ. ಒಂಟಿಯಾಗಿರುವ ನನಗೆ ಯಾರ ಆಸರೆಯೂ ಇಲ್ಲ. ನಮ್ಮಂಥವರು ಬದುಕೋದು ಹೇಗೆ?

ಪಚ್ಚಮ್ಮ, ನಂಜಪ್ಪ ಗಾರ್ಡನ್, ಬೆಂಗಳೂರು

4,90,111	24,902	4,65,209
ಅರ್ಜಿ ಸಲ್ಲಿಸಿದ್ದ ಗೃಹ ಕಾರ್ಮಿಕರ ಸಂಖ್ಯೆ	ಪರಿಹಾರ ಧನ ಮಂಜೂರಾದವರ ಸಂಖ್ಯೆ	ಬಾಕಿ ಉಳಿದ ಅರ್ಜಿಗಳ ಸಂಖ್ಯೆ

ಕೋರಿದ್ದು 4,90,111 ಮಂದಿ, ಸಿಕ್ಕಿದ್ದು 24,902 ಮಂದಿಗೆ

ಲಾಕ್‌ಡೌನ್‌ನಿಂದ ಆರ್ಥಿಕ ನಷ್ಟ ಅನುಭವಿಸಿದ್ದ ಗೃಹ ಕಾರ್ಮಿಕರಿಗೆ ಸರ್ಕಾರವು ಒಂದು ಬಾರಿ ₹ 2 ಸಾವಿರ ಪರಿಹಾರ ಧನ ಘೋಷಿಸಿತ್ತು. ಪರಿಹಾರಕ್ಕಾಗಿ 4,90,111 ಗೃಹಕಾರ್ಮಿಕರು ಅರ್ಜಿ ಸಲ್ಲಿಸಿದ್ದರು. ಇದುವರೆಗೆ 24,902 ಮಂದಿಗೆ ಮಾತ್ರ ಪರಿಹಾರ ಧನ ವಿತರಣೆಯಾಗಿದೆ. ಉಳಿದ 4,65,209 ಮಂದಿಗೆ ಇನ್ನೂ ವಿತರಣೆಯಾಗಿಲ್ಲ.

11 ವರ್ಗಗಳ ಅಸಂಘಟಿತ ಕಾರ್ಮಿಕರಿಗೆ ಪರಿಹಾರ ಧನ ನೀಡಲು ಇನ್ನೂ ₹ 215.07 ಕೋಟಿಗಳ ಹೆಚ್ಚಿನ ಅನುದಾನ ಅವಶ್ಯಕತೆ ಇದೆ. ಈ ಅನುದಾನ ಬಿಡುಗಡೆಗಾಗಿ ಆರ್ಥಿಕ ಇಲಾಖೆಗೆ ಸೂಕ್ತ ಪ್ರಸ್ತಾವನೆ ಸಲ್ಲಿಸಬೇಕೆಂದು ಕೋರಿ ಕಾರ್ಮಿಕ ಇಲಾಖೆಯ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗೆ ಇದೇ ವರ್ಷ ಆಗಸ್ಟ್ 25 ರಂದು ಕಾರ್ಮಿಕ ಇಲಾಖೆಯ ಆಯುಕ್ತ ಅಕ್ರಂ ಪಾಷ ಪತ್ರ ಬರೆದಿದ್ದಾರೆ.

ಅಪಾರ ದಾಖಲೆಗಳ ವಶ

ಒಂದನೇ ಪುಟದಿಂದ

ಬಿ.ವೈ. ವಿಜಯೇಂದ್ರ ಸೂಚನೆಯಂತೆ ಸರ್ಕಾರದ ಪ್ರಮುಖ ಇಲಾಖೆಗಳ ಟೆಂಡರ್ ಪ್ರಕ್ರಿಯೆ, ಬಿಲ್ ಪಾವತಿಯಲ್ಲಿ ಹಸ್ತಕ್ಷೇಪ ನಡೆಸುತ್ತಿದ್ದ ಆರೋಪವಿದೆ. ಈ ಸಂದರ್ಭದಲ್ಲಿ ಹಣದ ಅಕ್ರಮ ವಹಿವಾಟು ನಡೆಸಿರುವ ದೂರನ್ನು ಆಧರಿಸಿ ಐ.ಟಿ ಅಧಿಕಾರಿಗಳು ತನಿಖೆ ಆರಂಭಿಸಿದ್ದಾರೆ.

ಉಮೇಶ್, ಅವರ ನಿಕಟ-ವರ್ತಿಗಳು, 31 ಗುತ್ತಿಗೆದಾರರು ಮತ್ತು ಲೆಕ್ಕಪರಿಶೋಧಕರ ಮೇಲೆ ಗುರುವಾರ ಐ.ಟಿ ದಾಳಿ ನಡೆದಿತ್ತು. ಶುಕ್ರವಾರವೂ ಕಾರ್ಯಾಚರಣೆ ಮುಂದುವರಿದಿದ್ದು, ರಾಜ್ಯದ ಹಲವೆಡೆ ಶೋಧ ನಡೆಸಲಾಗಿದೆ. ಗುತ್ತಿಗೆ-ದಾರರನ್ನು ಮನೆಗೆ ಕರೆಸಿಕೊಂಡು ‘ವ್ಯವಹಾರ’ ನಡೆಸುತ್ತಿದ್ದ ಆರೋಪದ ಕುರಿತು ಐ.ಟಿ ಅಧಿಕಾರಿಗಳು ಉಮೇಶ್ ವಿಚಾರಣೆ ನಡೆಸಿದ್ದಾರೆ ಎಂಬ ಮಾಹಿತಿ ಲಭ್ಯವಾಗಿದೆ.

ರಾಜಾಜಿನಗರ ಭಾಷ್ಯಂ ವೃತ್ತ-ದಲ್ಲಿರುವ ಉಮೇಶ್ ಮನೆಯಿಂದ ಗುರುವಾರ ಎರಡು ಮೂಟೆಗಳಿಗೂ ಹೆಚ್ಚು ದಾಖಲೆಗಳನ್ನು ವಶಪಡಿಸಿಕೊ-ಳ್ಳಲಾಗಿತ್ತು. ಶುಕ್ರವಾರವೂ ಶೋಧ ಮುಂದುವರಿಸಿದ ತನಿಖಾ ತಂಡ, ಮತ್ತಷ್ಟು ದಾಖಲೆಗಳನ್ನು ವಶಕ್ಕೆ ಪಡೆದಿದೆ. ಕೃಷ್ಣ ಭಾಗ್ಯ ಜಲ ನಿಗಮ, ಕಾವೇರಿ ನೀರಾವರಿ ನಿಗಮ, ವಿಶ್ವೇಶ್ವ-ರಯ್ಯ ಜಲ ನಿಗಮಗಳ ಕಾಮಗಾರಿಗಳಿಗೆ ಸಂಬಂಧಿಸಿದ ಟೆಂಡರ್ ಪ್ರಕ್ರಿಯೆ ನೂರಾರು ಕಡತಗಳನ್ನು ವಶಕ್ಕೆ ಪಡೆಯಲಾಗಿದೆ ಎಂದು ಮೂಲಗಳು ತಿಳಿಸಿವೆ.

ಮತ್ತಷ್ಟು ಕಡೆ ದಾಳಿ: ಯಡಿಯೂರಪ್ಪ ಅವರ ಮಗ ಬಿ.ವೈ. ವಿಜಯೇಂದ್ರ ಅವರ ಸಹಪಾಠಿ ಅರವಿಂದ್ ಮನೆಯ ಮೇಲೆ ಶುಕ್ರವಾರ ದಾಳಿ ಮಾಡಿದ ಆದಾಯ ತೆರಿಗೆ ಅಧಿಕಾರಿಗಳು ಇಡೀ ದಿನ ಶೋಧ ನಡೆಸಿದರು. ಅರವಿಂದ್ ವಿದೇಶ ಪ್ರವಾಸದಲ್ಲಿದ್ದು, ತನಿಖಾ ತಂಡದ ಎದುರು ಹಾಜರಾಗುವಂತೆ ಸೂಚಿಸಲಾಗಿದೆ.

ಗುತ್ತಿಗೆದಾರ ಡಿ.ವೈ. ಉಪ್ಪಾರ್ ಅವರ ಸದಾಶಿವನಗರದ ಮನೆ ಹಾಗೂ ಕಚೇರಿಯಲ್ಲಿ ಎರಡನೇ ದಿನವೂ ಶೋಧ ನಡೆದಿದೆ. ಸಹಕಾರ ನಗರದ ರಾಹುಲ್ ಎಂಟರ್‌ಪ್ರೈಸಸ್‌ನಲ್ಲಿ ಗುರುವಾರ ತಡರಾತ್ರಿಯವರೆಗೂ ಶೋಧ ನಡೆಸಿದ್ದ ಐ.ಟಿ ಅಧಿಕಾರಿಗಳು, ಬಾಗಿಲಿಗೆ ಬೀಗ ಹಾಕಿಕೊಂಡು ತೆರಳಿದ್ದರು. ಶುಕ್ರವಾರ ಬೆಳಿಗ್ಗೆಯಿಂದ ಪುನಃ ತಪಾಸಣೆ ನಡೆಸಿದ್ದು, ಹಲವು ದಾಖಲೆಗಳನ್ನು ವಶಪಡಿಸಿಕೊಂಡಿದ್ದಾರೆ.

ವಿದ್ಯಾರಣ್ಯಪುರದಲ್ಲಿರುವ ಲೆಕ್ಕ-ಪರಿಶೋಧಕ ಲಕ್ಷ್ಮೀಕಾಂತ್ ಮನೆ, ತುಮಕೂರಿನ ಸಿಂಗರೇಹಳ್ಳಿಯಲ್ಲಿರುವ ಶಂಕರನಾರಾಯಣ ಕನ್‌ಸ್ಟ್ರಕ್ಷನ್‌ನ ಎತ್ತಿನಹೊಳೆ ಕಾಮಗಾರಿ ನಿರ್ವಹಣಾ ಕಚೇರಿಯ ಮೇಲೂ ದಾಳಿಮಾಡಿದ ತನಿಖಾ ತಂಡ, ಶೋಧ ನಡೆಸಿದೆ.

ಪತ್ತೆಯಾದ ಸುಳಿವು

- ಮುಖ್ಯಮಂತ್ರಿ ಸಚಿವಾಲಯದ ಸಿಬ್ಬಂದಿಯಾದ ಉಮೇಶ್ ನೀರಾವರಿ ನಿಗಮಗಳ ಆಡಳಿತ ಮಂಡಳಿ ಸಭೆಗಳಲ್ಲಿ ಭಾಗಿ
- ಕಾಮಗಾರಿಗಳ ಕಾರ್ಯಾದೇಶ ನೀಡುವ ಮೊದಲೇ ಗುತ್ತಿ-ಗೆದಾರರಿಗೆ ಮುಂಗಡ ಹಣ ಬಿಡುಗಡೆ
- ಹಳೆಯ ದಿನಾಂಕಕ್ಕೆ ಕಾರ್ಯಾದೇಶ ಹೊರಡಿಸಿ ದಂತೆ ದಾಖಲೆಗಳ ಸೃಷ್ಟಿ
- ಕಾಮಗಾರಿ ಮುಗಿಯುವ ಮೊದಲೇ ಪೂರ್ಣ ಬಿಲ್ ಪಾವತಿ

ಚಾಲಕನ ಕುಟುಂಬಕ್ಕೂ ₹45 ಲಕ್ಷ ಪರಿಹಾರ

ಲಖಿಂಪುರ-ಖೇರಿ (ಪಿಟಿಐ): ರೈತರ ಮೇಲೆ ಎಸ್‌ಯುವಿ ಹರಿದ ನಂತರ ನಡೆದ ಹಿಂಸಾಚಾರದಲ್ಲಿ ಮೃತಪಟ್ಟ ನಾಲ್ವರಿಗೆ ಕೂಡ ₹45 ಲಕ್ಷ ಪರಿಹಾರ ನೀಡಲಾಗಿದೆ ಎಂದು ಮೂಲಗಳು ತಿಳಿಸಿವೆ.

ಕೇಂದ್ರ ಗೃಹ ಖಾತೆಯ ರಾಜ್ಯ ಸಚಿವ ಅಜಯ್ ಮಿಶ್ರಾ ಅವರ ಚಾಲಕ, ಬಿಜೆಪಿಯ ಇಬ್ಬರು ಕಾರ್ಯಕರ್ತರು ಮತ್ತು ಒಬ್ಬ ಪತ್ರಕರ್ತ ಹಿಂಸಾಚಾರದಲ್ಲಿ ಮೃತಪಟ್ಟಿದ್ದರು.

ಚಾಲಕ ಹರಿಓಂ ಮಿಶ್ರಾ, ಬಿಜೆಪಿ ಕಾರ್ಯಕರ್ತರಿಬ್ಬರ ಕುಟುಂಬದ ಸದಸ್ಯರಿಗೆ ತಲಾ ₹45 ಲಕ್ಷದ ಚೆಕ್ ಅನ್ನು ಲಖಿಂಪುರ (ಸದರ್) ಶಾಸಕ ಯೋಗೇಶ್ ವರ್ಮಾ ಗುರುವಾರವೇ ವಿತರಿಸಿದ್ದಾರೆ. ಮೃತ ರೈತರ ಕುಟುಂಬಗಳಿಗೆ ಮಾತ್ರ ಆರಂಭದಲ್ಲಿ ಪರಿಹಾರ ಘೋಷಿಸಲಾಗಿತ್ತು. ಬಳಿಕ ಅದನ್ನು ಮೃತಪಟ್ಟ ಇತರ ನಾಲ್ವರ ಕುಟುಂಬಗಳಿಗೂ ವಿಸ್ತರಿಸಲಾಯಿತು.

ಪ್ರಧಾನಿ ಮನೆಗೆ ಮುತ್ತಿಗೆ-ಆಜಾದ್: ಲಖಿಂಪುರ-ಖೇರಿ ಹಿಂಸಾ ಪ್ರಕರಣದ ಆರೋಪಿಗಳನ್ನು ಏಳು ದಿನಗಳೊಳಗೆ ಬಂಧಿಸದೇ ಇದ್ದಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರ ಮನೆಗೆ ಮುತ್ತಿಗೆ ಹಾಕಲಾಗುವುದು ಎಂದು ಆಜಾದ್ ಸಮಾಜ ಪಾರ್ಟಿಯ ಮುಖ್ಯಸ್ಥ, ದಲಿತ ನಾಯಕ ಚಂದ್ರಶೇಖರ ಆಜಾದ್ ಶುಕ್ರವಾರ ಘೋಷಿಸಿದ್ದಾರೆ.

‘ಎಲ್ಲ ವಿಚಾರಗಳ ಬಗ್ಗೆಯೂ ಪ್ರಧಾನಿ ಟ್ವೀಟ್ ಮಾಡುತ್ತಾರೆ. ಆದರೆ, ರೈತರ ಹತ್ಯೆಯ ಬಗ್ಗೆ ಅವರು ಇನ್ನೂ ಮೌನ ಮುರಿದಿಲ್ಲ. ಆರೋಪಿಗಳು ಮುಕ್ತವಾಗಿ ಓಡಾಡುತ್ತಿದ್ದಾರೆ’ ಆಜಾದ್ ಹೇಳಿದ್ದಾರೆ.

18ರಂದು ರೈಲು ತಡೆ: ಲಖಿಂಪುರ-ಖೇರಿ ಹಿಂಸಾಚಾರವನ್ನು ಖಂಡಿಸಿ ಇದೇ 18ರಂದು ರೈಲು ತಡೆದು ಪ್ರತಿಭಟನೆ ನಡೆಸಲಾಗುವುದು ಎಂದು ರೈತ ಸಂಘಟನೆಗಳು ಶುಕ್ರವಾರ ಘೋಷಿಸಿವೆ. ಉತ್ತರ ಪ್ರದೇಶ ಸರ್ಕಾರ ಘೋಷಿಸಿರುವ ನ್ಯಾಯಾಂಗ ತನಿಖೆಯನ್ನು ತಿರಸ್ಕರಿಸಿವೆ. ಕೇಂದ್ರದ ಮೂರು ಕೃಷಿ ಕಾಯ್ದೆಗಳ ವಿರುದ್ಧದ ಪ್ರತಿಭಟನೆಯ ನೇತೃತ್ವ ವಹಿಸಿರುವ ರಾಷ್ಟ್ರೀಯ ಕಿಸಾನ್ ಯೂನಿಯನ್ ಈ ನಿರ್ಧಾರಕ್ಕೆ ಬಂದಿದೆ.

ಕಾಂಗ್ರೆಸ್‌ಗೆ ಪ್ರಶಾಂತ್ ಕಿಶೋರ್ ಟೀಕೆ

ಚುನಾವಣಾ ಕಾರ್ಯತಂತ್ರ ನಿಪುಣ ಪ್ರಶಾಂತ್ ಕಿಶೋರ್ ಅವರು ಕಾಂಗ್ರೆಸ್ ವಿರುದ್ಧ ವಾಗ್ದಾಳಿ ನಡೆಸಿದ್ದಾರೆ. ‘ಲಖಿಂಪುರ-ಖೇರಿ ಪ್ರಕರಣದಿಂದಾಗಿ ಭಾರತದ ಪುರಾತನ ಪಕ್ಷದ ನೇತೃತ್ವದ ವಿರೋಧ ಪಕ್ಷಗಳು ತ್ವರಿತವಾಗಿ ಮತ್ತು ಅಪ್ರಯತ್ನದಿಂದ ಪುನಶ್ಚೇತನಗೊಳ್ಳಲಿವೆ ಎಂದು ಭಾವಿಸಿದವರಿಗೆ ದೊಡ್ಡ ನಿರಾಶೆ ಆಗಲಿದೆ. ಪುರಾತನ ಪಕ್ಷದ ಆಳದಲ್ಲಿ ಇರುವ ಸಮಸ್ಯೆಗಳು ಮತ್ತು ರಚನೆಯಲ್ಲಿಯೇ ಇರುವ ದೌರ್ಬಲ್ಯಗಳಿಗೆ ತ್ವರಿತ ಪರಿಹಾರವೇನೂ ಇಲ್ಲ’ ಎಂದು ಕಿಶೋರ್ ಟ್ವೀಟ್ ಮಾಡಿದ್ದಾರೆ.

ಪ್ರಶಾಂತ್ ಕಿಶೋರ್ ಅವರು ಕಾಂಗ್ರೆಸ್ ಸೇರಲಿದ್ದಾರೆ ಎಂಬ ವದಂತಿ ಇತ್ತು. ಕಿಶೋರ್ ಅವರ ಹೇಳಿಕೆಯನ್ನು ನಿರ್ಲಕ್ಷಿಸಲು ಕಾಂಗ್ರೆಸ್ ಯತ್ನಿಸಿದೆ. ‘ಸಮಾಲೋಚಕ’ರು ನೀಡಿದ ಹೇಳಿಕೆಗೆ ಪ್ರತಿಕ್ರಿಯಿಸಲಾಗದು ಎಂದು ಕಾಂಗ್ರೆಸ್ ಮುಖ್ಯ ವಕ್ತಾರ ರಣದೀಪ್ ಸುರ್ಜೇವಾಲಾ ಹೇಳಿದ್ದಾರೆ.

ಚೀನಾ ಅತಿಕ್ರಮಣಕ್ಕೆ ತಿರುಗೇಟು

ಒಂದನೇ ಪುಟದಿಂದ

ವಾಸ್ತವ ನಿಯಂತ್ರಣ ರೇಖೆಯ ಬಗ್ಗೆ ಭಾರತ ಮತ್ತು ಚೀನಾ ಮಧ್ಯೆ ಒಮ್ಮತವಿಲ್ಲ. ಹೀಗಾಗಿ ಈ ಸಂಘರ್ಷ ನಡೆದಿದೆ ಎಂದು ಮೂಲಗಳು ಹೇಳಿವೆ. ಹೆಚ್ಚಿನ ಮಾಹಿತಿ ಲಭ್ಯವಾಗಿಲ್ಲ.

ಭಾರತ ಮತ್ತು ಚೀನಾ ಗಡಿಯಲ್ಲಿ 3,500 ಕಿ.ಮೀ ಉದ್ದದ ವಾಸ್ತವ ನಿಯಂತ್ರಣ ರೇಖೆ ಇದೆ. ಈ ರೇಖೆಯ ಬಗ್ಗೆ ಎರಡೂ ದೇಶಗಳ ಒಮ್ಮತವಿಲ್ಲ. ಈ ರೇಖೆಯ ಉದ್ದಕ್ಕೂ ಎರಡೂ ಕಡೆ 50ರಿಂದ 60 ಸಾವಿರ ಸೈನಿಕರು ಇದ್ದಾರೆ.

ಉಮೇಶ್ ಭ್ರಷ್ಟಾಚಾರಕ್ಕೆ ಸಿಎಂ ಉತ್ತರದಾಯಿ: ಕಾಂಗ್ರೆಸ್

ಬೆಂಗಳೂರು: ಮುಖ್ಯಮಂತ್ರಿ ಕಚೇರಿಯ ಸಿಬ್ಬಂದಿಯಾಗಿದ್ದ ಆಯನೂರು ಉಮೇಶ್ ನಡೆಸಿರುವ ಭ್ರಷ್ಟಾಚಾರ ಮತ್ತು ಅದೇ ಆರೋಪದಲ್ಲಿ ಆದಾಯ ತೆರಿಗೆ ಇಲಾಖೆ ಅಧಿಕಾರಿಗಳು ನಡೆಸಿರುವ ದಾಳಿಗೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಕೂಡ ಉತ್ತರದಾ-ಯಿಯಾಗಿದ್ದಾರೆ ಎಂದು ಕೆಪಿಸಿಸಿ ಹೇಳಿದೆ.

ಆದಾಯ ತೆರಿಗೆ ದಾಳಿ ಕುರಿತು ಕೆಪಿಸಿಸಿಯ ಅಧಿಕೃತ ಟ್ವಿಟರ್ ಖಾತೆಯಲ್ಲಿ ಶುಕ್ರವಾರ ಸರಣಿ ಟ್ವೀಟ್‌ಗಳನ್ನು ಮಾಡಿದ್ದು, ‘ಉಮೇಶ್ ನಾಮಕಾವಸ್ಥೆಗೆ ಮುಖ್ಯಮಂತ್ರಿ ಕಚೇರಿ ಸಿಬ್ಬಂದಿ-ಯಾಗಿದ್ದು, ವಾಸ್ತವದಲ್ಲಿ ಮಾಜಿ ಮುಖ್ಯಮಂತ್ರಿಯವರಿಗೆ ಸಹಾ-ಯಕನಾಗಿದ್ದುದು ಬೊಮ್ಮಾಯಿ ಅವರಿಗೆ ತಿಳಿದಿರಲಿಲ್ಲವೆ? ಅಥವಾ ತಿಳಿದೂ ಸಹಕರಿಸಿದರೇ’ ಎಂದು ಪ್ರಶ್ನಿಸಿದೆ.

ಬಿ.ಎಸ್.ಯಡಿಯೂರಪ್ಪ ಮುಖ್ಯಮಂತ್ರಿಯಾಗಿದ್ದಾಗ ಅವರ ಆಪ್ತ ಸಂತೋಷ್ ಆತ್ಮಹತ್ಯೆಗೆ ಯತ್ನಿಸಿದ್ದ ಪ್ರಕರಣ ನಡೆದಿತ್ತು. ಈಗ ಆಪ್ತ ಸಹಾಯಕ, ಆಪ್ತರ ಮೇಲೆ ಐ.ಟಿ ದಾಳಿ ನಡೆದಿದೆ. ಇವೆಲ್ಲವೂ ಯಾವ ರಹಸ್ಯವನ್ನು ಹೊಂದಿವೆ? ಬಿಜೆಪಿ ಮತ್ತು ಬಿಎಸ್‌ವೈ ನಡುವಿನ ಜಟಾಪಟಿಗೆ ಇದು ಮುನ್ನುಡಿಯೆ? ಈ ಬಗ್ಗೆ ಬಿಜೆಪಿಯ ರಾಜ್ಯ ಘಟಕದ ನಾಯಕರು ತುಟಿ ಬಿಚ್ಚದಿರುವುದೇಕೆ ಎಂದು ಕೇಳಲಾಗಿದೆ.

ಯಡಿಯೂರಪ್ಪ ಅವರ ಆಪ್ತ ಸಹಾಯಕನ ಮೇಲಾದ ಐ.ಟಿ ದಾಳಿಯೇ ಎಲ್ಲವನ್ನೂ ಹೇಳುತ್ತಿದೆ. ಹಿಂದೆ ಶಾಸಕ ಸತೀಶ್ ರೆಡ್ಡಿ ಆಪ್ತನಿಂದ ಆಸ್ಪತ್ರೆಯ ಹಾಸಿಗೆಗಳ ಬ್ಲಾಕಿಂಗ್ ದಂಧೆ ನಡೆದಿತ್ತು. ಸಚಿವರಾದ ಆರ್. ಅಶೋಕ, ಬಿ. ಶ್ರೀರಾಮುಲು ಆಪ್ತ ಸಹಾಯಕರು ವಸೂಲಿ ಮಾಡಿದ್ದ ಪ್ರಕರಣಗಳು ಬಯಲಾಗಿದ್ದವು. ಈಗ ಮತ್ತಷ್ಟು ಹಗರಣಗಳು ಹೊರಬಂದಿವೆ. ‘ನಾನು ತಿನ್ನುವುದಿಲ್ಲ, ತಿನ್ನಲೂ ಬಿಡುವುದಿಲ್ಲ’ ಎಂದವರು ಈ ಬಗ್ಗೆ ತನಿಖೆ ನಡೆಸಬೇಕಲ್ಲವೆ ಎಂದು ಕಾಂಗ್ರೆಸ್ ಪ್ರಶ್ನಿಸಿದೆ.

ಬೊಮ್ಮಾಯಿಗೆ ‘ಒತ್ತಡ’ ಮುಕ್ತ ಆಡಳಿತ: ವರಿಷ್ಠರ ತಂತ್ರ

ಅಪ್ಪ–ಮಗನ ಕಡಿವಾಣಕ್ಕೆ ‘ದಾಳಿ’ ಅಸ್ತ್ರ?

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ನೇತೃತ್ವದ ಸರ್ಕಾರ ಒತ್ತಡ ಮುಕ್ತವಾಗಿ ಮತ್ತು ಸ್ವತಂತ್ರವಾಗಿ ಕಾರ್ಯನಿರ್ವಹಿಸಲು ಹಾದಿ ಸುಗಮ ಮಾಡುವುದು ಮತ್ತು ಸರ್ಕಾರದ ಮೇಲೆ ನಿಯಂತ್ರಣ ಸಾಧಿಸುವ ಬಿ.ಎಸ್. ಯಡಿಯೂರಪ್ಪ ಹಾಗೂ ಬಿ.ವೈ. ವಿಜಯೇಂದ್ರ ಅವರ ಯತ್ನಕ್ಕೆ ಕಡಿವಾಣ ಹಾಕಲು ಅವರ ಆಪ್ತರ ಮೇಲೆ ಆದಾಯ ತೆರಿಗೆ(ಐ.ಟಿ) ಇಲಾಖೆ ದಾಳಿ ನಡೆದಿದೆ ಎಂಬ ವ್ಯಾಖ್ಯಾನ ಬಿಜೆಪಿ ವಲಯದಲ್ಲಿ ನಡೆದಿದೆ.

ಯಡಿಯೂರಪ್ಪ ಮುಖ್ಯಮಂತ್ರಿ-ಯಾಗಿದ್ದಾಗಲೇ ವಿಜಯೇಂದ್ರ ವಿರುದ್ಧ ಜಾರಿ ನಿರ್ದೇಶನಾಲಯಕ್ಕೆ ದೂರುಗಳು ಸಲ್ಲಿಕೆಯಾಗಿದ್ದವು. ಐದಾರು ತಿಂಗಳಿನಿಂದ ಮಾಹಿತಿ ಕಲೆ ಹಾಕಿದ ಐ.ಟಿ ಅಧಿಕಾರಿಗಳು ವಿಜಯೇಂದ್ರ ಆಪ್ತರ ಮೇಲೆ ದಾಳಿ ನಡೆಸಿದ್ದಾರೆ. ಈ ಬೆನ್ನಲ್ಲೇ, ದಾಳಿಯ ರಾಜಕೀಯ ಆಯಾಮ ಚರ್ಚೆಯ ಮುನ್ನೆಲೆಗೆ ಬಂದಿದೆ.

ವಿವಿಧ ನೇಮಕಗಳು, ಕಾಮಗಾರಿಗಳ ಗುತ್ತಿಗೆ, ಅಧಿಕಾರಿಗಳ ವರ್ಗಾವಣೆಗಳೂ ಸೇರಿ ಸಾಕಷ್ಟು ವಿಚಾರಗಳಲ್ಲಿ ಇಬ್ಬರೂ ಒತ್ತಡ ಹೇರುತ್ತಿದ್ದು, ಇದರಿಂದಾಗಿ ಬೊಮ್ಮಾಯಿ ಅವರು ಸ್ವತಂತ್ರವಾಗಿ ಕೆಲಸ ಮಾಡಲು ಸಾಧ್ಯ-ವಾಗುತ್ತಿಲ್ಲ ಎಂಬ ವಾತಾವರಣ ಸೃಷ್ಟಿಯಾಗಿರುವುದು ಪಕ್ಷದ ವರಿಷ್ಠರ ಗಮನಕ್ಕೆ ಬಂದಿದೆ. ಪಕ್ಷದಲ್ಲಿ ಯಾರೂ ಯಾರ ಮೇಲೂ ಸವಾರಿ ಮಾಡುವುದು ಅಥವಾ ಬ್ಲ್ಯಾಕ್‌ಮೇಲ್ ತಂತ್ರವನ್ನು ಅನುಸರಿಸಿ ತಮ್ಮ ಕಾರ್ಯಸಾಧಿಸು-ವುದಕ್ಕೆ ಸಾಧ್ಯವಿಲ್ಲ. ಅಂತಹ ಪ್ರಯತ್ನ ಮಾಡಿದರೆ, ಕಡಿವಾಣ ಹಾಕಲು ನಾವು ಇದ್ದೇವೆ ಎಂಬ ಸ್ಪಷ್ಟ ಸಂದೇಶವನ್ನು ನೀಡುವುದು ಐ.ಟಿ ದಾಳಿ ಉದ್ದೇಶ ಇದ್ದಂತಿದೆ ಎಂಬ ಚರ್ಚೆಯೂ ಶುರುವಾಗಿದೆ.



ಯಡಿಯೂರಪ್ಪ



ವಿಜಯೇಂದ್ರ

ಬೊಮ್ಮಾಯಿ ಮೊದಲ ಬಾರಿ ಸಂಪುಟ ವಿಸ್ತರಣೆ ಮಾಡುವ ಸಂದರ್ಭದಲ್ಲಿ ಸಚಿವರ ಪಟ್ಟಿಯಲ್ಲಿ ವಿಜಯೇಂದ್ರ ಅವರ ಹೆಸರನ್ನು ಸೇರಿಸುವಂತೆ ಯಡಿಯೂರಪ್ಪ ಅವರು ಬೊಮ್ಮಾಯಿ ಅವರಿಗೆ ದೂರವಾಣಿ ಮೂಲಕ ಪದೇ ಪದೇ ಒತ್ತಡ ಹೇರಿದ್ದರು. ಆದರೆ, ಪಕ್ಷದ ವರಿಷ್ಠರು ಇದಕ್ಕೆ ಮಣಿಯಲಿಲ್ಲ. ತಾವು ಅಂದು-ಕೊಂಡಿದ್ದನ್ನೇ ವರಿಷ್ಠರು ಮಾಡಿದ್ದರು.

ಆದರೆ, ಯಡಿಯೂರಪ್ಪ ಅವರ ಪ್ರಭಾವಳಿಯಿಂದ ಬೊಮ್ಮಾಯಿ ಹೊರಬರಲು ಸಾಧ್ಯವಾಗದ ಸ್ಥಿತಿ ನಿರ್ಮಾಣ ಆಗಿರುವುದನ್ನು ವರಿಷ್ಠರು ಗಮನಿಸಿದ್ದಾರೆ. ಹೀಗಾಗಿ ಎಲ್ಲಿ ಒತ್ತಿ ಹಿಡಿದರೆ ಎಲ್ಲಿ ಸರಿ ಹೋಗಬಹುದು ಎಂಬ ಪ್ರಯೋಗ ಈಗ ನಡೆದಿದೆ ಎಂಬ ವಿಶ್ಲೇಷಣೆಯೂ ನಡೆದಿದೆ.

‘ಹಾನಗಲ್ ಮತ್ತು ಸಿಂದಗಿ ಉಪಚುನಾವಣೆಗೂ ಮೊದಲೇ ತಮ್ಮನ್ನು ಸಚಿವರನ್ನಾಗಿ ಮಾಡಬೇಕು ಎಂಬ ಒತ್ತಡವನ್ನೂ ವಿಜಯೇಂದ್ರ ಹೇರಿದ್ದರು. ಸಚಿವನಾಗಿ ಪ್ರಮಾಣ ವಚನ ಸ್ವೀಕರಿಸಿದ ಬಳಿಕ ಹಾನಗಲ್ ಉಪಚುನಾವಣೆಯಲ್ಲಿ ಸ್ಪರ್ಧಿಸಲಿ-ದ್ದು, ಅಲ್ಲಿಗೆ ಟಿಕೆಟ್‌ಗಾಗಿ ಶಿಫಾರಸು ಮಾಡಬೇಕು ಎಂದೂ ಒತ್ತಾಯಿಸಿದ್ದರು’ ಎಂದೂ ಮೂಲಗಳು ಹೇಳಿವೆ.

ಈ ಮಧ್ಯೆ ಉಪಚುನಾವಣೆಯ ಉಸ್ತುವಾರಿಗಳ ಪಟ್ಟಿಯಲ್ಲಿ ವಿಜಯೇಂದ್ರ ಹೆಸರು ಇಲ್ಲದಿರುವ ಬಗ್ಗೆ ಅವರ ಅಭಿಮಾನಿಗಳು ಮತ್ತು ಬೆಂಬಲಿಗರು ಪಕ್ಷದ ನಾಯಕರನ್ನು ನಿಂದಿಸಿ ಸಾಮಾಜಿಕ ಜಾಲತಾಣದಲ್ಲಿ ಆಕ್ರೋಶ ವ್ಯಕ್ತಪಡಿಸಿದ್ದರು. ಅದರ ಬೆನ್ನಲ್ಲೇ, ಉಸ್ತುವಾರಿ ಪಟ್ಟಿಗೆ ವಿಜಯೇಂದ್ರ ಹೆಸರು ಸೇರಿಸಲಾಯಿತು. ಆದರೆ, ಹಾನಗಲ್ ಕ್ಷೇತ್ರಕ್ಕೆ ಅಭ್ಯರ್ಥಿಯ ಆಯ್ಕೆಯನ್ನು ವರಿಷ್ಠರು ತಮ್ಮ ವಿವೇಚನೆಗೆ ಅನುಗುಣವಾಗಿ ಮಾಡಿದ್ದಾರೆ. ಸಂಸದ ಶಿವಕುಮಾರ ಉದಾಸಿ ಪತ್ನಿ ರೇವತಿ ಅವರಿಗೆ ಟಿಕೆಟ್ ನೀಡಬೇಕು ಎಂಬ ರಾಜ್ಯದ ಶಿಫಾರಸ್ಸನ್ನು ವರಿಷ್ಠರು ತಳ್ಳಿ ಹಾಕಿದ್ದಾರೆ.

ಯಡಿಯೂರಪ್ಪ ಅವರ ಆಪ್ತ ವಲಯದ ವ್ಯಕ್ತಿಗಳ ಮೇಲೆ ನಡೆದಿರುವ ಐಟಿ ದಾಳಿ ಪಕ್ಷದಲ್ಲಿ ಹಲವರಿಗೆ ಆಘಾತ ಮೂಡಿಸಿದೆ. ಹೀಗಾಗಿ ಮುಂದೆ ಯಾವುದೇ ಹೆಜ್ಜೆ ಇಡಬೇಕಾದರೂ ಯೋಚಿಸಿಯೇ ಮುಂದಡಿ ಇಡಬೇಕು ಎಂಬ ಎಚ್ಚರಿಕೆಯ ಸಂದೇಶವೂ ರವಾನೆಯಾಗಿದೆ ಎಂದು ಬಿಜೆಪಿ ಮೂಲಗಳು ಹೇಳಿವೆ.

ದಾಳಿ ಹಿಂದೆ ಐಎಎಸ್ ಅಧಿಕಾರಿಗಳು?

ಉಮೇಶ್ ಮತ್ತು ಇತರರ ಮೇಲೆ ದಾಳಿಯ ಹಿಂದೆ ಕೆಲವು ಐಎಎಸ್ ಅಧಿಕಾರಿಗಳು ಇದ್ದಾರೆ ಎಂದು ಮೂಲಗಳು ಹೇಳಿವೆ.

ಯಡಿಯೂರಪ್ಪ ಮುಖ್ಯಮಂತ್ರಿ ಆಗಿದ್ದಾಗ ಉಮೇಶ್ ಮತ್ತು ಅವರ ಅನುಚರರು, ಹಿರಿಯ ಅಧಿಕಾರಿಗಳನ್ನೇ ಅತ್ಯಂತ ಹೀನಾಯವಾಗಿ ನಡೆಸಿಕೊಂ-ಡಿದ್ದರು. ಅವರು ಹೇಳಿದ ಜಾಗಗಳಿಗೇ ಕಡತಗಳನ್ನು ತಂದು ಕೈಕಟ್ಟಿ ನಿಲ್ಲುವಂತೆ ವರ್ತಿಸುವ ಜತೆಗೆ ಮತ್ತು ಏಕ ವಚನದಲ್ಲಿ ಮಾತನಾಡಿಸುತ್ತಿದ್ದರು. ನೀರಾವರಿ ಮತ್ತು ಲೋಕೋಪಯೋಗಿ ಇಲಾಖೆಗಳಿಗೆ ಸಂಬಂಧಿಸಿದ್ದ ವ್ಯವಹಾರಗಳನ್ನು ಖುದ್ದು ಉಮೇಶ್ ನೋಡಿಕೊಳ್ಳುತ್ತಿದ್ದರು. ಇವರ ವರ್ತನೆಯಿಂದ ರೋಸಿ ಹೋಗಿದ್ದ ಅಧಿಕಾರಿಗಳು ಪೂರಕ ದಾಖಲೆಗಳ ಸಮೇತ ಆದಾಯ ತೆರಿಗೆ ಇಲಾಖೆಗೆ ದೂರು ನೀಡಿದ್ದರು.

‘ಸುಮಾರು ಒಂದೂವರೆ ವರ್ಷದಿಂದ ಇವರಿಗೆ ಸಂಬಂಧಿಸಿದ ಸಂಪೂರ್ಣ ಮಾಹಿತಿಗಳನ್ನೂ ಅಧಿಕಾರಿಗಳು ಕಲೆ ಹಾಕಿದ್ದರು. ಯಡಿಯೂರಪ್ಪ ಅಧಿಕಾರದಿಂದ ಕೆಳಗಿಳಿಯುವುದನ್ನೇ ಕಾಯುತ್ತಿದ್ದರು’ ಎಂದು ಮೂಲಗಳು ಹೇಳಿವೆ.

ಉಪ್ಪಾರ್‌ಗೆ ‘ಕ್ಲೀನ್ ಚಿಟ್’ ಕೊಟ್ಟ ಸರ್ಕಾರ

ಒಂದನೇ ಪುಟದಿಂದ

ಸತ್ಯ ಶೋಧನಾ ತಂಡ ಸಲ್ಲಿಸಿರುವ 365 ಪುಟಗಳ ವರದಿ ‘ಪ್ರಜಾವಾಣಿ’ಗೆ ಲಭ್ಯವಾಗಿದೆ. ತೆರಿಗೆ ವಂಚನೆ, ಅಕ್ರಮ ಹಣದ ವಹಿವಾಟು ಆರೋಪದ ಮೇಲೆ ಗುತ್ತಿಗೆದಾರ ಡಿ.ವೈ. ಉಪ್ಪಾರ್ ಮನೆ, ಕಚೇರಿ ಮೇಲೆ ಐಟಿ ಅಧಿಕಾರಿಗಳು ದಾಳಿ ನಡೆಸಿದ ಬೆನ್ನಲ್ಲೆ, ಈ ಎಂಟು ಬೃಹತ್ ಯೋಜನೆಗಳು ಮತ್ತು ಅದಕ್ಕೆ ಸಂಬಂಧಿಸಿದಂತೆ ಸಲ್ಲಿಕೆಯಾದ ವರದಿ ಬಗ್ಗೆಯೂ ಜಲ ಸಂಪನ್ಮೂಲ ಇಲಾಖೆಯ ಅಧಿಕಾರಿಗಳ ವಲಯದಲ್ಲಿ ಚರ್ಚೆ ನಡೆದಿದೆ.

‘ಈ ಎಂಟೂ ಕಾಮಗಾರಿಗಳ ಅಂದಾಜು ಪಟ್ಟಿಗಳ ತಯಾರಿಕೆಯಲ್ಲಾ-ಗಲಿ ಅಥವಾ ಕಾಮಗಾರಿಗಳ ಅನುಷ್ಠಾ-ನದಲ್ಲಾಗಲಿ ಯಾವುದೇ ಅವ್ಯವಹಾರ ಸಾಬೀತಾಗಿಲ್ಲ. ಈ ಕಾರಣಗಳಿಂದ ಯಾವುದೇ ಅಧಿಕಾರಿಯನ್ನಾಗಲಿ, ಗುತ್ತಿಗೆದಾರನನ್ನಾಗಲಿ ಹೊಣೆಗಾರನಾಗಿ ಮಾಡಲು ಸಾಧ್ಯ ಇಲ್ಲ. ಹೀಗಾಗಿ, ಆಪಾ-ದನೆಗಳೆಲ್ಲ ಆಧಾರರಹಿತ’ ಎಂದು ವರದಿ ಹೇಳಿದೆ. ಅದನ್ನೇ ಉಲ್ಲೇಖಿಸಿ, ‘ಎಡಿಯು ಇನ್ಫ್ರಾ’ ಕಂಪನಿ ಮೇಲಿನ ಆರೋಪಗಳನ್ನು ಸರ್ಕಾರ ಕೈಬಿಟ್ಟಿದೆ. ಆದರೆ, ಸತ್ಯ ಶೋಧನಾ ತಂಡ ಕಾಮಗಾರಿಗಳ ನಡೆದ ಸ್ಥಳ ವೀಕ್ಷಣೆ ಮಾಡದೆ, ಅಧಿಕಾರಿಗಳು ನೀಡಿದ ದಾಖಲೆಗಳನ್ನಷ್ಟೆ ಪರಿಶೀಲಿಸಿ ವರದಿ ನೋಡಿದೆ ಎಂದು ಹೆಸರು ಬಹಿರಂಗಪ-ಡಿಸಲು ಇಚ್ಛಿಸದ ಅಧಿಕಾರಿ ತಿಳಿಸಿದರು.

‘ಎಡಿಯು ಇನ್ಫ್ರಾ’ ನಿರ್ವಹಿಸಿದ ಕಾಮಗಾರಿಗಳ ಟೆಂಡರ್‌ಗಳಲ್ಲಿ ನೈಜ ದರಕ್ಕಿಂತ ಹೆಚ್ಚಿನ ಮೊತ್ತ ದಾಖಲಿಸಿ ಆಡಳಿತಾತ್ಮಕ ಅನುಮೋದನೆ ಪಡೆದ ಬಳಿಕ, ಸಮರ್ಥನೆ ಇಲ್ಲದೆ ಟೆಂಡರ್ ಮೊತ್ತ ಹೆಚ್ಚಿಸಲಾಗಿದೆ. ಕಾಮಗಾರಿಗ-ಳಲ್ಲಿ ಭಾರಿ ಭ್ರಷ್ಟಾಚಾರ ನಡೆದಿರುವ ಅನುಮಾನವಿದ್ದು,ಈ ಬಗ್ಗೆ ಸಮಗ್ರ ತನಿಖೆ ನಡೆಸಬೇಕು’ ಎಂದು ಆಗ್ರಹಿಸಿ ಕತ್ರಿಗುಪ್ಪೆಯ ಚಂದ್ರಶೇಖರ್ ಎಂಬುವರು ಹಿಂದಿನ ಮುಖ್ಯ ಕಾರ್ಯದರ್ಶಿ ಟಿ.ಎಂ. ವಿಜಯಭಾಸ್ಕರ್ ಅವರಿಗೆ ದಾಖಲೆಗಳ ಸಹಿತ 2020ರ ಆಗಸ್ಟ್ 12ರಂದು ದೂರು ನೀಡಿದ್ದರು.

ಕಳೆದ ಸೆಪ್ಟೆಂಬರ್‌ನಲ್ಲಿ ನಡೆದ ಅಧಿವೇಶನದಲ್ಲಿ ವಿಧಾನ ಪರಿಷತ್ ಸದಸ್ಯ ಬಸವರಾಜ ಪಾಟೀಲ ಇಟಗಿ ಮತ್ತು ಇತರ ಕೆಲವು ಸದಸ್ಯರು, ನಾರಾಯಣಪುರ ಬಲದಂಡೆ ಮುಖ್ಯ ಕಾಲುವೆ 0 ಕಿ.ಮೀನಿಂದ 95 ಕಿ.ಮೀವರೆಗೆ ಆಧುನೀಕರಣ ಕಾಮಗಾರಿಯ ಅಂದಾಜು ಮೊತ್ತವನ್ನು ಅನಾವಶ್ಯಕವಾಗಿ ಹೆಚ್ಚಿಸಿ, ಟೆಂಡರ್ ಮಾಡಿ ಕಳಪೆ ಕಾಮಗಾರಿ ನಿರ್ವಹಿಸಿದ ‘ಎಡಿಯು ಇನ್ಫ್ರಾ’ ವಿರುದ್ಧ ಹಾಗೂ ಸಹಕರಿಸಿದ ಅಧಿಕಾರಿಗಳ ವಿರುದ್ಧ ಕ್ರಮ ಜರುಗಿಸುವಂತೆ ಒತ್ತಾಯಿಸಿದ್ದ-ರು. ಈ ಬಗ್ಗೆ ಸತ್ಯಶೋಧನಾ ತಂಡ ರಚಿಸಲಾಗಿತ್ತು.

‘ಎಡಿಯು ಇನ್ಫ್ರಾ’ ಎಂಬ ಗುತ್ತಿಗೆ ದಾರರು ನಡೆಸುತ್ತಿರುವ ಕಾಮಗಾರಿ-ಗಳಲ್ಲಿ ಅವ್ಯವಹಾರ ನಡೆದಿಲ್ಲ ಎಂದು ಸರ್ಕಾರ ಅಂತಿಮ ಷರಾ ಬರೆದಿದೆ!

ಸತ್ಯ ಶೋಧನಾ ತಂಡ ವಿಚಾರಣೆ ನಡೆಸಿದ ಕಾಮಗಾರಿಗಳು

ಕಾಮಗಾರಿ	ನಿಗಮ	ಮೊತ್ತ (ಕೋಟಿ ₹ ಗಳಲ್ಲಿ)
ಹೇಮಾವತಿ ಎಡದಂಡೆ ನಾಲೆ ಸರಪಳಿ 0–72.26 ಕಿ.ಮೀವರೆಗಿನ ಆಧುನೀಕರಣ	ಸಿಎನ್‌ಎನ್‌ಎಲ್	562.30
ಹೇಮಾವತಿ ಎಡದಂಡೆ ನಾಲೆ ಸರಪಳಿ 72.26–214.30 ಕಿ.ಮೀ ವರೆಗಿನ ನಾಲೆಯ ಆಧುನೀಕರಣ	ಸಿಎನ್‌ಎನ್‌ಎಲ್	809.58
ಘಟಪ್ರಭಾ ಎಡದಂಡೆ ಕಾಲುವೆಯಡಿ ಬರುವ ಆಧುನೀಕರಣ	ಕೆಎನ್‌ಎನ್‌ಎಲ್	573.28
ಹೇಮಾವತಿ ನದಿಯಿಂದ ನೀರು ಎತ್ತಿ ಹಾಸನ ತಾಲ್ಲೂಕಿನ ದುದ್ದ, ಶಾಂತಿಗ್ರಾಮ ಹೋಬಳಿಗಳ 160 ಕೆರೆಗಳು, 10 ಕಟ್ಟೆಗಳಿಗೆ ನೀರು ಹರಿಸುವುದು	ಸಿಎನ್‌ಎನ್‌ಎಲ್	333
ಒಟ್ಟು ₹ 750 ಕೋಟಿ ಮೊತ್ತದ ಯುಕೆಪಿ–2 ರ ನಾರಾಯಣಪುರ ಬಲದಂಡೆ ಕಾಲುವೆ 0–95 ಕಿ.ಮೀವರೆಗಿನ ಕಾಲುವೆ ಆಧುನೀಕರಣದ ಮೊದಲ ಹಂತ	ಕೆಬಿಜೆಎನ್‌ಎಲ್	375
ಎತ್ತಿನಹೊಳೆ ಯೋಜನೆಯಡಿ ಎತ್ತಿನಹೊಳೆ ವಿಭಾಗ ನಂ–4, ಮಧುಗಿರಿ ವಿಭಾಗದ ಕಾಮಗಾರಿ (ಗೌರಿಬಿದನೂರು ಗ್ರಾವಿಟಿ ಫೀಡರ್ ಕೆನಾಲ್–81)	ಕೆಎನ್‌ಎನ್‌ಎಲ್ (ಈಗ ವಿಜೆಎನ್‌ಎಲ್)	12,912.36
ಮಲಪ್ರಭಾ ಮುಖ್ಯ ಕಾಲುವೆ, ಅಂಚು, ಉಪ ಅಂಚು ಕಾಲುವೆ, ಲ್ಯಾಟರಲ್ಸ್‌ಗಳ ಎರಡನೇ ಹಂತದ ಆಧುನೀಕರಣದ ಮೊದಲ ಹಂತ	ಕೆಎನ್‌ಎನ್‌ಎಲ್	1,000
ಮಲಪ್ರಭಾ ಯೋಜನೆಯಡಿಯ ಮಲಪ್ರಭಾ ಮುಖ್ಯ ಕಾಲುವೆ ಹಾಗೂ ವಿತರಣಾ ಕಾಲುವೆ ಆಧುನೀಕರಣ	ಕೆಎನ್‌ಎನ್‌ಎಲ್	1,120

ಲಖಿಂಪುರ–ಖೇರಿ ರೈತರ ಹತ್ಯೆ ಪ್ರಕರಣ • ಆರೋಪಿಗೆ ಪೊಲೀಸರಿಂದ ಮತ್ತೊಂದು ನೋಟಿಸ್

ವಿಚಾರಣೆಗೆ ಹಾಜರಾಗದ ಆಶಿಶ್ ಮಿಶ್ರಾ

ಪ್ರಜಾವಾಣಿ ವಾರ್ತೆ

ಲಖನೌ: ಲಖಿಂಪುರ-ಖೇರಿ ರೈತರ ಹತ್ಯೆ ಪ್ರಕರಣದಲ್ಲಿ ಪ್ರಮುಖ ಆರೋಪಿಯಾಗಿರುವ, ಕೇಂದ್ರ ಸಚಿವ ಅಜಯ್ ಮಿಶ್ರಾ ಅವರ ಪುತ್ರ ಆಶಿಶ್ ಮಿಶ್ರಾ ಶುಕ್ರವಾರ ವಿಚಾರಣೆಗೆ ಹಾಜರಾಗದೆ ತಪ್ಪಿಸಿಕೊಂಡಿದ್ದಾರೆ.

ಶಾಂತಿಯುತವಾಗಿ ಪ್ರತಿಭಟನೆ ನಡೆಸುತ್ತಿದ್ದ ರೈತರ ಮೇಲೆ ಜೀಪು ಹರಿಸಿ, ರೈತರ ಹತ್ಯೆ ಮಾಡಿದ್ದಾರೆ ಎಂದು ಮೃತ ರೈತರ ಮನೆಯವರು ಎಫ್‌ಐಆರ್ ದಾಖಲಿಸಿದ್ದಾರೆ. ಆ ಎಫ್‌ಐಆರ್ ಅನ್ವಯ ಗುರುವಾರವೇ ಆಶಿಶ್ ಮಿಶ್ರಾ ಅವರಿಗೆ ನೋಟಿಸ್ ನೀಡಲಾಗಿತ್ತು. ಶುಕ್ರವಾರ ಬೆಳಿಗ್ಗೆ ವಿಚಾರಣೆಗೆ ಹಾಜರಾಗುವಂತೆ ಸೂಚಿಸಲಾಗಿತ್ತು. ಆದರೆ ಅವರು ವಿಚಾರಣೆಗೆ ಹಾಜರಾಗದೆ ತಪ್ಪಿಸಿಕೊಂಡಿದ್ದಾರೆ.

ಆಶಿಶ್ ಮಿಶ್ರಾ ಅವರ ತಂದೆ ಮತ್ತು ಕೇಂದ್ರ ಸಚಿವ ಅಜಯ್ ಮಿಶ್ರಾ ಅವರು ಈ ಬಗ್ಗೆ ಮಾಹಿತಿ ನೀಡಿದ್ದಾರೆ. 'ಗುರುವಾರವಷ್ಟೇ ನನ್ನ ಮಗನಿಗೆ ನೋಟಿಸ್ ನೀಡಿದ್ದಾರೆ. ಅವನಿಗೆ ಆರೋಗ್ಯ ಸರಿ ಇರಲಿಲ್ಲ. ಹೀಗಾಗಿ ಅವನು ವಿಚಾರಣೆಗೆ ಹಾಜರಾಗಿಲ್ಲ. ಆಶಿಶ್ ಶನಿವಾರ ವಿಚಾರಣಾಧಿಕಾ-ರಿಗಳ ಎದುರು ಹಾಜರಾಗಲಿದ್ದಾನೆ. ಅವನು ತಾನು ನಿರಪರಾಧಿ ಎಂಬುದನ್ನು ಸಾಬೀತುಪಡಿಸಲು ಅಗತ್ಯವಿರುವ ಸಾಕ್ಷ್ಯಗಳನ್ನು ನೀಡಲಿದ್ದಾನೆ’ ಎಂದು ಹೇಳಿದ್ದಾರೆ.

ಆಶಿಶ್ ವಿಚಾರಣೆಗೆ ಹಾಜರಾಗದೇ ಇದ್ದ ಬೆನ್ನಲ್ಲೇ, ಪೊಲೀಸರು ಶುಕ್ರವಾರ ಮತ್ತೊಂದು ಸಮನ್ಸ್ ಜಾರಿ ಮಾಡಿದ್ದಾರೆ. ಆಶಿಶ್ ಮಿಶ್ರಾ ಅವರ ಮನೆಯ ಗೇಟಿನ ಮುಂಭಾಗ ಸಮನ್ಸ್ ಅಂಟಿಸಿದ್ದಾರೆ. ‘ಶೀಘ್ರವೇ ವಿಚಾರಣೆಗೆ ಹಾಜರಾಗಿ. ಇಲ್ಲದಿದ್ದಲ್ಲಿ ಮುಂದಿನ ಕ್ರಮಗಳನ್ನು ಎದುರಿಸ-ಬೇಕಾಗುತ್ತದೆ’ ಎಂದು ಸಮನ್ಸ್‌ನಲ್ಲಿ ಸೂಚಿಸಲಾಗಿದೆ.

ರೈತರ ಮೇಲೆ ಜೀಪು ನುಗ್ಗಿಸಿದಾಗ ಆಶಿಶ್ ಮಿಶ್ರಾ ಆ ಜೀಪಿನಲ್ಲಿಯೇ ಇದ್ದರು. ನಂತರ ರೈತನೊಬ್ಬನ ಮೇಲೆ ಗುಂಡು ಹಾರಿಸಿದರು ಎಂಬುದು ಪತ್ತೆಯಾಗಿದೆ ಎಂದು ಪೊಲೀಸ್ ಮೂಲಗಳು ಹೇಳಿವೆ.

ಲಖಿಂಪುರಖೇರಿ ರೈತರ ಹತ್ಯೆಯನ್ನು ಖಂಡಿಸಿ ಅಮೃತಸರದಲ್ಲಿ ರೈತರು ಮತ್ತು ವಿದ್ಯಾರ್ಥಿಗಳು ಶುಕ್ರವಾರ ಸಂಜೆ ಮೊಂಬತ್ತಿ ಮೆರವಣಿಗೆ ನಡೆಸಿದರು ಪಿಟಿಐ ಚಿತ್ರ

ಸಿಜೆಐ ಕುರಿತು ತಪ್ಪು ಮಾಹಿತಿ: ಸುಪ್ರೀಂ ಕೋರ್ಟ್ ಅಸಮಾಧಾನ

ನವದೆಹಲಿ (ಪಿಟಿಐ): ಲಖಿಂಪುರ–ಖೇರಿ ಹಿಂಸಾಚಾರದ ಸಂತ್ರಸ್ತರ ಕುಟುಂಬಗಳನ್ನು ಸುಪ್ರೀಂ ಕೋರ್ಟ್ ಮುಖ್ಯ ನ್ಯಾಯಮೂರ್ತಿ (ಸಿಜೆಐ) ಎನ್. ವಿ. ರಮಣ ಅವರು ಭೇಟಿಯಾಗಿದ್ದಾರೆ ಎಂದು ಸುದ್ದಿ ಸಂಸ್ಥೆಯೊಂದು ಮಾಡಿದ್ದ ಟ್ವೀಟ್ ಕುರಿತು ಸುಪ್ರೀಂ ಕೋರ್ಟ್ ಅಸಮಾಧಾನ ವ್ಯಕ್ತಪಡಿಸಿದೆ.

ಮಾಧ್ಯಮ ಮತ್ತು ಅದರ ಸ್ವಾತಂತ್ರ್ಯವನ್ನು ಸುಪ್ರೀಂ ಕೋರ್ಟ್ ಗೌರವಿಸುತ್ತದೆ ಆದರೆ ‘ಈ ಕೃತ್ಯ ಸರಿಯಲ್ಲ’ ಎಂದು ಕೋರ್ಟ್ ಶುಕ್ರವಾರ ಹೇಳಿದೆ.

ಲಖಿಂಪುರ ಖೇರಿ ಹಿಂಸಾಚಾರ ಮೊಕದ್ದಮೆ ಕುರಿತು ವಿಚಾರಣೆ ನಡೆಸುವ ವೇಳೆ ಕೋರ್ಟ್ ಈ ಪ್ರಕರಣ ಕುರಿತು ವಿಶೇಷ ಉಲ್ಲೇಖ ಮಾಡಿದೆ. ‘ಯಾರೊ ಒಬ್ಬರು ವಾಕ್ ಸ್ವಾತಂತ್ರ್ಯದ ಮೇರೆಯನ್ನು ಮೀರಿರುವುದು ನಮ್ಮ ಗಮನಕ್ಕೆ ಬಂದಿದೆ. ಅದಕ್ಕೆ ನಾವು ವಿಷಾದಿಸುತ್ತೇವೆ. ತಪ್ಪು ಚಿತ್ರಣವನ್ನು ನೀಡಲಾಗಿದೆ. ಅವರು ನಿಜಾಂಶವನ್ನು ಪರಿಶೀಲಿಸಬೇಕು’ ಎಂದು ಎನ್. ವಿ. ರಮಣ ಮತ್ತು ನ್ಯಾಯಮೂರ್ತಿಗಳಾದ ಸೂರ್ಯಕಾಂತ್ ಮತ್ತು ಹಿಮಾ ಕೊಹ್ಲಿ ಅವರಿದ್ದ ಪೀಠ ಹೇಳಿದೆ.

ಸಂತ್ರಸ್ತರ ಕುಟುಂಬಗಳನ್ನು ಸಿಜೆಐ ಅವರು ಭೇಟಿಯಾಗಿದ್ದಾರೆ ಎಂದು ಮಾಧ್ಯಮ ಸಂಸ್ಥೆಯೊಂದು ಟ್ವೀಟ್ ಮಾಡಿದೆ ಎಂದು ವಕೀಲರೊಬ್ಬರು ಗುರುವಾರ ಪೀಠಕ್ಕೆ ತಿಳಿಸಿದ್ದರು.

ನಾನಾಗಲಿ, ನನ್ನ ಮಗನಾಗಲೀ ಯಾವುದೇ ತಪ್ಪು ಮಾಡಿಲ್ಲ ಎಂದು ಮೊದಲ ದಿನದಿಂದಲೂ ಹೇಳುತ್ತಿದ್ದೇನೆ. ಮಾಡದ ತಪ್ಪಿಗಾಗಿ ಸಚಿವ ಸ್ಥಾನಕ್ಕೆ ರಾಜೀನಾಮೆ ನೀಡುವುದಿಲ್ಲ

ಅಜಯ್ ಮಿಶ್ರಾ, ಕೇಂದ್ರ ಸಚಿವ

ಆಶಿಶ್ ನಾಪತ್ತೆ

ರೈತರ ಹತ್ಯೆ ಪ್ರಕರಣದಲ್ಲಿ ಪ್ರಮುಖ ಆರೋಪಿಯಾಗಿರುವ ಆಶಿಶ್ ಮಿಶ್ರಾ ಈಗ ಎಲ್ಲಿದ್ದಾರೆ ಎಂಬುದರ ಮಾಹಿತಿ ಇಲ್ಲ. ಅವರು ನಾಪತ್ತೆಯಾಗಿದ್ದಾರೆ.

ಉತ್ತರ ಪ್ರದೇಶದ ಲಖಿಂಪುರ-ಖೇರಿ ಜಿಲ್ಲೆಯು ನೇಪಾಳದೊಂದಿಗೆ ಗಡಿ ಹಂಚಿಕೊಂಡಿದೆ. ಆಶಿಶ್ ನೇಪಾಳಕ್ಕೆ ನುಸುಳಿ ಹೋಗಿದ್ದಾರೆ. ಈ ಮೂಲಕ ತಲೆಮರೆಸಿಕೊಂ-ಡಿದ್ದಾರೆ ಎಂದು ಪೊಲೀಸ್ ಇಲಾಖೆಯ ಮೂಲಗಳು ಹೇಳಿವೆ.

ಆಶಿಶ್ ಅವರು ಪಕ್ಕದ ರಾಜ್ಯ ಉತ್ತರಾಖಂಡದಲ್ಲಿ ತಲೆಮರೆಸಿಕೊಂಡಿದ್ದಾರೆ ಎಂದು ಬೇರೆ ಮೂಲಗಳು ಹೇಳಿವೆ. ಆದರೆ ಅವರು ಎಲ್ಲಿ ಇದ್ದಾರೆ ಎಂಬುದು ಪತ್ತೆಯಾಗಿಲ್ಲ. ಅವರ ತಂದೆ ಕೇಂದ್ರ ಸಚಿವ ಅಜಯ್ ಮಿಶ್ರಾ ಸಹ ಆಶಿಶ್ ಎಲ್ಲಿದ್ದಾನೆ ಎಂಬುದರ ಮಾಹಿತಿ ಇಲ್ಲ ಎಂದಿದ್ದಾರೆ.

ವಾಯವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ ಧಾರವಾಡ ವಿಭಾಗ, ಧಾರವಾಡ : ವಾಣಿಜ್ಯ ಶಾಖೆ

ಸಂ.ವಾಕರಸಾ/ಧಾವಿ/ಸಂ/ವಾಣಿಜ್ಯ/:21 ದಿನಾಂಕ:07/10/2021

ಇ-ಟೆಂಡರ್ ಪ್ರಕಟಣೆ ಸಂಖ್ಯೆ : 04/2021

(ಇ-ಪ್ರೊಕ್ಯೂರ್‌ಮೆಂಟ್ ಮೂಲಕ)

ವಾಯವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ, ಧಾರವಾಡ ವಿಭಾಗ ವ್ಯಾಪ್ತಿಯ ವಿವಿಧ ಬಸ್ ನಿಲ್ದಾಣಗಳಾದ ಧಾರವಾಡ ಹೊಸ ಬಸ್ ನಿಲ್ದಾಣ, ಹಳೇ ಬಸ್ ನಿಲ್ದಾಣ, ಸಿ.ಬಿ.ಟಿ, ಗರಗ, ಮುನವಳ್ಳಿ, ಯರಗಟ್ಟಿ, ಉಗರಗೋಳ, ಹಿರೇಕುಂಬಿ, ದಾಂಡೇಲಿ, ಅಳ್ನಾವರ ಬಸ್ ನಿಲ್ದಾಣಗಳಲ್ಲಿ ಖಾಲಿ ಇರುವ/ಆಗಲಿರುವ ವಾಣಿಜ್ಯ ಮಳಿಗೆಗಳ, ಪಾರ್ಕಿಂಗ್, ಜಾಹೀರಾತು ಮತ್ತು ಸ್ವಚ್ಛತಾ ಗುತ್ತಿಗೆಗಳ ಪರವಾನಿಗೆದಾರರನ್ನು ಆಯ್ಕೆ ಮಾಡಲು ದಿನಾಂಕ : **09/10/2021** ರಿಂದ ಇ-ಪ್ರೊಕ್ಯೂರ್‌ಮೆಂಟ್ ಮೂಲಕ ಟೆಂಡರ್-ಕಂ-ಹರಾಜು ಆಹ್ವಾನಿಸಲಾಗಿದೆ. ಟೆಂಡರ್-ಕಂ-ಹರಾಜು ದಸ್ತಾವೇಜುಗಳನ್ನು ದಿನಾಂಕ : **28.10.2021** ರಂದು ವೇಳೆ 17:00 ವರೆಗೆ ಇ-ಪ್ರೊಕ್ಯೂರ್‌ಮೆಂಟ್ ವೆಬ್ ಸೈಟ್ ವಿಳಾಸ **"http//www.eproc.karnataka.in"** ಮೂಲಕ ಡೌನ್‌ಲೋಡ್ ಮಾಡಿಕೊಳ್ಳಬಹುದು. ದಿನಾಂಕ : **29.10.2021** ರಂದು ವೇಳೆ 17:00 ಘಂಟೆಯವರೆಗೆ ಆನ್ ಲೈನ್ ಅರ್ಜಿ ಸಲ್ಲಿಕೆಗೆ ಕೊನೆಯ ದಿನಾಂಕವಾಗಿರುತ್ತದೆ. ದಿನಾಂಕ : **02/11/2021** ರಂದು 11:00 ಗಂಟೆಗೆ ಇ-ಟೆಂಡರ್ ತೆರೆಯಲಾಗುವುದು. ಇ-ಪ್ರೊಕ್ಯೂರ್‌ಮೆಂಟ್ ನೆಟ್‌ನಿಂದ DSC (Digital Signature Certificate) ಪಡೆದಿರುವ ಅಧಿಕೃತ ಅಭ್ಯರ್ಥಿಗಳು ಮಾತ್ರ ಅರ್ಜಿಗಳನ್ನು ಸಲ್ಲಿಸಬಹುದಾಗಿರುತ್ತದೆ. ಹೆಚ್ಚಿನ ವಿವರಗಳಿಗಾಗಿ ವಿಭಾಗೀಯ ಕಚೇರಿ, ವಾಕರಸಾ ಸಂಸ್ಥೆ, ಧಾರವಾಡ ವಿಭಾಗ ಧಾರವಾಡಕ್ಕೆ ಸಂಪರ್ಕಿಸಲು ಕೋರಲಾಗಿದೆ. ಸಂಪರ್ಕಿಸಬೇಕಾದ ದೂರವಾಣಿ ಸಂಖ್ಯೆ:7760996271/7760982552/8073344916./7760129545.

ಸಹಿ/- ವಿಭಾಗೀಯ ನಿಯಂತ್ರಣಾಧಿಕಾರಿ,
ವಾ.ಕ.ರ.ಸಾ.ಸಂಸ್ಥೆ, ಧಾರವಾಡ

ವಾಸಾಸಂಇ/ಧಾ/ಎಂಸಿಎ/592/2021-22

ಕರ್ನಾಟಕ ಸರ್ಕಾರ
ಜಿಲ್ಲಾಧಿಕಾರಿಯವರ ಕಾರ್ಯಾಲಯ, ಹಾಸನ ಜಿಲ್ಲೆ, ಹಾಸನ
ದೂರವಾಣಿ ಸಂಖ್ಯೆ: 08172-267345, 265028, 253345
ಫ್ಯಾಕ್ಸ್ ಸಂಖ್ಯೆ: 08172-265418 Website:www.hassan-nic.in
E-mail:dcoffice.hassan@gmail.com

ಸಂ:ವಿ.ಜಿ.ಎ.ಶಾ.162/2020-21 ದಿನಾಂಕ:07.10.2021

ಅಲ್ಪಾವಧಿ ಟೆಂಡರ್ ಪ್ರಕಟಣೆ

ಹಾಸನ ಜಿಲ್ಲೆಯ ಹಾಸನ ತಾಲ್ಲೂಕು ಭೂಮಿ ಕೋಶಕ್ಕೆ 200-AH ಸಾಮರ್ಥ್ಯದ 8-ಬ್ಯಾಟರಿಗಳನ್ನು ಖರೀದಿ ಮಾಡಬೇಕಾಗಿರುವುದರಿಂದ ಸರಬರಾಜುದಾರರಿಂದ ಅಲ್ಪಾವಧಿ ಟೆಂಡರ್ ಅನ್ನು ಕರೆದಿದ್ದು ಆಸಕ್ತ ಅಧಿಕೃತ ಸಂಸ್ಥೆಯವರು ತಮ್ಮ ದರಪಟ್ಟಿಯನ್ನು ಜಿಲ್ಲಾಧಿಕಾರಿಗಳ ಕಾರ್ಯಾಲಯದ ಕೊಠಡಿ ಸಂ:6 ಕ್ಕೆ ದಿ:12/10/2021 ರೊಳಗೆ ಹಾಜರುಪಡಿಸಲು ತಿಳಿಸಿದೆ. ಕ್ರ.ಸಂ.1)ವಿವರಣೆ: 200 AH Battery ಪ್ರಮಾಣ: 8. ಹೆಚ್ಚಿನ ವಿವರಗಳಿಗೆ ಜಿಲ್ಲಾಧಿಕಾರಿಗಳ ಕಾರ್ಯಾಲಯ ಹಾಸನ ರವರ ಕೊಠಡಿ ಸಂಖ್ಯೆ6 ಅಥವಾ ದೂರವಾಣಿ ಸಂ.08172-250726 ರಿಂದ ಪಡೆಯಲು ತಿಳಿಸಿದೆ. (ಕ.ಟಿ.ಆಕ್ಟ್)

ಸಹಿ/- ಜಿಲ್ಲಾಧಿಕಾರಿಗಳ ಪರವಾಗಿ,
ಹಾಸನ ಜಿಲ್ಲೆ, ಹಾಸನ.

ವಾಸಾಸಂಇ/ಹಾಸನ/ಎಂಸಿಎ/445/2021-22

89ನೇ ಸಂಸ್ಥಾಪನಾ ದಿನಾಚರಣೆ ಕಾರ್ಯಕ್ರಮ

ವಾಯುಪಡೆ: 3 ತುಕಡಿಗಳಿಗೆ ಪ್ರಶಂಸಾ ಪತ್ರ

ಹಿಂಡನ್, ಉತ್ತರಪ್ರದೇಶ (ಪಿಟಿಐ): ಚೀನಾದೊಂದಿಗಿನ ಸೇನಾ ಸಂಘರ್ಷದ ನಂತರ ಪೂರ್ವ ಲಡಾಖ್‌ನಲ್ಲಿ ಭಾರತದ ಮಿಲಿಟರಿ ಉಪಸ್ಥಿತಿಯನ್ನು ಹೆಚ್ಚಿಸುವಲ್ಲಿ ಪ್ರಧಾನ ಪಾತ್ರ ವಹಿಸಿದ ಭಾರತೀಯ ವಾಯುಪಡೆಯ ಮೂರು ತುಕಡಿಗಳಿಗೆ ಏರ್ ಚೀಫ್ ಮಾರ್ಷಲ್ ವಿ.ಆರ್. ಚೌಧರಿ ಅವರು ಶುಕ್ರವಾರ ಪ್ರಶಂಸಾ ಪತ್ರ (ಯುನಿಟ್ ಸೈಟೇಷನ್) ಪ್ರದಾನ ಮಾಡಿದರು.

ಇಲ್ಲಿನ ಹಿಂಡನ್ ವಾಯುನೆಲೆಯಲ್ಲಿ ನಡೆದ ಭಾರತೀಯ ವಾಯುಪಡೆಯ 89ನೇ ಸಂಸ್ಥಾಪನಾ ದಿನಾಚರಣೆ ಕಾರ್ಯಕ್ರಮದಲ್ಲಿ ತುಕಡಿಗಳಾದ ನಂ. 47 ಸ್ಕ್ವಾಡ್ರನ್ ಮಿಗ್- 29 ಫೈಟರ್ ಏರ್‌ಕ್ರಾಫ್ಟ್, 116 ಹೆಲಿಕಾಪ್ಟರ್ ಯೂನಿಟ್ ಮತ್ತು 2255 ಸ್ಕ್ವಾಡ್ರನ್‌ಗೆ ಪ್ರಶಂಸಾ ಪತ್ರ ನೀಡಿ ಗೌರವಿಸಲಾಯಿತು ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಹಿಂಡನ್‌ನಲ್ಲಿರುವ ವಾಯುನೆಲೆಯಲ್ಲಿ ಶುಕ್ರವಾರ ನಡೆದ ಭಾರತೀಯ ವಾಯುಪಡೆಯ 89ನೇ ಸಂಸ್ಥಾಪನಾ ದಿನಾಚರಣೆಯ ಕಾರ್ಯಕ್ರಮದಲ್ಲಿ ಏರ್ ಚೀಫ್ ಮಾರ್ಷಲ್ ವಿವೇಕ್ ರಾಮ್ ಚೌಧರಿ ಅವರು ಅಧಿಕಾರಿಗಳಿಗೆ ಶೌರ್ಯಪದಕ ಪ್ರದಾನ ಮಾಡಿದರು –ಪಿಟಿಐ ಚಿತ್ರ

ಗಡಿ ಬಿಕ್ಕಟ್ಟಿನ ಸಂದರ್ಭದಲ್ಲಿ ಭಾರತ ಮತ್ತು ಚೀನಾದ ಸೈನ್ಯಗಳು ಪೂರ್ವ ಲಡಾಕ್‌ನ ಹಲವು ಭಾಗಗಳಲ್ಲಿ ಒಟ್ಟು 17 ತಿಂಗಳುಗಳ ಕಾಲ ಬೀಡುಬಿಟ್ಟಿದ್ದವು.

ವೈಮಾನಿಕ ಪ್ರದರ್ಶನ: ಭಾರತೀಯ ವಾಯುಪಡೆಯ 89ನೇ ಸಂಸ್ಥಾಪನಾ ದಿನಾಚರಣೆಯಲ್ಲಿ ಸ್ವಾತಂತ್ರ್ಯದ ಅಮೃತ ಮಹೋತ್ಸವದ ನಿಮಿತ್ತ 75 ವಿಮಾನಗಳು ನೀಡಿದ ವೈಮಾನಿಕ ಪ್ರದರ್ಶನವು ನೋಡುಗರನ್ನು ಬೆರಗುಗೊಳಿಸಿತು.

ಇದೇ ಸಂದರ್ಭದಲ್ಲಿ ಬೃಹತ್ ತ್ರಿವರ್ಣ ಧ್ವಜವನ್ನು ಪ್ರದರ್ಶಿಸಲಾಯಿತು. ಸಿ -17 ಗ್ಲೋಬ್‌ಮಾಸ್ಟರ್, ಜಾಗ್ವಾರ್, ಮಿಗ್- 29 ಜೆಟ್ ಫೈಟರ್ ಹಾಗೂ 'ಆಕಾಶ ಗಂಗಾ' ತಂಡದ ಸ್ಕೈಡೈವರ್‌ಗಳ ಆಕರ್ಷಕ ವೈಮಾನಿಕ ಪ್ರದರ್ಶನವು ಪ್ರೇಕ್ಷಕರನ್ನು ಮೋಡಿ ಮಾಡಿತು.

'ವೈಮಾನಿಕ ಪ್ರದರ್ಶನ ಕುರಿತು ನಾವು ಮೊದಲೇ ಘೋಷಿಸಿರಲಿಲ್ಲ. ಇದನ್ನು ಅಚ್ಚರಿಯ ಪ್ಯಾಕೇಜ್ ಆಗಿ ಇರಿಸಿದ್ದೆವು' ಎಂದು ಹಿರಿಯ ಐಎಎಫ್ ಅಧಿಕಾರಿಯೊಬ್ಬರು ತಿಳಿಸಿದರು.

ಕರ್ನಾಟಕ ಸರ್ಕಾರ
ಕಾರ್ಯನಿರ್ವಾಹಕ ಇಂಜಿನಿಯರ್‌ರವರ ಕಛೇರಿ,
ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ, ಮಂಗಳೂರು

ಅಲ್ಪಾವಧಿ ಟೆಂಡರ್ ಪ್ರಕಟಣೆ ಇ-ಪ್ರೊಕ್ಯೂರ್‌ಮೆಂಟ್ ಮುಖಾಂತರ

ಉಲ್ಲೇಖ: 1) ಈ ಕಛೇರಿ ಟೆಂಡರ್ ಪ್ರಕಟಣೆ ನಂ: ಕಾಸಮಂ/ಸಾ.ಶಾ./ಸ.ಇ/ಟೆಂಡರ್-24/2021/2662, ಟೆಂಡರ್-25/2021/2663 ಮತ್ತು ಟೆಂಡರ್-26/2021/2666, ದಿ: 07.10.2021.

ಉಲ್ಲೇಖಿತ ಪತ್ರಗಳನ್ವಯ ಆಹ್ವಾನಿಸಲಾದಂತೆ ದಕ್ಷಿಣ ಕನ್ನಡ ಹಾಗೂ ಉಡುಪಿ ಜಿಲ್ಲೆಗಳಿಗೆ ಸಂಬಂಧಿಸಿದ ಕಾಮಗಾರಿಗಳಿಗೆ ಕರ್ನಾಟಕ ರಾಜ್ಯಪಾಲರ ಪರವಾಗಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪಾರದರ್ಶಕತೆ ಅಧಿನಿಯಮದನ್ವಯ ಸ್ಟಾಂಡರ್ಡ್ ಟೆಂಡರ್ ಡಾಕ್ಯುಮೆಂಟ್/ಸ್ಟಾಂಡರ್ಡ್ ಕನ್ಸಲ್ಟೆನ್ಸಿ ಡಾಕ್ಯುಮೆಂಟ್ [illegible] ಟೆಂಡರುಗಳನ್ನು ಕರ್ನಾಟಕ ಸರ್ಕಾರದ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಅಂತರ್ಜಾಲದ ವೆಬ್‌ಸೈಟ್ https://eproc.karnataka.gov.in ನಲ್ಲಿ ಅರ್ಹ ಗುತ್ತಿಗೆದಾರರಿಂದ ಟೆಂಡರ್ ಪ್ರಕಟಣೆ ಸಂಖ್ಯೆ 24 ಹಾಗೂ 25ರ ಕಾಮಗಾರಿಯ ಟೆಂಡರ್‌ನ್ನು ದಿ:22.10.2021ರ ಸಂಜೆ 4.00 ಗಂಟೆಯವರೆಗೆ ಮತ್ತು ಟೆಂಡರ್ ಪ್ರಕಟಣೆ ಸಂಖ್ಯೆ 26 ರ ಕಾಮಗಾರಿಯ ಟೆಂಡರನ್ನು ಅರ್ಹ ಕನ್ಸಲ್ಟೆನ್ಸಿಯವರಿಂದ **ದಿ: 16.10.2021ರ ಸಂಜೆ 4.00 ಗಂಟೆಯವರೆಗೆ** ಸ್ವೀಕರಿಸಲಾಗುವುದು. ಟೆಂಡರ್‌ದಾರರು ಕರ್ನಾಟಕ ಸರಕಾರದ ಇ-ಪ್ರೊಕ್ಯೂರ್‌ಮೆಂಟ್‌ನ ಪೋರ್ಟಲ್ ಅಂತರ್ಜಾಲದ ವೆಬ್‌ಸೈಟ್ ಮುಖಾಂತರ ಟೆಂಡರ್ ಡಾಕ್ಯೂಮೆಂಟ್‌ಗಳನ್ನು ಪಡೆಯಬಹುದಾಗಿದೆ. (Download) ಹೆಚ್ಚಿನ ವಿವರವನ್ನು ಕಛೇರಿ ಸಮಯದಲ್ಲಿ ಪಡೆಯಬಹುದು.

ಸಹಿ/- ಕಾರ್ಯನಿರ್ವಾಹಕ ಇಂಜಿನಿಯರ್
DIPR/ADM/MCA/ 527 /21-22 dt.08.10.2021 ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ, ಮಂಗಳೂರು

ಲೋಕೋಪಯೋಗಿ ಇಲಾಖೆ, ತುಮಕೂರು
ಕಾರ್ಯಪಾಲಕ ಇಂಜಿನಿಯರ್‌ರವರ ಕಛೇರಿ, ಲೋಕೋಪಯೋಗಿ ಇಲಾಖೆ ವಿಭಾಗ ತುಮಕೂರು.

ಕ್ರಸಂ:ಕಾಇಂ/ಲೋಇ/ತುವಿ/ಸಹಾ-3/ಟೆಂಡರ್-17/2021-22 ದಿನಾಂಕ 05.10.2021

ಟೆಂಡರ್ ಪ್ರಕಟಣೆ ಸಂ.17/2021-22 ದಿನಾಂಕ: 05.10.2021

ಈ ಕಛೇರಿ ಟೆಂಡರ್ ಪ್ರಕಟಣೆ ಸಂಖ್ಯೆ: 17/2021-22: ದಿನಾಂಕ 05.10.2021 ರಂದು ತುಮಕೂರು ವಿಭಾಗದ ವ್ಯಾಪ್ತಿಯಲ್ಲಿ ಲೆಕ್ಕ ಶೀರ್ಷಿಕೆ;8443: ಠೇವಣಿ ವಂತಿಕೆ ಅಡಿಯಲ್ಲಿ 01 ಕಾಮಗಾರಿಗೆ ಇ-ಪ್ರೊಕ್ಯೂರ್‌ಮೆಂಟ್ ಮೂಲಕ ಟೆಂಡರ್ ಆಹ್ವಾನಿಸಲಾಗಿರುತ್ತದೆ. ಟೆಂಡರಿಗೆ ಗರಿಷ್ಠ ಅಂದಾಜು ಮೊತ್ತ **ರೂ.819.69 ಲಕ್ಷಗಳು**, ಇ.ಎಂ.ಡಿ ಮೊತ್ತ **ರೂ.1229600/-ಗಳು**. ಅರ್ಹ ಗುತ್ತಿಗೆದಾರರು :1ನೇ ದರ್ಜೆ ಮೇಲ್ಪಟ್ಟು, ಕಾಲಾವಧಿ: 11 ತಿಂಗಳು, ಸಂಬಂಧಿಸಿದ ವಿಚಾರಣೆ ಮತ್ತು ಸ್ಪಷ್ಟೀಕರಣಗಳಿಗೆ ಕೊನೆ ದಿನಾಂಕ ಮತ್ತು ವೇಳೆ: **18.10.2021 ರ 16.00** ಗಂಟೆಗೆ, ಇ-ಪ್ರೊಕ್ಯೂರ್‌ಮೆಂಟ್ ಮೂಲಕ ಟೆಂಡರ್‌ಗಳನ್ನು ದಿನಾಂಕ **07.10.2021 ರಿಂದ 22.10.2021ರ** 16.00ಗಂಟೆಯವರೆಗೆ ಪಡೆಯ ಬಹುದಾಗಿದೆ. ಟೆಂಡರ್‌ಗಳನ್ನು ಸ್ವೀಕರಿಸಲು ಕೊನೆಯ ದಿನಾಂಕ ಮತ್ತು ವೇಳೆ: **22.10.2021** ರ ಸಂಜೆ 16.00 ಗಂಟೆವರೆಗೆ. ತಾಂತ್ರಿಕ ಬಿಡ್‌ಗಳನ್ನು ತೆರೆಯುವ ದಿನಾಂಕ: **23.10.2021** ಸಂಜೆ 16.30 ಗಂಟೆಗೆ. ಆರ್ಥಿಕ ಬಿಡ್‌ಗಳನ್ನು ತೆರೆಯುವ ದಿನಾಂಕ: **26.10.2021** ಸಂಜೆ 11.00 ಗಂಟೆಗೆ. ಹೆಚ್ಚಿನ ವಿವರಗಳನ್ನು ಸದರಿ ಕಚೇರಿಯಿಂದ ಕಚೇರಿ ವೇಳೆಯಲ್ಲಿ ಪಡೆಯಬಹುದಾಗಿದೆ ಹಾಗೂ ವೆಬ್‌ಸೈಟ್ ಸಂ: www.eproc.karnataka. gov.in ರಲ್ಲಿ ಪಡೆಯಬಹುದಾಗಿದೆ.

ಸಹಿ/-ಕಾರ್ಯಪಾಲಕ ಇಂಜಿನಿಯರ್,
ಲೋಕೋಪಯೋಗಿ ಇಲಾಖೆ ವಿಭಾಗ, ತುಮಕೂರು.

DIPR/TUM/332/MCA/2021-22

ಪ್ರಜಾವಾಣಿ
ಪ್ರಜಾಧ್ವನಿ
ಜನರ ಮನದಾಳದ ಮಾತು

ಗಾರ್ಮೆಂಟ್ ಕಾರ್ಖಾನೆಯ ಕಾರ್ಮಿಕರ ತುಟ್ಟಿಭತ್ಯೆ ಏರಿಕೆಯನ್ನು ಮುಂದೂಡಿರುವುದು ಸರಿಯೆ?

ಜನಾಭಿಪ್ರಾಯ:

ಹೌದು 20%
ಇಲ್ಲ 80%

12ನೇ ತರಗತಿ ಪರೀಕ್ಷೆ ಫಲಿತಾಂಶ: ಪ್ರತಿಕ್ರಿಯೆಗೆ 'ಸುಪ್ರೀಂ' ಸೂಚನೆ

ನವದೆಹಲಿ (ಪಿಟಿಐ): ಕೋವಿಡ್ 19 ಸಾಂಕ್ರಾಮಿಕದಿಂದಾಗಿ ರದ್ದು-ಗೊಳಿಸಲಾದ 12ನೇ ತರಗತಿಯ ಪರೀಕ್ಷೆಯ ಫಲಿತಾಂಶಕ್ಕೆ ಸಂಬಂಧಿಸಿದ ವಿವಾದ ಪರಿಹಾರದ ಕಾರ್ಯವಿಧಾನ ಸರಿಯಾಗಿ ಅನುಷ್ಠಾನಗೊಳಿಸಲು ವಿಫಲವಾಗಿರುವ ಆರೋಪ ಎದುರಿಸುತ್ತಿರುವ ಸಿಬಿಎಸ್‌ಇಗೆ ಪ್ರತಿಕ್ರಿಯೆ ಸಲ್ಲಿಸುವಂತೆ ಸುಪ್ರೀಂ ಕೋರ್ಟ್ ಶುಕ್ರವಾರ ಹೇಳಿದೆ.

ನ್ಯಾಯಮೂರ್ತಿಗಳಾದ ಎ.ಎಂ. ಖಾನ್ವಿಲ್ಕರ್ ಮತ್ತು ಸಿ.ಟಿ. ರವಿಕುಮಾರ್ ಅವರಿರುವ ಪೀಠ ಈ ಸಂಬಂಧದ ಅರ್ಜಿಗಳ ವಿಚಾರಣೆ ನಡೆಸಿತು.

ಅಕ್ಟೋಬರ್ 20ಕ್ಕೆ ವಿಚಾರಣೆ ಮುಂದೂಡಿದ ಪೀಠವು, ಅ.18 ಅಥವಾ ಅದಕ್ಕೂ ಮೊದಲು ಪ್ರತಿಕ್ರಿಯೆ ಸಲ್ಲಿಸುವಂತೆ ವಕೀಲರಿಗೆ ನ್ಯಾಯಪೀಠ ಸೂಚಿಸಿತು.

ಬಿ.ಗೋಪಾಲ್‌ಗೆ ಸತ್ಯಜಿತ್ ರೇ ಪ್ರಶಸ್ತಿ

ತಿರುವನಂತಪುರ (ಪಿಟಿಐ): ತೆಲುಗಿನ ಖ್ಯಾತ ಚಿತ್ರ ನಿರ್ದೇಶಕ ಬಿ. ಗೋಪಾಲ್ (ಬೆಜವಾಡ ಗೋಪಾಲ್) ಅವರನ್ನು ಸತ್ಯಜಿತ್ ರೇ ಪ್ರಶಸ್ತಿಗಾಗಿ ಆಯ್ಕೆ ಮಾಡಲಾಗಿದೆ.

ಕೇರಳದ ಸತ್ಯಜಿತ್ ರೇ ಫಿಲ್ಮ್ ಸೊಸೈಟಿಯು ಸ್ಥಾಪಿಸಿರುವ ಈ ಪ್ರಶಸ್ತಿಯು ₹10 ಸಾವಿರ ನಗದು, ಸ್ಮರಣಿಕೆಯನ್ನು ಒಳಗೊಂಡಿದೆ. ಭಾರತೀಯ ಚಿತ್ರರಂಗಕ್ಕೆ ಸಲ್ಲಿಸಿರುವ ಒಟ್ಟಾರೆ ಕೊಡುಗೆಯನ್ನು ಪರಿಗಣಿಸಿ ಗೋಪಾಲ್ ಅವರನ್ನು ಆಯ್ಕೆ ಮಾಡಲಾಗಿದೆ.

ಕರ್ನಾಟಕ ಸರಕಾರ
ಜಿಲ್ಲಾ ಪಂಚಾಯತ್, ಬಾಗಲಕೋಟ
ಗ್ರಾಮೋದ್ಯೋಗ ಮತ್ತು ಸಣ್ಣ ಉದ್ಯಮ ವಿಭಾಗ
E-mail ID: khagrabgk123@gmail.com Phone: 08354-235744

ಸಂಖ್ಯೆ: IC/2021-22/IND/ ದಿನಾಂಕ: 05-10-2021

2021-22ನೇ ಸಾಲಿಗಾಗಿ ಬಾಗಲಕೊಟ ಜಿಲ್ಲೆಯಲ್ಲಿರುವ 6 ತಾಲೂಕುಗಳ ವಿವಿಧ ವೃತ್ತಿಯ ಕುಶಲಕರ್ಮಿಗಳಿಗೆ ಸುಧಾರಿತ ಉಪಕರಣಗಳ ಸರಬರಾಜುವಿಗಾಗಿ ಐಎಸ್‌ಐ ಮಾರ್ಕ ಹೊಂದಿದ ಹೊಲಿಗೆ ಯಂತ್ರ, ಉಪಕರಣಗಳನ್ನು ಸರಬರಾಜು ಮಾಡಲು ನೊಂದಾಯಿತ ಪೂರೈಕೆದಾರರು/ಅಧಿಕೃತ ಮಾರಾಟಗಾರರಿಂದ ಇ-ಪ್ರೊಕ್ಯೂರ್‌ಮೆಂಟ ಮೂಲಕ ಟೆಂಡರ್ ಆಹ್ವಾನಿಸಲಾಗಿದೆ. ವಿವರ ಈ ಕೆಳಗಿನಂತಿದೆ.

ಕ್ರ ಸಂ.	ಯೋಜನೇಯ ವಿವರ	ಸಾಮಗ್ರಿಗಳ ವಿವರಗಳು	ಅಂದಾಜು ಮೊತ್ತ	ಇ.ಎಂ.ಡಿ. ಮೊತ್ತ
1	ಜಿಲ್ಲಾ ಉದ್ಯಮ ಕೇಂದ್ರ	ಐಎಸ್‌ಐ ಮಾರ್ಕ ಹೊಂದಿದ ಹೊಲಿಗೆ ಯಂತ್ರಗಳು	6,00,000=00	Rs. 56,575=00
2	ವೃತ್ತಿಪರ ಕುಶಲಕರ್ಮಿಗಳಿಗೆ ಸುಧಾರಿತ ಉಪಕರಣಗಳ ಸರಬರಾಜು	ಐಎಸ್‌ಐ ಮಾರ್ಕ ಹೊಂದಿದ ಹೊಲಿಗೆ ಯಂತ್ರ ಉಪಕರಣಗಳು	16,63,000=00	
			22,63,000=00	

ಕ್ರ ಸಂ	ವಿವರ	ದಿನಾಂಕ ಹಾಗೂ ಸಮಯ
1	ಟೆಂಡರದಾರರು ಆನ್‌ಲೈನ್ ಮೂಲಕ ಬಿಡ್‌ಗಳನ್ನು ಸಲ್ಲಿಸುವ ಕೊನೆಯ ದಿನಾಂಕ	04-11-2021 ಸಾಯಂಕಾಲ 05:30 ಘಂಟೆಯೊಳಗೆ
2	ಮಾದರಿ ಉಪಕರಣಗಳನ್ನು ಸಲ್ಲಿಸುವ ಕೊನೆಯ ದಿನಾಂಕ	06-11-2021 ಸಾಯಂಕಾಲ 05:30 ಘಂಟೆಯೊಳಗೆ
3	ಮಾದರಿ ಉಪಕರಣಗಳನ್ನು ಪರಿಶೀಲಿಸುವ ದಿನಾಂಕ	08-11-2021 ಬೆಳಿಗ್ಗೆ 11:00
4	ತಾಂತ್ರಿಕ ಬಿಡ್‌ಗಳನ್ನು ತೆರೆಯುವ ದಿನಾಂಕ	09-11-2021
5	ಆರ್ಥಿಕ ಬಿಡ್‌ಗಳನ್ನು ತೆರೆಯುವ ದಿನಾಂಕ	ಟೆಂಡರ್ ಪರಿಶೀಲನಾ ಸಮೀತಿಯಿಂದ ತಾಂತ್ರಿಕ್ ಬಿಡ್ ಅನುಮೋದನೆಯಾದ ನಂತರ

ಟೆಂಡರ್ ನಿಯಮಗಳು, ದಾಖಲೆಗಳ ಹಾಗೂ ಇತ್ಯಾದಿ ವಿವರಗಳಿಗೆ ಕರ್ನಾಟಕ ಸರಕಾರದ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಇ-ಪ್ರೊಕ್ಯೂರ್‌ಮೆಂಟ್ ನಿಯಮಾನುಸಾರ ಅರ್ಜಿ ಶುಲ್ಕ ಪಾವತಿಸಿ, http://www.eproc.karnataka.gov.in ಮೂಲಕ ಡೌನ್‌ಲೋಡ್ ಮಾಡಿ ಪಡೆಯಬಹುದಾಗಿದೆ. ತಾಂತ್ರಿಕ ಹಾಗೂ ಆರ್ಥಿಕ ಬಿಡ್‌ಗಳನ್ನು ಪ್ರತ್ಯೇಕವಾಗಿ ಇ-ಪ್ರೊಕ್ಯೂರ್‌ಮೆಂಟ್‌ನಲ್ಲಿ ಹಾಕುವುದು. ಹೆಚ್ಚಿನ ಮಾಹಿತಿಗಾಗಿ ಕೆಲಸದ ವೇಳೆಯಲ್ಲಿ ಈ ಕಚೇರಿಯನ್ನು ಸಂಪರ್ಕಿಸಬಹುದಾಗಿದೆ. (08354-235744) (9945112896)

ಸಹಿ/-ಉಪ ನಿರ್ದೇಶಕರು(ಗಾಕೈ)
ಜಿಲ್ಲಾ ಪಂಚಾಯತ, ಕೈಗಾರಿಕಾ ವಿಭಾಗ
ಬಾಗಲಕೋಟೆ

ವಾ.ಸಾ.ಇ/ಬಾ/325/2021-22/ದೇಶಪಾಂಡೆಪಬ್ಲಿಸಿಟಿ

ಕರ್ನಾಟಕ ಸರ್ಕಾರ
ಲೋಕೋಪಯೋಗಿ ಇಲಾಖೆ
ಕಾರ್ಯಪಾಲಕ ಇಂಜಿನಿಯರ್‌ರವರ ಕಛೇರಿ, ಮಂಡ್ಯ ವಿಭಾಗ, ಮಂಡ್ಯ
ನಂ:ಕಾಇಂ:ಲೋ.ಇ:ಮಂವಿ:ಸ.ಇಂ-4: ಟೆಂಡರ್ ಮುಂದೂಡಿಕೆ:
2021-2022/ ದಿನಾಂಕ:08.10.2021

ಟೆಂಡರ್ ಮುಂದೂಡಿಕೆ ಪ್ರಕಟಣೆ

ವಿಷಯ :- ಟೆಂಡರ್ ಪ್ರಕಟಣೆ ಮುಂದೂಡಿಕೆ -2 ರ ಬಗ್ಗೆ
ಉಲ್ಲೇಖ:- 1. ಈ ಕಛೇರಿ ಟೆಂಡರ್ ಪ್ರಕಟಣೆ ಸಂಖ್ಯೆ:08/2021-2022 ದಿನಾಂಕ: 25.08.2021. 2. ಈ ಕಛೇರಿ ಟೆಂಡರ್ ಮುಂದೂಡಿಕೆ ಪ್ರಕಟಣೆ-1 ರ ದಿನಾಂಕ: 27.09.2021

ಲೋಕೋಪಯೋಗಿ ಇಲಾಖೆ ಮಂಡ್ಯ ವಿಭಾಗ ವ್ಯಾಪ್ತಿಯಲ್ಲಿ ಉಲ್ಲೇಖ (1) ರಲ್ಲಿ ಟೆಂಡರ್‌ನ್ನು ಆಹ್ವಾನಿಸಲಾಗಿತ್ತು. ಉಲ್ಲೇಖ (2) ರಲ್ಲಿ ಸದರಿ ಟೆಂಡರ್ ಪ್ರಕಟಣೆಯ ದಿನಾಂಕಗಳನ್ನು ಮುಂದೂಡಲಾಗಿತ್ತು. ಸದರಿ ಟೆಂಡರ್ ಪ್ರಕಟಣೆಯ ಕಾಮಗಾರಿಗಳ ಕ್ರಮ ಸಂಖ್ಯೆ: 1 ರ ಕಾಮಗಾರಿಯ ಅಂದಾಜು ಮೊತ್ತ **ರೂ. 180.00 ಲಕ್ಷಗಳು** ಟೆಂಡರ್ ಸಲ್ಲಿಸಲು ಕೊನೆಯ **ದಿನಾಂಕ : 18.10.2021 ಸಂಜೆ 4.30** ಗಂಟೆವರೆಗೆ ಟೆಂಡರ್ ತೆರೆಯುವ **ದಿನಾಂಕ : 21.10.2021 ರಂದು ಬೆಳಿಗ್ಗೆ 11.00 ಘಂಟೆ** ನಂತರ ಮುಂದೂಡಲಾಗಿದೆ. ಉಳಿದಂತೆ ಯಾವುದೇ ಬದಲಾವಣೆಗಳು ಇರುವುದಿಲ್ಲ. ಇನ್ನು ಯಾವುದೇ ಬದಲಾವಣೆಗಳಿದ್ದಲ್ಲಿ ಮುಂದೆ ಇ-ಪ್ರೊಕ್ಯೂರ್‌ಮೆಂಟ್ ಮುಖಾಂತರ ಪ್ರಚುರ ಪಡಿಸಲಾಗುವುದು.

ಸಹಿ/-ಕಾರ್ಯಪಾಲಕ ಇಂಜಿನಿಯರ್,
ಲೋಕೋಪಯೋಗಿ ವಿಭಾಗ, ಮಂಡ್ಯ

DIPR/AD-MDY/MCA/383/2021-22

ಕರ್ನಾಟಕ ಸರ್ಕಾರ ಅರಣ್ಯ ಇಲಾಖೆ
ಉಪ ಅರಣ್ಯ ಸಂರಕ್ಷಣಾಧಿಕಾರಿಗಳ ಕಚೇರಿ,
ಭದ್ರಾವತಿ ವಿಭಾಗ, ಭದ್ರಾವತಿ-577301
Phone : 08282-266355 Fax: 08282-266647
Email:dcfbdvt@yahoo.in
ಸಂಖ್ಯೆ: ಎ2:ಬಿಯುಡಿ:"E-Tender" -ಸಿ.ಆರ್-30-2021-22-7,
Date:-05-10-2021.

2021-22ನೇ ಸಾಲಿನಲ್ಲಿ ಭದ್ರಾವತಿ ಅರಣ್ಯ ವಿಭಾಗದ ವ್ಯಾಪ್ತಿಯ ವಿವಿಧ ವಲಯಗಳಲ್ಲಿ ಕೆಳಕಂಡ ಕಾಮಗಾರಿಗಳನ್ನು ನಿರ್ವಹಿಸಲು ಇ-ಪ್ರಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಅಲ್ಪಾವಧಿ ಟೆಂಡರ್ ಆಹ್ವಾನಿಸಲಾಗಿದ್ದು, ಟೆಂಡರ್ ನಿಬಂಧನೆ ಹಾಗೂ ಹೆಚ್ಚಿನ ಮಾಹಿತಿಗಾಗಿ ಕಛೇರಿಯ ವೇಳೆಯಲ್ಲಿ ಈ ಕಛೇರಿಯನ್ನು ಸಂಪರ್ಕಿಸಬಹುದಾಗಿರುತ್ತದೆ. ಹಾಗೂ ಟೆಂಡರ್ ಕುರಿತು ವಿವರಗಳನ್ನು ಅಧಿಕೃತ ವೆಬ್‌ಸೈಟ್ www.eproc.karnataka.gov.in ಮೂಲಕ ಪಡೆದುಕೊಳ್ಳಬಹುದಾಗಿರುತ್ತದೆ.

1. 2022ನೇ ಸಾಲಿನ ಮಳೆಗಾಲದಲ್ಲಿ ನಡುತೋಪು ರಚನೆಗೆ ಅಗತ್ಯವಾದ ಪೂರ್ವಭಾವಿ ಕಾಮಗಾರಿಗಳಾದ ಮುಂಗಡ ಗುಂಡಿ ತೆಗೆಯುವ ಹಾಗೂ ಸಸಿಗಳನ್ನು ಬೆಳೆಸುವ ಕಾಮಗಾರಿ, **ಟೆಂಡರ್ ದಿನಾಂಕ: 22-10-2021 ತಾಂತ್ರಿಕ ಮತ್ತು ಆರ್ಥಿಕ ಬಿಡ್ಡು ತೆರೆಯುವ ದಿನಾಂಕ: 25-10-2021 ಮರು ಟೆಂಡರ್ ದಿನಾಂಕ: 27-10-2021**

ಸಹಿ/- (ಕೆ.ಎಮ್. ಗಾಮನಗಟ್ಟಿ) ಉಪ ಅರಣ್ಯ ಸಂರಕ್ಷಣಾಧಿಕಾರಿ,
ಭದ್ರಾವತಿ ವಿಭಾಗ, ಭದ್ರಾವತಿ.

ವಾ.ಸಾ.ಸಂ.ಇ/ಶಿ/ನಂ-38/10/ಎಂಸಿಎ/21-22/680

CSIR Fourth Paradigm Institute (CSIR- 4PI)
(Formerly CSIR C-MMACS, Bengaluru)
NAL Belur Campus, Wind Tunnel Road,
Bengaluru - 560 037, Karnataka, INDIA.

LOOKING FOR BRIGHT YOUNG RESEARCHERS

Advt. No.4PI/03(05)/2021

CSIR-4PI, will be conducting **Online interviews** to engage well qualified temporary Project Staff with **M.Sc/M.Tech in Atmospheric Sciences/Physical Oceanography/Meteorology/ Physics/Mathematics/Computer Science and PhD in Science with Specialization in Atmospheric Science.**

For more details, please visit our website **www.csir4pi.in**

Sd/-
Controller of Administration

ESAF SMALL FINANCE BANK
REGD. OFFICE: ESAF Bhavan, Mannuthy, Thrissur- 680 651, Kerala.

ಚಿನ್ನ ಹರಾಜು ಸೂಚನೆ

ಇಎಸ್‌ಎಎಫ್ ಸ್ಮಾಲ್ ಫೈನಾನ್ಸ್ ಬ್ಯಾಂಕ್ ನಲ್ಲಿ ಅಡಮಾನವಿಟ್ಟು, ಕೆಳಗೆ ಪಟ್ಟಿ ಮಾಡಲಾದ ಶಾಖೆ/ಗಳ ಪುನರಾವರ್ತಿತ ಜ್ಞಾಪನಗಳು ಹಾಗೂ ಸೂಚನೆಗಳ ಹೊರತಾಗಿಯೂ, ಬಿಡಿಸಿಕೊಳ್ಳಲಾಗದ ಎಲ್ಲಾ ಸಾಲಗಾರರಿಗೆ ಈ ಮೂಲಕ ತಿಳಿಸುವುದೇನೆಂದರೆ, ಕೆಳಗೆ ನೀಡಿರುವ ವಿವರಗಳಿಗೆ ಅನುಗುಣವಾಗಿ ಅವುಗಳನ್ನು ಹರಾಜು ಹಾಕಲಾಗುತ್ತದೆ:

ಹರಾಜು ದಿನಾಂಕ	: 12-10-2021	ಹರಾಜು ಸ್ಥಳ	: ಇ-ಹರಾಜಿನ ಮೂಲಕ
ಸಮಯ	: 10 AM TO 4 PM	ಹರಾಜು ದಿನಾಂಕ	: https://gold.matexnet.org/

ಇ-ಹರಾಜಿಗೆ ಹರಾಜುದಾರರಾಗಿ ನೋಂದಾಯಿಸಲು, ನಿಯಮ ಹಾಗೂ ಷರತ್ತುಗಳು ಮತ್ತು ಇ-ಹರಾಜಿನ ಸಂಪೂರ್ಣ ವಿವರಗಳಿಗಾಗಿ, ಮೇಲಿನ ಸೈಟ್ ಗೆ ಭೇಟಿ ನೀಡಿ.

BRANCHES & LOAN ACCOUNT NUMBERS

BENGALURU-HBR LAYOUT: 63210000370497. **HEGGADADEVANKOTE:** 63210000010566, 11314, 63210000024480, 63210000033992, 63210000578846. **MYSORE:** 63210000016465, 016475, 27564, 190155, 361644, 362322, 371525, 372953, 527723

ಒಟ್ಟು ಬಾಕಿ ಮೊತ್ತವನ್ನು ಪಾವತಿಸಿ ಒಡವೆಗಳನ್ನು ಬಿಡಿಸಿಕೊಳ್ಳಲು ಆಸಕ್ತಿ ಹೊಂದಿರುವ ಗ್ರಾಹಕರು, ಸಂಬಂಧಿಸಿದ ಶಾಖೆಗಳಲ್ಲಿ ಹರಾಜಿಗೆ ಮೊದಲು (ಹರಾಜಿನ ದಿನಾಂಕಕ್ಕೆ 2 ದಿನಗಳ ಮೊದಲು) ಬಿಡಿಸಿಕೊಳ್ಳಬಹುದಾಗಿದೆ. ಹರಾಜಿನಲ್ಲಿ ಭಾಗವಹಿಸಲು ಬಯಸುವ ಹರಾಜುದಾರರು ತಮ್ಮ ಕೆವೈಸಿ ದಾಖಲಾತಿಗಳನ್ನು ಸಲ್ಲಿಸಬೇಕು. ನೋಂದಾಯಿತ ಸಂಸ್ಥೆ/ಕಂಪನಿಗೆ ಜಿ ಎಸ್ ಟಿ ಸಂಖ್ಯೆ ಕಡ್ಡಾಯ. ಹರಾಜುದಾರರು ರೂ.50,000 ಮೊತ್ತವನ್ನು ಹರಾಜಿನಲ್ಲಿ ಭಾಗವಹಿಸುವ ಮೊದಲು ಇಎಂಡಿ ರೂಪದಲ್ಲಿ ಪಾವತಿಸಬೇಕು.

ತ್ರಿಶ್ಶೂರು
ದಿನಾಂಕ : 06-10-2021

ಸಹಿ/-
ಅಧಿಕೃತ ಸಹಿದಾರರು

ಕಾರ್ಯನಿರ್ವಾಹಕ ಇಂಜಿನೀಯರರು, ಲೋಕೋಪಯೋಗಿ ಇಲಾಖೆ,
ಶಿರಸಿ ವಿಭಾಗ, ಶಿರಸಿ

ಕರ್ನಾಟಕ ಸರ್ಕಾರ

ಸಂ: ಟೆಂಡರ್ ಅಧಿಸೂಚನೆ/8443 ಠೇವಣಿ ವಂತಿಗೆ/ಅಧಿಸೂಚನೆ/2021-22/1374 ದಿನಾಂಕ: 27.09.2021

ಇ-ಟೆಂಡರ್ ಅಧಿಸೂಚನೆ IFT-KW-4
ಇ-ಪ್ರೊಕ್ಯೂರ್‌ಮೆಂಟ್ ಟೆಂಡರ್ ಪ್ರಕಟಣೆ (ಸ್ಟ್ಯಾಂಡರ್ಡ್ ಡಾಕ್ಯುಮೆಂಟ್ ದ್ವಿ ಲಕೋಟೆ ಪದ್ಧತಿಯಲ್ಲಿ)

ಕರ್ನಾಟಕ ರಾಜ್ಯಪಾಲರ ಪರವಾಗಿ ಲೋಕೋಪಯೋಗಿ ಇಲಾಖೆಯಲ್ಲಿ ನೋಂದಾಯಿತ ಅರ್ಹ ಗುತ್ತಿಗೆದಾರರಿಂದ ಈ ಕೆಳಗಿನ ಕಾಮಗಾರಿಗಳಿಗಾಗಿ ಇ-ಪ್ರೋಕ್ ಸ್ಟ್ಯಾಂಡರ್ಡ್ ಡಾಕ್ಯುಮೆಂಟ್ ಮುಖಾಂತರ ಟೆಂಡರನ್ನು ದ್ವಿ ಲಕೋಟೆ ಪದ್ಧತಿಯಲ್ಲಿ ಈ ಕೆಳಕಾಣಿಸಿದಂತೆ ಇ-ಪ್ರೋಕ್‌ನಲ್ಲಿ ಆಹ್ವಾನಿಸಲಾಗಿದೆ. ಅರ್ಹ ಗುತ್ತಿಗೆದಾರರು ಇ-ಆಡಳಿತ ಕೇಂದ್ರ ಅಥವಾ ವೆಬ್‌ಸೈಟ್ **www.eproc.karnataka.gov.in** ನಲ್ಲಿ ಪ್ರಕಟಿಸಿದಂತೆ ದಿನಾಂಕ ಹಾಗೂ ಇನ್ನುಳಿದ ವಿವರಗಳನ್ನು ಖಚಿತಪಡಿಸಿಕೊಂಡು ಟೆಂಡರಿಗಾಗಿ ಭಾಗವಹಿಸಬಹುದು. ಹೆಚ್ಚಿನ ವಿವರಗಳಿಗೆ ಈ ಕಚೇರಿಯಿಂದ ಕಚೇರಿ ವೇಳೆಯಲ್ಲಿ ಮಾಹಿತಿ ಪಡೆಯಬಹುದು. ಕಾಮಗಾರಿಗಳ ಇನ್ನುಳಿದ ವಿವರಗಳು ಈ ಕೆಳಗಿನಂತಿವೆ.

(1) ಟೆಂಡರ್ ಮಾಹಿತಿ ವಿಚಾರಣೆಗೆ ಕೊನೆಯ ದಿನಾಂಕ: **24.11.2021 (16.00 ಗಂಟೆಗೆ)**
(2) ಟೆಂಡರ್ ಸ್ವೀಕರಿಸಲು ಕೊನೆಯ ದಿನಾಂಕ: **25.11.2021 (16.00 ಗಂಟೆವರೆಗೆ).**
(3) ತಾಂತ್ರಿಕ ಬಿಡ್ ತೆರೆಯುವ ದಿನಾಂಕ: **26.11.2021 (16.30 ಗಂಟೆವರೆಗೆ).**
(4) ಆರ್ಥಿಕ ಬಿಡ್ ತೆರೆಯುವ ದಿನಾಂಕ: **29.11.2021 (16.00 ಗಂಟೆವರೆಗೆ).**

ಕಾಮಗಾರಿಯ ಹೆಸರು: ಉತ್ತರ ಕನ್ನಡ ಜಿಲ್ಲೆಯ ಶಿರಸಿ ಕ್ರೀಡಾಂಗಣದಲ್ಲಿ ಸುಸಜ್ಜಿತ ಬಹುಪಯೋಗಿ ಒಳಾಂಗಣ ಕ್ರೀಡಾಂಗಣ ನಿರ್ಮಿಸುವುದು. ಅಂದಾಜು ಮೊತ್ತ **ರೂ. 1000.00 ಲಕ್ಷ**, ಟೆಂಡರಿಗಿಟ್ಟ ಮೊತ್ತ **ರೂ. 880.00 ಲಕ್ಷ**, ಮುಂಗಡ ಠೇವಣಿ (ರೂ.ಗಳಲ್ಲಿ): **12/2020, ಬೆಂಗಳೂರು, ದಿನಾಂಕ 22.12.2020**, ಟೆಂಡರ್ ನಿರ್ವಹಣೆ ಶುಲ್ಕ (ರೂ.ಗಳಲ್ಲಿ): **www.epoc.karnataka.gov.in** ವೆಬ್‌ಸೈಟ್ ನೋಡಿ. ಕಾಮಗಾರಿ ಪೂರ್ಣಗೊಳಿಸುವ ಅವಧಿ: **24** ತಿಂಗಳು.

ಸಹಿ/- ಕಾರ್ಯನಿರ್ವಾಹಕ ಇಂಜಿನೀಯರರು ಹಾಗೂ
ರಾಜ್ಯ ಹೆದ್ದಾರಿ ಪ್ರಾಧಿಕಾರ ಅಧಿಕಾರಿ
ಲೋಕೋಪಯೋಗಿ ಇಲಾಖೆ, ವಿಭಾಗ ಶಿರಸಿ (ಉತ್ತರ ಕನ್ನಡ ಜಿಲ್ಲೆ)

DIPR/ADK/MCA/485/21-22 dt.07.10.2021

ಕರ್ನಾಟಕ ರಾಜ್ಯ ವೈದ್ಯಕೀಯ ಸರಬರಾಜು ನಿಗಮ ನಿಯಮಿತ
ಪಿ.ಹೆಚ್.ಐ ಕಟ್ಟಡ, ಶೇಷಾದ್ರಿ ರಸ್ತೆ, ಎಸ್.ಜೆ.ಪಿ. ಕಾಲೇಜ್ ಎದುರು, ಕೆ.ಆರ್. ಸರ್ಕಲ್,
ಬೆಂಗಳೂರು-560001. ಇ-ಮೇಲ್: ad.kdlws@gmail.com, md.ksmscl@gmail.com

No: HFW/KSMSCL/SNCU1/EQPT/27/2021-22 Date: 08-10-2021

ಅಲ್ಪಾವಧಿ ಟೆಂಡರ್ ಪ್ರಕಟಣೆ

ಉಲ್ಲೇಖ: 1) ಮರು ಟೆಂಡರ್ ಅಧಿಸೂಚನೆ ಸಂಖ್ಯೆ: **HFW/KSMSCL/SNCU1/EQPT/27/2021-22 Date: 08-10-2021 (IND-849).** 2) ಮರು ಟೆಂಡರ್ ಅಧಿಸೂಚನೆ ಸಂಖ್ಯೆ: **HFW/KSMSCL/SNCU2/EQPT/28/2021-22 Date: 08-10-2021 (IND-848).** 3) ಮರು ಟೆಂಡರ್ ಅಧಿಸೂಚನೆ ಸಂಖ್ಯೆ: **HFW/KSMSCL/SNCU3/EQPT/29/ 2021-22 Date: 08-10-2021 (IND-850).** 4) ಟೆಂಡರ್ ಅಧಿಸೂಚನೆ ಸಂಖ್ಯೆ: **HFW/KSMSCL/EQPT/MH-Programme/TND/38/2021-22 Date: 08-10-2021(IND-847).**

ಇ-ಟೆಂಡರಿಂಗ್ ವ್ಯವಸ್ಥೆಯಡಿಯಲ್ಲಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯ ಪಾರದರ್ಶಕತೆ ಅಧಿನಿಯಮ 1999 ಮತ್ತು ನಿಯಮ 2000 ರನ್ವಯ ಈ ಕೆಳಕಂಡ ಟೆಂಡರ್‌ಗಳನ್ನು ರಾಷ್ಟ್ರವ್ಯಾಪ್ತಿ ಕರೆಯಲಾಗಿದೆ.

1) ಎನ್.ಹೆಚ್.ಎಂ. ಅನುದಾನದ ಮಕ್ಕಳ ಆರೋಗ್ಯ ಕಾರ್ಯಕ್ರಮದಡಿಯಲ್ಲಿ ಐ.ಸಿ.ಯು ಸಲಕರಣೆಗಳನ್ನು ಖರೀದಿಸಿ ಪೂರೈಸಲು ಮರು ಟೆಂಡರ್ ಕರೆಯುವ ಬಗ್ಗೆ. 2) ಎನ್.ಹೆಚ್.ಎಂ. ಅನುದಾನದ ಮಕ್ಕಳ ಆರೋಗ್ಯ ಕಾರ್ಯಕ್ರಮದಡಿಯಲ್ಲಿ ನವಜಾತ ಶಿಶು ಮತ್ತು ಇ.ಎನ್.ಟಿ. ಸಲಕರಣೆಗಳನ್ನು ಖರೀದಿಸಿ ಪೂರೈಸಲು ಮರು ಟೆಂಡರ್ ಕರೆಯುವ ಬಗ್ಗೆ. 3) ಎನ್.ಹೆಚ್.ಎಂ. ಅನುದಾನದ ಮಕ್ಕಳ ಆರೋಗ್ಯ ಕಾರ್ಯಕ್ರಮದಡಿಯಲ್ಲಿ ಆಸ್ಪತ್ರೆ ಸಲಕರಣೆಗಳನ್ನು ಖರೀದಿಸಿ ಪೂರೈಸಲು ಮರು ಟೆಂಡರ್ ಕರೆಯುವ ಬಗ್ಗೆ. 4.) ಎನ್.ಹೆಚ್.ಎಂ. ಅನುದಾನದ ಹೆಚ್.ಡಿ.ಯು-ಐ.ಸಿ.ಯು, ಲಕ್ಷ್ಯ ಮತ್ತು ಹೊಸ ತಾಯಿ ಮತ್ತು ಮಕ್ಕಳ ಆಸ್ಪತ್ರೆ ಅಡಿಯಲ್ಲಿ ವೈದ್ಯಕೀಯ ಸಲಕರಣೆಗಳನ್ನು ಖರೀದಿಸಿ ಪೂರೈಸಲು ಟೆಂಡರ್ ಕರೆಯುವ ಬಗ್ಗೆ.

ತಾಂತ್ರಿಕ ವಿವರಣೆ, ಇ.ಎಂ.ಡಿ, ಟೆಂಡರ್ ನಿಯಮಾವಳಿ ಹಾಗೂ ಇತರೆ ಮಾಹಿತಿಯನ್ನು ಟೆಂಡರ್ ದಸ್ತಾವೇಜಿನಲ್ಲಿ ಅಳವಡಿಸಲಾಗಿದ್ದು, ಟೆಂಡರ್‌ಗಳ ದಸ್ತಾವೇಜನ್ನು ಇ-ಟೆಂಡರ್ ವ್ಯವಸ್ಥೆಯಡಿಯಲ್ಲಿ ವೆಬ್‌ಸೈಟ್ ಮುಖಾಂತರ: **https://eproc.karnataka.gov.in** ನಲ್ಲಿ ದಿನಾಂಕ: **08-10-2021** ರಿಂದ ಡೌನ್‌ಲೋಡ್ ಮಾಡಬಹುದಾಗಿದ್ದು, ಹೆಚ್ಚಿನ ವಿವರಣೆಯನ್ನು ಈ ಕಛೇರಿಯಿಂದ ಕೆಲಸದ ಅವಧಿಯಲ್ಲಿ ಪಡೆಯಬಹುದಾಗಿದೆ.

ಸಹಿ/- ವ್ಯವಸ್ಥಾಪಕ ನಿರ್ದೇಶಕರು,
ಕೆ.ಎಸ್.ಎಂ.ಎಸ್.ಸಿ.ಎಲ್

ವಾಸಾಸಂಇ/ಬೆಂ.ನ/ಅಡ್ವರ್ಟೋರ್/1824/2021-22

ಕೋವಿಡ್-19 ಲಕ್ಷಣಗಳು ಇವೆಯೇ? ಸಂಪರ್ಕಿಸಿ, ಆಪ್ತಮಿತ್ರ ಸಹಾಯವಾಣಿ 14410.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಕರ್ನಾಟಕ ಸರ್ಕಾರ
ಸಾರ್ವಜನಿಕ ಆಸ್ಪತ್ರೆ, ಹೊಳಲ್ಕೆರೆ. ಚಿತ್ರದುರ್ಗ ಜಿಲ್ಲೆ
ಸಂಖ್ಯೆ:ತಾಸಾಆನಾ/ಟೆಂಡರ್/ನಾನ್-ಕ್ಲಿನಿಕಲ್-ಗ್ರೂಪ್ ಡಿ/377/2021-22
ದಿನಾಂಕ: 01.10.2021

ಅಲ್ಪಾವಧಿ ಟೆಂಡರ್ ಪ್ರಕಟಣೆ (ಇ-ಟೆಂಡರ್)

ತಾಲ್ಲೂಕು ಸಾರ್ವಜನಿಕ ಆಸ್ಪತ್ರೆ, ಹೊಳಲ್ಕೆರೆ, ಚಿತ್ರದುರ್ಗ ಜಿಲ್ಲೆ, ಆರೋಗ್ಯ ಸಂಸ್ಥೆಯ 2021-22ನೇ ಸಾಲಿನ ನಾನ್-ಕ್ಲಿನಿಕಲ್ ಸ್ವಚ್ಛತಾ ಸೇವೆಯ ಕೆಲಸ ನಿರ್ವಹಣೆಗೆ/ಗ್ರೂಪ್ ಡಿ ನೌಕರರುಗಳನ್ನು ಹೊರಸಪನ್ಮೂಲ ಆಧಾರಿತ ಗುತ್ತಿಗೆಯನ್ನು ನೀಡುವ ಸಂಬಂಧ ಅರ್ಹ ಟೆಂಡರ್‌ದಾರರಿಂದ/ಮಾನ್ಯತೆ ಪಡೆದ ಅಧಿಕೃತ ಸಂಸ್ಥೆಗಳಿಂದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕ ಅಧಿನಿಯಮ 2000 ಮೇರೆಗೆ ಇ-ಪ್ರೊಕ್ಯೂರ್‌ಮೆಂಟ್ ಮೂಲಕ ದ್ವಿ-ಲಕೋಟೆ ಪದ್ಧತಿಯಲ್ಲಿ ಅಲ್ಪಾವಧಿ ಟೆಂಡರ್ ಆಹ್ವಾನಿಸಲಾಗಿದೆ. ಹೆಚ್ಚಿನ ವಿವರಗಳಿಗೆ ಇ-ಪ್ರೊಕ್ಯೂರ್‌ಮೆಂಟ್ ವಿಳಾಸ : https://eproc.karnataka.gov.in ರಲ್ಲಿ ಪರಿಶೀಲಿಸಿ ಸೂಕ್ತ ದಾಖಲಾತಿಗಳೊಂದಿಗೆ ಟೆಂಡರ್ ಸಲ್ಲಿಸಬಹುದು. ಇ-ಪೋರ್ಟಲ್‌ನಲ್ಲಿ ಕಾಣಿಸಿದ ನಿಬಂಧನೆಗಳು ಟೆಂಡರ್ ಇಎಂಡಿ ಮೊತ್ತ ಹಾಗೂ ಇತರೆ ವಿವರಗಳನ್ನು ಗಮನಿಸಿ ಕ್ರಮವಹಿಸುವುದು ಟೆಂಡರ್ ದಿನಾಂಕಗಳ ವಿವರ ಈ ಕೆಳಕಂಡಂತೆ ಇರುತ್ತದೆ.

(1) ಟೆಂಡರ್‌ನ್ನು ಇ-ಪೋರ್ಟ್‌ಲ್ ಮೂಲಕ ಡೌನ್‌ಲೋಡ್ ಮಾಡಿಕೊಳ್ಳುವ ದಿನಾಂಕ: 01.10.2021 (2) ಇ-ಪೋರ್ಟ್‌ಲ್ ಟೆಂಡರ್ ಸಲ್ಲಿಸುವ ಅಂತಿಮ ದಿನಾಂಕ: 11.10.2021 ಸಂಜೆ 5 ಗಂಟೆಗೆ. (3) ಟೆಂಡರ್ ತಾಂತ್ರಿಕ ಬಿಡ್ ತೆರೆಯುವ ದಿನಾಂಕ: 13.10.2021 ಬೆಳಿಗ್ಗೆ 11 ಗಂಟೆಗೆ. (4) ಟೆಂಡರ್ ಆರ್ಥಿಕ ಬಿಡ್ ತೆರೆಯುವ ಸಂಭಾವ್ಯ ದಿನಾಂಕ: 21.10.2021 ಬೆಳಿಗ್ಗೆ 11.00 ಗಂಟೆಗೆ. (5) ಟೆಂಡರ್‌ನ ಅಂದಾಜು ಮೊತ್ತ ರೂ. 25,00,000/- (6) ಟೆಂಡರ್‌ಗೆ ನಿಗಧಿಪಡಿಸಿದ ಇಎಂಡಿ (2.5%) ರೂ. 62,500/-

DIPR/CTA/MCA/
526/2021-22

ಸಹಿ/- ಮುಖ್ಯ ವೈದ್ಯಾಧಿಕಾರಿಗಳು,
ಸಾರ್ವಜನಿಕ ಆಸ್ಪತ್ರೆ, ಹೊಳಲ್ಕೆರೆ.

ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ
ನಂ.49, ಪರಿಸರ ಭವನ, ಚರ್ಚ್ ಸ್ಟ್ರೀಟ್, ಬೆಂಗಳೂರು - 560 001.
ದೂ.080-25586520/25589112 ಫ್ಯಾಕ್ಸ್ : 080-25886321
ಇ-ಮೇಲ್: ho@kspcb.gov.in ವೆಬ್‌ಸೈಟ್: http://kspcb.karnataka.gov.in

ಸಂಖ್ಯೆ:ಮಾನಿಮಂ/ತ್ಯಾನಿವಿ/05/MSW/2016/2021-22/3353 ದಿನಾಂಕ:07.10.2021

ಪರಿಸರ ಸಾರ್ವಜನಿಕ ಸಭೆಗಾಗಿ ಸೂಚನೆ

ನಗರ ಸಭೆ, ಕನಕಪುರ, ರಾಮನಗರ ಜಿಲ್ಲೆ ಇವರು ಸರ್ವೆ ನಂ **249/P2, P3, P4, P5, P6, 250/P1, 250/P2, 250/P3,** ಅರಳಲು ಗ್ರಾಮ, ಕನಕಪುರ ತಾಲ್ಲೂಕು, ರಾಮನಗರ ಜಿಲ್ಲೆಯಲ್ಲಿ 40 TPD ಸಾಮರ್ಥ್ಯದ ಸಮಗ್ರ ಘನ ತ್ಯಾಜ್ಯ ಸಂಸ್ಕರಣ ಮತ್ತು ವಿಲೇವಾರಿಯ ಘಟಕವನ್ನು ಸ್ಥಾಪಿಸಲು ಉದ್ದೇಶಿಸಿರುತ್ತಾರೆ. ಸದರಿ ಯೋಜನೆಯ ಪ್ರವರ್ತಕರು ಪರಿಸರ ಅಘಾತ ಅಧ್ಯಯನದ ಅಧಿಸೂಚನೆ ದಿನಾಂಕ : 14.09.2006ರ ಪ್ರಕಾರ ಪರಿಸರ ಮತ್ತು ಅರಣ್ಯ ಮಂತ್ರಾಲಯ, ಭಾರತ ಸರ್ಕಾರ, ಇವರಿಂದ ಮೊದಲೇ ಪರಿಸರ ವಿಮೋಚನಾ ಪತ್ರವನ್ನು ಪಡೆಯಬೇಕಾಗಿರುತ್ತದೆ ಮತ್ತು ಪರಿಸರ ಸಾರ್ವಜನಿಕ ಆಲಿಕೆ ಸಭೆಯನ್ನು ನಡೆಸಬೇಕಾಗಿರುತ್ತದೆ. ಪರಿಸರ ಸಾರ್ವಜನಿಕ ಆಲಿಕೆ ಸಭೆಯನ್ನು ದಿನಾಂಕ:10.11.2021 ರಂದು ನಿಗಧಿ ಪಡಿಸಿದೆ.

ಯೋಜನೆಯ ವಿವರಗಳು ಕೆಳಕಂಡಂತಿವೆ.

1.	**ಕಂಪನಿಯ ಹೆಸರು ಮತ್ತು ಕಛೇರಿಯ ವಿಳಾಸ: ನಗರ ಸಭೆ, ಕನಕಪುರ, ರಾಮನಗರ ಜಿಲ್ಲೆ.**
2.	**ಉದ್ದೇಶಿತ ವಿಸ್ತರಣಾ ಯೋಜನೆಯ ಸ್ಥಳ:** ಸರ್ವೆ ನಂ 249/P2, P3, P4, P5, P6, 250/P1, 250/P2, 250/P3, ಅರಳಲು ಗ್ರಾಮ, ಕನಕಪುರ ತಾಲ್ಲೂಕು, ರಾಮನಗರ ಜಿಲ್ಲೆ.
3.	**ಉದ್ದೇಶಿತ ವಿಸ್ತರಣಾ ಯೋಜನೆಯ ವಿವರ:** ಸರ್ವೆ ನಂ 249/P2, P3, P4, P5, P6, 250/P1, 250/P2, 250/P3, ಅರಳಲು ಗ್ರಾಮ, ಕನಕಪುರ ತಾಲ್ಲೂಕು, ರಾಮನಗರ ಜಿಲ್ಲೆಯಲ್ಲಿ 40 TPD ಸಾಮರ್ಥ್ಯದ ಸಮಗ್ರ ಘನ ತ್ಯಾಜ್ಯ ಸಂಸ್ಕರಣ ಮತ್ತು ವಿಲೇವಾರಿಯ ಘಟಕವನ್ನು ಸ್ಥಾಪಿಸುವ ಯೋಜನೆ.
4.	**ಪರಿಸರ ಸಾರ್ವಜನಿಕ ಸಭೆಯ ದಿನಾಂಕ ಸಮಯ ಮತ್ತು ಸ್ಥಳ: ದಿನಾಂಕ: 10.11.2021 ಸಮಯ: ಬೆಳಗ್ಗೆ 11.00 ಗಂಟೆಗೆ - ಸರ್ವೆ ನಂ. 249/P2, P3, P4, P5, P6, 250/P1, 250/P2, 250/P3, ಅರಳಲು ಗ್ರಾಮ, ಕನಕಪುರ ತಾಲ್ಲೂಕು, ರಾಮನಗರ ಜಿಲ್ಲೆ (ಯೋಜನಾ ಪ್ರದೇಶ).**
5.	**ಪರಿಸರ ಸಾರ್ವಜನಿಕ ಕಾರ್ಯಕಾರಿ ಸಾರಾಂಶ ಸಾರ್ವಜನಿಕ ಪರಾಮರ್ಶೆಗೆ ಲಭ್ಯವಿರುವ ಸ್ಥಳ:** (ಅ) ಜಿಲ್ಲಾಧಿಕಾರಿಗಳ ಕಛೇರಿ, ರಾಮನಗರ ಜಿಲ್ಲೆ. (ಆ)ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳ ಕಛೇರಿ, ಜಿಲ್ಲಾಪಂಚಾಯತ್, ರಾಮನಗರ ಜಿಲ್ಲೆ, ರಾಮನಗರ. (ಇ) ಜಿಲ್ಲಾ ಕೈಗಾರಿಕಾ ಕೇಂದ್ರ, ರಾಮನಗರ (ಈ) ಅರಳಲು ಗ್ರಾಮ ಪಂಚಾಯತ್ ಕಾರ್ಯಾಲಯ, ಅರಳಲು ಗ್ರಾಮ. (ಉ) ಪ್ರಾದೇಶಿಕ ಕಛೇರಿ, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ, ರಾಮನಗರ. (ಊ) ಕೇಂದ್ರ ಅರಣ್ಯ, ಪರಿಸರ ಹಾಗೂ ಹವಾಗುಣ ಬದಲಾವಣೆ ಮಂತ್ರಾಲಯ, ದಕ್ಷಿಣ ವಲಯ ಕಛೇರಿ, ನಂ. ಇ-3/240, ಕೇಂದ್ರೀಯ ಸದನ, 4ನೇ ಮಹಡಿ, ಇ ಮತ್ತು ಎಫ್ ವಿಂಗ್ಸ್, 17ನೇ ಮುಖ್ಯ ರಸ್ತೆ, 2ನೇ ಬ್ಲಾಕ್, ಕೋರಮಂಗಲ, ಬೆಂಗಳೂರು-560034. (ಋ) **ಸಹಾಯ ಕೇಂದ್ರ,** ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ,ನೆಲ ಅಂತಸ್ತು, ನಂ.49, ಪರಿಸರ ಭವನ, ಚರ್ಚ್ ಸ್ಟ್ರೀಟ್, ಬೆಂಗಳೂರು-560001.

ಸೂಚನೆ: ಯೋಜನಾ ಸ್ಥಳದಲ್ಲಿ ವಾಸವಾಗಿರುವ ಆಸಕ್ತ ನಿವಾಸಿಗಳು, ಪರಿಸರಾಸಕ್ತ ಗುಂಪುಗಳು ಮತ್ತು ಈ ಯೋಜನೆಯಿಂದ ತೊಂದರೆಗೊಳಗಾಗಬಹುದಾದ ಸಾರ್ವಜನಿಕರು ತಮ್ಮ ಸಲಹೆಗಳು, ಅನಿಸಿಕೆಗಳು, ಟೀಕೆ-ಟಿಪ್ಪಣಿಗಳು ಹಾಗು ಅಹವಾಲುಗಳನ್ನು ಮೌಖಿಕ/ಲಿಖಿತ/ಇ-ಮೇಲ್ ಮೂಲಕ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ / ಅಧ್ಯಕ್ಷರು, ಪರಿಸರ ಸಾರ್ವಜನಿಕ ಸಮಿತಿ (ಜಿಲ್ಲಾಧಿಕಾರಿಗಳು, ರಾಮನಗರ ಜಿಲ್ಲೆ, ರಾಮನಗರ) ಇವರಿಗೆ ಈ ಅಧಿಸೂಚನೆ ಪ್ರಕಟವಾದ 30 ದಿನಗಳ ಒಳಗೆ ಸಲ್ಲಿಸತಕ್ಕದ್ದು. ಇಚ್ಛೆಯುಳ್ಳ ಸಾರ್ವಜನಿಕರು ಮೇಲೆ ತಿಳಿಸಿರುವ ದಿನದಂದು ಪರಿಸರ ಸಾರ್ವಜನಿಕ ಸಭೆಯಲ್ಲಿ ಪಾಲ್ಗೊಳ್ಳಬಹುದಾಗಿದೆ. **ಹೆಚ್ಚಿನ ವಿವರಗಳನ್ನು ಮಂಡಳಿಯ ವೆಬ್‌ಸೈಟ್ : kspcb.karnataka.gov.in.** ನಲ್ಲಿ ಪಡೆಯಬಹುದು.

ಸಹಿ/-
ಸದಸ್ಯ ಕಾರ್ಯದರ್ಶಿ

ಕೋವಿಡ್-19. ಆತಂಕ ಬೇಡ: ಮುನ್ನೆಚ್ಚರಿಕೆ ಇರಲಿ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

GOVERNMENT OF INDIA
PRINCIPAL CHIEF COMMISSIONER OF INCOME TAX
KARNATAKA & GOA REGION, BENGALURU
Central Revenue Building, No.1, Queen's Road, Bengaluru-560 001.

NOTICE FOR EMPANELMENT OF ADVOCATES

The Pr. Chief Commissioner of Income Tax, Karnataka & Goa, **proposes to engage the services of four Senior Standing Counsels and six Junior Standing Counsels to represent the Department before the Hon'ble High Court of Karnataka at Bangalore, Dharwad and Kalburgi Benches.**

The Advocates willing to be empanelled should send their application in the Prescribed Proforma A-1/A-2, which can be downloaded from www.incometaxbengaluru.in or can be collected from the address given below. The terms of engagement are governed by the Instruction No.7/2016 dated 07/09/2016 of the Central Board of Direct Taxes (CBDT).

The eligibility conditions for engagement as Standing Counsel is as per para 2 of Annexure-I to the said instruction

The requirement is as under:

(a) **For Bengaluru Bench -3 Seniors and 4 Juniors. In addition to this an extended panel of one Senior Standing Counsel and one Junior Standing Counsel will be formed. The counsels in the extended panel are not eligible for any compensation or remuneration or retainer-ship etc. The counsels in the extended panel would be proposed for regular empanelment if there is any exigency like resignation, termination etc.**
(b) **For Dharwad Bench: 1 Senior & 1 Junior Counsel**
(c) **For Kalburgi Bench-1 Junior Counsel**

It is preferable if the applicants are stationed at Bengaluru, Dharwad and Kalburgi for the respective Benches for the sake of mutual convenience.

The applicants may contact the following Officers for any clarification in this matter.

Sri. S. Nataraja Addl.Commissioner of Income Tax (Judicial) Room No.112, 1st Floor, C. R. Building, Bengaluru. Phone Nol. 080-22860788	**Smt. Bharathi Ramakrishnan** Income Tax Officer (HQ)(Judl.) Room No.120, 1st Floor, C. R. Building, Bengaluru Phone No. 080-22868904

The applications should reach the following address on or before 02.11.2021.

The applicants should furnish their email-ID, Phone/Mobile numbers for contact and further communication.

**The Commissioner of Income Tax (Judicial),
Central Revenue Building, 1st Floor,
Queens Road, Bengaluru-560001, Karnataka
Email: citjudicialblr@gmail.com**

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಕಾರ್ಯಪಾಲಕ ಅಭಿಯಂತರರ ಕಚೇರಿ, ಯೋಜನೆ ವಿಭಾಗ, ಪಶ್ಚಿಮ ವಲಯ
ಜಂಟಿ ಆಯುಕ್ತರು (ಪಶ್ಚಿಮ) ಕಚೇರಿ ಆವರಣ,
2ನೇ ಮಹಡಿ, ಸಂಪಿಗೆ ರಸ್ತೆ, ಶೇಷಾದ್ರಿಪುರಂ, ಬೆಂಗಳೂರು - 560 020.

ಸಂಖ್ಯೆ: ಕಾಪಾಅ/ಯೋ-ಪಶ್ಚಿಮ/ಟೆಂಡರ್/14/2021-22 ದಿನಾಂಕ: 08.10.2021

ಅಲ್ಪಾವಧಿ ಟೆಂಡರ್ ಆಹ್ವಾನ (ಐಎಫ್‌ಟಿ) (ದ್ವಿಲಕೋಟೆ ಪದ್ಧತಿ)
(ಕರ್ನಾಟಕ ಸರ್ಕಾರದ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಮಾತ್ರ)

ಕಾರ್ಯಪಾಲಕ ಅಭಿಯಂತರರು, ಯೋಜನೆ ವಿಭಾಗ, ಪಶ್ಚಿಮ ವಲಯ, ಬೃ.ಬೆಂ.ಮ.ಪಾಲಿಕೆ, ಬೆಂಗಳೂರು, ಇವರ ಪರವಾಗಿ ಈ ಕೆಳಕಂಡ ಕಾಮಗಾರಿಗೆ ಅರ್ಹ ಟೆಂಡರುದಾರರಿಂದ ಟೆಂಡರನ್ನು ಆಹ್ವಾನಿಸಿದ್ದಾರೆ. **ಸ್ಟ್ಯಾಂಡರ್ಡ್ ಬಿಡ್ ದಾಖಲೆಗಳು: ಕೆಡಬ್ಲ್ಯೂ- 4**

ಕಾಮಗಾರಿಯ ಹೆಸರು	ಅಂದಾಜು ಮೊತ್ತ (₹.ಲಕ್ಷಗಳಲ್ಲಿ)
ವಾರ್ಡ್ ಸಂಖ್ಯೆ-74 ಶಕ್ತಿಗಣಪತಿನಗರದಲ್ಲಿ ಹೆರಿಗೆ ಆಸ್ಪತ್ರೆಗೆ ಬಾಕಿ ಉಳಿಕೆ ಕಾಮಗಾರಿಗಳು ಮತ್ತು ಸುಧಾರಣೆಗಳನ್ನು ಮಾಡುವುದು.	**1000.00**

ಟಿಪ್ಪಣಿ:- ಈ ಕಾಮಗಾರಿಗೆ ಸಂಬಂಧಿಸಿದಂತೆ ಸರ್ಕಾರದ ಆದೇಶ ಸಂಖ್ಯೆ ಆಇ 675, ವೆಚ್ಚ-12/2020, ಬೆಂಗಳೂರು ಇದರಂತೆ ದಿನಾಂಕ 22-12-2020 ರಿಂದ 31-12-2021ರವರೆಗೆ ಇಎಂಡಿ ಪಾವತಿಗೆ ವಿನಾಯಿತಿ ನೀಡಲಾಗಿದೆ.

ಟೆಂಡರ್ ವೇಳಾಪಟ್ಟಿ: (1) ಟೆಂಡರ್ ದಾಖಲೆಗಳನ್ನು ಕರ್ನಾಟಕ ಸರ್ಕಾರದ ಇ-ಪ್ರೊಕ್ಯೂರ್-ಮೆಂಟ್‌ನಲ್ಲಿ ದಿನಾಂಕ: **13.10.2021** ರಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು. (2) ಆಕ್ಷೇಪಣೆಗಳಿಗೆ (ಇ-ಪೋರ್ಟಲ್ ಮೂಲಕ ಮಾತ್ರ) ಕೊನೆಯ ದಿನಾಂಕ ಮತ್ತು ಸಮಯ: **25.10.2021**ರ ಸಂಜೆ **4:00** ಗಂಟೆಯವರೆಗೆ. (3) ಬಿಡ್ ಪೂರ್ವಭಾವಿ ಸಭೆಯನ್ನು ದಿನಾಂಕ: **26.10.2021**ರ ಸಂಜೆ **4:00** ಗಂಟೆಗೆ ನಡೆಸಲಾಗುವುದು. (4) ಟೆಂಡರ್‌ಗಳನ್ನು ಪಡೆಯಲು ಕೊನೆಯ ದಿನಾಂಕ ಮತ್ತು ಸಮಯ: **09.11.2021**ರ ಸಂಜೆ **4:00** ಗಂಟೆಯವರೆಗೆ. (5) ಬಿಡ್‌ಗಳ ತೆರೆಯುವಿಕೆ (ತಾಂತ್ರಿಕ ಬಿಡ್) ದಿನಾಂಕ **11.11.2021**ರ ಬೆಳಿಗ್ಗೆ **11:30** ಗಂಟೆಗೆ. (6) ಬಿಡ್‌ಗಳ ತೆರೆಯುವಿಕೆ (ಆರ್ಥಿಕ ಬಿಡ್) ದಿನಾಂಕ **15.11.2021** ಸಾಧ್ಯವಾದಲ್ಲಿ. ಹೆಚ್ಚಿನ ವಿವರಗಳನ್ನು ಮೇಲ್ಕಂಡ ಕಚೇರಿಯಿಂದ ಕೆಲಸದ ವೇಳೆಯಲ್ಲಿ ಅಥವಾ ವೆಬ್‌ಸೈಟ್ **https://eproc.karnataka.gov.in** ನಲ್ಲಿ ಪಡೆದುಕೊಳ್ಳಬಹುದಾಗಿದೆ.

**ಸಹಿ/- ಕಾರ್ಯಪಾಲಕ ಅಭಿಯಂತರರು -
ಯೋಜನೆ ವಿಭಾಗ, ಪಶ್ಚಿಮ ವಲಯ**

ಕೋವಿಡ್-19 - ಗಾಳಿಸುದ್ದಿ ಹರಡಬೇಡಿ, ಜವಾಬ್ದಾರಿಯಿಂದ ವರ್ತಿಸಿ, ಸೋಂಕನ್ನು ದೂರವಿಡಿ-ಸೋಂಕಿತರನ್ನಲ್ಲ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಕರ್ನಾಟಕ ಸರ್ಕಾರ
ಪುರಸಭೆ ಕಾರ್ಯಾಲಯ, ಹೊನ್ನಾಳಿ.
ದಾವಣಗೆರೆ ಜಿಲ್ಲೆ - 577 217
ಕ್ರಮಾಂಕ: ಹೊ.ಪು/ಜೆಇ/ಸಿಆರ್/02/2021-22 ದಿನಾಂಕ: 07.10.2021

ಇ-ಪ್ರಕ್ಯೂಮೆಂಟ್ ಅಲ್ಪಾವಧಿ ಟೆಂಡರ್ ಪ್ರಕಟಣೆ

ಪುರಸಭೆ ಹೊನ್ನಾಳಿಯ ಘನತ್ಯಾಜ್ಯ ವಸ್ತು ನಿರ್ವಹಣೆಯ ವಿಸ್ತೃತ ಯೋಜನಾ ವರದಿಯಲ್ಲಿನ ಕಾಮಗಾರಿ ಹಾಗೂ 2016-17ನೇ ಸಾಲಿನ ಎಸ್.ಸಿ.ಪಿ ಮತ್ತು ಟಿ.ಎಸ್.ಪಿ ಅನುದಾನ (ಉಳಿಕೆ ಮೊತ್ತದ) ಕಾಮಗಾರಿಗಳನ್ನು ಅನುಷ್ಠಾನಗೊಳಿಸಲು ಅರ್ಹ ನೊಂದಾಯಿತ ಗುತ್ತಿಗೆದಾರರಿಂದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ 1999 ಮತ್ತು ನಿಗಮಗಳು 2000 ರಂತೆ ಈ ಕೆಳಗಿನಂತೆ ಕಾಮಗಾರಿಗಳ (KW-1), (KW-3) ಮತ್ತು (KW-4) ನಿಯಮವಳಿಗಳಂತೆ ಇ-ಪ್ರಕ್ಯೂರ್‌ಮೆಂಟ್ ಮೂಲಕ ಅಲ್ಪಾವಧಿ ಟೆಂಡರ್ ಕರೆಯಲಾಗಿದ್ದು, ಗುತ್ತಿಗೆದಾರರು ಇ-ಪ್ರಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಟೆಂಡರ್ ಸಲ್ಲಿಸಬಹುದಾಗಿರುತ್ತದೆ. ಹೆಚ್ಚಿನ ಮಾಹಿತಿಗಾಗಿ ವೆಬ್‌ಸೈಟ್ www.eproc.karnataka.gov.in ನಲ್ಲಿ ಹಾಗೂ ಕಛೇರಿಯ ವೇಳೆಯಲ್ಲಿ ಸಂಬಂಧಪಟ್ಟ ಅಧಿಕಾರಿಗಳನ್ನು ಸಂಪರ್ಕಿಸಿ ಮಾಹಿತಿ ಪಡೆಯಬಹುದು.

ಕ್ರ.ಸಂ.	ಕಾಮಗಾರಿಯ ಹೆಸರು
1	DMA/2020-21/OW/WORK_INDENT 104620/call-2
2	DMA/2020-21/OW/WORK_INDENT 110032
3	DMA/2020-21/OW/WORK_INDENT 110028
1	DMA/2020-21/OW/WORK_INDENT 112274
2	DMA/2020-21/OW/WORK_INDENT 112275

ಸಹಿ/- ಅಧ್ಯಕ್ಷರು,
ಪುರಸಭೆ, ಹೊನ್ನಾಳಿ.

ಸಹಿ/- ಮುಖ್ಯಾಧಿಕಾರಿ,
ಪುರಸಭೆ, ಹೊನ್ನಾಳಿ.

ಪ್ರಜಾವಾಣಿ ಶನಿವಾರ, 9 ಅಕ್ಟೋಬರ್ 2021
ಭೂಮಿಕಾ
ಮಹಿಳೆಯ ಆಪ್ತ ಸಂಗಾತಿ

ಸಹಜತೆಗೆ ಒಗ್ಗದ ಮಕ್ಕಳ ಮನಸ್ಸು

ಸುಕೃತ ಎಸ್.

'ಪುಟ್ಟಿ... ನೋಡು ನಿನ್ನ ಫ್ರೆಂಡ್ ಶ್ರೇಯಾ ಹೊರಗೆ ಆಟ ಆಡ್ತಾ ಇದಾಳೆ. ನೀನೂ, ಹೋಗು ಸ್ವಲ್ಪ ಹೊತ್ತು ಆಟ ಆಡಿಕೊಂಡು ಬಾ. ಮಾಸ್ಕ್‌ನ ಮರೀದೆ ಹಾಕಿಕೊಂಡು ಹೋಗು' ಎಂದಳು ಅಮ್ಮ. ಮಗಳ ಸಂತೋಷಕ್ಕೆ ಪಾರವೇ ಇಲ್ಲ. ಮೊಬೈಲ್ ಹಿಡಿದು ಕೂತಿದ್ದ ಎಂಟು ವರ್ಷದ ನವ್ಯಾ ಮಾಸ್ಕ್ ಧರಿಸಿ ಮನೆಯಿಂದ ಹೊರಬಿದ್ದಳು. ಹೋಗಿ 10 ನಿಮಿಷ ಕೂಡ ಆಗಿರಲಿಲ್ಲ, ನವ್ಯಾ ವಾಪಸಾದಳು. ಅಲ್ಲೇ ಲಿವಿಂಗ್ ರೂಮ್‌ನಲ್ಲಿ ಕೆಲಸ ಮಾಡುತ್ತಿದ್ದ ಅಪ್ಪ ಯಾಕೆಂದು ವಿಚಾರಿಸಿದರೆ 'ಇಲ್ಲಪ್ಪಾ, ಕೆಳಗಡೆ ತುಂಬಾ ಜನ ಇದ್ದರು. ಅದಕ್ಕೆ ವಾಪಸು ಬಂದೆ' ಎಂದಳು ನವ್ಯಾ.

ಈ ರೀತಿ ಆಗುತ್ತಿರುವುದು ಇದೇ ಮೊದಲಲ್ಲ. ಬೆಂಗಳೂರಿನ ಖಾಸಗಿ ಕಂಪನಿಯಲ್ಲಿ ಕೆಲಸ ಮಾಡುವ ಆರತಿ ಮತ್ತು ಹರ್ಷ ದಂಪತಿ ಪುಟ್ಟ ನವ್ಯಾಳನ್ನು ಜನರೊಂದಿಗೆ, ಆಕೆಯ ಸ್ನೇಹಿತರೊಂದಿಗೆ ಬೆರೆಯುವಂತೆ ಮಾಡಲು ಈ ಹಿಂದೆಯೂ ಬಹಳ ಪ್ರಯತ್ನ ಮಾಡಿದ್ದರು.

> ಕೋವಿಡ್‌ನಿಂದಾಗಿ ಕಳೆದ ಒಂದೂವರೆ ವರ್ಷದಿಂದ ಮನೆಯೊಳಗೇ ಇದ್ದ ಪುಟ್ಟ ಮಕ್ಕಳು ಈಗ ಸಾಮಾಜಿಕವಾಗಿ ಬೆರೆಯಲು ಹಿಂಜರಿಯುತ್ತಿದ್ದಾರೆ. ಕೋವಿಡ್ ಕುರಿತ ಮುಂಜಾಗ್ರತೆಯೊಂದಿಗೆ, ಅವರಲ್ಲಿ ಹೆದರಿಕೆ ನೀಗಿಸುವುದು ಹೇಗೆ?

'ಕೋವಿಡ್ ಶುರುವಾದಾಗಿನಿಂದ ಹೆಚ್ಚು ಜನರನ್ನು ಕಂಡರೆ ನವ್ಯಾ ಭಯ ಬೀಳುತ್ತಾಳೆ. ಮೂರೂ ಹೊತ್ತು ಮೊಬೈಲ್‌ನಲ್ಲೇ ಮುಳುಗಿರುತ್ತಾಳೆ. ಈ ಅಭ್ಯಾಸವನ್ನು ತಪ್ಪಿಸಲು ಎಷ್ಟು ಪ್ರಯತ್ನಪಟ್ಟರೂ ಸಾಧ್ಯವಾಗಿಲ್ಲ. ಒಂಟಿಯಾಗಿರಲು ಇಷ್ಟಪಡುತ್ತಾಳೆ. ಜನರೊಂದಿಗೆ ಬೆರೆಯಲು ಇಷ್ಟಪಡುತ್ತಿಲ್ಲ' ಎಂದು ಬೇಸರಿಸುತ್ತಾರೆ ಆರತಿ.

ಇದು ಕೇವಲ ನವ್ಯಾಳ ಸಮಸ್ಯೆ ಅಲ್ಲ; ಬಹುತೇಕ ಮಕ್ಕಳನ್ನು ಈ ಒಂಟಿತನವೆಂಬುದು ಹೈರಾಣಾಗಿಸಿದೆ. ಶಾಲೆ, ಸ್ನೇಹಿತರು, ಆಟ, ಮತ್ತೆ ಮನೆಗೆ ಬಂದ ಮೇಲೆ ಹೋಂವರ್ಕ್ ಮುಗಿಸಿ ಅಕ್ಕಪಕ್ಕದ ಮನೆಯ ಮಕ್ಕಳೊಂದಿಗೆ ಆಟವಾಡಿಕೊಂಡು ಸದಾ ಚಟುವಟಿಕೆಯಿಂದ ಕೂಡಿದ್ದ ಮಕ್ಕಳು ಕೋವಿಡ್ ಕಾರಣದಿಂದ ಮನೆಯಲ್ಲಿಯೇ ಉಳಿಯಬೇಕಾಯಿತು. ಕಳೆದ ಒಂದೂವರೆ ವರ್ಷದಿಂದ ಮನೆಯಲ್ಲಿಯೇ ಬಂದಿಯಾಗಿರುವ ಮಕ್ಕಳು ಸಹಜತೆಗೆ ಹೊಂದಿಕೊಳ್ಳಲು ಹೆಣಗಾಡುವುದು ಸಾಮಾನ್ಯ. ಈಗ ಎಲ್ಲವೂ ಹಿಂದಿನ ಸಾಮಾನ್ಯ ಪರಿಸ್ಥಿತಿ ನಿಧಾನವಾಗಿ ಮರಳುತ್ತಿದೆ. ಆದರೆ, ಮಕ್ಕಳು ಮಾತ್ರ ಜನರೊಂದಿಗೆ ಬೆರೆಯಲು ಹೆದರುತ್ತಿದ್ದಾರೆ.

ಟಿ.ವಿಯಲ್ಲಿ ಪದೇ ಪದೇ ನೋಡಿದ, ಕೇಳಿದ ಸಾವಿನ ಸುದ್ದಿ. ಹೊರಗೆ ಅಡಿ ಇಟ್ಟರೆ ಸಾಕು ಸಾವು ಬಂದುಬಿಡುತ್ತದೆ ಎಂದು ಸತತವಾಗಿ ತೋರಿಸಿದ ರೀತಿ ಹೆಚ್ಚಿನ ಸಂಖ್ಯೆಯ ಮಕ್ಕಳ ಮೇಲೆ ಗಂಭೀರ ಪರಿಣಾಮ ಬೀರಿದೆ. ಇದರ ಜೊತೆಗೆ, ಮುಂಜಾಗ್ರತೆಗಾಗಿ ಪೋಷಕರೇ ಮಕ್ಕಳನ್ನು ತುಸು ಮಟ್ಟಿಗೆ ಹೆದರಿಸಿದ್ದಾರೆ. ಇನ್ನು ಕೋವಿಡ್ ಕಾರಣದಿಂದ ಅಪ್ಪ ಅಥವಾ ಅಮ್ಮನನ್ನು ಕಳೆದುಕೊಂಡ ಮಕ್ಕಳು, ಲಾಕ್‌ಡೌನ್ ಕಾರಣ ಕೆಲಸ ಕಳೆದುಕೊಂಡು, ಒದ್ದಾಡುತ್ತಿರುವ ಪೋಷಕರು– ಹೀಗೆ ನಾನಾ ಕಾರಣಗಳಿಂದ ಮಕ್ಕಳು ಭಯಬೀತರಾಗಿದ್ದಾರೆ. ಈ ಎಲ್ಲಾ ಆಘಾತಗಳಿಂದ ಹೊರಬರಲು ಅವರಿಗೆ ಸಾಧ್ಯವಾಗುತ್ತಿಲ್ಲ; ಸಹಜ ಸ್ಥಿತಿಗೆ ಒಗ್ಗಿಕೊಳ್ಳಲು ತೊಡಕಾಗಿದೆ.

ಮಕ್ಕಳ ಈ ಭಯವನ್ನು ಹೋಗಲಾಡಿಸುವುದು ಹೇಗೆ?

ಮಕ್ಕಳಲ್ಲಿ ಹುದುಗಿರುವ ಭಯವನ್ನು ಹೋಗಲಾಡಿಸುವುದು ಸ್ವಲ್ಪ ಕಷ್ಟವಾದರೂ ಅಸಾಧ್ಯವೇನಲ್ಲ. ಮಕ್ಕಳ ಮೇಲೆ ಪೋಷಕರು ಹೆಚ್ಚಿನ ಗಮನ ಇಡಬೇಕಾಗಿದೆ. ಕೋವಿಡ್ ಕುರಿತ ಮುನ್ನೆಚ್ಚರಿಕೆಯೊಂದಿಗೆಯೇ ಮಕ್ಕಳನ್ನು ಮತ್ತೆ ಜನರೊಂದಿಗೆ ಬೆರೆಯುವಂತೆ ತಯಾರು ಮಾಡಬೇಕಿದೆ.

> ಮನೆಯಲ್ಲಿ ತಂದೆ–ತಾಯಿಯರೊಂದಿಗೆ ಮಾತ್ರ ಇದ್ದ ಮಕ್ಕಳು ಈಗ ಮತ್ತೆ ಹೊರ ಪ್ರಪಂಚಕ್ಕೆ ತೆರೆದುಕೊಳ್ಳುತ್ತಿದ್ದಾರೆ. ಆದ್ದರಿಂದ, ಮಕ್ಕಳು ಮತ್ತೆ ಜನರೊಂದಿಗೆ ಬೆರೆಯುವಂತೆ ಮಾಡಲು, ಅವರ ಒಂಟಿತನವನ್ನು ದೂರ ಮಾಡಲು ಬೇರೆ ರೀತಿಯ ಪಠ್ಯವನ್ನು, ಚಟುವಟಿಕೆಯನ್ನು ವಿದೇಶಗಳಲ್ಲಿ ರೂಪಿಸಿದ್ದಾರೆ. ಶಾಲೆ ಪ್ರಾರಂಭವಾದ ಮೂರು ತಿಂಗಳುಗಳು ಕೇವಲ ಇದೇ ಚಟುವಟಿಕೆಯನ್ನು ಮಕ್ಕಳಿಂದ ಮಾಡಿಸಲಿದ್ದಾರೆ. ನಮ್ಮಲ್ಲೂ ಈ ರೀತಿಯ ಚಿಂತನೆ ನಡೆಸುವ ಅಗತ್ಯ ಇದೆ.
>
> **ಕವಿತಾರತ್ನ,**
> 'ದಿ–ಕನ್ಸರ್ನ್ಡ್ ಫಾರ್ ವರ್ಕಿಂಗ್ ಚಿಲ್ಡ್ರನ್'ನ ನಿರ್ದೇಶಕಿ

- ಮಕ್ಕಳು ನಿಮ್ಮೊಂದಿಗೆ ಅಂಟಿಕೊಂಡೇ ಇರುತ್ತಾರಾ, ಹೊರಗೆ ಹೋಗಲು ಭಯ ಪಡುತ್ತಾರಾ ಎನ್ನುವುದನ್ನು ಗಮನಿಸಿ. ಹಾಗಿದ್ದರೆ, ಮಕ್ಕಳೊಂದಿಗೆ ಹೆಚ್ಚು ಸಮಯ ಕಳೆಯಿರಿ. ಆ ಘಳಿಗೆಗಳು ಆದಷ್ಟು ಆತ್ಮೀಯವಾಗಿರಲಿ. ಅವರಿಗೆ ಏನು ಅನಿಸುತ್ತಿದೆ ಕೇಳಿ, ಅವರ ಮಾತುಗಳಿಗೆ ಕಿವಿಯಾಗಿ.
- ಸ್ನೇಹಿತರೊಂದಿಗೆ, ಕುಟುಂಬ ಸದಸ್ಯರೊಂದಿಗೆ ಮಕ್ಕಳು ಹೆಚ್ಚು ಸಮಯ ಕಳೆಯುವಂತೆ ಮಾಡಬೇಕು. ಅದು ವರ್ಚುವಲ್ ಭೇಟಿ ಆಗಿದ್ದರೂ ಸರಿ.
- ಮನೆಯ ಕಷ್ಟಗಳನ್ನು ಮಕ್ಕಳಿಂದ ಮುಚ್ಚಿಡಬೇಡಿ. ಏನೂ ಆಗಿಲ್ಲ, ಎಲ್ಲವೂ ಚೆನ್ನಾಗಿಯೇ ಇದೆ ಎನ್ನುವ ಸುಳ್ಳು ಭರವಸೆಗಳನ್ನು ನೀಡಬೇಡಿ. ಅವರಿಗೆ ಅರ್ಥವಾಗುವ ರೀತಿಯಲ್ಲಿ ಎಲ್ಲವನ್ನೂ ಅವರೊಂದಿಗೆ ಹಂಚಿಕೊಳ್ಳಿ. ಅವರಿಗೆ ಮಾತ್ರ ಕಷ್ಟ ಇದೆ ಎಂದೆಲ್ಲಾ ಮಕ್ಕಳು ಅಂದುಕೊಂಡಿರುವ ಸಂಭವ ಇದೆ. ನಿಮ್ಮ ಕಷ್ಟಗಳನ್ನು ಹೇಳುವ ಮೂಲಕ ತನಗೊಂದೇ ಸಮಸ್ಯೆ ಅಲ್ಲ ಎನ್ನುವ ಸತ್ಯ ಅವರಿಗೆ ಅರಿವಾಗಲಿ.
- ಭಯ ಪಡುತ್ತಾರೆ ಎನ್ನುವ ಕಾರಣಕ್ಕೆ ಅವರನ್ನು ಹೊರಗೆ ಕರೆದುಕೊಂಡು ಹೋಗದೇ ಇರುವುದು ಸರಿಯಾದ ಮಾರ್ಗವಲ್ಲ. ಅವರು ನಿಧಾನವಾಗಿ ಹೊಂದಿಕೊಳ್ಳುತ್ತಾರೆ. ಆದ್ದರಿಂದ ಪಾರ್ಕ್ ಅಥವಾ ಅಜ್ಜಿಮನೆ ಹೀಗೆ ಎಲ್ಲ ಕಡೆಗಳಿಗೂ ಕರೆದುಕೊಂಡು ಹೋಗಿ.
- ಮನೆ ಕೆಲಸ ಮಾಡುವಾಗ, ಹೂದೋಟದ ಕೆಲಸ ಮಾಡುವಾಗ, ಅಡುಗೆ ಮನೆಯಲ್ಲಿ ಇರುವಾಗ.. ಹೀಗೆ ಪ್ರತಿಯೊಂದು ಕೆಲಸದಲ್ಲೂ ಮಕ್ಕಳು ಪಾಲ್ಗೊಳ್ಳುವಂತೆ ಮಾಡಿ. ಮೊಬೈಲ್ ಅನ್ನು ಅವರ ಕೈಗೆ ಕೊಟ್ಟು ನಿಮ್ಮ ಕೆಲಸದಲ್ಲಿ ಬ್ಯುಸಿ ಆಗದೇ, ಆದಷ್ಟು ಅವರನ್ನು ಚಟುವಟಿಕೆಯಿಂದ ಇರುವಂತೆ ಮಾಡಿ.

ದಸರಾಗೆ ಘಾಗ್ರಾ, ಓಡ್ನಿ

ರೇಷ್ಮಾ

ಹಬ್ಬ-ಹರಿದಿನಗಳು, ಮದುವೆ ಮುಂಜಿಯಂತಹ ಕಾರ್ಯಕ್ರಮಗಳಲ್ಲಿ ಭಾರತೀಯ ಹೆಣ್ಣುಮಕ್ಕಳು ತಯಾರಾಗುವುದನ್ನು ನೋಡುವುದೇ ಅಂದ. ಭಾರತೀಯ ಸಂಪ್ರದಾಯಿಕ ಶೈಲಿಯ ಉಡುಪುಗಳನ್ನು ಧರಿಸುವ ಮೂಲಕ ಸಾಂಪ್ರದಾಯಿಕ ನೆಲೆಗಟ್ಟಿಗೆ ಒತ್ತು ನೀಡುವ ಜೊತೆಗೆ ಸೌಂದರ್ಯ ಹೆಚ್ಚಿಸಿಕೊಳ್ಳುವತ್ತಲೂ ಗಮನ ಹರಿಸುತ್ತಾರೆ. ಹಬ್ಬದ ದಿನಗಳಲ್ಲಿ ಇತ್ತೀಚೆಗೆ ಹೆಣ್ಣುಮಕ್ಕಳು ಹೆಚ್ಚಾಗಿ ಘಾಗ್ರಾ ಧರಿಸಲು ಇಷ್ಟಪಡುತ್ತಾರೆ. ಘಾಗ್ರಾ ಸೆಟ್ ಧರಿಸುವುದರಿಂದ ಅಂದ ಹೆಚ್ಚುವುದರಲ್ಲಿ ಸಂಶಯವಿಲ್ಲ. ಇದು ದಪ್ಪಗೆ, ತೆಳ್ಳಗೆ ಹೀಗೆ ಪ್ರತಿಯೊಬ್ಬರಿಗೂ ಹೊಂದುತ್ತದೆ. ದಸರಾ ಶುರುವಾಗಿದೆ, ದೀಪಾವಳಿ ಹಬ್ಬ ಸಮೀಪಿಸುತ್ತಿದೆ. ಇದನ್ನು ಧರಿಸಿದರೆ ಸಂಪ್ರದಾಯಕ್ಕೂ ಒತ್ತು ಕೊಡಬಹುದು. ಇದನ್ನು ಧರಿಸಿದಾಗ ಇದರೊಂದಿಗೆ ಹೊಂದುವಂತಹ ಓಡ್ನಿ, ಬಳೆ, ಚಪ್ಪಲಿ, ಆಭರಣಗಳನ್ನು ಧರಿಸಿದರೆ ಪರಿಪೂರ್ಣವಾಗಿ ತಯಾರಾಗಬಹುದು.

ಓಡ್ನಿ

ಘಾಗ್ರಾ ಅಂದಾಕ್ಷಣ ನೆನಪಾಗುವುದು ದುಪಟ್ಟಾ ಅಥವಾ ಓಡ್ನಿ. ಹಿಂದೆಲ್ಲಾ ಘಾಗ್ರಾದೊಂದಿಗೆ ಓಡ್ನಿ ಸಿಗುತ್ತಿತ್ತು. ಈಗ ಓಡ್ನಿಯನ್ನು ಬೇರೆಯಾಗಿಯೇ ಖರೀದಿಸಬಹುದು. ಘಾಗ್ರಾ ಸೆಟ್‌ನೊಂದಿಗೆ ಬೇರೆಯದ್ದೇ ಬಣ್ಣದ ಓಡ್ನಿಯನ್ನು ಮ್ಯಾಚಿಂಗ್ ಮಾಡಿಕೊಳ್ಳಬಹುದು. ಸರಳ ಡಿಸೈನ್ ಇರುವ ಘಾಗ್ರಾ ಸೆಟ್‌ನೊಂದಿಗೆ ಗ್ರ್ಯಾಂಡ್ ಡಿಸೈನ್‌ನ ಓಡ್ನಿ ಧರಿಸಬಹುದು. ಇದು ಸಿಲ್ಕ್, ಕಾಟನ್, ಸಿಂಥೆಟಿಕ್‌ನಲ್ಲೂ ಲಭ್ಯವಿದೆ. ಸರಳ ಡ್ರೆಸ್‌ನೊಂದಿಗೆ ಐಷಾರಾಮಿ ದುಪಟ್ಟಾ ಧರಿಸುವುದರಿಂದ ಸುಂದರವಾಗಿ ಕಾಣಬಹುದು.

ನೂಲಿನ ಬಳೆ

ಘಾಗ್ರಾದೊಂದಿಗೆ ಕೈ ತುಂಬಾ ಬಳೆ ಧರಿಸಬೇಕು. ಅದೇ ಬಣ್ಣದ್ದೇ ಬಳೆಯನ್ನು ಕೈ ಪೂರ್ತಿ ಧರಿಸುವುದರಿಂದ ಅಂದವನ್ನು ಹೆಚ್ಚಿಸಿಕೊಳ್ಳಬಹುದು. ಇದರೊಂದಿಗೆ ನೂಲಿನ ಬಳೆ ಹೆಚ್ಚು ಹೊಂದುತ್ತದೆ. ಬಳೆಗೆ ಸಂಪೂರ್ಣವಾಗಿ ನೂಲು ಸುತ್ತಿದ್ದು ಅದರ ಮೇಲೆ ಕುಂದನ್ ಹರಳನ್ನು ಕೂರಿಸಿರುತ್ತಾರೆ. ಹರಳಿನಲ್ಲಿ ವಿವಿಧ ಚಿತ್ತಾರವನ್ನು ಮೂಡಿಸಿದ್ದು ಇದು ನೋಟವನ್ನೇ ಬದಲಿಸುವಂತೆ ಮಾಡುವುದಲ್ಲದೇ ಕೈಯ ಅಂದವನ್ನೂ ಹೆಚ್ಚಿಸುತ್ತದೆ.

ಜೈಪುರ ಝುಟ್ಟಿ

ಇದಕ್ಕೆ ರಾಜಸ್ತಾನಿ ಅಥವಾ ಕೊಲ್ಲಾಪುರಿ ಚಪ್ಪಲಿ ಹೆಚ್ಚು ಹೊಂದುತ್ತದೆ. ಘಾಗ್ರಾ ಬಣ್ಣದ್ದೇ ಚಪ್ಪಲಿ ಧರಿಸಬಹುದು. ಇದರಲ್ಲೂ ಹರಳು ಹಾಗೂ ಕನ್ನಡಿಗಳನ್ನು ಜೋಡಿಸಿರುವ ಕಸೂತಿ ಚಪ್ಪಲಿ ಹೊಂದುತ್ತವೆ. ಹಾಗೆಯೇ ಜೈಪುರ ಝುಟ್ಟಿ–ಮೊಜಾರಿ ಚಪ್ಪಲಿಯನ್ನು ಕೂಡ ಮ್ಯಾಚಿಂಗ್ ಮಾಡಿಕೊಳ್ಳಬಹುದು. ಇದರೊಂದಿಗೆ ಬಣ್ಣದ ಅರೇಬಿಯನ್ ಚಪ್ಪಲಿಯನ್ನೂ ಧರಿಸಬಹುದು.

ಆಭರಣಗಳು

ಘಾಗ್ರಾ ಬಣ್ಣದ ಮ್ಯಾಚಿಂಗ್ ಆಭರಣಗಳನ್ನು ಧರಿಸಬಹುದು. ಇದರಿಂದ ನಿಮ್ಮ ನೋಟವೇ ಬದಲಾಗುತ್ತದೆ. ಜೊತೆಗೆ ಹರಳಿನ ನೆಕ್ಲೇಸ್ ನಿಮ್ಮ ಕೊರಳನ್ನು ಅಲಂಕರಿಸುವುದರಿಂದ ಸೌಂದರ್ಯಕ್ಕೆ ಇನ್ನಷ್ಟು ಒತ್ತು ಸಿಕ್ಕಂತಾಗುತ್ತದೆ. ಇದರೊಂದಿಗೆ ಝುಮ್ಕಾ, ಬಾಂಧನಿ ಕಿವಿಯೋಲೆಗಳನ್ನೂ ಧರಿಸಬಹುದು. ಈ ಕಿವಿಯೋಲೆಗಳು ಸೌಂದರ್ಯ ಹೆಚ್ಚಿಸುವುದರಲ್ಲಿ ಸಂಶಯವಿಲ್ಲ.

ಬ್ಯಾಗ್

ಈ ಉಡುಪಿಗೆ ಕ್ಲಚ್ ಅಥವಾ ನೆಯ್ಗೆಯ ಬ್ಯಾಗ್‌ಗಳು ಹೆಚ್ಚು ಸೂಕ್ತ ಎನ್ನಿಸುತ್ತವೆ. ಕೈಯಲ್ಲಿ ಹಿಡಿಯುವ ಅಥವಾ ಬಗಲಿಗೆ ನೇತು ಹಾಕಿಕೊಳ್ಳುವ ಬ್ಯಾಗ್‌ಗಳು ಸೂಕ್ತ.

ಬೈತಲೆ ಬೊಟ್ಟು

ಬೈತಲೆ ಬೊಟ್ಟು ಧರಿಸುವುದರಿಂದ ಅಂದವನ್ನು ಹೆಚ್ಚಿಸಿಕೊಳ್ಳಬಹುದು. ಅದರಲ್ಲೂ ಬರೀ ಚಿನ್ನದ ಬೈತಲೆ ಬೊಟ್ಟು ಧರಿಸುವುದಕ್ಕಿಂತ ಹರಳಿನ ಅಥವಾ ವಿವಿಧ ಚಿತ್ತಾರವಿರುವ ಬೊಟ್ಟನ್ನು ಧರಿಸಬಹುದು.

ನಂಬಿಕೆ ದಾಂಪತ್ಯದ ಅಡಿಗಲ್ಲು

ಏನಾದ್ರೂ ಕೇಳ್ಬೋದು

ನಡಹಳ್ಳಿ ವಸಂತ್

- **26 ವರ್ಷದ ಪೊಲೀಸ್ ಅಧಿಕಾರಿ. 4 ವರ್ಷದ ಮಗಳಿರುವ 28 ವರ್ಷ ವಯಸ್ಸಿನ ವಿಚ್ಛೇದಿತೆಯನ್ನು ತುಂಬಾ ಪ್ರೀತಿಸುತ್ತಿದ್ದೇನೆ. ನನ್ನನ್ನು ತುಂಬಾ ಕಾಳಜಿ ಮಾಡುತ್ತಾಳೆ. ವಿಚ್ಛೇದನಕ್ಕೆ ಕಾರಣ ಕೇಳಿದಾಗ ತನ್ನದೇನೂ ತಪ್ಪಿರಲಿಲ್ಲ ಎನ್ನುತ್ತಾಳೆ. ಸ್ತ್ರೀ ಮತ್ತು ಪುರುಷ ಸ್ನೇಹಿತರೊಡನೆ ಫೋನ್‌ನಲ್ಲಿ ತುಂಬಾ ಮಾತನಾಡುತ್ತಿರುತ್ತಾಳೆ. ಹೀಗಾಗಿ ಅನುಮಾನ ಕಾಡುತ್ತಿದೆ. ಪರಿಹಾರವೇನು?**

ಹೆಸರು, ಊರು ತಿಳಿಸಿಲ್ಲ.

ನಂಬಿಕೆ ಆತ್ಮೀಯ ಸಂಬಂಧಗಳ ಅಡಿಗಲ್ಲು. ನಂಬಿಕೆಯಿಲ್ಲದಿರುವಲ್ಲಿ ಪ್ರೀತಿಯಿರುವುದು ಸಾಧ್ಯವಿಲ್ಲದಿದ್ದರೂ ಆಕರ್ಷಣೆ ಇರುವುದು ಸಾಧ್ಯ. ಈಗ ಯೋಚಿಸಿ ನಿಮಗಿರುವುದು ಪ್ರೀತಿಯೋ? ಆಕರ್ಷಣೆಯೋ? ಈ ಆಕರ್ಷಣೆಯನ್ನು ಪ್ರೀತಿಗೆ ಬದಲಾಯಿಸಲು ಇಬ್ಬರೂ ಮುಕ್ತವಾಗಿ ಚರ್ಚೆಮಾಡುವ ಅಗತ್ಯವಿರುತ್ತದೆ. ನಿಮ್ಮ ಅನುಮಾನಗಳು ಮತ್ತು ಅದರಿಂದ ನಿಮಗೆ ನಿರ್ಧಾರ ತೆಗೆದುಕೊಳ್ಳಲು ಆಗುತ್ತಿರುವ ಕಷ್ಟಗಳನ್ನು ಅವರಿಗೆ ವಿವರಿಸಿ. ದೂಷಣೆ, ಆರೋಪ, ವಾಗ್ವಾದಗಳಿಗೆ ಅವಕಾಶ ಕೊಡಬೇಡಿ. ಸಂಪೂರ್ಣ ನಂಬಿಕೆಯುಂಟಾದರೆ ಮಾತ್ರ ಮುಂದುವರೆಯಿರಿ. ಅನುಮಾನಗಳಿಂದ ಪ್ರಾರಂಭವಾಗುವ ಸಂಬಂಧಗಳಲ್ಲಿ ಅನ್ಯೋನ್ಯತೆ ಕಷ್ಟಸಾಧ್ಯ.

- **28 ವರ್ಷದ ಮಹಿಳೆ. 2017ರಲ್ಲಿ ಮದುವೆಯಾಗಿದೆ. ಅತ್ತೆ ಮಾವ ನನ್ನ ಬಗೆಗೆ ಸಂಬಂಧಿಕರಲ್ಲಿ ದೂರುತ್ತಿರುತ್ತಾರೆ. ಪತಿ ಒಬ್ಬರೇ ಇದ್ದಾಗ ನನ್ನ ಜೊತೆ ಚೆನ್ನಾಗಿದ್ದರೂ ಹೊರಗಡೆ ಪೋಷಕರನ್ನೇ ಬೆಂಬಲಿಸುತ್ತಾರೆ. ಅವರಿಗೆ ಮಗು ಬೇಡವಾಗಿದೆ. ಮಾನಸಿಕ ನೋವು ಮತ್ತು ಒತ್ತಡದಿಂದ ಬಳಲುತ್ತಿದ್ದೇನೆ. ಪತಿಯ ಜೊತೆಗೆ ಜೀವನ ಮುಂದುವರೆಸಲೇ? ಪರಿಹಾರವೇನು?**

ಹೆಸರು, ಊರು ತಿಳಿಸಿಲ್ಲ.

ಪತಿ ನಿಮ್ಮ ಬೆಂಬಲಕ್ಕೆ ಬರಬೇಕೆಂದು ನಿರೀಕ್ಷಿಸುವುದು ಸಹಜವಾದರೂ ಅದು ಸಾಧ್ಯವಾಗದಿದ್ದಾಗ ನಿಮ್ಮ ಹತಾಶೆ ಹೆಚ್ಚುತ್ತದೆ. ನೀವೇಕೆ ಅತ್ತೆ–ಮಾವಂದಿರ ಅವಮಾನವನ್ನು ಸಹಿಸಿಕೊಳ್ಳುತ್ತಿದ್ದೀರಿ? ಅವಮಾನದ ವಿರುದ್ಧ ನಿಮ್ಮ ಸಿಟ್ಟನ್ನು ಹೊರಹಾಕಿ. 'ನೀವು ರಕ್ಷಣೆಗೆ ಬರದಿದ್ದಾಗ ನನ್ನನ್ನು ನಾನು ರಕ್ಷಿಸಿಕೊಳ್ಳುವುದು ಅನಿವಾರ್ಯ' ಎಂದು ಪತಿಗೆ ತಿಳಿಸಿ. ತಕ್ಷಣಕ್ಕೆ ಮಕ್ಕಳು ನಿಮಗೆ ಬೇಕೆನ್ನಿಸದಿದ್ದರೆ ಗರ್ಭನಿರೋಧಕಗಳನ್ನು ಬಳಸುವ ನಿಮ್ಮ ಸ್ವಾತಂತ್ರ್ಯವನ್ನು ಬಳಸಿ. ಸಂಬಂಧಗಳು ಸ್ಥಿರವಾದಾಗ ಮತ್ತು ಮಕ್ಕಳನ್ನು ಬೆಳೆಸಲು ನೀವು ಮಾನಸಿಕವಾಗಿ ಸಿದ್ಧರಾದಾಗ ಮಾತ್ರ ಮಕ್ಕಳನ್ನು ಪಡೆಯಿರಿ. ಅಸ್ಥಿರ ಸಂಬಂಧಗಳಲ್ಲಿ ಮಕ್ಕಳು ಬಲಿಪಶುವಾಗುತ್ತಾರೆ.

- **30ರ ಯುವಕ. ಮದುವೆಯಾಗಿ 2 ತಿಂಗಳಾಗಿದೆ. ನನಗೆ ಶೀಘ್ರಸ್ಖಲನ (ಎರಡು ನಿಮಿಷದಲ್ಲಿ) ಆಗುತ್ತದೆ. ಇದರಿಂದ ಪತ್ನಿಗೆ ತೃಪ್ತಿಯಾಗುತ್ತಿಲ್ಲ. ಪರಿಹಾರವೇನು?**

ಹೆಸರು, ಊರು ತಿಳಿಸಿಲ್ಲ.

ಶೀಘ್ರಸ್ಖಲನಕ್ಕೆ ನೀವೊಬ್ಬರೇ ಜವಾಬ್ದಾರರು ಎಂದುಕೊಳ್ಳುವ ಅಗತ್ಯವಿಲ್ಲ. ನಿಮ್ಮ ಸಂಬಂಧ ಇನ್ನೂ ಆರಂಭದ ಹಂತದಲ್ಲಿದೆ. ಇಬ್ಬರಲ್ಲೂ ಹೆಚ್ಚಿನ ಲೈಂಗಿಕ ಸಲಿಗೆ ಮತ್ತು ಆತ್ಮೀಯತೆ ಮೂಡಬೇಕಾಗಿದೆ. ಪತ್ನಿಯ ಜೊತೆ ಅವರ ಲೈಂಗಿಕ ಅಗತ್ಯಗಳು, ಕಲ್ಪನೆಗಳು ಎಲ್ಲದರ ಕುರಿತು ಮುಕ್ತವಾಗಿ ಮಾತನಾಡಲು ಪ್ರಾರಂಭಿಸಿ. ಇಬ್ಬರೂ ಒಟ್ಟಾಗಿ ಹೆಚ್ಚಿನ ಸುಖ ಹಂಚಿಕೊಳ್ಳುವುದು ಹೇಗೆಂದು ಯೋಚಿಸಿ. ಅಗತ್ಯವಿದ್ದರೆ ತಜ್ಞ ಲೈಂಗಿಕ ಚಿಕಿತ್ಸಕರ ಸಹಾಯ ಪಡೆಯಿರಿ. ಯಾವುದೇ ಔಷಧಿಗಳನ್ನು ಬಳಸಿ ಮೋಸಹೋಗಬೇಡಿ.

- **28ರ ಯುವಕ. ಸಾಕಷ್ಟು ವರ್ಷಗಳಿಂದ ಹಸ್ತಮೈಥುನ ಮಾಡುತ್ತಿದ್ದೇನೆ. ಪ್ರತಿದಿನ ಮಾಡದಿದ್ದರೆ ಸಮಾಧಾನವಿರುವುದಿಲ್ಲ. ಈಗ ಮನೆಯಲ್ಲಿ ಹೆಣ್ಣು ಹುಡುಕುತ್ತಿದ್ದಾರೆ. ನಾನು ದೈಹಿಕವಾಗಿ ಚಿಕ್ಕವನಂತೆ ಕಾಣುತ್ತೇನೆ. ಬೆಳಿಗ್ಗೆ ಎದ್ದ ತಕ್ಷಣ ಸುಸ್ತಾಗಿ ತಲೆ ತಿರುಗಿದಂತಾಗುತ್ತದೆ. ಹಸ್ತಮೈಥುನದಿಂದ ರೋಗನಿರೋಧಕ ಶಕ್ತಿ ಕುಗ್ಗುತ್ತದೆಯೇ? ದಾಂಪತ್ಯಜೀವನಕ್ಕೆ ತೊಂದರೆಯಿದೆಯೇ? ಒಬ್ಬನೇ ಮಗ. ಪ್ರಾಣಕ್ಕೆ ಅಪಾಯ ಮಾಡಿಕೊಂಡರೆ ಪೋಷಕರ ಪರಿಸ್ಥಿತಿ ಯೋಚಿಸಲು ಸಾಧ್ಯವಿಲ್ಲ. ಸಹಾಯಮಾಡಿ.**

ಹೆಸರು, ಊರು ತಿಳಿಸಿಲ್ಲ.

ನೀವು ತೀವ್ರವಾದ ಆತಂಕದಲ್ಲಿದ್ದೀರಿ. ಇದರ ಮೂಲ ಕಾರಣ ಹಸ್ತಮೈಥುನದ ಕುರಿತಾದ ತಪ್ಪುತಿಳಿವಳಿಕೆಗಳು. 30/ 01/ 2021ರ ಸಂಚಿಕೆಯ ಇದೇ ಅಂಕಣದಲ್ಲಿ ಇದರ ಬಗೆಗೆ ವಿವರವಾಗಿ ಬರೆಯಲಾಗಿದೆ. ಹಸ್ತಮೈಥುನ ಸಂಪೂರ್ಣ ಸುರಕ್ಷಿತ ಲೈಂಗಿಕ ಪ್ರವೃತ್ತಿ. ಇದರಿಂದ ಯಾವುದೇ ದೈಹಿಕ ತೊಂದರೆಗಳಾಗುವುದಿಲ್ಲ. ದೈಹಿಕ ಆರೋಗ್ಯವನ್ನು ಒಮ್ಮೆ ವೈದ್ಯರಲ್ಲಿ ಪರೀಕ್ಷೆ ಮಾಡಿಸಿಕೊಳ್ಳಿ. ರೂಪ, ಆಕಾರಗಳು ಹೆಚ್ಚಾಗಿ ಆನುವಂಶಿಕವಾದದ್ದು. ಇದನ್ನು ಬದಲಾಯಿಸುವುದು ಸಾಧ್ಯವಿಲ್ಲ. ಆದರೆ ಒಳ್ಳೆಯ ಆಹಾರ ಮತ್ತು ವ್ಯಾಯಾಮದಿಂದ ದೇಹವನ್ನು ಬಲಪಡಿಸಿ. ನಿಮಗೆ ಇಷ್ಟವಾಗುವ ಸಂಗಾತಿಯನ್ನು ಹುಡುಕಿ ಮದುವೆಯಾಗಿ. ಅನಗತ್ಯ ಔಷಧಿ ಮಾತ್ರೆಗಳನ್ನು ಬಳಸಬೇಡಿ.

- **30ರ ಅವಿವಾಹಿತ ಯುವಕ. 4 ವರ್ಷದ ಹಿಂದೆ ಹುಡುಗಿಯೊಬ್ಬಳನ್ನು ಪ್ರೀತಿಸಿದ್ದು, ಮನೆಯಲ್ಲಿ ಒಪ್ಪದ ಕಾರಣ ಮದುವೆಯಾಗಲಿಲ್ಲ. ಈಗ ಅವಳಿಗೆ ವಿವಾಹವಾಗಿದೆ. ಒಮ್ಮೆ ಬಸ್ಸಿನಲ್ಲಿ ಪ್ರಯಾಣಿಸುವಾಗ ಅವಳನ್ನು ಆಲಂಗಿಸಿ ಮುತ್ತಿಟ್ಟೆ. ಅವಳು ಒತ್ತಾಯಿಸಿದರೂ ಭಯದಿಂದ ಸಂಭೋಗಕ್ಕೆ ನಿರಾಕರಿಸಿದೆ. ಈಗ ಅವಳ ನೆನಪಾಗಿ ಹಸ್ತಮೈಥುನ ಮಾಡಿಕೊಳ್ಳುತ್ತೇನೆ. ಆಗ ಶೀಘ್ರಸ್ಖಲನವಾಗುತ್ತದೆ. ಅಂದು ನಾನು ತೆಗೆದುಕೊಂಡ ನಿರ್ಧಾರ ಮತ್ತು ಹಸ್ತಮೈಥುನದಿಂದ ವೈವಾಹಿಕ ಜೀವನಕ್ಕೆ ತೊಂದರೆಯಾಗುತ್ತದೆಯೇ?**

ಹೆಸರು, ಊರು ತಿಳಿಸಿಲ್ಲ.

ಹಳೆಯ ಪ್ರೇಮಿಯನ್ನು ನೋಡಿ ಒಮ್ಮೆ ಭಾವಾವೇಶಕ್ಕೆ ಒಳಗಾದರೂ ಅವಳ ಒತ್ತಾಯಕ್ಕೆ ಮಣಿಯದೆ ಒಳ್ಳೆಯ ನಿರ್ಧಾರ ತೆಗೆದುಕೊಂಡಿದ್ದೀರಿ. ಹಸ್ತಮೈಥುನಕ್ಕೆ ಅವಳ ಬಗೆಗಿನ ಕಲ್ಪನೆಗಳನ್ನು ಬಳಸುವುದು ಸಹಜ. ಇಂತಹ ಕಲ್ಪನೆಗಳ ಆಕರ್ಷಣೆ ಮತ್ತು ಅವುಗಳ ಕುರಿತಾದ ಪಾಪಪ್ರಜ್ಞೆ ನಿಮ್ಮ ಶೀಘ್ರಸ್ಖಲಕ್ಕೆ ಕಾರಣವಾಗುತ್ತಿದೆ. ಹಳೆಯ ಪ್ರೇಮಿಯನ್ನು ಒಮ್ಮೆಲೆ ನಿಮ್ಮ ಕಲ್ಪನೆಗಳಿಂದ ತೆಗೆಯುವುದು ಸಾಧ್ಯವಾಗದಿದ್ದರೆ ನಿಧಾನವಾಗಿ ಅವಳ ಜಾಗದಲ್ಲಿ ನಿಮ್ಮ ಭಾವೀ ಸಂಗಾತಿಯನ್ನು ಊಹಿಸಿಕೊಳ್ಳುತ್ತಾ ಹೋಗಿ. ನಿಧಾನವಾಗಿ ಅವಳು ನಿಮ್ಮ ಮನಸ್ಸಿನ ಪರಿಧಿಯಿಂದ ದೂರವಾಗುತ್ತಳೆ.

ಏನಾದ್ರೂ ಕೇಳ್ಬೋದು

ಹದಿಹರೆಯದ ಮತ್ತು ದಾಂಪತ್ಯದ ಲೈಂಗಿಕ ಸಮಸ್ಯೆ, ಮಾನಸಿಕ ಸಮಸ್ಯೆ ಕುರಿತು ಪ್ರಶ್ನೆಗಳನ್ನು ನಮಗೆ ಕಳುಹಿಸಿ. ನಿಮ್ಮ ಪ್ರಶ್ನೆಗಳಿಗೆ ಮನೋಚಿಕಿತ್ಸಕ ನಡಹಳ್ಳಿ ವಸಂತ್ ಉತ್ತರಿಸಲಿದ್ದಾರೆ. bhoomika@prajavani.co.in

ಸರಸ್ವತಿ ಪೂಜೆಗೆ ಸಬ್ಬಕ್ಕಿ ಹೆಸರುಬೇಳೆ ಖೀರು, ಕಜ್ಜಾಯ

ನಳಪಾಕ

ಅನುಪಮಾ ಸುನೀಲ್ ಕುಮಾರ್

ಸಬ್ಬಕ್ಕಿ ಹೆಸರುಬೇಳೆ ಖೀರು

ಬೇಕಾಗುವ ಸಾಮಗ್ರಿಗಳು: ಹೆಸರುಬೇಳೆ – 1ಕಪ್, ಸಬ್ಬಕ್ಕಿ – 1ಕಪ್, ಬೆಲ್ಲ – 2 ಕಪ್, ಒಣದ್ರಾಕ್ಷಿ – 20 ರಿಂದ 30, ಗೋಡಂಬಿ – 15, ಬಾದಾಮಿ – 15, ಏಲಕ್ಕಿ – 4 (ಕುಟ್ಟಿ ಪುಡಿ ಮಾಡಿದ್ದು), ತುಪ್ಪ– 2 ಟೇಬಲ್ ಚಮಚ

ತಯಾರಿಸುವ ವಿಧಾನ: ಸಬ್ಬಕ್ಕಿಯನ್ನು ಅರ್ಧ ಗಂಟೆಗಳ ಕಾಲ ನೆನೆಸಿಡಿ. ನಂತರ ಹೆಸರುಬೇಳೆ ತೊಳೆದು ಇರಿಸಿಕೊಳ್ಳಿ. ಈಗ ಸ್ಟವ್ ಮೇಲೆ ಕುಕರ್ ಇರಿಸಿ ಅದಕ್ಕೆ ತುಪ್ಪ ಹಾಕಿ. ಅದಕ್ಕೆ ಹೆಸರುಬೇಳೆ ಹಾಕಿ ಕೆಂಬಣ್ಣ ಬರುವವರೆಗೂ ಹುರಿದುಕೊಳ್ಳಿ. ಇದಕ್ಕೆ 7ಕಪ್ ನೀರು ಸೇರಿಸಿ. ನಂತರ ಅದಕ್ಕೆ ನೆನೆದ ಸಬ್ಬಕ್ಕಿ ಹಾಕಿ 4 ವಿಷಲ್ ಕೂಗಿಸಿ. ಈಗ ಪಾತ್ರೆಯೊಂದಕ್ಕೆ ಬೆಲ್ಲ ಹಾಕಿ 1 ಕಪ್ ನೀರು ಹಾಕಿ ಕರಗಿಸಿ ಶೋಧಿಸಿಕೊಳ್ಳಿ. ಈಗ ಕುಕರ್‌ಗೆ 4 ಕಪ್ ಹಾಲು ಸೇರಿಸಿ ಚೆನ್ನಾಗಿ ಮಿಶ್ರಣ ಮಾಡಿ ಕುದಿಸಿ. ಅದಕ್ಕೆ ಬೆಲ್ಲ ಕರಗಿಸಿದ ನೀರು ಹಾಕಿ ಕುದಿಸಿ. ಈಗ ಸ್ಟವ್ ಆರಿಸಿ ಅದಕ್ಕೆ ಏಲಕ್ಕಿ ಪುಡಿ ಸೇರಿಸಿ ಮಿಶ್ರಣ ಮಾಡಿ. ಈಗ ತುಪ್ಪದಲ್ಲಿ ಒಣಹಣ್ಣುಗಳನ್ನು ಹುರಿದು ಪಾಯಸಕ್ಕೆ ಸೇರಿಸಿ. ಈಗ ನಿಮ್ಮ ಮುಂದೆ ದೇವರ ನೈವೇದ್ಯಕ್ಕೆ ಇರಿಸುವ ಸಬ್ಬಕ್ಕಿ ಹೆಸರುಬೇಳೆ ಪಾಯಸ ರೆಡಿ.

(ಲೇಖಕಿ: ಅನು ಸ್ವಯಂ ಕಲಿಕೆ ಯೂಟ್ಯೂಬ್ ಚಾನೆಲ್ ನಿರ್ವಾಹಕಿ)

ಕಜ್ಜಾಯ

ಬೇಕಾಗುವ ಸಾಮಗ್ರಿಗಳು: ಎಳ್ಳು – 2 ಚಮಚ, ಗಸೆಗಸೆ – 2 ಚಮಚ, ಏಲಕ್ಕಿ – 4, ಅಕ್ಕಿ – 1ಕಪ್, ಬೆಲ್ಲ – ಮುಕ್ಕಾಲು ಕಪ್, ನೀರು, ತುಪ್ಪ– 1 ಚಮಚ, ಎಣ್ಣೆ– ಕರಿಯಲು

ತಯಾರಿಸುವ ವಿಧಾನ: ಅಕ್ಕಿಯನ್ನು ಚೆನ್ನಾಗಿ ತೊಳೆದು ಒಂದೂವರೆ ದಿನ ನೆನೆಸಬೇಕು. ಒಂದೂವರೆ ದಿನದಲ್ಲಿ 3 ಬಾರಿ ನೀರು ಬದಲಿಸಿರಬೇಕು. ನೀರನ್ನು ಚೆನ್ನಾಗಿ ಬಸಿದು ಅಕ್ಕಿಯನ್ನು ಗಾಳಿಗೆ ಹರಡಿ ಆರಿಸಬೇಕು (ಇದನ್ನು ಬಿಸಿಲಿನಲ್ಲಿ ಒಣಗಿಸಬಾರದು). ನಂತರ ಅಕ್ಕಿಯನ್ನು ನೀರು ತಾಕಿಸದೇ ಮಿಕ್ಸಿಯಲ್ಲಿ ನುಣ್ಣಗೆ ಪುಡಿ ಮಾಡಿಕೊಳ್ಳಬೇಕು.

ಇದನ್ನು ಜರಡಿಯಲ್ಲಿ ಗಾಳಿಸಿ, ಉಳಿದ ತರಿಯನ್ನು ಮಿಕ್ಸಿಗೆ ಹಾಕಿ ಮತ್ತೆ ಪುಡಿ ಮಾಡಿಕೊಳ್ಳಬೇಕು. ನಂತರ ಎಲ್ಲಾ ಪುಡಿಯನ್ನು ಮುಚ್ಚಿಟ್ಟುಕೊಳ್ಳಬೇಕು. ನಂತರ ಪ್ಯಾನ್ ಬಿಸಿ ಮಾಡಿ ಬೆಲ್ಲ ಹಾಕಿ, ಕಾಲು ಕಪ್ ನೀರು ಸೇರಿಸಿ ಕರಗಿಸಿ. ಚಿಕ್ಕ ಪಾತ್ರೆಯಲ್ಲಿ ಗಸೆಗಸೆ ಹಾಗೂ ಎಳ್ಳನ್ನು ಹುರಿದುಕೊಳ್ಳಿ. ಬೆಲ್ಲ ಚೆನ್ನಾಗಿ ಪಾಕ ಬಂದ ಮೇಲೆ ಸ್ಟವ್ ಆರಿಸಿ. ಆ ಪಾಕಕ್ಕೆ ಸ್ವಲ್ಪ ಸ್ವಲ್ಪ ಹಿಟ್ಟನ್ನು ಸೇರಿಸಿ ತಿರುಗಿಸುತ್ತಲೇ ಇರಿ. ನಂತರ ಅದಕ್ಕೆ ಎಳ್ಳು, ಗಸೆಗಸೆ, ಏಲಕ್ಕಿ ಸೇರಿಸಿ ಮಿಶ್ರಣ ಮಾಡಿ. ಅದಕ್ಕೆ ತುಪ್ಪ ಹಾಕಿ ಮಿಶ್ರಣ ಮಾಡಿ ಇಡೀ ರಾತ್ರಿ ಇಡಿ. ನಂತರ ಬೆಳಿಗ್ಗೆ ಇದು ಗಟ್ಟಿಯಾದ ಮೇಲೆ ಕಜ್ಜಾಯದ ಆಕಾರಕ್ಕೆ ತಟ್ಟಿಕೊಂಡು ಮಧ್ಯೆ ತೂತು ಮಾಡಿಕೊಳ್ಳಿ. ಇದನ್ನು ಎಣ್ಣೆಯಲ್ಲಿ ಕರಿಯಿರಿ. ಕಜ್ಜಾಯದ ಒಂದು ಬದಿ ಕಾದ ನಂತರವಷ್ಟೇ ಇನ್ನೊಂದು ಬದಿ ತಿರುವಿ ಹಾಕಿ.

ಪ್ರಜಾವಾಣಿ ನೋಡಿಯೊ
ರೆಸಿಪಿ ವಿಡಿಯೊಗೆ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಮಾತೃ ಸಂಸ್ಥೆಗೆ ಮರಳಿದೆ ಏರ್ ಇಂಡಿಯಾ: ಮುಂದೆ?

• ಕ್ಯಾಪ್ಟನ್ ಜಿ.ಆರ್. ಗೋಪಿನಾಥ್

ಏರ್ ಇಂಡಿಯಾ ಕಂಪನಿಯು ಟಾಟಾ ಸಮೂಹದ ತೆಕ್ಕೆಗೆ ಮರಳಿದೆ. ರಾಷ್ಟ್ರೀಕರಣದ ಮೂಲಕ ಈ ಕಂಪನಿಯನ್ನು ಕೇಂದ್ರ ಸರ್ಕಾರವು ಟಾಟಾ ಸಮೂಹದಿಂದ 1953ರಲ್ಲಿ ಕಿತ್ತುಕೊಂಡಿತ್ತು. ಆಗ ಜವಾಹರಲಾಲ್ ನೆಹರೂ ಪ್ರಧಾನಿ ಆಗಿದ್ದರು. ಟಾಟಾ ಸಮೂಹಕ್ಕೆ ಒಂದು ನೋಟಿಸ್ ಕೂಡ ನೀಡದೆಯೆ, ಸಮೂಹದ ಜೊತೆ ಮಾತುಕತೆಯನ್ನೂ ನಡೆಸದೆ ಹೀಗೆ ಮಾಡಲಾಗಿತ್ತು. ಸರಿಯಾಗಿ, ಚೆನ್ನಾಗಿ ನಡೆಯುತ್ತಿದ್ದ ಖಾಸಗಿ ಕಂಪನಿಯೊಂದನ್ನು ಸರ್ಕಾರ ಏಕೆ ಸ್ವಾಧೀನಕ್ಕೆ ತೆಗೆದುಕೊಳ್ಳಬೇಕು, ಅದನ್ನು ಹಳ್ಳ ಹಿಡಿಸುವುದು ಏಕೆ ಎಂಬುದು ಅರ್ಥವಾಗುವುದಿಲ್ಲ!

ಸರ್ಕಾರವು ಕಂಪನಿಯನ್ನು ಹಿಂಬಾಗಿಲ ಮೂಲಕ ಸ್ವಾಧೀನಕ್ಕೆ ತೆಗೆದುಕೊಂಡಿತು ಎಂದು ಜೆಆರ್‌ಡಿ ಅವರು ಬೇಸರ ವ್ಯಕ್ತಪಡಿಸಿದ್ದರು. ಕಂಪನಿಯು ಸರ್ಕಾರದ ತೆಕ್ಕೆಗೆ ಸೇರಿದರೂ ಜೆಆರ್‌ಡಿ ಅವರು ಅದರ ಅಧ್ಯಕ್ಷರಾಗಿ 1978ರವರೆಗೆ ಮುಂದುವರಿದರು. ಕಂಪನಿಯನ್ನು ಉತ್ತುಂಗಕ್ಕೆ ಕೊಂಡೊಯ್ದರು. ಇಂದು ವಿಶ್ವದ ಅತ್ಯುತ್ತಮ ವಿಮಾನಯಾನ ಕಂಪನಿ ಎಂಬ ಹೆಗ್ಗಳಿಕೆ ಹೊತ್ತಿರುವ ಸಿಂಗಪುರ ಏರ್‌ಲೈನ್ಸ್ ಕಂಪನಿಯು, ಅಂದು ಏರ್ ಇಂಡಿಯಾದ ತಾಂತ್ರಿಕ ಮತ್ತು ಕಾರ್ಯಾಚರಣೆ ನೆರವಿನ ಮೂಲಕ ಸ್ಥಾಪನೆ ಆಯಿತು ಎಂಬುದನ್ನು ನಂಬುತ್ತೀರಾ? ನೆರವು ಯಾಚಿಸಿ ಆಗ ಸಿಂಗಪುರ ಸರ್ಕಾರದಿಂದಲೇ ಮನವಿ ಬಂದಿತ್ತು.

ಈಗ ಏರ್ ಇಂಡಿಯಾ ಕಂಪನಿಯು ಮತ್ತೆ ತನ್ನ ಮಾತೃ ಸಂಸ್ಥೆಗೆ ಮರಳಿದೆ. ಆದರೆ ಇಲ್ಲಿ ಹಲವು ಸವಾಲುಗಳು ಕೂಡ ಟಾಟಾ ಸನ್ಸ್ ಕಂಪನಿಗೆ ಎದುರಾಗಲಿವೆ. ಟಾಟಾ ಸನ್ಸ್ ಕಂಪನಿಯು ಈಗಾಗಲೇ ಎರಡು ವಿಮಾನಯಾನ ಕಂಪನಿಗಳನ್ನು ಮುನ್ನಡೆಸುತ್ತಿದೆ – ಏರ್ ಏಷ್ಯಾ ಮತ್ತು ವಿಸ್ತಾರಾ ಅವೆರಡು ಕಂಪನಿಗಳು. ಈ ಎರಡು ಕಂಪನಿಗಳಿಗಾಗಿ ಟಾಟಾ ಸನ್ಸ್ ದೊಡ್ಡ ಮೊತ್ತವನ್ನು ವಿನಿಯೋಗಿಸುತ್ತಿದೆ. ಈ ಎರಡು ಕಂಪನಿಗಳ ಪಾಲುದಾರಿಕೆಯ ವಿಚಾರದಲ್ಲಿ ಸಮಸ್ಯೆಗಳು ಇವೆ. ಸಾಲದ ಹೊರೆಯನ್ನೇ ಹೊತ್ತುಕೊಂಡಿರುವ ವಿಮಾನಯಾನ ಕಂಪನಿಯೊಂದನ್ನು ಟಾಟಾ ಸಮೂಹವು ತನ್ನದಾಗಿಸಿಕೊಂಡಿರುವುದು ಸಿಂಗಪುರ ಏರ್‌ಲೈನ್ಸ್ ಪಾಲಿಗೆ ಉತ್ಸಾಹ ಮೂಡಿಸುವಂಥದ್ದೇನೂ ಅಲ್ಲ. (ವಿಸ್ತಾರಾ ಕಂಪನಿಯಲ್ಲಿ ಸಿಂಗಪುರ ಏರ್‌ಲೈನ್ಸ್ ಪಾಲು ಹೊಂದಿದೆ.)

ಆದರೆ, ಮೂರೂ ವಿಮಾನಯಾನ ಕಂಪನಿಗಳನ್ನು ಪರಸ್ಪರ ವಿಲೀನಗೊಳಿಸಲು ಟಾಟಾ ಸಮೂಹ ಮನಸ್ಸು ಮಾಡಿದರೆ, ಯಶಸ್ಸು ಸಿಗಬಹುದು. ಮೂರು ಕಂಪನಿಗಳ ವಿಲೀನದ ನಂತರ ಹೊಸದಾಗಿ ರಚನೆಯಾಗುವ ಕಂಪನಿಯಲ್ಲಿ ಚಲನಶೀಲ ನಾಯಕತ್ವವೊಂದು ಇರಬೇಕಾಗುತ್ತದೆ. ಇದು ಸಾಧ್ಯವಾಗಬೇಕು ಎಂದಾದರೆ ಏರ್ ಏಷ್ಯಾ ಮತ್ತು ಸಿಂಗಪುರ ಏರ್‌ಲೈನ್ಸ್ ಜೊತೆ ಮಾತುಕತೆ ನಡೆಸಿಕೊಳ್ಳಬೇಕು. ಏರ್ ಇಂಡಿಯಾಕ್ಕೆ ಬಿಡ್ ಸಲ್ಲಿಸುವ ಮೊದಲೇ ಟಾಟಾ ಸಮೂಹವು

ಈ ಎಲ್ಲ ಅಂಶಗಳ ಬಗ್ಗೆ ಆಳವಾಗಿ ಆಲೋಚನೆ ನಡೆಸಿರಲೂಬಹುದು.

ಮೂರು ಪ್ರತ್ಯೇಕ ವಿಮಾನಯಾನ ಕಂಪನಿಗಳನ್ನು ಮುನ್ನಡೆಸುವುದು ಮುಂದೆ ಸಮಸ್ಯೆ ತಂದಿಡಬಹುದು. ಮೂರನ್ನೂ ವಿಲೀನಗೊಳಿಸಿದರೆ ಖರ್ಚು ಉಳಿಯುತ್ತದೆ. ಮೂವರು ಸಿಇಒಗಳನ್ನು ಹೊಂದುವ, ಮೂರು ಪ್ರತ್ಯೇಕ ಆಡಳಿತ ಮಂಡಳಿಗಳನ್ನು ಇರಿಸಿಕೊಳ್ಳುವ ಹಾಗೂ ಮೂರೂ ಕಂಪನಿಗಳಿಗೆ ಪ್ರತ್ಯೇಕವಾಗಿ ಹಣಕಾಸು, ಎಂಜಿನಿಯರಿಂಗ್, ಐ.ಟಿ., ಆದಾಯ ನಿರ್ವಹಣೆಯಂತಹ ವಿಭಾಗಗಳನ್ನು ಇರಿಸಿಕೊಳ್ಳುವ ಅಗತ್ಯ ಇರುವುದಿಲ್ಲ.

ಇವೆಲ್ಲದಕ್ಕಿಂತ ಮುಖ್ಯವಾಗಿ, ಟಾಟಾ ಸಮೂಹದ ಮೂರು ವಿಮಾನಯಾನ ಕಂಪನಿಗಳು ಪರಸ್ಪರ ಸ್ಪರ್ಧೆಗೆ ಇಳಿಯುವ ಸಂದರ್ಭ ಇರುವುದಿಲ್ಲ. ಮೂರೂ ಒಟ್ಟಾಗಿ ಇಂಡಿಗೊ, ಸ್ಪೈಸ್, ಗೋ ಏರ್‌ನಂತಹ ಕಂಪನಿಗಳ ವಿರುದ್ಧ ಸ್ಪರ್ಧಿಸಬೇಕು.

ದೇಶಿ ಮಾರ್ಗದ ಎಲ್ಲ ವಿಮಾನಗಳಲ್ಲಿ ಎಕಾನಮಿ ವರ್ಗವನ್ನು ಮಾತ್ರ ಉಳಿಸಿಕೊಳ್ಳಬಹುದು. ಏರ್ ಫ್ರಾನ್ಸ್ ಮತ್ತು ಯುರೋಪಿನ ಇತರ ಪ್ರಮುಖ ವಿಮಾನಯಾನ ಕಂಪನಿಗಳು ಯುರೋಪಿನ ವ್ಯಾಪ್ತಿಯಲ್ಲಿ ಹೀಗೆ ಮಾಡಿವೆ. ಅಂತರರಾಷ್ಟ್ರೀಯ ವಿಮಾನಯಾನಗಳಲ್ಲಿ ಮಾತ್ರ ಹೆಚ್ಚುವರಿಯಾಗಿ ಬ್ಯುಸಿನೆಸ್ ವರ್ಗದ ಆಸನಗಳು ಇರುತ್ತವೆ. ಈ ರೀತಿ ಮಾಡಲು ಟಾಟಾ ಸಮೂಹಕ್ಕೆ ಸಾಧ್ಯವಾದರೆ, ಸಿಂಗಪುರ ಏರ್‌ಲೈನ್ಸ್, ಎಮಿರೇಟ್ಸ್, ಬ್ರಿಟಿಷ್ ಏರ್‌ವೇಸ್ ಮತ್ತು ಲುಫ್ತಾನ್ಸಾದಂತಹ ಕಂಪನಿಗಳ ವಿರುದ್ಧ ಸ್ಪರ್ಧಿಸಲು ಸಾಧ್ಯವಾಗುತ್ತದೆ.

ಕಡಿಮೆ ವೆಚ್ಚದಲ್ಲಿ ವಿಮಾನಯಾನ ಸೌಲಭ್ಯ ಒದಗಿಸುವ ಕಂಪನಿಗಳ ವಿರುದ್ಧ ಸ್ಪರ್ಧಿಸುವುದು ಸವಾಲಿನದ್ದು ಎಂಬುದು ಟಾಟಾ ಸಮೂಹದ ಮನಸ್ಸಿನಲ್ಲಿ ಇರಬೇಕು. ಪ್ರಯಾಣಿಕರಿಗೆ ಹಲವು ಸೌಲಭ್ಯಗಳನ್ನು ಒದಗಿಸಿ, ಅವುಗಳ ಶುಲ್ಕವನ್ನು ಟಿಕೆಟ್ ದರದ ಮೂಲಕವೇ ಸಂಗ್ರಹಿಸುವ ಯಾವ ವಿಮಾನಯಾನ ಕಂಪನಿಗೂ ಕಡಿಮೆ ವೆಚ್ಚದಲ್ಲಿ ಸೇವೆ ಒದಗಿಸುವ ಕಂಪನಿಗಳ ವಿರುದ್ಧ ಸ್ಪರ್ಧಿಸಲು ಜಗತ್ತಿನ ಯಾವುದೇ ಭಾಗದಲ್ಲಿಯೂ ಸಾಧ್ಯವಾಗಿಲ್ಲ.

ಈಗ ತನ್ನ ಹೆಗಲ ಮೇಲೆ ಹೊತ್ತುಕೊಂಡಿರುವ ಔದ್ಯಮಿಕ ಸಾಹಸಕ್ಕೆ ಅಗತ್ಯವಿರುವ ಆಡಳಿತದ ಅನುಭವ, ಬಂಡವಾಳ ಸಂಗ್ರಹಿಸುವ ಶಕ್ತಿ, ಸವಾಲುಗಳನ್ನು ಎದುರಿಸುವ ಸಾಮರ್ಥ್ಯ ಟಾಟಾ ಸಮೂಹಕ್ಕೆ ಇದೆ. ರತನ್ ಟಾಟಾ ಅವರು ವಿಮಾನಯಾನದ ಬಗ್ಗೆ ಬಹಳ ಪ್ರೀತಿ ಹೊಂದಿರುವ ವ್ಯಕ್ತಿ. ಅವರು ಟಾಟಾ ಸಮೂಹದ ನೇತೃತ್ವವನ್ನೂ ವಹಿಸಿಕೊಂಡಿದ್ದಾರೆ. ಈ ಸ್ವಾಧೀನದಿಂದ ಏರ್ ಇಂಡಿಯಾ ಕಂಪನಿಗೆ, ಅದರಲ್ಲಿನ ನೌಕರರಿಗೆ ಹಾಗೂ ಗ್ರಾಹಕರಿಗೆ ಒಳ್ಳೆಯದಾಗುತ್ತದೆ.

ಲೇಖಕ ಏರ್ ಡೆಕ್ಕನ್ ಕಂಪನಿಯ ಸಂಸ್ಥಾಪಕ

ಏರ್ ಇಂಡಿಯಾ: ಮರಳಿ ಸಂಸ್ಥಾಪಕರ ತೆಕ್ಕೆಗೆ

1932:	ಜೆಹಂಗೀರ್ ರತನ್‌ಜೀ ದಾದಾಭಾಯ್ (ಜೆಆರ್‌ಡಿ) ಟಾಟಾ ಅವರು ಟಾಟಾ ಏರ್‌ಲೈನ್ಸ್ ವಿಮಾನಯಾನ ಸಂಸ್ಥೆಯನ್ನು ಸ್ಥಾಪಿಸಿದರು
1946:	ಏರ್ ಇಂಡಿಯಾ ಎಂದು ಮರುನಾಮಕರಣ
1948:	ಏರ್ ಇಂಡಿಯಾದಿಂದ ಅಂತರರಾಷ್ಟ್ರೀಯ ಸೇವೆ ಆರಂಭ. ಅಂತರರಾಷ್ಟ್ರೀಯ ಸೇವಾ ಘಟಕದಲ್ಲಿ ಸರ್ಕಾರವು ಶೇ 49ರಷ್ಟು, ಟಾಟಾ ಸನ್ಸ್ ಶೇ 25ರಷ್ಟು ಮತ್ತು ಸಾರ್ವಜನಿಕರು ಉಳಿದ ಷೇರುಗಳನ್ನು ಹೊಂದಿದ್ದರು
1953:	ಏರ್ ಇಂಡಿಯಾ ರಾಷ್ಟ್ರೀಕರಣ. ಕಂಪನಿಯು ಸಂಪೂರ್ಣವಾಗಿ ಸರ್ಕಾರದ ವಶಕ್ಕೆ ಬಂತು. ನಂತರದ ನಾಲ್ಕು ದಶಕಗಳ ಕಾಲ ಏರ್ ಇಂಡಿಯಾ ಭಾರತದ ವಿಮಾನಯಾನ ಕ್ಷೇತ್ರದ ಅನಭಿಷಿಕ್ತ 'ಮಹಾರಾಜ'ನಾಗಿತ್ತು
1994-95:	ವಿಮಾನಯಾನದಲ್ಲಿ ಖಾಸಗಿ ಕಂಪನಿಗಳ ಪಾಲ್ಗೊಳ್ಳುವಿಕೆಗೆ ಅವಕಾಶ. ಹಲವು ಕಂಪನಿಗಳಿಂದ ವಿಮಾನಯಾನ ಸೇವೆ ಆರಂಭ. ಖಾಸಗಿ ಕಂಪನಿಗಳ ದರ ಸಮರದೊಂದಿಗೆ ಸ್ಪರ್ಧಿಸಲಾರದೆ ಏರ್ ಇಂಡಿಯಾ ನಷ್ಟ ಅನುಭವಿಸಲಾರಂಭಿಸಿತು.
2000-01:	ಅಟಲ್ ಬಿಹಾರಿ ವಾಜಪೇಯಿ ನೇತೃತ್ವದ ಎನ್‌ಡಿಎ ಸರ್ಕಾರದಿಂದ ಏರ್ ಇಂಡಿಯಾ ಖಾಸಗೀಕರಣಕ್ಕೆ ಯತ್ನ. ಕಾರ್ಮಿಕ ಸಂಘಟನೆಗಳ ಪ್ರತಿಭಟನೆ, ವಿರೋಧದ ಕಾರಣ ಖಾಸಗೀಕರಣ ಕೈಬಿಟ್ಟ ಸರ್ಕಾರ
2007-08:	ಏರ್ ಇಂಡಿಯಾ ಮತ್ತು ಇಂಡಿಯನ್ ಏರ್‌ಲೈನ್ಸ್ ವಿಲೀನ
2012:	ಮನಮೋಹನ್ ಸಿಂಗ್ ನೇತೃತ್ವದ ಯುಪಿಎ-2 ಸರ್ಕಾರದ ಅವಧಿಯಲ್ಲಿ, ಏರ್ ಇಂಡಿಯಾ ಪುನಶ್ಚೇತನಕ್ಕೆ ಯೋಜನೆ
2017-18:	ಏರ್ ಇಂಡಿಯಾದ ಭಾಗಶಃ ಖಾಸಗೀಕರಣಕ್ಕೆ ನರೇಂದ್ರ ಮೋದಿ ನೇತೃತ್ವದ ಸರ್ಕಾರದಿಂದ ಯತ್ನ. ಏರ್ ಇಂಡಿಯಾದ ಶೇ 70ರಷ್ಟು ಸಾಲ ಮತ್ತು ಶೇ 76ರಷ್ಟು ಪಾಲನ್ನು ಮಾರಾಟ ಮಾಡಲು ಯತ್ನ. ಯಾವುದೇ ಕಂಪನಿ ಮುಂದೆ ಬರಲಿಲ್ಲ
2019:	₹60,000 ಕೋಟಿ ಸಾಲದಲ್ಲಿ ₹23,000 ಕೋಟಿ ಸಾಲದ ಹೊಣೆಯೊಂದಿಗೆ ಏರ್ ಇಂಡಿಯಾದ ಪೂರ್ಣ ಪಾಲು ಮಾರಾಟ ಮಾಡಲು ವಿಫಲ ಯತ್ನ
2020:	ಏರ್ ಇಂಡಿಯಾದ ಪೂರ್ಣ ಪಾಲು ಮತ್ತು ಖರೀದಿದಾರರು ಬಯಸುವಷ್ಟು ಸಾಲವನ್ನು ಮಾತ್ರ ವರ್ಗಾವಣೆ ಮಾಡಲು ಅವಕಾಶ ನೀಡಿ, ಮತ್ತೆ ಮಾರಾಟಕ್ಕೆ ಯತ್ನ
2021ರ ಏಪ್ರಿಲ್:	ಬಿಡ್ ಆಹ್ವಾನ. ಬಿಡ್ ಸಲ್ಲಿಕೆಗೆ ಸೆಪ್ಟೆಂಬರ್ ಮಧ್ಯದವರೆಗೆ ಅವಕಾಶ. ಟಾಟಾ ಗ್ರೂಪ್ ಮತ್ತು ಸ್ಪೈಸ್‌ಜೆಟ್‌ನಿಂದ ಬಿಡ್ ಸಲ್ಲಿಕೆ
2021ರ ಅಕ್ಟೋಬರ್:	ಟಾಟಾ ಗ್ರೂಪ್ ತೆಕ್ಕೆಗೆ ಏರ್ ಇಂಡಿಯಾ ಮರಳಿತು

ಷೇರುಪೇಟೆ ವಹಿವಾಟು

381



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	17,790
ಇಂದಿನ ಅಂತ್ಯ	17,895
▲	104
ದಿನದ ಗರಿಷ್ಠ	17,941

ವಿನಿಮಯ ದರ

$ ಡಾಲರ್	74.99
£ ಪೌಂಡ್	102.05
€ ಯುರೊ	86.68
¥ ಯೆನ್ (100ಕ್ಕೆ)	66.92

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100 ಮೊಟ್ಟೆಗೆ	₹430
12 ಮೊಟ್ಟೆಗೆ	₹60
ಮೈಸೂರು	
100 ಮೊಟ್ಟೆಗೆ	₹445

ಖಾದ್ಯ ತೈಲ ಮುಂಬೈ

(10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1490 (1475)
ಸೋಯಾ (ರಿಫೈನ್ಡ್)	₹1360(1375)
ಸೂರ್ಯಕಾಂತಿ (ರಿಫೈನ್ಡ್)	₹1405 (1405)
ಪಾಮೋಲಿನ್	₹1235 (1230)

ಮುಂಬೈ ಧಾರಣೆ

ಶೇಂಗಾ

8-10-2021

ಜಾವಾ 70/80(ಹೊಸ)	10650-10700
ಜಾವಾ 80/90(ಹೊಸ)	10250-10300
ದಪ್ಪ ಮಧ್ಯಪ್ರದೇಶ(ಹೊಸ)	10550-10600
ದಪ್ಪ ಗುಜರಾತ್(ಹೊಸ)	9600-9700

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1500 (1485)
ಒಂದು ವಾರದ ಡೆಲಿವರಿ	1495 (1480)
ಸೋಯಾ ಕಚ್ಚಾ	1332(1230)
ಪಾಮ್ ವಾರದ ಡೆಲಿವರಿ	1233(1228)
ಸೂರ್ಯಕಾಂತಿ ಎಣ್ಣೆ ಕಚ್ಚಾ	1350 (1350)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ
47,100 (46,650)
ಬೆಳ್ಳಿ ಕೆ.ಜಿ
62,000 (61,200)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ತೈಲ ಬೆಲೆ ಏರಿಕೆ

ನವದೆಹಲಿ (ಪಿಟಿಐ): ಸರ್ಕಾರಿ ಸ್ವಾಮ್ಯದ ತೈಲ ಮಾರಾಟ ಕಂಪನಿಗಳು ಶುಕ್ರವಾರ ಪೆಟ್ರೋಲ್ ಬೆಲೆಯನ್ನು ಲೀಟರ್‌ಗೆ 30 ಪೈಸೆ, ಡೀಸೆಲ್ ಬೆಲೆಯನ್ನು 35 ಪೈಸೆಯಷ್ಟು ಹೆಚ್ಚಳ ಮಾಡಿವೆ.

ಈ ಹೆಚ್ಚಳದ ಪರಿಣಾಮವಾಗಿ ಬೆಂಗಳೂರಿನಲ್ಲಿ ಲೀಟರ್ ಪೆಟ್ರೋಲ್ ದರವು ₹ 107.14 ಆಗಿದೆ. ಡೀಸೆಲ್ ದರವು ಶತಕದ ಕಡೆ ಸಾಗಿದ್ದು, ₹ 97.77 ಆಗಿದೆ.

ತೈಲೋತ್ಪನ್ನಗಳ ಬೆಲೆಯನ್ನು ಸಣ್ಣ ಪ್ರಮಾಣದಲ್ಲಿ ಏರಿಸುತ್ತಿದ್ದ ಕಂಪನಿಗಳು, ಬುಧವಾರದ ನಂತರ ದೊಡ್ಡ ಮಟ್ಟದಲ್ಲಿ ಹೆಚ್ಚಳ ಮಾಡಲಾರಂಭಿಸಿವೆ. ಸತತ ಮೂರು ದಿನಗಳಿಂದ ಪೆಟ್ರೋಲ್ ದರವನ್ನು ಪ್ರತಿ ದಿನ 30 ಪೈಸೆಯಷ್ಟು, ಡೀಸೆಲ್ ಬೆಲೆಯನ್ನು ಪ್ರತಿ ದಿನ 35 ಪೈಸೆಯಷ್ಟು ಹೆಚ್ಚಿಸಿವೆ.

ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಬ್ರೆಂಟ್ ಕಚ್ಚಾ ತೈಲದ ಬೆಲೆಯು ಪ್ರತಿ ಬ್ಯಾರೆಲ್‌ಗೆ 82 ಡಾಲರ್ ಗಡಿ ದಾಟಿದೆ. ಒಂದು ತಿಂಗಳ ಹಿಂದೆ ಇದರ ಬೆಲೆಯು 72 ಡಾಲರ್ ಆಗಿತ್ತು.

ಮೊಬಿಕ್ವಿಕ್ ಐಪಿಒ: ಸೆಬಿ ಸಮ್ಮತಿ

ನವದೆಹಲಿ (ಪಿಟಿಐ): ಆರಂಭಿಕ ಸಾರ್ವಜನಿಕ ಕೊಡುಗೆ (ಐಪಿಒ) ಮೂಲಕ ಷೇರುಗಳನ್ನು ಸಾರ್ವಜನಿಕರಿಗೆ ಮಾರಾಟ ಮಾಡಿ, ಒಟ್ಟು ₹ 1,900 ಕೋಟಿ ಬಂಡವಾಳ ಸಂಗ್ರಹಿಸಲು ಮೊಬಿಕ್ವಿಕ್ ಕಂಪನಿಗೆ ಭಾರತೀಯ ಷೇರುಪೇಟೆ ನಿಯಂತ್ರಣ ಮಂಡಳಿ (ಸೆಬಿ) ಒಪ್ಪಿಗೆ ನೀಡಿದೆ.

ಒನ್ ಮೊಬಿಕ್ವಿಕ್ ಸಿಸ್ಟಮ್ಸ್ ಕಂಪನಿಯು ದೇಶದ ಮೊಬೈಲ್ ವಾಲೆಟ್ ಮಾರುಕಟ್ಟೆಯಲ್ಲಿ ಹಾಗೂ ವಸ್ತುಗಳ ಖರೀದಿಗೆ ಸ್ಮಾರ್ಟ್‌ಫೋನ್ ಮೂಲಕ ಕಿರುಸಾಲ ನೀಡುವ (ಬಿಎನ್‌ಪಿಎಲ್) ಮಾರುಕಟ್ಟೆಯಲ್ಲಿ ಪ್ರಮುಖ ಪಾಲು ಹೊಂದಿದೆ.

ಟಿಸಿಎಸ್: ನಿವ್ವಳ ಲಾಭ ಶೇ 14.1ರಷ್ಟು ಹೆಚ್ಚಳ

ನವದೆಹಲಿ (ಪಿಟಿಐ): ದೇಶದ ಅತಿದೊಡ್ಡ ಸಾಫ್ಟ್‌ವೇರ್ ಸೇವಾ ಕಂಪನಿಯಾದ ಟಾಟಾ ಕನ್ಸಲ್ಟೆನ್ಸಿ ಸರ್ವಿಸಸ್ (ಟಿಸಿಎಸ್) ಸೆಪ್ಟೆಂಬರ್ ತ್ರೈಮಾಸಿಕದ ನಿವ್ವಳ ಲಾಭದಲ್ಲಿ ಶೇಕಡ 14.1ರಷ್ಟು ಏರಿಕೆ ಆಗಿದೆ. ಕಂಪನಿಯು ₹ 9,624 ಕೋಟಿ ನಿವ್ವಳ ಲಾಭ ಗಳಿಸಿದೆ.

ಹಿಂದಿನ ವರ್ಷದ ಇದೇ ತ್ರೈಮಾಸಿಕದಲ್ಲಿ ಕಂಪನಿಯು ₹ 8,433 ಕೋಟಿ ನಿವ್ವಳ ಲಾಭ ದಾಖಲಿಸಿತ್ತು. ಕಂಪನಿಯು ಷೇರುದಾರರಿಗೆ ಪ್ರತಿ ಷೇರಿಗೆ ₹ 7ರ ಮಧ್ಯಂತರ ಡಿವಿಡೆಂಡ್ ಘೋಷಿಸಿದೆ. ಈ ತ್ರೈಮಾಸಿಕದಲ್ಲಿ ಕಂಪನಿಯು 19,690 ಜನರನ್ನು ನೇಮಕ ಮಾಡಿಕೊಂಡಿದೆ. ಕಂಪನಿಯಲ್ಲಿ ಕೆಲಸ ಮಾಡುತ್ತಿರುವ ಉದ್ಯೋಗಿಗಳ ಸಂಖ್ಯೆ 5.28 ಲಕ್ಷ.

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಏಲಕ್ಕಿ ಧಾರಣೆ	
ಸಕಲೇಶಪುರ;	
ಕೂಳೆ	600- 650
ನಡುಗೋಲು	700-750
ರಾಶಿ	800-850
ರಾಶಿ ಉತ್ತಮ	900-950
ಜರಡಿ	1000 -1050
ಹೆರಕಿದ್ದು	1200-1300
ಹಸಿರು ಸಾಧಾರಣ	800-850
ಹಸಿರು ಉತ್ತಮ	1000-1050
ಹಸಿರು ಅತಿ ಉತ್ತಮ	1300-1400
ಕಾಳು ಮೆಣಸು - 415	
ಅಡಿಕೆ	
ಬಂಟ್ವಾಳ	
ಹೊಸತು	25000-50000
ಹಳತು	46000-51500
ಬೆಳ್ತಂಗಡಿ	
ಹೊಸತು	40000-50000
ಹಳತು	42500-51500
ಹೊಸನಗರ	
ಚಾಲಿ	30699-44399
ಕೆಂಪುಗೋಟು	30899-38209
ರಾಶಿ	40609-45399
ಕಾರ್ಕಳ	
ಹಳತು	46000-50000
ಕುಮಟಾ	
ಚಿಪ್ಪು	33099-39109
ಕೋಕ	20109-32509
ಫ್ಯಾಕ್ಟರಿ	13089-21009
ಹೊಸಚಾಲಿ	42509-45419
ಮಂಗಳೂರು	
ಕೋಕ	14000-49050
ಪುತ್ತೂರು	
ಹೊಸತು	35500-50000
ಶಿವಮೊಗ್ಗ	
ಬೆಟ್ಟೆ	44099-50909
ಗೊರಬಲು	17000-38369
ಹೊಸತು	41509-44389
ರಾಶಿ	41199-45199
ಸರಕು	48909-75100
ಸಿದ್ದಾಪುರ	
ಬಿಳಿಗೋಟು	34279-39799
ಚಾಲಿ	43599-46809
ಕೋಕ	22899-37399
ಕೆಂಪುಗೋಟು	28089-34669
ರಾಶಿ	42899-45529
ತಟ್ಟಿಬೆಟ್ಟೆ	32009-44819
ಶಿರಸಿ	
ಬೆಟ್ಟೆ	36801-44599
ಬಿಳಿಗೋಟು	25069-42153
ಚಾಲಿ	42699-47108
ರಾಶಿ	43109-47309
ಯಲ್ಲಾಪುರ	
ಬಿಳಿಗೋಟು	31019-39790
ಚಾಲಿ	40090-47099
ಕೋಕ	20122-28612
ಕೆಂಪುಗೋಟು	29446-34700
ರಾಶಿ	43230-49375
ತಟ್ಟಿಬೆಟ್ಟೆ	36919-42639
ರೇಷ್ಮೆಗೂಡು ಮಾರುಕಟ್ಟೆ	
ರಾಮನಗರ	
ಮಿಶ್ರ ತಳಿ:	264-488
ದ್ವಿತಳಿ;	305-547

ಕಾಫಿ (50 ಕೆ.ಜಿಗೆ ₹ ಗಳಲ್ಲಿ)

	ಮೂಡಿಗೆರೆ	ಹಾಸನ		
	ಮುದ್ರೆಮನೆ	ಪ್ಲಾಂಟರ್ಸ್	ಅಲ್ಲಾನಾ	ನ್ಯೂಯಾರ್ಕ್
ಎಪಿ	13,550	13,000	13,450	197.90ಸೆಂಟ್ಸ್
ಎಸಿ	6,325	4,800	5,400	
ಆರ್‌ಪಿ	6,100	6,000	6,275	ಲಂಡನ್
ಆರ್‌ಸಿ	3,535	3,500	3,625	2119ಡಾಲರ್ಸ್

ಟಾಟಾ ಕೈಗೆ ಏರ್ ಇಂಡಿಯಾ

ಒಂದನೇ ಪುಟದಿಂದ..

ಬಿಡ್ಡಿಂಗ್ ಷರತ್ತುಗಳ ಅನ್ವಯ ಟಾಟಾ ಸಮೂಹವು ಏರ್ ಇಂಡಿಯಾದ ಹಾಲಿ ಉದ್ಯೋಗಿಗಳನ್ನು ಒಂದು ವರ್ಷವಾದರೂ ಇರಿಸಿಕೊಳ್ಳಬೇಕು. ನಂತರದಲ್ಲಿ ಅವರಿಗೆ ಸ್ವಯಂ ನಿವೃತ್ತಿ ಯೋಜನೆ (ವಿಆರ್‌ಎಸ್) ಪ್ರಕಟಿಸಬಹುದು. ಒಟ್ಟು 12,082 ನೌಕರರು ಏರ್ ಇಂಡಿಯಾದಲ್ಲಿ ಇದ್ದಾರೆ. ಏರ್ ಇಂಡಿಯಾ ಬ್ರ್ಯಾಂಡ್ ಮತ್ತು ಲಾಂಛನವನ್ನು ಟಾಟಾ ಐದು ವರ್ಷಗಳವರೆಗೆ ಬೇರೆಯವರಿಗೆ ವರ್ಗಾವಣೆ ಮಾಡುವಂತಿಲ್ಲ. ನಂತರ, ಭಾರತೀಯ ಕಂಪನಿಗೆ ಮಾತ್ರ ಅದನ್ನು ಮಾರಾಟ ಮಾಡಬಹುದು.

ಕಂಪನಿಯನ್ನು ಟಾಟಾ ಸಮೂಹಕ್ಕೆ ವರ್ಗಾಯಿಸುವ ಪ್ರಕ್ರಿಯೆಯು ಡಿಸೆಂಬರ್ ವೇಳೆಗೆ ಪೂರ್ಣಗೊಳ್ಳುತ್ತದೆ ಎಂದು ಕೇಂದ್ರವು ವಿಶ್ವಾಸ ವ್ಯಕ್ತಪಡಿಸಿದೆ.

ರೆಪೊ ದರದಲ್ಲಿ ಯಥಾಸ್ಥಿತಿ

ಮುಂಬೈ (ಪಿಟಿಐ): ಭಾರತೀಯ ರಿಸರ್ವ್ ಬ್ಯಾಂಕ್ (ಆರ್‌ಬಿಐ) ರೆಪೊ ದರದಲ್ಲಿ ಯಾವುದೇ ಬದಲಾವಣೆ ಮಾಡದೆ ಇರುವ ತೀರ್ಮಾನವನ್ನು ಶುಕ್ರವಾರ ಕೈಗೊಂಡಿದೆ.

ಆರ್ಥಿಕತೆಯ ಸಂಪೂರ್ಣ ಪುನಶ್ಚೇತನಕ್ಕೆ ಮತ್ತು ಹಣದುಬ್ಬರವನ್ನು ನಿಶ್ಚಿತ ಗುರಿಯೊಳಗೆ ಇರಿಸಲು ರೆಪೊ ದರ ಮತ್ತು ರಿವರ್ಸ್ ರೆಪೊ ದರವನ್ನು ವ್ಯತ್ಯಾಸ ಮಾಡದೆ ಇರುವುದು ಅನಿವಾರ್ಯವಾಗಿದೆ ಎಂದು ಆರ್‌ಬಿಐ ಗವರ್ನರ್ ಶಕ್ತಿಕಾಂತ ದಾಸ್ ಅವರು ಹಣಕಾಸು ನೀತಿ ಸಮಿತಿಯ ಸಭೆ ನಂತರ ಹೇಳಿದರು.

ಬ್ಯಾಂಕ್ ಖಾತೆಯಿಂದ ಹಣ ವರ್ಗಾವಣೆ ಮಾಡಲು ಬಳಸುವ ಐಎಂಪಿಎಸ್ ಸೇವೆಯ ಮೂಲಕ ಒಂದು ಬಾರಿಗೆ ಮಾಡಬಹುದಾದ ಹಣದ ವರ್ಗಾವಣೆ ಮೊತ್ತವನ್ನು ಈಗಿರುವ ₹ 2 ಲಕ್ಷದಿಂದ ₹ 5 ಲಕ್ಷಕ್ಕೆ ಹೆಚ್ಚಿಸಲು ಆರ್‌ಬಿಐ ಪ್ರಸ್ತಾವ ಮಾಡಿದೆ.

ಪಾಕಿಸ್ತಾನ ಜತೆ ಅಮೆರಿಕ ಮಾತುಕತೆ

ಇಸ್ಲಾಮಾಬಾದ್ (ಪಿಟಿಐ): ಎರಡು ದಿನಗಳ ಪಾಕಿಸ್ತಾನ ಪ್ರವಾಸದಲ್ಲಿರುವ ಅಮೆರಿಕದ ವಿದೇಶಾಂಗ ಇಲಾಖೆಯ ಉಪ ಕಾರ್ಯದರ್ಶಿ ವೆಂಡೈ ಶೆರ್ಮನ್ ಅವರು ಪಾಕ್‌ನ ರಾಷ್ಟ್ರೀಯ ಭದ್ರತಾ ಸಲಹೆಗಾರ (ಎನ್‌ಎಸ್‌ಎ) ಮೊಯೀದ್ ಯೂಸಫ್ ಅವರೊಂದಿಗೆ ಮಾತುಕತೆ ನಡೆಸಿದ್ದಾರೆ.

ಈ ವೇಳೆ ಅಫ್ಗಾನಿಸ್ತಾನದ ಪರಿಸ್ಥಿತಿ ಸೇರಿದಂತೆ ಪ್ರಾದೇಶಿಕ ಭದ್ರತಾ ವಿಷಯಗಳು ಹಾಗೂ ದ್ವಿಪಕ್ಷೀಯ ಆರ್ಥಿಕ ಸಹಕಾರದ ಕುರಿತು ಚರ್ಚೆ ನಡೆದಿದೆ ಎಂದು ಅಧಿಕೃತ ಮಾಧ್ಯಮ ಶುಕ್ರವಾರ ವರದಿ ಮಾಡಿದೆ. ಉಭಯ ನಾಯಕರು ಎರಡೂ ದೇಶಗಳ ದ್ವಿಪಕ್ಷೀಯ ಸಂಬಂಧ ಉತ್ತೇಜಿಸಲು ಕೈಗೊಳ್ಳಬೇಕಾದ ಕ್ರಮಗಳ ಕುರಿತು ಮಾತುಕತೆ ನಡೆಸಿದ್ದಾರೆ. ಈ ನಾಯಕರ ನಡುವಿನ ಮಾತುಕತೆ ಕುರಿತು ಯಾವುದೇ ಅಧಿಕೃತ ಪ್ರಕಟಣೆ ಹೊರಬಿದ್ದಿಲ್ಲ ಎಂದು ಪಾಕಿಸ್ತಾನದ ರೇಡಿಯೊ ತಿಳಿಸಿದೆ.

ಸಂಕ್ಷಿಪ್ತ ಸುದ್ದಿ

ಹಬ್ಬದ ಉತ್ಸಾಹ ಕುಂದಿಸಿದ ಇಂಧನ ಬೆಲೆ ಏರಿಕೆ: ರಾಹುಲ್

ನವದೆಹಲಿ (ಪಿಟಿಐ): 'ನಿರಂತರ ಹಣದುಬ್ಬರದಿಂದಾಗಿ ಹಬ್ಬದ ಸಂಭ್ರಮ ಕಳೆಗುಂದಿದೆ. ಇದಕ್ಕಾಗಿ ಪ್ರಧಾನಿ ನರೇಂದ್ರ ಮೋದಿ ಅವರಿಗೆ ಧನ್ಯವಾದ ಹೇಳಬೇಕು' ಎಂದು ವ್ಯಂಗ್ಯ ಮಾಡಿರುವ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಶುಕ್ರವಾರ ಮೋದಿ ಆಡಳಿತವನ್ನು ತರಾಟೆಗೆ ತೆಗೆದುಕೊಂಡರು.

11 ದಿನಗಳಲ್ಲಿ ಪೆಟ್ರೋಲ್ ಬೆಲೆ ₹2.35 ಮತ್ತು ಡೀಸೆಲ್ ಬೆಲೆ ₹3 ಹೆಚ್ಚಾಗಿದ್ದು, ಬೆಲೆ ಏರಿಕೆಯು ಜನಸಾಮಾನ್ಯರ ಪರಿಸ್ಥಿತಿಯನ್ನು ಕಠಿಣಗೊಳಿಸಿದೆ ಎನ್ನುವ ಮಾಧ್ಯಮ ವರದಿಯೊಂದನ್ನು ಉಲ್ಲೇಖಿಸಿ ರಾಹುಲ್ ಟ್ವೀಟ್ ಮಾಡಿದ್ದಾರೆ.

'ಪೆಟ್ರೋಲ್, ಡೀಸೆಲ್ ಮತ್ತು ಆಹಾರ ಪದಾರ್ಥಗಳು ಮತ್ತು ಎಲ್‌ಪಿಜಿ ಸಿಲಿಂಡರ್ ಬೆಲೆಗಳು ಏರಿಕೆಯಾಗುತ್ತಲೇ ಇವೆ. ಮೋದಿಯವರಿಗೆ ಧನ್ಯವಾದಗಳು. ಹಬ್ಬದ ಉತ್ಸಾಹ ಕಳೆಗುಂದಿದೆ' ಎಂದು ಹೇಳಿದ್ದಾರೆ.

'ಜಮ್ಮು–ಕಾಶ್ಮೀರದಲ್ಲಿ ಪರಿಸ್ಥಿತಿ ಹದಗೆಡಲು ಕೇಂದ್ರವೇ ಹೊಣೆ'

ಮೆಹಬೂಬ ಮುಫ್ತಿ

ಶ್ರೀನಗರ (ಪಿಟಿಐ): ಜಮ್ಮು ಮತ್ತು ಕಾಶ್ಮೀರದಲ್ಲಿ ಹದಗೆಡುತ್ತಿರುವ ಪರಿಸ್ಥಿತಿಗೆ ಬಿಜೆಪಿ ನೇತೃತ್ವದ ಕೇಂದ್ರ ಸರ್ಕಾರ ತೆಗೆದುಕೊಂಡ ತಪ್ಪು ಕ್ರಮಗಳೇ ಕಾರಣ ಎಂದು ಪಿಡಿಪಿ ಅಧ್ಯಕ್ಷೆ ಮೆಹಬೂಬ ಮುಫ್ತಿ ಶುಕ್ರವಾರ ಆಪಾದಿಸಿದ್ದಾರೆ.

ಭಯೋತ್ಪಾದಕರಿಂದ ಹತ್ಯೆಗೀಡಾದ ಶಾಲೆಯ ಪ್ರಾಂಶುಪಾಲರ ಕುಟುಂಬವನ್ನು ಭೇಟಿ ಮಾಡಿ, ಕುಟುಂಬದ ಸದಸ್ಯರಿಗೆ ಸಾಂತ್ವನ ಹೇಳಿದರು.

ನಗರದ ಸರ್ಕಾರಿ ಶಾಲೆಯೊಳಗೆ ಪ್ರಾಂಶುಪಾಲರಾದ ಸುಪಿಂದರ್ ಕೌರ್ ಮತ್ತು ಶಿಕ್ಷಕ ದೀಪಕ್ ಚಂದ್ ಅವರನ್ನು ಉಗ್ರರು ಗುಂಡಿಕ್ಕಿ ಗುರುವಾರ ಹತ್ಯೆ ಮಾಡಿದ್ದರು.

ಡಿಎಪಿ, ಪೊಟ್ಯಾಷ್ ಗೊಬ್ಬರಕ್ಕೆ ಸಿ.ಎಂ ಬೇಡಿಕೆ

ಪ್ರಜಾವಾಣಿ ವಾರ್ತೆ



ನವದೆಹಲಿ: ಹಿಂಗಾರು ಬಿತ್ತನೆ ಹಂಗಾಮಿನಲ್ಲಿ ರೈತರಿಗೆ ನೆರವಾಗಲು 32,000 ಟನ್ ಡಿಎಪಿ ಗೊಬ್ಬರ ಪೂರೈಸುವಂತೆ ರಾಜ್ಯ ಸರ್ಕಾರ ಕೇಂದ್ರಕ್ಕೆ ಮನವಿ ಸಲ್ಲಿಸಿದೆ.

ಕೇಂದ್ರ ರಾಸಾಯನಿಕ ಮತ್ತು ರಸಗೊಬ್ಬರ ಖಾತೆ ಸಚಿವ ಮನಸುಖ್ ಮಾಂಡವಿಯಾ ಅವರಿಗೆ ಶುಕ್ರವಾರ ಈ ಕುರಿತ ಮನವಿ ಸಲ್ಲಿಸಿದ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ನಂತರ ಸುದ್ದಿಗಾರರೊಂದಿಗೆ ಮಾತನಾಡಿದರು. ರಾಜ್ಯಕ್ಕೆ 10,000 ಟನ್ ಪೊಟ್ಯಾಷ್ ಗೊಬ್ಬರದ ಅಗತ್ಯವೂ ಇದ್ದು, ಪೂರೈಕೆಗೆ ಕ್ರಮ ಕೈಗೊಳ್ಳುವಂತೆ ಕೋರಲಾಗಿದೆ. ಬೇಡಿಕೆ ಈಡೇರಿಸುವ ಭರವಸೆ ದೊರೆತಿದೆ ಎಂದು ಅವರು ತಿಳಿಸಿದರು.

ರಾಜ್ಯದಾದ್ಯಂತ ಕೊರೊನಾ ಲಸಿಕೆ ಅಭಿಯಾನ ಯಶಸ್ವಿ ಆಗಿರುವ ಕುರಿತೂ ಕೇಂದ್ರ ಸಚಿವರು ಮೆಚ್ಚುಗೆ ವ್ಯಕ್ತಪಡಿಸಿದರು. ರಾಜ್ಯದಲ್ಲಿ ಸದ್ಯ 51 ಲಕ್ಷ ಡೋಸ್ ಲಸಿಕೆ ಸಂಗ್ರಹ ಇದೆ. ಡಿಸೆಂಬರ್ ಅಂತ್ಯಕ್ಕೆ ಶೇ 90ರಷ್ಟು ಜನತೆಗೆ ಮೊದಲ ಹಂತದ ಲಸಿಕೆಯನ್ನೂ, ಶೇ 70ರಷ್ಟು ಅರ್ಹರಿಗೆ ಎರಡನೇ ಹಂತದ ಲಸಿಕೆಯನ್ನೂ ನೀಡುವ ಗುರಿ ಇರಿಸಿಕೊಳ್ಳಲಾಗಿದೆ ಎಂದು ಅವರು ವಿವರಿಸಿದರು.

ನಬಾರ್ಡ್ ನೆರವು: ನಂತರ ಕೇಂದ್ರದ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರನ್ನು ಭೇಟಿ ಮಾಡಿ ಚರ್ಚಿಸಿದ ಬೊಮ್ಮಾಯಿ, ರಾಜ್ಯಕ್ಕೆ ನೀಡಲಾಗುತ್ತಿರುವ ನಬಾರ್ಡ್ ನೆರವಿನ ಮೊತ್ತವನ್ನು ಹೆಚ್ಚಿಸುವಂತೆ ಕೋರಿದ್ದಾಗಿ ತಿಳಿಸಿದರು.

'ಕೇಂದ್ರದ ಹಣಕಾಸು ಸಚಿವಾಲಯ ಹೊಸದಾಗಿ ರಚಿಸಿರುವ ಗ್ರೂಪ್ ಆಫ್ ಮಿನಿಸ್ಟರ್ಸ್‌ಗೆ ನನ್ನನ್ನು ನೇಮಿಸಲಾಗಿದೆ. ಶೀಘ್ರವೇ ಸಭೆ ನಡೆಸುವ ಮೂಲಕ ಜಿಎಸ್‌ಟಿ ಆದಾಯ ಹೆಚ್ಚಳ ಹಾಗೂ ತೆರಿಗೆ ಸುಧಾರಣೆ ಕ್ರಮಗಳ ಕುರಿತು ವರದಿ ಸಲ್ಲಿಸುವಂತೆಯೂ ಸಚಿವೆ ನಿರ್ಮಲಾ ಸೂಚಿಸಿದ್ದಾರೆ' ಎಂದು ಅವರು ಹೇಳಿದರು. ಆರೋಗ್ಯ ಸಚಿವ ಡಾ.ಕೆ.ಸುಧಾಕರ್ ಹಾಜರಿದ್ದರು.

ಶಿಶು ವಿಹಾರಗಳ ಅರ್ಜಿ ತಿರಸ್ಕರಿಸಿದ ಸುಪ್ರೀಂ ಕೋರ್ಟ್

ನವದೆಹಲಿ (ಪಿಟಿಐ): ಶಿಶು ವಿಹಾರಗಳನ್ನು (ಪ್ಲೇ ಸ್ಕೂಲ್) ನಡೆಸುತ್ತಿರುವ ಸಂಸ್ಥೆಗಳು ಪಡೆದಿರುವ 'ನಿರ್ದಿಷ್ಟ ಅವಧಿ ಸಾಲಗಳ ಬಡ್ಡಿರಹಿತ ಮರುಪಾವತಿ ಅವಧಿ ವಿಸ್ತರಣೆ ಹಾಗೂ ಕೊರೊನಾ ಅವಧಿ ಮುಗಿಯುವ ತನಕ ಸಾಲದ ಕಂತು ಮುಂದೂಡುವಂತೆ ಆರ್‌ಬಿಐಗೆ ನಿರ್ದೇಶನ ನೀಡಲು ಕೋರಿ ಸಲ್ಲಿಕೆಯಾಗಿದ್ದ ಅರ್ಜಿಯನ್ನು ಸುಪ್ರೀಂ ಕೋರ್ಟ್ ತಿರಸ್ಕರಿಸಿದೆ.

ನ್ಯಾಯಮೂರ್ತಿಗಳಾದ ಎಲ್. ನಾಗೇಶ್ವರ ರಾವ್ ಮತ್ತು ಬಿ.ಆರ್. ಗವಾಯಿ ಅವರ ಪೀಠವು ಅರ್ಜಿದಾರರಿಗೆ ಈ ಸಂಬಂಧ ಆರ್‌ಬಿಐ ಅನ್ನು ಸಂಪರ್ಕಿಸಬಹುದು ಎಂದು ಹೇಳಿತು.

'ನಾವು ಈ ರಿಟ್ ಅರ್ಜಿಯನ್ನು ಸ್ವೀಕರಿಸಲು ಬಯಸುವುದಿಲ್ಲ. ಆದಾಗ್ಯೂ, ಅರ್ಜಿದಾರರು ಈ ಕುರಿತು ಆರ್‌ಬಿಐ ಅನ್ನು ಸಂಪರ್ಕಿಸಲು ಸ್ವತಂತ್ರರಿದ್ದಾರೆ. ಕಾನೂನಿನ ಪ್ರಕಾರ ನಿಮ್ಮ ಮನವಿಯನ್ನು ಆರ್‌ಬಿಐ ಸೂಕ್ತವಾಗಿ ಪರಿಶೀಲಿಸಿ ನಿರ್ಧರಿಸಬಹುದು' ಎಂದು ಪೀಠ ತಿಳಿಸಿತು.

ತಾಲಿಬಾನ್ ಮಾಜಿ ಕಮಾಂಡರ್ ವಿರುದ್ಧ ದೋಷಾರೋಪ

ನ್ಯೂಯಾರ್ಕ್ (ಪಿಟಿಐ): ಅಮೆರಿಕದ ಹಲವು ಸೈನಿಕರನ್ನು ಕೊಂದ ಪ್ರಕರಣಕ್ಕೆ ಸಂಬಂಧಿಸಿದಂತೆ ತಾಲಿಬಾನ್‌ನ ಮಾಜಿ ಕಮಾಂಡರ್ ವಿರುದ್ಧ ದೋಷಾರೋಪ ಹೊರಿಸಲಾಗಿದೆ.

ಹಾಜಿ ನಜೀಬುಲ್ಲಾ ಅಲಿಯಾಸ್ ನಜೀಬುಲ್ಲಾ ನಯೀಮ್ (45) ಎಂಬಾತನ ವಿರುದ್ಧ ಈ ದೋಷಾರೋಪಸಿದ್ಧಪಡಿಸಲಾಗಿದ್ದು, ಫೆಡರಲ್ ನ್ಯಾಯಾಲಯ ಈತನಿಗೆ ಜೀವಾವಧಿ ಶಿಕ್ಷೆ ವಿಧಿಸುವ ಸಾಧ್ಯತೆ ಇದೆ.

2008ರಲ್ಲಿ ಅಮೆರಿಕದ ಪತ್ರಕರ್ತನನ್ನು ಅಪಹರಿಸಿದ್ದ ನಯೀಮ್, ಪಾಕಿಸ್ತಾನದಲ್ಲಿ ಹಲವು ತಿಂಗಳುಗಳ ಕಾಲ ಅವರನ್ನು ಬಂಧನದಲ್ಲಿಟ್ಟಿದ್ದ. ಕಳೆದ ವರ್ಷ ಈತನನ್ನು ಬಂಧಿಸಿ, ಉಕ್ರೇನ್‌ನಿಂದ ಅಮೆರಿಕಕ್ಕೆ ಹಸ್ತಾಂತರಿಸಲಾಗಿತ್ತು. 2008ರಲ್ಲಿ ಅಫ್ಗಾನಿಸ್ತಾನದಲ್ಲಿ ಈತನ ನೇತೃತ್ವದಲ್ಲಿ ನಡೆದ ದಾಳಿಯಲ್ಲಿ ಅಮೆರಿಕದ ಮೂವರು ಸೈನಿಕರು, ಅವರ ಅಫ್ಗನ್ ಭಾಷಾಂತರಕಾರ ಮೃತಪಟ್ಟಿದ್ದರು. ಅಮೆರಿಕದ ಸೇನಾ ಹೆಲಿಕಾಪ್ಟರ್ ಹೊಡೆದುರುಳಿಸಿದ ಆರೋಪವೂ ಈತನ ಮೇಲೆ ಇದೆ.

ಅಪಹೃತ ಅಮೆರಿಕದ ಪತ್ರಕರ್ತನ ಹೆಸರನ್ನು ದೋಷಾರೋಪಪಟ್ಟಿಯಲ್ಲಿ ಉಲ್ಲೇಖಿಸಿಲ್ಲ. ಆದರೆ, ಎರಡು ಬಾರಿ ಪುಲಿಟ್ಜರ್ ಪ್ರಶಸ್ತಿ ಪುರಸ್ಕೃತ, 'ನ್ಯೂಯಾರ್ಕ್ ಟೈಮ್ಸ್' ಪತ್ರಿಕೆಯ ಡೇವಿಡ್ ರೋಡೆ ಅವರೇ ಈ ಪತ್ರಕರ್ತ ಎಂದು ಹೇಳಲಾಗಿದೆ.

ಅಫ್ಗನ್ ಮಸೀದಿಯಲ್ಲಿ ಬಾಂಬ್ ಸ್ಫೋಟ: 46 ಸಾವು

ಕಾಬೂಲ್ (ಎಪಿ): ಉತ್ತರ ಅಫ್ಗಾನಿಸ್ತಾನದ ಮಸೀದಿಯೊಂದರಲ್ಲಿ ಶುಕ್ರವಾರ ಶಿಯಾ ಮುಸ್ಲಿಮರನ್ನು ಗುರಿಯಾಗಿಸಿಕೊಂಡು ನಡೆಸಿದ ಪ್ರಬಲ ಬಾಂಬ್ ಸ್ಫೋಟದಲ್ಲಿ ಕನಿಷ್ಠ 46 ಮಂದಿ ಸಾವಿಗೀಡಾಗಿದ್ದು, ಹಲವರು ಗಾಯಗೊಂಡಿದ್ದಾರೆ ಎಂದು ತಾಲಿಬಾನ್ ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಕುಂಡಜ್ ಪ್ರಾಂತ್ಯದ ಮಸೀದಿಯಲ್ಲಿ ಶುಕ್ರವಾರದ ಪ್ರಾರ್ಥನಾ ವೇಳೆಯಲ್ಲಿ ನಡೆದ ಈ ಸ್ಫೋಟದ ಹೊಣೆಯನ್ನು ಯಾವ ಉಗ್ರ ಸಂಘಟನೆಯೂ ಇದುವರೆಗೆ ಹೊತ್ತುಕೊಂಡಿಲ್ಲ. ಆದರೆ, ಶಿಯಾ ಮುಸ್ಲಿಂ ಅಲ್ಪಸಂಖ್ಯಾತರ ಮೇಲೆ ಇಸ್ಲಾಮಿಕ್ ಸ್ಟೇಟ್ ಉಗ್ರರು ಈ ಹಿಂದೆ ದಾಳಿ ನಡೆಸಿದ ದೀರ್ಘ ಇತಿಹಾಸವನ್ನು ಹೊಂದಿದ್ದಾರೆ.

ಅಫ್ಗಾನಿಸ್ತಾನದ ಕುಂಡಜ್ ಪ್ರಾಂತ್ಯದ ಶಿಯಾ ಮಸೀದಿಯೊಂದರಲ್ಲಿ ಶುಕ್ರವಾರ ಸಂಭವಿಸಿದ ಬಾಂಬ್ ಸ್ಫೋಟದಲ್ಲಿ ಸಾವಿಗೀಡಾದ ವ್ಯಕ್ತಿಯೊಬ್ಬರ ದೇಹವನ್ನು ಹೊತ್ತೊಯ್ಯುತ್ತಿರುವ ದೃಶ್ಯ —ಎಎಫ್‌ಪಿ ಚಿತ್ರ

ಸ್ಫೋಟದಲ್ಲಿನ ಸಾವಿಗೀಡಾದವರ ಸಂಖ್ಯೆ ನಿಖರವಾಗಿ ದೃಢಪಟ್ಟಿಲ್ಲ, ಅಮೆರಿಕ ಮತ್ತು ನ್ಯಾಟೊ ಪಡೆಗಳು ಅಫ್ಗಾನಿಸ್ತಾನ ತೊರೆದ ನಂತರ ತಾಲಿಬಾನ್ ಹಿಡಿತದಲ್ಲಿ ಉಗ್ರರು ನಡೆಸಿದ ದಾಳಿಯಲ್ಲಿ ಶುಕ್ರವಾರ ಮೃತಪಟ್ಟವರ ಸಂಖ್ಯೆಯೇ ಅತಿ ಹೆಚ್ಚು ಆಗುವ ಸಾಧ್ಯತೆ ಇದೆ ಎಂದು ಮೂಲಗಳು ತಿಳಿಸಿವೆ.

ಭರತ್ –ಮ್ಯಾಕ್ಸ್‌ವೆಲ್ ಭರ್ಜರಿ ಬ್ಯಾಟಿಂಗ್

ದುಬೈ (ಪಿಟಿಐ): ಅಜೇಯ ಅರ್ಧಶತಕ ಗಳಿಸಿದ ಶ್ರೀಕರ್ ಭರತ್ ಮತ್ತು ಗ್ಲೆನ್ ಮ್ಯಾಕ್ಸ್‌ವೆಲ್ ಅಬ್ಬರದಿಂದಾಗಿ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡಕ್ಕೆ ಜಯ ಒಲಿಯಿತು.

ಐಪಿಎಲ್ 14ನೇ ಆವೃತ್ತಿಯ ಲೀಗ್ ಹಂತದ ಕೊನೆಯ ಪಂದ್ಯದಲ್ಲಿ ವಿರಾಟ್ ಕೊಹ್ಲಿ ಬಳಗವು 7 ವಿಕೆಟ್‌ಗಳ ರೋಚಕ ಜಯ ದಾಖಲಿಸಿತು.

ಪಂದ್ಯದ ಇನಿಂಗ್ಸ್‌ನ ಕೊನೆಯ ಎಸೆತದಲ್ಲಿ ಸಿಕ್ಸರ್ ಎತ್ತಿದ ಭರತ್ ತಂಡದ ಜಯ ಖಚಿತಪಡಿಸಿದರು.

ಡೆಲ್ಲಿ ತಂಡವು ಮೊದಲು ಬ್ಯಾಟಿಂಗ್ ಮಾಡಿ 5 ವಿಕೆಟ್‌ಗಳಿಗೆ ಗಳಿಸಿದ್ದ 164 ರನ್‌ಗಳಿಗೆ ಉತ್ತರವಾಗಿ ಬೆಂಗಳೂರು 20 ಓವರ್‌ಗಳಲ್ಲಿ 3 ವಿಕೆಟ್‌ಗಳಿಗೆ 166 ರನ್ ಗಳಿಸಿತು. ಕೊನೆಯ ಒಂದು ಓವರ್‌ನಲ್ಲಿ ಗೆಲುವಿಗಾಗಿ 15 ರನ್ ಗಳಿಸುವ ಸವಾಲು ಆರ್‌ಸಿಬಿ ಮುಂದಿತ್ತು. ಆವೇಶ್ ಖಾನ್ ಹಾಕಿದ ಓವರ್‌ನಲ್ಲಿ ಭರತ್ ಮತ್ತು ಮ್ಯಾಕ್ಸ್‌ವೆಲ್ ಜೋಡಿಯು ಈ ಕಠಿಣ ಸವಾಲು ಮೀರಿ ನಿಂತಿತು.

ಭರತ್ (ಔಟಾಗದೆ 78; 52ಎಸೆತ, 3ಬೌಂಡರಿ, 4ಸಿಕ್ಸರ್) ಮತ್ತು ಮ್ಯಾಕ್ಸ್‌ವೆಲ್ (ಔಟಾಗದೆ 51; 33ಎ 8ಬೌಂ) ಶತಕದ ಜೊತೆಯಾಟವಾಡಿದರು.

ಇದರೊಂದಿಗೆ ಬೆಂಗಳೂರು ತಂಡವು ಪಾಯಿಂಟ್ ಪಟ್ಟಿಯಲ್ಲಿ ಮೂರನೇ ಸ್ಥಾನ ಗಟ್ಟಿಮಾಡಿಕೊಂಡಿತು. ಎಲಿಮಿನೇಟರ್‌ನಲ್ಲಿ ಕೋಲ್ಕತ್ತ ನೈಟ್ ರೈಡರ್ಸ್ ತಂಡವನ್ನು ಎದುರಿಸಲು ಸಿದ್ಧವಾಯಿತು.

ರಿಷಭ್ ಪಂತ್ ನಾಯಕತ್ವದ ಡೆಲ್ಲಿ ಬಳಗವು ಮೊದಲ ಸ್ಥಾನದಲ್ಲಿದ್ದು, ಮೊದಲ ಕ್ವಾಲಿಫೈಯರ್‌ನಲ್ಲಿ ಚೆನ್ನೈ ಸೂಪರ್ ಕಿಂಗ್ಸ್ ಎದುರು ಕಣಕ್ಕಿಳಿಯಲಿದೆ.

ಹರ್ಷಲ್–ಸಿರಾಜ್ ಮಿಂಚು: ಡೆಲ್ಲಿ ತಂಡಕ್ಕೆ ಪೃಥ್ವಿ ಶಾ ಮತ್ತು ಶಿಖರ್ ಧವನ್ ಅವರು ಅಮೋಘ ಆರಂಭ ನೀಡಿದ್ದರು. 10 ಓವರ್‌ಗಳಲ್ಲಿ ಅವರಿಬ್ಬರ ಜೊತೆಯಾಟದಲ್ಲಿ 88 ರನ್‌ಗಳು ಸೇರಿದ್ದವು.

ಈ ಬುನಾದಿಯ ಮೇಲೆ ದೊಡ್ಡ ಮೊತ್ತ ಕಲೆಹಾಕುವ ಡೆಲ್ಲಿ ಕನಸಿಗೆ ಹರ್ಷಲ್ ಪಟೇಲ್ ಮತ್ತು ಮೊಹಮ್ಮದ್ ಸಿರಾಜ್ ಅಡ್ಡಿಯಾದರು.

ಮೊದಲ ವಿಕೆಟ್ ಜೊತೆಯಾಟವನ್ನು ಹರ್ಷಲ್ ಪಟೇಲ್ ಅವರು ಶಿಖರ್ ವಿಕೆಟ್ ಕಬಳಿಸುವ ಮೂಲಕ ಮುರಿದರು.ಶ್ರೇಯಸ್ ಅಯ್ಯರ್ ಮತ್ತು ಶಿಮ್ರೊನ್ ಹೆಟ್ಮೆಯರ್ ವಿಕೆಟ್ ಗಳಿಸಿದ ಸಿರಾಜ್ ಕೊನೆಯ ಹಂತದ ಓವರ್‌ಗಳಲ್ಲಿ ಹೆಚ್ಚು ರನ್‌ಗಳಾಗದಂತೆ ತಡೆದರು.

ಶ್ರೀಕರ್ ಭರತ್ ಅವರನ್ನು ಅಭಿನಂದಿಸಿದ ಗ್ಲೆನ್ ಮ್ಯಾಕ್ಸ್‌ವೆಲ್ –ಪಿಟಿಐ ಚಿತ್ರ

ಡೆಲ್ಲಿ ತಂಡದ ಆಟಗಾರ ರವಿಚಂದ್ರನ್ ಅಶ್ವಿನ್ ಅವರ ಪತ್ನಿ ಪ್ರೀತಿ ನಾರಾಯಣನ್ ಅವರು ಮಕ್ಕಳೊಂದಿಗೆ ಪಂದ್ಯ ವೀಕ್ಷಿಸಿದರು –ಪಿಟಿಐ ಚಿತ್ರ

ಸ್ಕೋರ್ ಕಾರ್ಡ್

ಡೆಲ್ಲಿ ಕ್ಯಾಪಿಟಲ್ಸ್ 5ಕ್ಕೆ 164 (20 ಓವರ್)

ಪೃಥ್ವಿ ಸಿ ಗಾರ್ಟನ್ ಬಿ ಚಾಹಲ್ 48 (31ಎ, 4X4, 6X2), ಧವನ್ ಸಿ ಕ್ರಿಸ್ಟಿಯನ್ ಬಿ ಪಟೇಲ್ 43 (35ಎ, 4X3, 6X2), ರಿಷಭ್ ಸಿ ಭರತ್ ಬಿ ಕ್ರಿಸ್ಟಿಯನ್ 10 (8ಎ, 4X1), ಶ್ರೇಯಸ್ ಸಿ ಕ್ರಿಸ್ಟಿಯನ್ ಬಿ ಸಿರಾಜ್ 18 (18ಎ, 4X1), ಹೆಟ್ಮೆಯರ್ ಸಿ ಕೊಹ್ಲಿ ಬಿ ಸಿರಾಜ್ 29 (22ಎ, 4X2, 6X2), ರಿಪಾಲ್ ಔಟಾಗದೆ 7 (7ಎ, 4X1)

ಇತರೆ : (ಲೆಗ್‌ಬೈ 3, ನೋಬಾಲ್ 1, ವೈಡ್ 5) 9

ವಿಕೆಟ್ ಪತನ: 1–88 (ಶಿಖರ್ ಧವನ್, 10.1), 2–101 (ಪೃಥ್ವಿ ಶಾ, 11.2), 3–108 (ರಿಷಭ್ ಪಂತ್, 12.4), 4–143 (ಶ್ರೇಯಸ್ ಅಯ್ಯರ್, 17.4), 5–164 (ಶಿಮ್ರಾನ್ ಹೆಟ್ಮೆಯರ್, 19.6)

ಬೌಲಿಂಗ್: ಗ್ಲೆನ್ ಮ್ಯಾಕ್ಸ್‌ವೆಲ್ 3–0–29–0, ಮೊಹಮ್ಮದ್ ಸಿರಾಜ್ 4–0–25–2, ಜಾರ್ಜ್ ಗಾರ್ಟನ್ 3–0–20–0, ಯಜುವೇಂದ್ರ ಚಾಹಲ್ 4–0–34–1, ಹರ್ಷಲ್ ಪಟೇಲ್ 4–0–34–1, ಡ್ಯಾನ್ ಕ್ರಿಸ್ಟಿಯನ್ 2–0–19–1

ರಾಯಲ್ ಚಾಲೆಂಜರ್ಸ್ ಬೆಂಗಳೂರು 3ಕ್ಕೆ 166 (20 ಓವರ್)

ಕೊಹ್ಲಿ ಸಿ ರಬಾಡ ಬಿ ನಾರ್ಕಿಯಾ 4 (8ಎ), ದೇವದತ್ತ ಸಿ ಅಶ್ವಿನ್ ಬಿ ನಾರ್ಕಿಯಾ 0 (1ಎ), ಭರತ್ ಔಟಾಗದೆ 78 (52ಎ, 4X3, 4X4), ಡಿವಿಲಿಯರ್ಸ್ ಸಿ ಶ್ರೇಯಸ್ ಬಿ ಅಕ್ಷರ್ 26 (26ಎ, 4X2, 6X1), ಮ್ಯಾಕ್ಸ್‌ವೆಲ್ ಔಟಾಗದೆ 51 (33ಎ, 4X8).

ಇತರೆ : (ಲೆಗ್‌ಬೈ 2, ವೈಡ್ 5) 7

ವಿಕೆಟ್ ಪತನ: 1–3 (ದೇವದತ್ತ ಪಡಿಕ್ಕಲ್, 0.5), 2–6 (ವಿರಾಟ್ ಕೊಹ್ಲಿ, 2.1), 3–55 (ಡಿವಿಲಿಯರ್ಸ್, 9.3)

ಬೌಲಿಂಗ್: ಆ್ಯನ್ರಿಚ್ ನಾರ್ಕಿಯಾ 4–0–24–2, ಆವೇಶ್ ಖಾನ್ 4–0–31–0, ಅಕ್ಷರ್ ಪಟೇಲ್ 4–0–39–1, ಕಗಿಸೊ ರಬಾಡ 4–0–37–0, ರವಿಚಂದ್ರನ್ ಅಶ್ವಿನ್ 1–0–11–0, ರಿಪಾಲ್ ಪಟೇಲ್ 3–0–22–0

ಫಲಿತಾಂಶ: ರಾಯಲ್ ಚಾಲೆಂಜರ್ಸ್ ಬೆಂಗಳೂರಿಗೆ 7 ವಿಕೆಟ್ ಜಯ

ಇಶಾನ್ ಕಿಶನ್, ಸೂರ್ಯಕುಮಾರ್ ಯಾದವ್ ಅಬ್ಬರ
ಗೆದ್ದರೂ ಮುಂಬೈಗೆ ನಿರಾಸೆ

ಅಬುಧಾಬಿ (ಪಿಟಿಐ): ಶೇಕ್ ಜಯೇದ್ ಕ್ರೀಡಾಂಗಣದಲ್ಲಿ ರನ್ ಹೊಳೆ ಹರಿಸಿದ ಮುಂಬೈ ಇಂಡಿಯನ್ಸ್ ತಂಡ ಅಂತಿಮ ಲೀಗ್ ಪಂದ್ಯದಲ್ಲಿ ಜಯ ಗಳಿಸಿತು. ಆದರೆ ಪ್ಲೇ ಆಫ್ ಹಂತಕ್ಕೇರಲು ಆಗದೇ ಟೂರ್ನಿಯಿಂದ ಹೊರಬಿದ್ದಿತು.

ಶುಕ್ರವಾರ ನಡೆದ ಪಂದ್ಯದಲ್ಲಿ ಸನ್‌ರೈಸರ್ಸ್ ಹೈದರಾಬಾದ್ ಎದುರು 20 ಓವರ್‌ಗಳಲ್ಲಿ 9 ವಿಕೆಟ್‌ಗಳಿಗೆ ಮುಂಬೈ 235 ರನ್ ಕಲೆ ಹಾಕಿತು. ಸನ್‌ರೈಸರ್ಸ್ ಗೆಲುವಿಗೆ ಸಕಲ ಪ್ರಯತ್ನವನ್ನೂ ನಡೆಸಿತು. ಆದರೆ 8 ವಿಕೆಟ್‌ಗಳಿಗೆ 193 ರನ್ ಗಳಿಸಿ 42 ರನ್‌ಗಳ ಸೋಲೊಪ್ಪಿಕೊಂಡಿತು.

ಟಾಸ್ ಗೆದ್ದ ಮುಂಬೈ ಇಂಡಿಯನ್ಸ್ ಬ್ಯಾಟಿಂಗ್ ಆಯ್ಕೆ ಮಾಡಿಕೊಂಡಿತು. ಭಾರಿ ರನ್ ರೇಟ್‌ನೊಂದಿಗೆ ಗೆದ್ದರೆ ಪ್ಲೇ ಆಫ್ ಪ್ರವೇಶಿಸುವ ಸಾಧ್ಯತೆ ಇದ್ದುದರಿಂದ ಆರಂಭದಲ್ಲೇ ಆಕ್ರಮಣಕಾರಿ ಆಟಕ್ಕೆ ತಂಡ ಮುಂದಾಯಿತು. ರೋಹಿತ್ ಶರ್ಮಾ ಜೊತೆ ಕ್ರೀಸ್‌ಗೆ ಬಂದ ಇಶಾನ್ ಕಿಶನ್ (84; 32 ಎಸೆತ, 11 ಬೌಂಡರಿ, 4 ಸಿಕ್ಸರ್) ಸತತವಾಗಿ ಸಿಕ್ಸರ್ ಮತ್ತು ಬೌಂಡರಿಗಳನ್ನು ಸಿಡಿಸುತ್ತ ಮುನ್ನುಗ್ಗಿದರು.

ರೋಹಿತ್ ಶರ್ಮಾ ತಾಳ್ಮೆಯಿಂದ ಬ್ಯಾಟ್ ಬೀಸಿ ಇಶಾನ್‌ಗೆ ಅವಕಾಶಗಳನ್ನು ಕೊಟ್ಟರು. 33 ಎಸೆತಗಳಲ್ಲಿ ಇಬ್ಬರೂ 80 ರನ್‌ಗಳನ್ನು ಸೇರಿಸಿದರು. ರಶೀದ್ ಖಾನ್ ಪಡೆದ ಮೋಹಕ ಕ್ಯಾಚ್‌ಗೆ ರೋಹಿತ್ ಬಲಿಯಾದರು.

ಹಾರ್ದಿಕ್ ಪಾಂಡ್ಯ ಜೊತೆಗೂ ಇಶಾನ್ ಸ್ಫೋಟಕ ಬ್ಯಾಟಿಂಗ್ ಮುಂದುವರಿಸಿದರು. 33 ರನ್‌ಗಳ ಜೊತೆಯಾಟದ ಬಳಿಕ ಹಾರ್ದಿಕ್ ಅವರು ಜೇಸನ್ ಹೋಲ್ಡರ್‌ಗೆ ಸುಲಭ ಕ್ಯಾಚ್ ನೀಡಿ ಮರಳಿದರು. ಇಶಾನ್ ಕಿಶನ್ ಮತ್ತು ಕೀರನ್ ಪೊಲಾರ್ಡ್ ವಿಕೆಟ್‌ಗಳು ಕೂಡ ಉರುಳಿದವು.

ಈ ಸಂದರ್ಭದಲ್ಲಿ ಕ್ರೀಸ್‌ಗೆ ಬಂದ ಸೂರ್ಯಕುಮಾರ್ ಯಾದವ್ ಅವರು ಅಮೋಘ ಬ್ಯಾಟಿಂಗ್ ಮೂಲಕ ಮಿಂಚಿದರು. ಮೂರು ಸಿಕ್ಸರ್ ಮತ್ತು 13 ಬೌಂಡರಿ ಗಳಿಸಿದ ಅವರು 40 ಎಸೆತಗಳಲ್ಲಿ 82 ರನ್ ಗಳಿಸಿ ತಂಡವನ್ನು 200 ರನ್‌ಗಳ ಗಡಿ ದಾಟಿಸಿದರು.

ನಾಯಕ ಮನೀಷ್ ಅರ್ಧಶತಕ: ಗುರಿ ಬೆನ್ನತ್ತಿದ ಸನ್‌ರೈಸರ್ಸ್‌ನ ಅಗ್ರ ಕ್ರಮಾಂಕದ ಬ್ಯಾಟರ್‌ಗಳು ಮಿಂಚಿದರು. ಕೇನ್ ವಿಲಿಯಮ್ಸನ್ ಬದಲಿಗೆ ತಂಡವನ್ನು ಮುನ್ನಡೆಸಿದ ಮನೀಷ್ ಪಾಂಡೆ (ಔಟಾಗದೆ 69; 41 ಎ, 7 ಬೌಂ, 2 ಸಿ) ಅರ್ಧಶತಕ ಗಳಿಸಿದರು.

ಸಂಕ್ಷಿಪ್ತ ಸ್ಕೋರು: ಮುಂಬೈ ಇಂಡಿಯನ್ಸ್: 20 ಓವರ್‌ಗಳಲ್ಲಿ 9ಕ್ಕೆ 235 (ರೋಹಿತ್ ಶರ್ಮಾ 18, ಇಶಾನ್ ಕಿಶನ್ 84, ಹಾರ್ದಿಕ್ ಪಾಂಡ್ಯ 10, ಕೀರನ್ ಪೊಲಾರ್ಡ್ 13, ಸೂರ್ಯಕುಮಾರ್ ಯಾದವ್ 82; ಜೇಸನ್ ಹೋಲ್ಡರ್ 52ಕ್ಕೆ4, ಉಮ್ರಾನ್ ಮಲಿಕ್ 48ಕ್ಕೆ1, ರಶೀದ್ ಖಾನ್ 40ಕ್ಕೆ2, ಅಭಿಷೇಕ್ ಶರ್ಮಾ 4ಕ್ಕೆ2); **ಸನ್‌ರೈಸರ್ಸ್ ಹೈದರಾಬಾದ್:** 20 ಓವರ್‌ಗಳಲ್ಲಿ 8ಕ್ಕೆ 193 (ಜೇಸನ್ ರಾಯ್ 34, ಅಭಿಷೇಕ್ ಶರ್ಮಾ 33, ಮನೀಷ್ ಪಾಂಡೆ ಔಟಾಗದೆ 69, ಪ್ರಿಯಂ ಗರ್ಗ್ 29; ಟ್ರೆಂಟ್ ಬೌಲ್ಟ್ 30ಕ್ಕೆ1, ಜಸ್‌ಪ್ರೀತ್ ಬೂಮ್ರಾ 39ಕ್ಕೆ2, ಪೀಯೂಷ್ ಚಾವ್ಲಾ 38ಕ್ಕೆ1, ನೇಥನ್ ಕಾಲ್ಟರ್‌ನೈಲ್ 40ಕ್ಕೆ2, ಜೇಮ್ಸ್ ನೀಶಮ್ 28ಕ್ಕೆ2) **ಫಲಿತಾಂಶ:** ಮುಂಬೈ ಇಂಡಿಯನ್ಸ್‌ಗೆ 42 ರನ್‌ಗಳ ಜಯ.

ಇಶಾನ್ ಕಿಶನ್ ಅವರನ್ನು ರೋಹಿತ್ ಶರ್ಮಾ ಅಭಿನಂದಿಸಿದರು –ಪಿಟಿಐ ಚಿತ್ರ

ನಾಳೆ ಮೊದಲ ಕ್ವಾಲಿಫೈಯರ್ ಹಣಾಹಣಿ

ಲೀಗ್ ಹಂತದ ಎಲ್ಲ 56 ಪಂದ್ಯಗಳು ಮುಕ್ತಾಯಗೊಂಡಿದ್ದು ಪ್ಲೇ ಆಫ್ ಹಣಾಹಣಿ ನಾಳೆಯಿಂದ ನಡೆಯಲಿದೆ. ಮೊದಲ ಕ್ವಾಲಿಫೈಯರ್ ಪಂದ್ಯ ನಾಳೆ ಸಂಜೆ 7.30ಕ್ಕೆ ದುಬೈನಲ್ಲಿ ನಡೆಯಲಿದೆ. 11ರಂದು ಎಲಿಮಿನೇಟರ್ ಪಂದ್ಯ ನಡೆಯಲಿದ್ದು ರಾಯಲ್ ಚಾಲೆಂಜರ್ಸ್ ಬೆಂಗಳೂರು ಮತ್ತು ಕೋಲ್ಕತ್ತ ನೈಟ್ ರೈಡರ್ಸ್ ತಂಡಗಳು ಸೆಣಸಲಿವೆ.

13ರಂದು ಎರಡನೇ ಕ್ವಾಲಿಫೈಯರ್ ಪಂದ್ಯ ಶಾರ್ಜಾದಲ್ಲಿ ನಡೆಯಲಿದೆ. ಪ್ರಶಸ್ತಿ ಸುತ್ತಿನ ಪಂದ್ಯಕ್ಕೆ 15ರಂದು ದುಬೈ ಆತಿಥ್ಯ ವಹಿಸಲಿದೆ. ಲೀಗ್ ಈ ಬಾರಿ ಎರಡು ಹಂತಗಳಲ್ಲಿ ನಡೆದಿತ್ತು. ಮೊದಲ ಹಂತದ ಪಂದ್ಯಗಳು ಭಾರತದಲ್ಲಿ ನಡೆದಿದ್ದವು. ಆದರೆ ಬಯೊಬಬಲ್‌ನಲ್ಲಿದ್ದ ಆಟಗಾರರಿಗೆ ಸೋಂಕು ತಗುಲಿದ ಕಾರಣ ಮುಂದೂಡಿ ಉಳಿದ ಪಂದ್ಯಗಳನ್ನು ಯುಎಇಯಲ್ಲಿ ಆಯೋಜಿಸಲಾಗಿದೆ.

ಗ್ರ್ಯಾನ್‌ಪ್ರಿ: ಅಭ್ಯಾಸದಲ್ಲಿ ಹ್ಯಾಮಿಲ್ಟನ್‌ಗೆ ಮುನ್ನಡೆ

ಇಸ್ತಾನ್‌ಬುಲ್ (ಎಪಿ): ಫಾರ್ಮುಲಾ ಒನ್ ಚಾಂಪಿಯನ್ ಲೂಯಿಸ್ ಹ್ಯಾಮಿಲ್ಟನ್ ಅವರು ಮ್ಯಾಕ್ಸ್ ವರ್ಸ್ಟ್ಯಾಪನ್ ಅವರನ್ನು ಹಿಂದಿಕ್ಕಿ ಟರ್ಕಿಶ್ ಗ್ರ್ಯಾನ್ ಪ್ರೀ ಮೊದಲ ಸುತ್ತಿನ ಅಭ್ಯಾಸದಲ್ಲಿ ಅಗ್ರಸ್ಥಾನ ಗಳಿಸಿದರು.

ಮರ್ಸಿಡಿಸ್ ತಂಡದ ಹ್ಯಾಮಿಲ್ಟನ್ 1 ನಿಮಿಷ 24.178 ಸೆಕೆಂಡುಗಳಲ್ಲಿ ಗುರಿ ತಲುಪಿದರು.

ರೆಡ್‌ಬುಲ್ ತಂಡದ ವರ್ಸ್ಟ್ಯಾಪನ್ ಅವರಿಗಿಂತ 0.43 ಸೆಕೆಂಡುಗಳ ಹೆಚ್ಚಿನ ವೇಗ ಸಾಧಿಸಿದರು.

ಫರಾರಿ ತಂಡದ ಚಾರ್ಲ್ಸ್ ಲೆಕ್ಲರ್ಕ್ ಅವರು ಹ್ಯಾಮಿಲ್ಟನ್ ಅವರಿಗಿಂತ 0.48 ಸೆಕೆಂಡುಗಳ ಹಿನ್ನಡೆ ಅನುಭವಿಸಿದರು.

ಮರ್ಸಿಡಿಸ್ ತಂಡದ ಇನ್ನೊಬ್ಬ ಚಾಲಕ ವಾಲ್ತೇರಿ ಬೊಟ್ಟಾಸ್ ನಾಲ್ಕನೇ ಸ್ಥಾನ ಗಳಿಸಿದರು.

ಪಾಯಿಂಟ್ ಪಟ್ಟಿ

ತಂಡ	ಪಂದ್ಯ	ಗೆಲುವು	ಸೋಲು	ರದ್ದು	ಟೈ	ಅಂಕ
ಡೆಲ್ಲಿ ಕ್ಯಾಪಿಟಲ್ಸ್	14	10	4	00	00	20
ಚೆನ್ನೈ ಸೂಪರ್ ಕಿಂಗ್ಸ್	14	9	5	00	00	18
ಬೆಂಗಳೂರು	14	9	5	00	00	18
ಕೋಲ್ಕತ್ತ ನೈಟ್ ರೈಡರ್ಸ್	14	7	7	00	00	14
ಮುಂಬೈ ಇಂಡಿಯನ್ಸ್	14	7	7	00	00	14
ಪಂಜಾಬ್ ಕಿಂಗ್ಸ್	14	6	8	00	00	12
ರಾಜಸ್ಥಾನ	14	5	9	00	00	10
ಹೈದರಾಬಾದ್	14	3	11	00	00	6

* ಶುಕ್ರವಾರದ ಪಂದ್ಯಗಳ ಅಂತ್ಯಕ್ಕೆ

ಐಪಿಎಲ್ ಮತ್ತು ಕ್ರೀಡಾ ಸುದ್ದಿಗಳ ವಿಸ್ತೃತ ವರದಿ, ಮಾಹಿತಿಗಾಗಿ ಭೇಟಿ ನೀಡಿ https://www.prajavani.net/cricket

ಆರೆಂಜ್ ಕ್ಯಾಪ್ (ಹೆಚ್ಚು ರನ್‌ಗಳಿಸಿದವರು)

ಆಟಗಾರ	ತಂಡ	ರನ್
ಕೆ.ಎಲ್.ರಾಹುಲ್	ಪಂಜಾಬ್	626
ಡುಪ್ಲೆಸಿ	ಚೆನ್ನೈ	546
ಶಿಖರ್‌ಧವನ್	ಡೆಲ್ಲಿ	544

ಪರ್ಪಲ್ ಕ್ಯಾಪ್ (ಹೆಚ್ಚು ವಿಕೆಟ್‌ಗಳಿಸಿದವರು)

ಆಟಗಾರ	ತಂಡ	ವಿಕೆಟ್
ಹರ್ಷಲ್‌ಪಟೇಲ್	ಆರ್‌ಸಿಬಿ	30
ಆವೇಶ್‌ಖಾನ್	ಡೆಲ್ಲಿ	22
ಬೂಮ್ರಾ	ಮುಂಬೈ	21

ಬ್ಯಾಡ್ಮಿಂಟನ್: ಭಾರತ ತಂಡಕ್ಕೆ ಸೈನಾ ಬಲ

ಆಹಸ್, ಡೆನ್ಮಾರ್ಕ್ (ಪಿಟಿಐ): ಸುದಿರ್ಮನ್ ಕಪ್ ಟೂರ್ನಿಯಲ್ಲಿ ಅನುಭವಿಸಿದ ನಿರಾಸೆಯನ್ನು ಮರೆತು ಮುನ್ನುಗ್ಗುವ ಹಂಬಲದಲ್ಲಿರುವ ಭಾರತ ತಂಡವು ಶನಿವಾರದಿಂದ ಥಾಮಸ್ ಮತ್ತು ಊಬರ್ ಕಪ್ ಫೈನಲ್ಸ್ ಟೂರ್ನಿಯಲ್ಲಿ ಕಣಕ್ಕಿಳಿಯಲಿದೆ. ಸೈನಾ ನೆಹ್ವಾಲ್, ಚಿರಾಗ್ ಶೆಟ್ಟಿ ಮತ್ತು ಸಾತ್ವಿಕ್ ಸಾಯಿರಾಜ್ ರಣಕಿರೆಡ್ಡಿ ತಂಡಕ್ಕೆ ಮರಳಿರುವುದು ಬಲ ಹೆಚ್ಚಿಸಿದೆ.

ಪ್ರಮುಖ ಆಟಗಾರರ ಅನುಪಸ್ಥಿತಿಯ ಕಾರಣದಿಂದ ಭಾರತವು, ಕಳೆದ ವಾರ ಫಿನ್ಲೆಂಡ್‌ನ ವಂಟಾದಲ್ಲಿ ಕೊನೆಗೊಂಡ ಸುದಿರ್ಮನ್ ಕಪ್ ಟೂರ್ನಿಯಲ್ಲಿ ಚೀನಾ ಮತ್ತು ಥಾಯ್ಲೆಂಡ್ ತಂಡಗಳ ಎದುರು ಸೋಲು ಅನುಭವಿಸಿತ್ತು.

ಐದು ಖಂಡಗಳ ಪ್ರಮುಖ 16 ತಂಡಗಳು ಕಣಕ್ಕಿಳಿಯುವ ಥಾಮಸ್ ಮತ್ತು ಊಬರ್ ಕಪ್ ಫೈನಲ್ಸ್‌ನಲ್ಲಿ ಉತ್ತಮ ಸಾಮರ್ಥ್ಯ ತೋರುವ ನಿರೀಕ್ಷೆಯಲ್ಲಿದೆ. ಥಾಮಸ್ ಕಪ್‌ನಲ್ಲಿ, ಭಾರತ ತಂಡವು ಚೀನಾ, ನೆದರ್ಲೆಂಡ್ಸ್ ಮತ್ತು ತಹಿತಿಯೊಂದಿಗೆ 'ಸಿ' ಗುಂಪಿನಲ್ಲಿ ಸ್ಥಾನ ಪಡೆದಿದೆ. ಆದರೆ ಊಬರ್ ಕಪ್‌ನ 'ಬಿ' ಗುಂಪಿನಲ್ಲಿ ಮಹಿಳಾ ತಂಡವು ಥಾಯ್ಲೆಂಡ್, ಸ್ಪೇನ್ ಮತ್ತು ಸ್ಕಾಟ್ಲೆಂಡ್‌ನೊಂದಿಗಿದೆ.

ಸೈನಾ ನೆಹ್ವಾಲ್– ಪಿಟಿಐ ಚಿತ್ರ

ಪುರುಷರ ತಂಡವು ಮೊದಲ ಪಂದ್ಯದಲ್ಲಿ ನೆದರ್ಲೆಂಡ್ಸ್ ಎದುರು ಆಡಲಿದ್ದರೆ, ಮಹಿಳಾ ತಂಡಕ್ಕೆ ಸ್ಪೇನ್ ಮುಖಾಮುಖಿಯಾಗಲಿದೆ.

ಭಾರತದ 10 ಮಂದಿ ಪುರುಷರ ತಂಡದಲ್ಲಿ ಸಿಂಗಲ್ಸ್ ವಿಭಾಗದ ನಾಲ್ವರು ಮತ್ತು ಮೂರು ಡಬಲ್ಸ್ ಜೋಡಿಗಳು ಇವೆ.

ಪುರುಷರ ತಂಡವು ಕಳೆದ 11 ವರ್ಷಗಳಿಂದ ಟೂರ್ನಿಯ ನಾಕೌಟ್ ಹಂತ ತಲುಪಿಲ್ಲ. ಈ ಬಾರಿ ಆ ತಡೆ ದಾಟುವ ಭರವಸೆಯಲ್ಲಿದೆ. ಮಹಿಳಾ ತಂಡವು 2014 ಮತ್ತು 2016ರಲ್ಲಿ ಕಂಚಿನ ಪದಕ ಗೆದ್ದಿತ್ತು. ಎರಡು ಬಾರಿ ಒಲಿಂಪಿಕ್ಸ್ ಪದಕ ವಿಜೇತೆ ಪಿ.ವಿ.ಸಿಂಧು ಅವರು ಈ ಟೂರ್ನಿಯಲ್ಲಿ ಆಡುತ್ತಿಲ್ಲವಾದ್ದರಿಂದ ಪದಕ ಗೆಲ್ಲುವುದು ಸವಾಲೆನಿಸಿದೆ.

ತಂಡಗಳು: ಪುರುಷರು: ಸಿಂಗಲ್ಸ್ ವಿಭಾಗ: ಬಿ.ಸಾಯಿ ಪ್ರಣೀತ್, ಕಿರಣ್ ಜಾರ್ಜ್, ಕಿದಂಬಿ ಶ್ರೀಕಾಂತ್, ಸಮೀರ್ ವರ್ಮಾ. ಡಬಲ್ಸ್: ಚಿರಾಗ್ ಶೆಟ್ಟಿ–ಸಾತ್ವಿಕ್‌ಸಾಯಿರಾಜ್ ರಣಕಿರೆಡ್ಡಿ, ಧ್ರುವ ಕಪಿಲ– ಎಂ.ಆರ್.ಅರ್ಜುನ್, ಜಿ. ಕೃಷ್ಣಪ್ರಸಾದ್– ವಿಷ್ಣುವರ್ಧನ್

ಮಹಿಳೆಯರು: ಸಿಂಗಲ್ಸ್: ಸೈನಾ ನೆಹ್ವಾಲ್, ಮಾಳವಿಕಾ ಬಾನ್ಸೋದ್, ಅದಿತಿ ಭಟ್ ಮತ್ತು ತಸ್ನಿಮ್ ಮಿರ್. ಡಬಲ್ಸ್: ಅಶ್ವಿನಿ ಪೊನ್ನಪ್ಪ– ಎನ್. ಸಿಕ್ಕಿರೆಡ್ಡಿ, ತನಿಶಾ ಕ್ರಾಸ್ಟೊ– ಋತುಪರ್ಣಾ ಪಂಡಾ, ಗಾಯತ್ರಿ ಗೋಪಿಚಂದ್–ತ್ರೀಶಾ ಜೋಲಿ.

ಕರಿನೆರವಂಡ ಸೋಮಣ್ಣ ಅವರ ವಿವಾಹವು ನಮ್ರತಾ ಅವರೊಂದಿಗೆ ಶುಕ್ರವಾರ ನೆರವೇರಿತು

ದಾಂಪತ್ಯ ಜೀವನಕ್ಕೆ ಹಾಕಿ ಪಟು ಸೋಮಣ್ಣ

ಮಡಿಕೇರಿ: ಹಾಕಿ ಆಟಗಾರ ಕರಿನೆರವಂಡ ಸೋಮಣ್ಣ ಅವರ ವಿವಾಹವು ವಿರಾಜಪೇಟೆಯ ಕೊಡವ ಸಮಾಜದಲ್ಲಿ ಶುಕ್ರವಾರ ನಮ್ರತಾ ಅವರೊಂದಿಗೆ ನಡೆಯಿತು. ಪಾಲಂಗಾಲದ ಕರಿನೆರವಂಡ ಕೆ. ಮಂದಪ್ಪ ಮತ್ತು ಇಂದಿರಾ ದಂಪತಿ ಪುತ್ರ ಸೋಮಣ್ಣ, ಗೋಣಿಕೊಪ್ಪಲು ಚೇಮಿರ ಬೆಳ್ಯಪ್ಪ ಮತ್ತು ಗೀತಾ ದಂಪತಿ ಪುತ್ರಿ ನಮ್ರತಾ ಹೊಸ ಜೀವನಕ್ಕೆ ಕಾಲಿಟ್ಟರು.

ಹಾಕಿ ಆಟಗಾರರಾದ ವಿ.ಆರ್. ರಘುನಾಥ್, ಎಸ್.ವಿ.ಸುನಿಲ್, ಎಸ್. ಕೆ.ಉತ್ತಪ್ಪ, ನಿಕ್ಕಿನ್ ತಿಮ್ಮಯ್ಯ, ವಿ.ಎಸ್. ವಿನಯ್, ಪ್ರಧಾನ್ ಸೋಮಣ್ಣ, ಪಿ.ಎಲ್.ತಿಮ್ಮಣ್ಣ, ಎ.ಬಿ.ಚೇಯಣ್ಣ, ಭರತ್ ಚೆಟ್ರಿ, ಸಿ.ಎಸ್.ಪೂಣಚ್ಚ, ಕೆ.ಕೆ. ಪೂಣಚ್ಚ, ಬಿ.ಸಿ.ಪೂಣಚ್ಚ, ಪಿ.ಷಣ್ಮುಗಂ, ಎ.ಸಿ.ಕುಟ್ಟಪ್ಪ, ಆಭರಣ್ ಸುದೇವ್, ಅಂತರರಾಷ್ಟ್ರೀಯ ರಗ್ಬಿ ಆಟಗಾರ ಮಾದಂಡ ತಿಮ್ಮಯ್ಯ ಪಾಲ್ಗೊಂಡಿದ್ದರು.

ಉಂಗುರ ಸಿಕ್ಕಿತು; ಸಂತಸ ತಂದಿತು!

ಇಂಡಿಯನ್ ವೆಲ್ಸ್ (ಪಿಟಿಐ/ ರಾಯಿಟರ್ಸ್): ತಮ್ಮ ಮದುವೆ ಉಂಗುರ ಕಳೆದುಕೊಂಡು ನಿರಾಶರಾಗಿದ್ದ ಟೆನಿಸ್ ತಾರೆ ಆ್ಯಂಡಿ ಮರ್ರೆ ಮುಖದಲ್ಲಿ ಮಂದಹಾಸ ಮರುಕಳಿಸಿದೆ. ಇದೀಗ ಅವರಿಗೆ ತಮ್ಮ ಉಂಗುರ ಹಾಗೂ ಬೂಟುಗಳು ಅವರಿಗೆ ಮರಳಿ ಸಿಕ್ಕಿವೆ. ಕ್ಯಾಲಿಫೋರ್ನಿಯಾದ ಮರಳುಗಾಡಿನಲ್ಲಿ ಒಯಸಿಸ್ ಸಿಕ್ಕಷ್ಟೇ ಸಂಭ್ರಮದಲ್ಲಿ ಅವರಿದ್ದಾರೆ.

ಇಂಡಿಯನ್ ವೆಲ್ಸ್ ಟೂರ್ನಿಯಲ್ಲಿ ಆಡಲು ಇಲ್ಲಿಗೆ ಬಂದಿರುವ ಬ್ರಿಟನ್ ಆಟಗಾರ, ತಡರಾತ್ರಿ ಬೂಟಿನ ಲೇಸ್‌ಗೆ ಉಂಗುರವನ್ನು ಕಟ್ಟಿ ತಮ್ಮ ಕಾರಿನ ಅಡಿ ಇಟ್ಟು ಮರೆತಿದ್ದರು. ವಿವಾಹ ಬಂಧದ ಸಂಕೇತವಾಗಿದ್ದ ಉಂಗುರ ಇಲ್ಲದಿರುವುದರ ಕುರಿತು ಫಿಸಿಯೊ ಅವರು ನೆನಪಿಸಿದ ಬಳಿಕ ಮರ್ರೆ ಅವರಿಗೆ ಬೂಟಿಗೆ ಉಂಗುರವನ್ನು ಕಟ್ಟಿದ್ದು ಗೊತ್ತಾಗಿದೆ.

ಆದರೆ ಬೆಳಿಗ್ಗೆ ಬಂದು ನೋಡಿದಾಗ ಅಲ್ಲಿ ಬೂಟು ಮತ್ತು ಉಂಗುರ ಕಾಣಿಸಿರಲಿಲ್ಲ.

ಈ ವಿಷಯವನ್ನು ಇನ್ಸ್ಟಾಗ್ರಾಂನಲ್ಲಿ ಹಂಚಿಕೊಂಡಿದ್ದ ಮೂರು ಬಾರಿಯ ಗ್ರ್ಯಾನ್‌ಸ್ಲಾಮ್ ಚಾಂಪಿಯನ್ ಆ್ಯಂಡಿ 'ಹತಾಶೆಗೊಂಡಿರುವ ಹೆಂಡತಿಯೊಂದಿಗೆ ಬಾಂಧವ್ಯ ಸುಧಾರಿಸಲು ಉಂಗುರವನ್ನು ಮರಳಿಸಿ' ಎಂದು ಕೇಳಿಕೊಂಡಿದ್ದರು. ಇದಾದ ಅವರು ತಂಗಿದ್ದ ಹೋಟೆಲ್ ಸಿಬ್ಬಂದಿಯು ಉಂಗುರ ಮತ್ತು ಬೂಟುಗಳನ್ನು ತಂದುಕೊಟ್ಟಿದ್ದಾರೆ.

ಮರ್ರೆ 2015ರಲ್ಲಿ ಗೆಳತಿ ಕಿಮ್ ಸೀಯರ್ಸ್ ಅವರನ್ನು ಮದುವೆಯಾಗಿದ್ದಾರೆ. ಈ ದಂಪತಿಗೆ ನಾಲ್ಕು ಜನ ಮಕ್ಕಳಿದ್ದಾರೆ.



ಉಂಗುರದೊಂದಿಗೆ ಆ್ಯಂಡಿ ಮರ್ರೆ – ಇನ್‌ಸ್ಟಾಗ್ರಾಂ ಚಿತ್ರ

ಅಂಗಣದಲ್ಲೇ 'ನಿಶ್ಚಿತಾರ್ಥ'

ದುಬೈ: ಶುಕ್ರವಾರ ಪಂಜಾಬ್ ಕಿಂಗ್ಸ್ ವಿರುದ್ಧ ನಡೆದ ಪಂದ್ಯದ ಬಳಿಕ ಚೆನ್ನೈ ಸೂಪರ್ ಕಿಂಗ್ಸ್ ತಂಡದ ಆಟಗಾರ ದೀಪಕ್ ಚಾಹರ್ ಅವರು ಪ್ರೇಯಸಿ ಜಯಾ ಭಾರದ್ವಾಜ್ ಅವರಿಗೆ ಅಂಗಣದಲ್ಲೇ ಉಂಗುರ ತೊಡಿಸಿದರು. ಪಂದ್ಯದ ಬಳಿಕ ಪ್ರೇಕ್ಷಕರ ಸ್ಟ್ಯಾಂಡ್‌ಗೆ ತೆರಳಿದ ದೀಪಕ್, ವಿವಾಹದ ಪ್ರಸ್ತಾಪ ಮುಂದಿಟ್ಟರು. ಈ ಸಂದರ್ಭಕ್ಕಾಗಿ ಕಾಯುತ್ತಿದ್ದ ಜಯಾ ಸಂಭ್ರಮಿಸಿದರು.

ಪರಸ್ಪರ ಉಂಗುರ ತೊಡಿಸಿಕೊಂಡ ದೀಪಕ್ ಮತ್ತು ಜಯಾ ಆಲಿಂಗನದ ಮೂಲಕ ಪುಳಕಗೊಂಡರು.

ಇದರೊಂದಿಗೆ ಐಪಿಎಲ್ ವೇದಿಕೆಯಲ್ಲಿ ಅವರಿಬ್ಬರ ಅನೌಪಚಾರಿಕ ನಿಶ್ಚಿತಾರ್ಥ ನೆರವೇರಿತು. ಇದರ ವಿಡಿಯೊ ಲೀಗ್‌ನ ಅಧಿಕೃತ ಟ್ವಿಟರ್ ಖಾತೆಯಲ್ಲಿದೆ.

ನಟ ಸಿದ್ಧಾರ್ಥ್ ಭಾರದ್ವಾಜ್ ಅವರ ಸಹೋದರಿ, ದೆಹಲಿಯ ಜಯಾ ಅವರು ಕಾರ್ಪೊರೇಟ್ ಸಂಸ್ಥೆಯೊಂದರಲ್ಲಿ ಕೆಲಸ ಮಾಡುತ್ತಿದ್ದಾರೆ.

ವಿಜಯ್‌ವೀರ್–ರೈಥಮ್‌ಗೆ ಚಿನ್ನ

ಲಿಮಾ, ಪೆರು (ಪಿಟಿಐ): ರೈಥಮ್ ಸಂಗ್ವಾನ್ ಹಾಗೂ ವಿಜಯ್‌ವೀರ್ ಸಿಧು ಚಿನ್ನ ಗೆಲ್ಲುವುದರೊಂದಿಗೆ ಜೂನಿಯರ್ ವಿಶ್ವ ಶೂಟಿಂಗ್ ಚಾಂಪಿಯನ್‌ಷಿಪ್‌ನಲ್ಲಿ ಭಾರತದ ಶೂಟರ್‌ಗಳ ಪಾರಮ್ಯ ಮುಂದುವರಿದಿದೆ.

25 ಮೀಟರ್ಸ್ ರ್‍ಯಾಪಿಡ್ ಫೈರ್ ಪಿಸ್ತೂಲ್ ಮಿಶ್ರ ತಂಡ ವಿಭಾಗದಲ್ಲಿ ರೈಥಮ್ ಹಾಗೂ ವಿಜಯ್‌ವೀರ್ ಅಗ್ರಸ್ಥಾನ ಗಳಿಸಿದರು.

ಇದರೊಂದಿಗೆ ಚಾಂಪಿಯನ್‌ಷಿಪ್ ಭಾರತಕ್ಕೆ ಒಲಿದ ಪದಕಗಳ ಒಟ್ಟು ಸಂಖ್ಯೆ 23ಕ್ಕೇರಿತು. ಅದರಲ್ಲಿ 10 ಚಿನ್ನದ ಪದಕಗಳು. ಇದರೊಂದಿಗೆ ಪದಕಪಟ್ಟಿಯಲ್ಲಿ ಅಗ್ರಸ್ಥಾನವನ್ನು ಕಾಯ್ದುಕೊಂಡಿದೆ.

ರೈಥಮ್–ಸಿಧು ಜೋಡಿಯು ಫೈನಲ್‌ನಲ್ಲಿ 9–1ರಿಂದ ಥಾಯ್ಲೆಂಡ್‌ನ ಕನ್ಯಾಕೊರ್ನ್ ಹಿರುನ್‌ಫೊಯಮ್–ಶಾವಕೊನ್ ತ್ರಿನಿಪಕ್ರೊನ್ ಅವರನ್ನು ಮಣಿಸಿದರು.

ಈ ವಿಭಾಗದ ಕಂಚಿನ ಪದಕವು ಭಾರತದ ತೇಜಸ್ವಿನಿ ಮತ್ತು ಅನೀಶ್ ಅವರ ಪಾಲಾಯಿತು. ಕಂಚಿನ ಪದಕದ ಹಣಾಹಣಿಯಲ್ಲಿ ಈ ಜೋಡಿಯು ಥಾಯ್ಲೆಂಡ್‌ನ ಮತ್ತೊಂದು ಜೋಡಿಯಾದ ಚಾವ್ಪಿಯಾ ಪಡುಕಾ ಮತ್ತು ರಾಮ್ ಖಮಹೆಂಗ್ ಅವರನ್ನು 10–8ರಿಂದ ಮಣಿಸಿತು. ಮಹಿಳೆಯರ 50 ಮೀ. ರೈಫಲ್ 3 ಪೊಸಿಷನ್ಸ್‌ನಲ್ಲಿ ಪ್ರಸಿದ್ಧಿ ಮಹಾಂತ್, ನಿಶ್ಚಲ್ ಮತ್ತು ಆಯುಷಿ ಪೋದ್ದರ್ ಬೆಳ್ಳಿ ಪದಕ ತಮ್ಮದಾಗಿಸಿಕೊಂಡರು. ಫೈನಲ್‌ನಲ್ಲಿ ಈ ಶೂಟರ್‌ಗಳು 43–47ರಿಂದ ಅಮೆರಿಕದ ಎಲಿಜಬೆತ್ ಮೆಗಿನ್, ಲೋರೇನ್ ಜಾವೂನ್ ಮತ್ತು ಕೊರೊಲಿನ್ ಟಕ್ಕರ್ ಅವರಿಗೆ ಸೋತಿತು.

ಭಾರತದ ಬಳಿ ಸದ್ಯ 10 ಚಿನ್ನ, ಒಂಬತ್ತು ಬೆಳ್ಳಿ ಮತ್ತು ನಾಲ್ಕು ಕಂಚಿನ ಪದಕಗಳಿವೆ.

ಮಹಿಳೆಯರ 50 ಮೀ. ರೈಫಲ್ ತ್ರಿ ಪೊಸಿಷನ್ಸ್‌ನಲ್ಲಿ ಬೆಳ್ಳಿ ಗೆದ್ದ ಪ್ರಸಿದ್ಧಿ ಮಹಾಂತ್, ಆಯುಷಿ ಪೋದ್ದರ್ ಮತ್ತು ನಿಶ್ಚಲ್– ಪಿಟಿಐ ಚಿತ್ರ

'ಲೀಗ್ ವಿಜೇತ'ರಿಗೆ ₹ 3.50 ಕೋಟಿ
ಐಎಸ್‌ಎಲ್ ಟೂರ್ನಿ: ಬಹುಮಾನ ಮೊತ್ತ ಮರುನಿಗದಿ

ನವದೆಹಲಿ (ಪಿಟಿಐ): ಇಂಡಿಯನ್ ಸೂಪರ್ ಲೀಗ್ (ಐಎಸ್‌ಎಲ್) ಫುಟ್‌ಬಾಲ್ ಟೂರ್ನಿಯ 'ಲೀಗ್ ವಿಜೇತ' ತಂಡಕ್ಕೆ ಬಹುಮಾನ ಮೊತ್ತದಲ್ಲಿ ಭಾರಿ ಏರಿಕೆಯಾಗಿದೆ. ಆದರೆ ಚಾಂಪಿಯನ್ ತಂಡಕ್ಕೆ ನೀಡಲಾಗುವ ಮೊತ್ತದಲ್ಲಿ ಕಡಿತ ಮಾಡಲಾಗಿದೆ. ಟೂರ್ನಿಯ ಆಯೋಜಕರು ಶುಕ್ರವಾರ ಈ ವಿಷಯ ಪ್ರಕಟಿಸಿದ್ದಾರೆ.

2019–20ನೇ ಆವೃತ್ತಿಯಲ್ಲಿ 'ಲೀಗ್ ವಿಜೇತ' ಪದ್ಧತಿಯನ್ನು ಪರಿಚಯಿಸಲಾಗಿದೆ. ಲೀಗ್ ಹಂತದಲ್ಲಿ ಅಗ್ರಸ್ಥಾನ ಪಡೆಯುವ ತಂಡಕ್ಕೆ ಈ ಗೌರವ ನೀಡಲಾಗುತ್ತಿದೆ. ಈ ಹಿಂದಿನ ಎರಡು ಆವೃತ್ತಿಗಳಿಂದ ಈ ತಂಡಕ್ಕೆ ₹ 50 ಲಕ್ಷ ನೀಡಲಾಗುತ್ತಿತ್ತು. ಈ ಬಾರಿ ಆ ಮೊತ್ತವನ್ನು ಫುಟ್‌ಬಾಲ್ ಸ್ಪೋರ್ಟ್ಸ್ ಡೆವಲಪ್‌ಮೆಂಟ್ ಲಿಮಿಟೆಡ್ (ಎಫ್‌ಎಸ್‌ಡಿಎಲ್) ₹ 3.50 ಕೋಟಿಗೆ ಹೆಚ್ಚಿಸಿದೆ.

ಈ ಹಿಂದೆ ಚಾಂಪಿಯನ್ ತಂಡಕ್ಕೆ ₹ 8 ಕೋಟಿ ನೀಡಲಾಗುತ್ತಿತ್ತು. ಅದನ್ನು ಈಗ ₹ 6 ಕೋಟಿಗೆ ಇಳಿಸಲಾಗಿದೆ. ರನ್ನರ್ ಅಪ್ ತಂಡಕ್ಕೆ ₹ 3 ಕೋಟಿ (ಈ ಹಿಂದೆ ₹ 4 ಕೋಟಿ) ಮತ್ತು ಸೆಮಿಫೈನಲ್ ತಲುಪಿದ ಇನ್ನೆರಡು ತಂಡಗಳು ತಲಾ ₹ 1.5 ಕೋಟಿ ಪಡೆಯಲಿವೆ. 2021-22ರ ಆವೃತ್ತಿಯಲ್ಲಿ ನೀಡಲಾಗುವ ಒಟ್ಟು ಬಹುಮಾನ ಮೊತ್ತ ₹ 15.5 ಕೋಟಿ ಆಗಿದೆ.

ಒಂದು ವೇಳೆ ಲೀಗ್ ವಿಜೇತ ತಂಡವು ಚಾಂಪಿಯನ್ ಆದರೆ ₹ 9.5 ಕೋಟಿ (₹ 3.5 ಕೋಟಿ + ₹ 6 ಕೋಟಿ) ಜೇಬಿಗಿಳಿಸಲಿದೆ. ರನ್ನರ್ ಅಪ್ ಸ್ಥಾನ ಗಳಿಸಿದರೆ ₹ 6.5 ಕೋಟಿ ತನ್ನದಾಗಿಸಿಕೊಳ್ಳಲಿದೆ. ಈ ಬಾರಿಯ ಐಎಸ್‌ಎಲ್ ಟೂರ್ನಿ ನವೆಂಬರ್ 19ರಿಂದ ಗೋವಾದಲ್ಲಿ ಆರಂಭವಾಗಲಿದೆ.

ಟೂರ್ನಿಯ ಪಂದ್ಯವೊಂದರಲ್ಲಿ ಬೆಂಗಳೂರು ಎಫ್‌ಸಿಯ ಸುನಿಲ್ ಚೆಟ್ರಿ

ಹಾಕಿ ಪ್ರೊ ಲೀಗ್: ಭಾರತಕ್ಕೆ ಅವಕಾಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಭಾರತದ ಮಹಿಳಾ ಹಾಕಿ ತಂಡಕ್ಕೆ ಇದೇ ಮೊದಲ ಬಾರಿ ಅಂತರರಾಷ್ಟ್ರೀಯ ಹಾಕಿ ಫೆಡರೇಷನ್‌ನ (ಎಫ್‌ಐಎಚ್) ಪ್ರೊ ಲೀಗ್‌ನಲ್ಲಿ ಪಾಲ್ಗೊಳ್ಳಲು ಅವಕಾಶ ಲಭಿಸಿದೆ. ಆಸ್ಟ್ರೇಲಿಯಾ ಮತ್ತು ನ್ಯೂಜಿಲೆಂಡ್ ತಂಡಗಳು ಟೂರ್ನಿಯಿಂದ ಹಿಂದೆ ಸರಿದ ಕಾರಣ ಭಾರತ ಮತ್ತು ಸ್ಪೇನ್ ತಂಡಗಳನ್ನು ಸೇರಿಸಲು ಫೆಡರೇಷನ್ ನಿರ್ಧರಿಸಿದೆ ಎಂದು ಹಾಕಿ ಇಂಡಿಯಾ ತಿಳಿಸಿದೆ.

ಮಹಿಳೆಯರ ಪ್ರೊ ಲೀಗ್‌ನ ಮೂರನೇ ಆವೃತ್ತಿಗೆ ಇದೇ ತಿಂಗಳ 13ರಂದು ಚಾಲನೆ ಸಿಗಲಿದೆ. ಮೊದಲ ಪಂದ್ಯದಲ್ಲಿ ಒಲಿಂಪಿಕ್ ಚಾಂಪಿಯನ್ ಮತ್ತು ವಿಶ್ವ ಚಾಂಪಿಯನ್ ನೆದರ್ಲೆಂಡ್ಸ್ ತಂಡ ಬೆಲ್ಜಿಯಂ ವಿರುದ್ಧ ಸೆಣಸಲಿದೆ.

ಪ್ರೊ ಲೀಗ್‌ನಲ್ಲಿ ಪಾಲ್ಗೊಳ್ಳಲು ಅನಿರೀಕ್ಷಿತವಾಗಿ ಅವಕಾಶ ಲಭಿಸಿದ್ದಕ್ಕೆ ಭಾರತ ತಂಡದ ಆಟಗಾರ್ತಿಯರು ಪುಳಕಗೊಂಡಿದ್ದಾರೆ. ಜಗತ್ತಿನ ಶ್ರೇಷ್ಠ ತಂಡಗಳ ಎದುರು ಸೆಣಸಲು ಇದು ನೆರವಾಗಲಿದೆ ಎಂದು ನಾಯಕಿ ರಾಣಿ ರಾಂಪಾಲ್ ಅಭಿಪ್ರಾಯಪಟ್ಟಿದ್ದಾರೆ.

'ಎಫ್‌ಐಎಚ್ ಪ್ರೊ ಲೀಗ್‌ನಲ್ಲಿ ಆಡಿದ ಪುರುಷರ ತಂಡಕ್ಕೆ ಭಾರಿ ಮನ್ನಣೆ ಸಿಕ್ಕಿದೆ. ಇದು, ಈ ಲೀಗ್‌ನ ಮಹತ್ವವನ್ನು ಸಾಬೀತು ಮಾಡಿದೆ. ಜಗತ್ತಿನ ಪ್ರಮುಖ ತಂಡಗಳ ಎದುರು ಸೆಣಸಿದ್ದರಿಂದ ಪುರುಷರ ತಂಡ ಶ್ರೇಷ್ಠ ಮಟ್ಟಕ್ಕೆ ಬೆಳೆದಿದೆ. ನಮ್ಮ ತಂಡಕ್ಕೂ ಅದೇ ರೀತಿಯ ಅವಕಾಶಗಳು ಲಭಿಸಲಿವೆ' ಎಂದು ರಾಣಿ ಹೇಳಿದ್ದಾರೆ.

'ಪ್ರೊ ಲೀಗ್‌ನಲ್ಲಿ ಆಡುವುದರಿಂದ ಭಾರತ ಮಹಿಳಾ ತಂಡದಲ್ಲಿ ಇನ್ನಷ್ಟು ಪ್ರತಿಭೆಗಳು ಬೆಳಗಲು ಸಾಧ್ಯ. ಹೊಸ ಆಟಗಾರ್ತಿಯರಿಗಂತೂ ಇದೊಂದು ಅಪೂರ್ವ ಅವಕಾಶವಾಗಲಿದೆ. ಮುಂದಿನ ವರ್ಷ ನಡೆಯಲಿರುವ ಏಷ್ಯನ್ ಗೇಮ್ಸ್ ಮತ್ತು 2023ರಲ್ಲಿ ನಡೆಯಲಿರುವ ವಿಶ್ವಕಪ್‌ಗೆ ಬಲಿಷ್ಠ ತಂಡವನ್ನು ಸಿದ್ಧಗೊಳಿಸಲು ಇದು ನೆರವಾಗಲಿದೆ' ಎಂದು ಗೋಲ್‌ಕೀಪರ್ ಸವಿತಾ ಪೂನಿಯಾ ಭಿಪ್ರಾಯಪಟ್ಟಿದ್ದಾರೆ.

ಭಾರತ–ಆಸ್ಟ್ರೇಲಿಯಾ ಮಹಿಳಾ ಟಿ20 ಎರಡನೇ ಪಂದ್ಯ
ಗೆಲುವಿನ ಛಲದಲ್ಲಿ ಭಾರತ

ಗೋಲ್ಡ್‌ಕೋಸ್ಟ್ (ಪಿಟಿಐ): ಜೆಮಿಮಾ ರಾಡ್ರಿಗಸ್ ಲಯಕ್ಕೆ ಮರಳಿರುವುದರಿಂದ ಭಾರತ ತಂಡದ ಬಲ ವೃದ್ಧಿಸಿದ್ದು, ಆಸ್ಟ್ರೇಲಿಯಾ ಎದುರಿನ ಎರಡನೇ ಟ್ವೆಂಟಿ–20 ಪಂದ್ಯದಲ್ಲಿ ಗೆಲುವಿನ ಛಲದೊಂದಿಗೆ ಕಣಕ್ಕಿಳಿಯಲಿದೆ.

ಮಳೆಯಿಂದಾಗಿ ರದ್ದಾಗ ಸರಣಿಯ ಮೊದಲ ಪಂದ್ಯದಲ್ಲಿ ಜೆಮಿಮಾ 36 ಎಸೆತಗಳಲ್ಲಿ 49 ರನ್ ಗಳಿಸಿ ಮಿಂಚಿದ್ದರು.

'ದಿ ಹಂಡ್ರೆಡ್' ಟೂರ್ನಿಯಲ್ಲಿ ತೋರಿದ ಸಾಮರ್ಥ್ಯವನ್ನು ಅವರು ಇಲ್ಲಿಯೂ ಮುಂದುವರಿಸಿದ್ದಾರೆ. ಅಗ್ರ ಕ್ರಮಾಂಕದಲ್ಲಿ ಸ್ಮೃತಿ ಮಂದಾನ ಮತ್ತು ಶಫಾಲಿ ವರ್ಮಾ ಕೂಡ ಉಪಯುಕ್ತ ಕಾಣಿಕೆ ನೀಡಬಲ್ಲರು.

ಬೆರಳಿನ ಗಾಯದಿಂದಾಗಿ ಏಕದಿನ ಸರಣಿ ಹಾಗೂ ಟೆಸ್ಟ್ ಪಂದ್ಯದಲ್ಲಿ ಆಡದಿದ್ದ ಹರ್ಮನ್‌ಪ್ರೀತ್ ಕೌರ್ ಮೊದಲ ಟಿ20 ಪಂದ್ಯದಲ್ಲಿ ಕಣಕ್ಕಿಳಿದಿದ್ದರು. ಯುವ ಆಟಗಾರ್ತಿಯರಾದ ಯಷ್ಟಿಕಾ ಭಾಟಿಯಾ ಹಾಗೂ ರಿಚಾ ಘೋಷ್ ಅವರಿಗೆ ಮಧ್ಯಮಕ್ರಮಾಂಕದಲ್ಲಿ ಮಿಂಚಲು ಈ ಪಂದ್ಯವು ಉತ್ತಮ ಅವಕಾಶವಾಗಿದೆ.

ವೇಗಿ ಶಿಖಾ ಪಾಂಡೆ ಬೌಲಿಂಗ್ ವಿಭಾಗವನ್ನು ಮುನ್ನಡೆಸುವರು. ರೇಣುಕಾ ಸಿಂಗ್, ಮೇಘನಾ ಸಿಂಗ್ ಮತ್ತು ಸ್ಪಿನ್ನರ್‌ಗಳಾದ ಪೂಜಾ ವಸ್ತ್ರಕಾರ್, ರಾಜೇಶ್ವರಿ ಗಾಯಕವಾಡ್ ಮತ್ತು ದೀಪ್ತಿ ಶರ್ಮಾ ಕೂಡ ಉತ್ತಮ ಸಾಮರ್ಥ್ಯ ತೋರುವ ವಿಶ್ವಾಸದಲ್ಲಿದ್ದಾರೆ.

ಅನುಭವಿ ಆಟಗಾರ್ತಿಯರಾದ ಎಲಿಸ್ ಪೆರಿ, ಅಲಿಸಾ ಹೀಲಿ, ನಾಯಕಿ ಮೆಗ್ ಲ್ಯಾನಿಂಗ್, ಆ್ಯಶ್ಲೆ ಗಾರ್ಡನರ್ ಮತ್ತು ಬೇಥ್ ಮೂನಿ ಅವರಿಂದ ಕೂಡಿರುವ ಆಸ್ಟ್ರೇಲಿಯಾ ಕೂಡ ಬಲಿಷ್ಠವಾಗಿದ್ದು, ಜಿದ್ದಾಜಿದ್ದಿನ ಪೈಪೋಟಿ ನಿರೀಕ್ಷಿಸಬಹುದು.

ಪಂದ್ಯ ಆರಂಭ: ಮಧ್ಯಾಹ್ನ 1.40 (ಭಾರತೀಯ ಕಾಲಮಾನ)

ನೇರ ಪ್ರಸಾರ: ಸೋನಿ ಸಿಕ್ಸ್ ಹಾಗೂ ಸೋನಿ ಟೆನ್

ಜೆಮಿಮಾ ರಾಡ್ರಿಗಸ್– ಎಎಫ್‌ಪಿ ಚಿತ್ರ

ಪ್ರಶಸ್ತಿಯೊಂದಿಗೆ ಆಕಾಂಕ್ಷಾ (ಎಡ) ಮತ್ತು ಸೋಹಾ ಸಾದಿಕ್

ಟೆನಿಸ್: ಸೋಹಾ, ಆಕಾಂಕ್ಷಾಗೆ ಪ್ರಶಸ್ತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸ್ಥಳೀಯ ಪ್ರತಿಭೆ ಸೋಹಾ ಸಾದಿಕ್ ಮತ್ತು ಮಹಾರಾಷ್ಟ್ರದ ಆಕಾಂಕ್ಷಾ ಜೋಡಿ ಇಲ್ಲಿ ನಡೆದ ಎಐಟಿಎ ಆಶ್ರಯದ ಪಿಬಿಐ–ಸಿಎಸ್‌ಇ ಮಹಿಳೆಯರ ಟೆನಿಸ್ ಟೂರ್ನಿಯ ಡಬಲ್ಸ್ ವಿಭಾಗದ ಪ್ರಶಸ್ತಿ ಗೆದ್ದುಕೊಂಡರು.

ರಾಜ್ಯ ಟೆನಿಸ್ ಸಂಸ್ಥೆ ಆಯೋಜಿಸಿರುವ ಟೂರ್ನಿಯಲ್ಲಿ ಶುಕ್ರವಾರ ನಡೆದ ಫೈನಲ್ ಪಂದ್ಯದಲ್ಲಿ ಅಗ್ರ ಶ್ರೇಯಾಂಕದ ಜೋಡಿ ತಮಿಳುನಾಡಿನ ಸಂಹಿತಾ ಸಾಯಿ ಮತ್ತು ಅವಂತಿಕಾ ಸಾಯಿ ಅವರನ್ನು 6-0, 6-2ರಲ್ಲಿ ಸೋಹಾ–ಆಕಾಂಕ್ಷಾ ಮಣಿಸಿದರು.

ಶನಿವಾರ ನಡೆಯಲಿರುವ ಸಿಂಗಲ್ಸ್‌ನಲ್ಲಿ ಸೋಹಾ ಮತ್ತು ಆಕಾಂಕ್ಷಾ ಪ್ರಶಸ್ತಿಗಾಗಿ ಪರಸ್ಪರ ಸೆಣಸುವರು. ಪಡುಕೋಣೆ–ದ್ರಾವಿಡ್ ಸೆಂಟರ್ ಫಾರ್ ಸ್ಪೋರ್ಟ್ಸ್ ಎಕ್ಸಲೆನ್ಸ್ ಆವರಣದಲ್ಲಿ ನಡೆದ ಸೆಮಿಫೈನಲ್‌ನಲ್ಲಿ ಹಾಲಿ ಚಾಂಪಿಯನ್ ಮತ್ತು ಅಗ್ರ ಶ್ರೇಯಾಂಕದ ಸೋಹಾ ನಾಲ್ಕನೇ ಶ್ರೇಯಾಂಕದ ಆಟಗಾರ್ತಿ ಮಹಾರಾಷ್ಟ್ರದ ಪೂಜಾ ಇಂಗಳೆ ವಿರುದ್ಧ 7-6, 6-2ರಲ್ಲಿ ಜಯ ಗಳಿಸಿದರು.

ಸಂಹಿತಾ ಸಾಯಿ ವಿರುದ್ಧ ನಡೆದ ನಾಲ್ಕರ ಘಟ್ಟದ ಪಂದ್ಯದಲ್ಲಿ ಆಕಾಂಕ್ಷಾ 6-0, 6-2ರಲ್ಲಿ ಗೆಲುವು ಸಾಧಿಸಿದರು.

16ರಂದು ವೇಟ್‌ಲಿಫ್ಟಿಂಗ್

ಬೆಂಗಳೂರು: ಬೆಂಗಳೂರು ಜಿಲ್ಲಾ ವೇಟ್‌ಲಿಫ್ಟಿಂಗ್ ಸಂಸ್ಥೆಯು ರಾಜ್ಯ ಸಂಸ್ಥೆಯ ಸಹಯೋಗದೊಂದಿಗೆ ಅಕ್ಟೋಬರ್ 16ರಂದು ವೇಟ್‌ಲಿಫ್ಟಿಂಗ್ ಚಾಂಪಿಯನ್‌ಷಿಪ್ ಆಯೋಜಿಸಿದೆ.

ರಾಜರಾಜೇಶ್ವರಿ ನಗರದ ಬಾರ್ಬೆಲ್‌ಹೌಸ್ ಜಿಮ್ ಆವರಣದಲ್ಲಿ ಪುರುಷ ಮತ್ತು ಮಹಿಳೆಯರಿಗಾಗಿ ಚಾಂಪಿಯನ್‌ಷಿಪ್ ನಡೆಯಲಿದೆ. bdwla.weightlifting@gmail.com ವೆಬ್‌ಸೈಟ್ ಮೂಲಕ ನೋಂದಾಯಿಸಿಕೊಳ್ಳಬಹುದು. ಮಾಹಿತಿಗಾಗಿ ಮೊಬೈಲ್ ಸಂಖ್ಯೆ 9844385510, 9980977266ಗೆ ಸಂಪರ್ಕಿಸಬೇಕು.

ಡ್ರಾ ಪಂದ್ಯದಲ್ಲಿ ಎಫ್‌ಸಿಬಿಯು

ಬೆಂಗಳೂರು: ಜಿದ್ದಾಜಿದ್ದಿ ಪೈಪೋಟಿ ನಡೆಸಿದ ಎಫ್‌ಸಿ ಬೆಂಗಳೂರು ಯುನೈಟೆಡ್ (ಎಫ್‌ಸಿಬಿಯು) ಮತ್ತು ಮದನ್ ಮಹಾರಾಜ್ ಎಫ್‌ಸಿ ತಂಡಗಳು ಐ–ಲೀಗ್ ಅರ್ಹತಾ ಫುಟ್‌ಬಾಲ್ ಟೂರ್ನಿಯ ಪಂದ್ಯದಲ್ಲಿ 3–3ರಿಂದ ಡ್ರಾ ಸಾಧಿಸಿದವು.

ಶುಕ್ರವಾರ ನಡೆದ ಪಂದ್ಯದಲ್ಲಿ ಎಫ್‌ಸಿಬಿಯು ಪರ ಸಂಜು ಪ್ರಧಾನ್ (68ನೇ ನಿಮಿಷ), ಅರುಣ್ ಕುಮಾರ್ (80ನೇ ನಿ.) ಮತ್ತು ಜೈಸನ್ ವಾಜ್ (90 + 5ನೇ ನಿ.) ಕಾಲ್ಚಳಕ ತೋರಿದರು. ಮದನ್ ಮಹಾರಾಜ್ ತಂಡದ ಶುಭಂ ಭೌಮಿಕ್ (12, 52ನೇ ನಿ.) ಎರಡು ಗೋಲು ಜೀತೆನ್ (90 + 4ನೇ ನಿ.) ಒಂದು ಗೋಲು ಹೊಡೆದರು. ಉಭಯ ತಂಡಗಳು ತಲಾ ಒಂದು ಪಾಯಿಂಟ್ ಹಂಚಿಕೊಂಡವು.

ಕೊರೊನಾ ಭೀತಿ ಬೇಡ, ಮುಂಜಾಗ್ರತೆ ಇರಲಿ

ಶುಭ ನವರಾತ್ರಿಗೆ ಚಿನ್ನದ ಖರೀದಿ

ಸಾಂದರ್ಭಿಕ ಚಿತ್ರ

ಎಸ್ಸೆಚ್

ಭಾರತೀಯರಿಗೆ ಚಿನ್ನ ಖರೀದಿಸಲು ಶುಭ ಸಂದರ್ಭಗಳನ್ನು ಹುಡುಕಬೇಕಾಗಿಲ್ಲ. ಮದುವೆ, ಮುಂಜಿ, ಮಗುವಿನ ನಾಮಕರಣದಂತಹ ಮಂಗಳ ಕಾರ್ಯಗಳು ಹಾಗೂ ಯುಗಾದಿ, ಅಕ್ಷಯ ತೃತೀಯ, ವಿಜಯ ದಶಮಿ ಅಥವಾ ದುಶ್ಶೇರ, ಧನ್‌ತೇರಾಸ್... ಹೀಗೆ ಬಂಗಾರದೊಡವೆ ಕೊಂಡು ಧರಿಸಿ ಖುಷಿ ಪಡಲು, ಹೂಡಿಕೆ ಎಂದೆಲ್ಲ ಹಾಕಲು ಒಂದಿಷ್ಟು ದಿನಗಳು ಮೀಸಲಾಗಿವೆ.

ಸದ್ಯಕ್ಕೆ ವಿಜಯ ದಶಮಿ ಹತ್ತಿರವಿದೆ. ದುರ್ಗಾ ಮಾತೆಯನ್ನು ಪೂಜಿಸುವ ಈ ಸಂದರ್ಭದಲ್ಲಿ, ಶುಭ ಮುಹೂರ್ತದಲ್ಲಿ ಹೂಡಿಕೆಯಾಗಿ, ಲಕ್ಷ್ಮಿ ಮನೆಗೆ ಬಂದರೆ ಒಳಿತಾಗುತ್ತದೆ ಎಂಬ ನಂಬಿಕೆಯಿಂದ ಹಲವರು ತಮ್ಮ ಕೈಲಾದಷ್ಟು ಚಿನ್ನ ಖರೀದಿಸಿ ಸಂಗ್ರಹಿಸುವ ಸಂಪ್ರದಾಯವಿದೆ.

ಹಾಗೆಯೇ ದೇವಿ ದುರ್ಗೆಯ ಅವತಾರವಾದ ಚಾಮುಂಡಿ ಕೆಟ್ಟ ಶಕ್ತಿಯಾದ ಮಹಿಷಾಸುರನನ್ನು ಸಂಹರಿಸಿದ ವಿಜಯದಶಮಿಯ ದಿನ ನವಜೀವನದ ಆರಂಭ; ಹಾಗೆಯೇ ದುಶ್ಶೇರಾ ಎಂದರೆ ಶ್ರೀರಾಮ ರಾವಣನನ್ನು ಸಂಹರಿಸಿದ ದಿನ ಎಂದು ಉತ್ತರ ಭಾರತೀಯರು ಆಚರಿಸುತ್ತಾರೆ. ಹೀಗಾಗಿ ಚಿನ್ನ, ಅಂದರೆ ಅಮೂಲ್ಯ ಲೋಹದ ಖರೀದಿಯು ಈ ಮಂಗಳಕರ ದಿನದಂದು ಅದೃಷ್ಟ ತರುತ್ತದೆ ಎಂಬ ನಂಬಿಕೆ ಹಲವರಲ್ಲಿ.

ದುರ್ಗಾ ಮಾತೆಯನ್ನು ಪೂಜಿಸುವ ಶುಭ ಮುಹೂರ್ತದಲ್ಲಿ ಹೂಡಿಕೆಯಾಗಿ, ಲಕ್ಷ್ಮಿ ಮನೆಗೆ ಬಂದರೆ ಒಳಿತಾಗುತ್ತದೆ ಎಂಬ ನಂಬಿಕೆಯಿಂದ ವಿಜಯದಶಮಿಯಂದು ತಮ್ಮ ಕೈಲಾದಷ್ಟು ಚಿನ್ನ ಖರೀದಿಸಿ ಸಂಗ್ರಹಿಸುವ ಸಂಪ್ರದಾಯವಿದೆ.

ಶುದ್ಧ ಚಿನ್ನಕ್ಕೆ ಆದ್ಯತೆ

ಚಿನ್ನ ಖರೀದಿಸುವಾಗ ಶುದ್ಧತೆಯ ಬಗ್ಗೆ ಗಮನ ನೀಡಿ ಎನ್ನುತ್ತಾರೆ ತಜ್ಞರು. ಅಪರಂಜಿ ಚಿನ್ನದ ಬಿಸ್ಕತ್ ಅಥವಾ ಪವನ್ ಅಂದರೆ ಚಿನ್ನದ ನಾಣ್ಯಗಳನ್ನು ಖರೀದಿಸಬಹುದು. ಇದನ್ನು ಹಾಗೇ ಕಾದಿಟ್ಟು, ಬೇಕಾದಾಗ ಕರಗಿಸಿ ಒಡವೆ ಮಾಡಿಸಿಕೊಳ್ಳಬಹುದು.

ಸದ್ಯಕ್ಕಂತೂ ಯುವತಿಯರು ಹಗುರವಾದ, ನೂತನ ವಿನ್ಯಾಸದ ಬಂಗಾರದ ಒಡವೆಗಳ ಬಗ್ಗೆ ಒಲವು ಹೊಂದಿದ್ದಾರೆ ಎನ್ನುವುದು ಚಿನ್ನದ ವ್ಯಾಪಾರಿಗಳ ಅಂಬೋಣ. 22 ಕ್ಯಾರೆಟ್ ಶುದ್ಧತೆಯ ಚಿನ್ನದಲ್ಲಿ ಮಾಡಿದ ಈ ಹಗುರವಾದ ಆಭರಣಗಳನ್ನು ಖರೀದಿಸಿ ನಿತ್ಯ ಧರಿಸಬಹುದು.

ಮುಂದೆ ಕುಟುಂಬದಲ್ಲಿ ಬರಲಿರುವ ಶುಭ ಸಮಾರಂಭಕ್ಕಾಗಿ ನೆಕ್ಲೇಸ್, ಉದ್ದನೆಯ ಹಾರದಂತಹ ಹೆಚ್ಚು ತೂಕವುಳ್ಳ ಚಿನ್ನದ ಒಡವೆಗಳನ್ನು ಖರೀದಿಸಿ ಇಟ್ಟುಕೊಳ್ಳಬಹುದು. 25- 30 ಗ್ರಾಂ ತೂಕದ ಒಡವೆಗಳು, ಅದರಲ್ಲೂ ಮಾಣಿಕ್ಯ, ಪಚ್ಚೆ, ನೀಲದಂತಹ ಅಮೂಲ್ಯ ಹರಳುಗಳನ್ನು ಹೊಂದಿಸಿದ ಒಡವೆಗಳು ರೇಷ್ಮೆ ಸೀರೆಯಂತಹ ಸಾಂಪ್ರದಾಯಿಕ ಉಡುಗೆಗೆ ಸೂಕ್ತವಾಗಿ ಹೊಂದುತ್ತವೆ. ಈಗ ಒಡವೆಗಳ ಮಳಿಗೆಗಳಲ್ಲಿ ನೆಕ್ಲೇಸ್‌ಗೆ ಹೊಂದುವಂತಹ ಬಳೆ, ಕಿವಿಯೋಲೆ ಕೂಡ ಲಭ್ಯ.

ಕಳೆದ ಕೆಲವು ದಿನಗಳಿಂದ ಚಿನ್ನದ ದರದಲ್ಲಿ ಇಳಿಕೆ ಕಂಡು ಬಂದಿದ್ದು, ಒಡವೆ, ನಾಣ್ಯಗಳ ಖರೀದಿಯತ್ತ ಮುಖ ಮಾಡಬಹುದು. ಚಿನ್ನದ ಬಾಂಡ್‌ಗಳಲ್ಲೂ ಹೂಡಿಕೆ ಮಾಡಬಹುದು. ಆದರೆ ಹಾಲ್ ಮಾರ್ಕ್ ಇರುವ, ವಾಪಸ್ಸು ಖರೀದಿಸುವ ಗ್ಯಾರಂಟಿ ನೀಡುವ ಚಿನ್ನದ ವ್ಯಾಪಾರಿಗಳಿಂದ ಒಡವೆ ಖರೀದಿಸುವುದನ್ನು ಮರೆಯಬೇಡಿ. ❖

ALSTYLE
Upto 80% OFF
Branded Garments & Under Garments Sale
Alstyle Panties Rs.60
Alstyle Vest Rs.60
Levis Men's Brief Rs.100
Dixcy Bra Rs.100
Raymond, Colour Plus, Park Avenue, Parx Shirts MRP upto Rs.2499 Rs.800
Alstyle Men's Track Pant / Alstyle Ladies Track Pant, Alstyle Yoga Pant, Alstyle Capri Rs.600
Next Look Shirts by Raymond MRP upto Rs.1299 Rs.500
Men's T-Shirts, Ladies Payjama, Boys / Girls Tops & Bottoms Rs.200
Branded Shoes & Footwear Upto 50% OFF
Jackets, Sweat Shirts, Sweaters, Shirts, Trousers, Jeans, Rugs, Bedsheets, Towels, Boxers, Shorts etc. for Men's & Women
LAST 2 DAYS
Banashankari : Nagalakshmi Kalyana Mantapa, No.5, II Stage, Near Post Office, Bangalore - 560 070
Infantry Road : Safina Plaza, No.84/85, Bangalore - 560 001
Rajajinagar : Raja Rajeshwari Kalyana Mantapa, 2nd Block, Dr. Rajkumar Road, Bangalore - 560 010
Org. by: Surya Agency Pvt. Ltd.

ರಂಗಶಂಕರದಲ್ಲಿ ಮೂರು ನಾಟಕಗಳ ಪ್ರದರ್ಶನ

'ಖಯಾಲ್ ಕಿ ದಸ್ತಕ್' ನಾಟಕದ ದೃಶ್ಯ

ರಂಗಭೂಮಿ

ಖ್ಯಾತ ಕಥೆಗಾರ, ನಾಟಕಕಾರ ಸಾಗರ್ ಸರ್ಹದಿ ಅವರ ಸ್ಮರಣಾರ್ಥ ಕಟ್ಟುಥಲಿಯಾ ರಂಗ ತಂಡವು 'ದಸ್ತಕ್: ಮೂರು ಸಣ್ಣ ಕಥೆಗಳ ಸಂಗ್ರಹ' ಎನ್ನುವ ಮೂರು ನಾಟಕಗಳ ಪ್ರದರ್ಶನವನ್ನು ಇದೇ 14 ಮತ್ತು 15ರಂದು ರಂಗಶಂಕರದಲ್ಲಿ ಆಯೋಜಿಸಿದೆ. ನಾಟಕಗಳನ್ನು ಜಾಫರ್ ಮೊಹಿಯುದ್ದೀನ್ ಅವರು ನಿರ್ದೇಶಿಸಿದ್ದಾರೆ.

ಸಾಗರ್ ಸರ್ಹದಿ ಅವರು ಭಾರತದ ವಿಭಜನೆಯ ನೋವನ್ನು ಉಂಡವರು. ವಿಭಜನೆಯ ನೋವು, ಸಂಕಟ ಅವರ ಬರಹಗಳಲ್ಲೂ ಪ್ರತಿಫಲಿತವಾಗಿದೆ. ಈ ಮೂರು ನಾಟಕಗಳ ಕಥಾವಸ್ತು ಕೂಡ ವಿಭಜನೆಗೆ ಸಂಬಂಧಿಸಿದವು.

1. ಮಿರ್ಜಾ ಸಾಹೇಬ್: ಜನರ ಒಲವು ಇಲ್ಲದಿದ್ದರೂ, ಧರ್ಮವು ಹೇಗೆ ಸಾಮಾನ್ಯ ಜನರ ಮಧ್ಯೆ ಒಂದು ಕಂದಕವನ್ನು ಸೃಷ್ಟಿ ಮಾಡುತ್ತದೆ. ಒಬ್ಬರನ್ನೊಬ್ಬರು ದ್ವೇಷಿಸುವಂತೆ ಮಾಡುತ್ತದೆ ಎಂಬುದರ ಕುರಿತು ಈ ನಾಟಕವಿದೆ.

2. ಕಿಸಿ ಸೀಮಾ ಕಿ ಏಕ್ ಮಾಮೂಲಿ ಸಿ ಘಟ್ನಾ: ಒಂದು ದೇಶದ ಗಡಿ ಭಾಗದಲ್ಲಿ ನಡೆಯುವ ಒಂದು ಮಾಮೂಲಿ ಸಣ್ಣ ಘಟನೆ ಅಧಿಕಾರದ ಪ್ರವೇಶದಿಂದಾಗಿ ಹೇಗೆ ಬೇರೆ ಬೇರೆ ಬಣ್ಣ ಪಡೆದುಕೊಳ್ಳುತ್ತದೆ, ಒಂದು ವ್ಯವಸ್ಥೆಯನ್ನು ಹೇಗೆ ಅದು ಘಾಸಿಗೊಳಿಸುತ್ತದೆ ಮತ್ತು ಇದರ ಪರಿಣಾಮವಾಗಿ ಮಾನವೀಯತೆ ಹೇಗೆ ಸತ್ತು ಹೋಗುತ್ತದೆ ಎನ್ನುವುದರ ಕುರಿತು ಈ ನಾಟಕವಿದೆ.

3. ಖಯಾಲ್ ಕಿ ದಸ್ತಕ್: ಬೇರೆಯವರೊಂದಿಗೆ ಮದುವೆ ಆಗಿದ್ದ ಪ್ರೇಯಸಿಯನ್ನು, ಮಾಜಿ ಪ್ರಿಯಕರನೊಬ್ಬ ವರ್ಷಗಳ ನಂತರ ಭೇಟಿ ಮಾಡುವ ಕಥಾಹಂದರ ಇದರಲ್ಲಿದೆ.

ಸ್ಥಳ: ರಂಗಶಂಕರ, 8ನೇ ತಿರುವು, ಆರ್.ಕೆ ಕಾಲೊನಿ, 2ನೇ ಹಂತ, ಜೆ.ಪಿ. ನಗರ
ದಿನಾಂಕ: 14 ಮತ್ತು 15ನೇ ಅಕ್ಟೋಬರ್, 2021
ಸಮಯ: ಸಂಜೆ 7ಕ್ಕೆ
ದರ: ₹250, bookmyshowನಲ್ಲೂ ಟಿಕೆಟ್ ಅನ್ನು ಕಾಯ್ದಿರಿಸಬಹುದಾಗಿದೆ. ❖

'ಸ್ನೇಹಿತ'ನ ಹಾಡು ಕೇಳಿದಿರಾ?

ಸಿನಿಮಾ

ಸುಲಕ್ಷಾ ಕೈರಾ, ಧನುಷ್

ಈ ಹಿಂದೆ 'ಪ್ಯಾರ್ ಕಾ ಗೋಲ್ ಗುಂಬಜ್' ಖ್ಯಾತಿಯ ಧನುಷ್ ನಾಯಕನಾಗಿ ನಟಿಸಿರುವ 'ಸ್ನೇಹಿತ' ಚಿತ್ರದ ಹಾಡುಗಳ ಬಿಡುಗಡೆ ಸಮಾರಂಭ ಇತ್ತೀಚೆಗೆ ನಡೆಯಿತು.

ಚಿತ್ರದ ನಿರ್ದೇಶಕರೂ ಆಗಿರುವ ಸಂಗೀತ್ ಸಾಗರ್ ಈ ಚಿತ್ರದ ಆರು ಹಾಡುಗಳನ್ನು ಬರೆದು, ಸಂಗೀತ ನೀಡಿದ್ದಾರೆ.

'ಸ್ನೇಹಿತ' ಸ್ನೇಹದ ಮಹತ್ವ ಸಾರುವ ಚಿತ್ರ. ಮನೆಮಂದಿಯಲ್ಲಾ ಒಟ್ಟಾಗಿ ಕುಳಿತು ನೋಡುವ ಚಿತ್ರವನ್ನು ನಿರ್ದೇಶಿಸಿರುವ ತೃಪ್ತಿ ಇದೆ. ಇಂದು ಹಾಡುಗಳು ಬಿಡುಗಡೆಯಾಗಿವೆ. ಸದ್ಯದಲ್ಲೇ ಚಿತ್ರ ಕೂಡಾ ತೆರೆಗೆ ಬರಲಿದೆ' ಎಂದರು ಚಿತ್ರದ ಸಂಗೀತ ನಿರ್ದೇಶಕ ಮತ್ತು ನಿರ್ದೇಶಕ ಸಂಗೀತ್ ಸಾಗರ್.

'ಈ ಚಿತ್ರದಲ್ಲಿ ಒಳ್ಳೆಯ ಪಾತ್ರ ಸಿಕ್ಕಿದೆ. 'ಸ್ನೇಹಿತ' ಎಂದರೆ ಏನು ಎಂದು ನಾನು ಹೇಳುವುದಕ್ಕಿಂತ, ಸ್ವಲ್ಪ ದಿನದಲ್ಲೇ ನಮ್ಮ ಚಿತ್ರ ತೆರೆಗೆ ಬರಲಿದ್ದು, ಅದರಲ್ಲಿ ಎಲ್ಲವೂ ತಿಳಿಯಲಿದೆ. ನಮ್ಮ ಚಿತ್ರ ಯಾವುದೇ ಒಂದು ರೀತಿಯ ಸಿನಿಮಾ ಅಲ್ಲ. ಇದರಲ್ಲಿ ಸ್ನೇಹ, ಪ್ರೀತಿ, ಆ್ಯಕ್ಷನ್, ಉತ್ತಮ ಕಥೆ ಹಾಗೂ ಹಾಡುಗಳು ಎಲ್ಲಾ ಇವೆ' ಎಂದರು ನಾಯಕ ಧನುಷ್.

'ನಾನು ಈ ಚಿತ್ರದಲ್ಲಿ ಪ್ರಿಯಾ ಎಂಬ ಹಳ್ಳಿ ಹುಡುಗಿ ಪಾತ್ರದಲ್ಲಿ ಕಾಣಿಸಿಕೊಂಡಿದ್ದೇನೆ' ಎಂದರು ನಾಯಕಿ ಸುಲಕ್ಷಾ ಕೈರಾ.

ಅಶೋಕ್ ಆರ್. ಈ ಚಿತ್ರ ನಿರ್ಮಾಪಕರು.

ನಿರ್ಮಾಪಕರಾದ ಭಾ ಮ ಹರೀಶ್, ಭಾ.ಮ. ಗಿರೀಶ್, ವಿತರಕ ನರ್ಗಿಸ್ ಬಾಬು, ನಿರ್ದೇಶಕ ಬಿ.ಆರ್.ಕೇಶವ್, ನಟ ಪ್ರಣಯ ಮೂರ್ತಿ, ಆಕಾಶ್ ಆಡಿಯೋದ ಕುಬೇರ್ ಹಾಗೂ ನಿತ್ಯಾನಂದ ಪ್ರಭು ಇದ್ದರು.

ಧನುಶ್, ಸುಲಕ್ಷ ಕೈರಾ, ಎಂ.ಎಸ್.ಉಮೇಶ್, ಶಿವರಾಮಣ್ಣ, ಎಂ.ಎಸ್.ಉಮೇಶ್, ಮನದೀಪ್ ರಾಯ್, ಆರ್.ಟಿ.ರಮಾ, ಕಿಲ್ಲರ್ ವೆಂಕಟೇಶ್, ಪ್ರಣಯ ಮೂರ್ತಿ ತಾರಾಬಳಗದಲ್ಲಿದ್ದಾರೆ. ❖

ಜಾಹೀರಾತು

ಉಬ್ಬಿದ ರಕ್ತನಾಳಗಳು

ಡಾ॥ ಶ್ರೀಕಾಂತ್ ಮೋರ್ಲಾವರ್
ಸಿಎಂಡಿ, ಹೋಮಿಯೋಕೇರ್ ಇಂಟರ್‌ನ್ಯಾಷನಲ್

ಇಲ್ಲಿ ದೇಹದ ರಕ್ತನಾಳಗಳು ಹಿಗ್ಗಿ ದೊಡ್ಡದಾಗುತ್ತವೆ ಮತ್ತು ಹೆಚ್ಚಿನ ಪ್ರಮಾಣದ ರಕ್ತ ಇದರಲ್ಲಿ ತುಂಬಿರುವಂತಹ ಪರಿಸ್ಥಿತಿ ನಿರ್ಮಾಣವಾಗಿರುವುದು. ಈ ಸ್ಥಳದಲ್ಲಿ ಚರ್ಮ ಉಬ್ಬಿದ ಹಾಗೆ ಕಾಣಿಸುವುದು ಹೀಗೆ ಉಬ್ಬಿರುವ ರಕ್ತನಾಳಗಳನ್ನು ವೆರಿಕೋಸ್ ವೇನ್ಸ್ ಎನ್ನುತ್ತಾರೆ. ಇದು ಸಾಮಾನ್ಯವಾಗಿ ನೀಲಿ ಅಥವಾ ನೇರಳೆ ಬಣ್ಣದಲ್ಲಿರುತ್ತದೆ ಹಾಗೂ ಚರ್ಮ ಉಬ್ಬಿದ ರೀತಿಯಲ್ಲಿಯೂ ಕಾಣಿಸಿಕೊಳ್ಳಬಹುದು. ಇದು ಸಾಮಾನ್ಯವಾಗಿ ಕಾಲಿನ ತೊಡೆಯ ಭಾಗ ಕಾಫ್ ರೀಜನ್ ಹಾಗೂ ಪಾದದಲ್ಲಿ ಕಾಣಿಸಿಕೊಳ್ಳುತ್ತದೆ, ಹಾಗೂ ಇದು ನಿಧಾನವಾಗಿ ಹೆಚ್ಚಿನ ಬದಲಾವಣೆಗಳಿಗೆ ಕಾರಣವಾಗಬಹುದು.

ಕಾರಣಗಳು:
➢ ಕಾಲಿನ ರಕ್ತನಾಳಗಳಲ್ಲಿ ದೋಷಗಳಿದ್ದಾಗ ಹಾಗೂ ಅದರ ಸಾಮರ್ಥ್ಯ ಕಡಿಮೆಯಾದಾಗ ಅದು ಕೆಲಸ ಮಾಡುವಲ್ಲಿ ವಿಫಲವಾಗುತ್ತದೆ.ಇದರಿಂದಾಗಿ ರಕ್ತವು ಕಾಲಿನ ಭಾಗದಲ್ಲಿ ಸಂಗ್ರಹಿಸಲ್ಪಡುತ್ತದೆ ಇದರ ಪರಿಣಾಮವಾಗಿ ವೆರಿಕೋಸ್ ವೇನ್ಸ್ ಕಾಣಿಸಿಕೊಳ್ಳುತ್ತದೆ.
➢ ವಯಸ್ಸು ಹೆಚ್ಚಾದಂತೆ ಈ ಬಗೆಯ ಬದಲಾವಣೆಗಳು ಹೆಚ್ಚಾಗುವುದು.
➢ ಅನುವಂಶಿಕ ಕಾರಣಗಳು.
➢ ಬೊಜ್ಜು ರಕ್ತನಾಳಗಳ ಮೇಲೆ ಒತ್ತಡ ಹೆಚ್ಚಾಗುವುದು
➢ ವ್ಯಾಯಾಮದ ಕೊರತೆ,ಕೂತಲ್ಲಿಯೇ ಕೂತಿರುವುದು
➢ ಅಧಿಕ ಸಮಯದವರೆಗೆ ನಿಂತಿರುವುದು.
➢ ಗರ್ಭಿಣಿಯರಲ್ಲಿ, ಗೃಹಿಣಿಯರಲ್ಲಿ.

ಲಕ್ಷಣಗಳು:
➢ **ರಕ್ತನಾಳಗಳು ನೀಲಿ ಬಣ್ಣದಲ್ಲಿ ಕಾಣಿಸಿಕೊಳ್ಳುವುದು ಅಥವಾ ರಕ್ತನಾಳಗಳು ಉಬ್ಬಿರುವ ರೀತಿಯಲ್ಲಿ ಗೋಚರಿಸುವುದು.**
➢ **ತಿಳಿ ನೇರಳೆ ಜೇಡರ ಬಲೆಯ ರೀತಿಯಲ್ಲಿ ರಕ್ತನಾಳಗಳು ತೊಡೆಯ ಭಾಗದಲ್ಲಿ ಕಾಣಿಸಿಕೊಳ್ಳುವುದು.**
➢ **ಕಾಲು ಭಾರವಾದಂತೆ ಅನಿಸುವುದು.**
➢ **ನಡೆಯುತ್ತಿದ್ದಂತೆ ಕಾಲಿನಲ್ಲಿ ಸೆಳೆತ, ಭಾರವಾಗುವಿಕೆ.**
➢ **ಪಾದ ಹಾಗೂ ಕಾಲಿನಲ್ಲಿ ಊತ.**
➢ **ನವೆಯಾಗುವುದು.**
➢ **ಚರ್ಮದ ಬಣ್ಣ ಬದಲಾಗುವುದು, ಹಾಗೆಯೇ ಕಪ್ಪಾಗುವುದು. ಸಮಸ್ಯೆಯು ಹೆಚ್ಚಾದಂತೆಲ್ಲಾ ಬಣ್ಣ ಹೆಚ್ಚು ಹೆಚ್ಚಾಗಿ ಕಪ್ಪಾಗುವುದು.**
➢ **ಸಣ್ಣ ಗಾಯಗಳಿಂದ ಅಧಿಕ ರಕ್ತ ಸೋರುವಿಕೆ, ಗಾಯ ವಾಸಿಯಾಗಲು ನಿಧಾನವಾಗುವಿಕೆ ಇತ್ಯಾದಿ.**
➢ **ಕಾಲಿನಲ್ಲಿ ನೋವು ಸೆಳೆತ ಬಿಗಿಯಾಗುವಿಕೆ.**
➢ **ಸ್ನಾಯು ಸೆಳೆತ ಹಾಗೂ ಸುಸ್ತಾಗುವುದು.**
➢ **ರಕ್ತ ಹೆಪ್ಪುಗಟ್ಟಿದ ಬದಲಾವಣೆಗಳು ಕೆಲವೊಂದು ಭಾರಿ ಗಮನಿಸಬಹುದಾಗಿದೆ.**

ಪತ್ತೆ ಹಚ್ಚುವ ವಿಧಾನಗಳು.
➢ ಸರಿಯಾದ ವಿವರವಾದ ಬದಲಾವಣೆಗಳ ಬಗೆಗಿನ ಮಾಹಿತಿ.ಡಾಪ್ಲರ್ ಸ್ಟಡಿ ಬಹು ಉಪಯುಕ್ತವಾಗಿದೆ.ಇದರ ಸಹಾಯದಿಂದ ರಕ್ತನಾಳದಲ್ಲಿ ರಕ್ತದ ಹರಿಯುವಿಕೆಯನ್ನು ಗುರುತಿಸುವ ಮಾಹಿತಿಯನ್ನು ಪಡೆದುಕೊಳ್ಳಬಹುದಾಗಿದೆ.
➢ ಹಿಂದಿನ ರೋಗ ಹಾಗೂ ಅನುವಂಶೀಯ ಕಾರಣಗಳ ಬಗೆಗಿನ ಮಾಹಿತಿಯು ಕೂಡ ಉಪಯುಕ್ತವಾಗಿರುತ್ತದೆ.

ಹೋಮಿಯೋಕೇರ್ ಇಂಟರ್‌ನ್ಯಾಷನಲ್
ವರ್ಲ್ಡ್-ಕ್ಲಾಸ್ ಹೋಮಿಯೋಪತಿ

ಸಮಸ್ಯೆಗಳು / ಪರಿಣಾಮಗಳು.
➢ ಪಿಗ್ಮೆಂಟೇಷನ್ ಉಂಟಾಗುವುದು.
➢ ಧೀರ್ಘಕಾಲದ ಚರ್ಮದ ತೊಂದರೆಗಳಿಗೆ ಒಳಗಾಗುವುದು.
➢ ರಕ್ತನಾಳದ ಹುಣ್ಣುಗಳು
➢ ಡಿ ವಿ ಟಿ.
➢ ಪಾದದ ಊತ ಹಾಗೂ ಗಾಯಗಳು ಒಣಗದಿರುವುದು.
➢ ಗಾಯಗಳಲ್ಲಿ ನಿರಂತರವಾಗಿ ರಕ್ತ ಒಸರುವುದು.

ಮುನ್ನೆಚ್ಚರಿಕೆಯ / ಮುಂಜಾಗೃತಾ ಕ್ರಮಗಳು :
➢ ಕುಳಿತುಕೊಂಡಿರುವಾಗ ಹಾಗೂ ಮಲಗಿರುವಾಗ ಕಾಲುಗಳನ್ನು ಉದ್ದಕ್ಕೆ ಚಾಚಿಕೊಳ್ಳುವುದು.
➢ ಕಂಪ್ರೆಶನ್ ಡ್ರೆಸ್ಸಿಂಗ್ ಮಾಡಿಸಿಕೊಳ್ಳುವುದು.
➢ ಸ್ಟಾಕಿಂಗ್ ಗಳ ಉಪಯೋಗ.
➢ ಅಧಿಕ ದೇಹದ ತೂಕವನ್ನು ನಿಯಂತ್ರಿಸಿಕೊಳ್ಳುವುದು.
➢ ದಿನನಿತ್ಯ ವ್ಯಾಯಾಮ ಮಾಡುವುದು.
➢ ಸಡಿಲವಾದ ಉಡುಪು ಧರಿಸುವುದು
➢ ಹೆಚ್ಚು ಹೊತ್ತು ನಿಂತುಕೊಳ್ಳುವುದನ್ನು ಕಡಿಮೆ ಮಾಡಿಕೊಳ್ಳುವುದು
➢ ಪೋಷಕಾಂಶಯುಕ್ತವಾದ ಆಹಾರದ ಸೇವನೆ.
➢ ಮಾನಸಿಕ ಒತ್ತಡಗಳಿಂದ ದೂರವಿರುವುದು
➢ ಮದ್ಯಪಾನ ಹಾಗೂ ಧೂಮಪಾನ ಮಾಡದಿರುವುದು.
➢ ಯಾವುದೇ ಬದಲಾವಣೆಗಳು ಕಂಡು ಬಂದಲ್ಲಿ ವೈದ್ಯರನ್ನು ಸಂಪರ್ಕಿಸಿ ಸರಿಯಾದ ಚಿಕಿತ್ಸೆಯನ್ನು ಮಾಡಿಸಿಕೊಳ್ಳುವುದು.

ಹೋಮಿಯೋಕೇರ್ ಇಂಟರ್ ನ್ಯಾಷನಲ್ ಚಿಕಿತ್ಸೆ.
ಹೋಮಿಯೋಕೇರ್ ಇಂಟರ್ ನ್ಯಾಷನಲ್ ನಲ್ಲಿನ ಜೆನೆಟಿಕ್ ಕಾನ್ಸ್ಟಿಟ್ಯೂಷನಲ್ ಚಿಕಿತ್ಸಾ ವಿಧಾನದಿಂದ ಈ ಸಮಸ್ಯೆಯ ಪರಿಣಾಮಗಳನ್ನು ಸರಿಪಡಿಸಬಹುದಾಗಿದೆ. ಈ ಸಮಸ್ಯೆಯಿಂದಾಗಿ ಉಂಟಾಗುವಂತಹ ನೋವು, ಊತ ಮೊದಲಾದ ತೊಂದರೆಗಳಿಗೆ ಪರಿಣಾಮಕಾರಿಯಾದ ಚಿಕಿತ್ಸೆ ನೀಡಲಾಗುವುದು. ಇಲ್ಲಿ ರೋಗ ಲಕ್ಷಣ ಮಾತ್ರವಲ್ಲದೆ ರೋಗಿಯ ಮಾನಸಿಕ ಶಾರೀರಿಕ ಬದಲಾವಣೆಗಳು ಹಾಗೂ ಪರಿಸ್ಥಿಯನ್ನು ವಿವರವಾಗಿ ತಿಳಿದುಕೊಂಡು ಚಿಕಿತ್ಸೆ ನೀಡಲಾಗುವುದು. ಇದು ದೇಹದ ರೋಗ ನಿರೋಧಕ ಶಕ್ತಿಯನ್ನು ಬಲಪಡಿಸುವಲ್ಲಿ ಸಹಾಯಕಾರಿಯಾಗಿದೆ. ಚಿಕಿತ್ಸೆ ಹಾಗೂ ಚಿಕಿತ್ಸೆಯ ಅವಧಿಯು ಒಬ್ಬರಿಂದ ಒಬ್ಬರಿಗೆ ವ್ಯತ್ಯಾಸವಾಗಿರಬಹುದು ಹಾಗೂ ಫಲತಾಂಶವು ವ್ಯಕ್ತಿಯಿಂದ ವ್ಯಕ್ತಿಗೆ ಬೇರೆ ಬೇರೆಯಾಗಿರುತ್ತದೆ. ಫಲತಾಂಶಗಳು ವ್ಯಕ್ತಿಯ ದೇಹದ ರೋಗ ನಿರೋಧಕ ವ್ಯವಸ್ಥೆ ಹಾಗೂ ಅವರ ಅನಾರೋಗ್ಯದ ತೀವ್ರತೆಯನ್ನು ಅವಲಂಬಿಸುರುತ್ತದೆ.

ಹೋಮಿಯೋಕೇರ್ ಇಂಟರ್ ನ್ಯಾಷನಲ್;
ಕರ್ನಾಟಕದಲ್ಲಿ ಶಾಖೆಗಳು ಬೆಂಗಳೂರು (ಜಯನಗರ, ಮಲ್ಲೇಶ್ವರಂ, ಇಂದಿರಾನಗರ, ಎಚ್.ಎಸ್.ಆರ್ ಲೇಔಟ್), ಮೈಸೂರು, ಹುಬ್ಬಳ್ಳಿ ಮಂಗಳೂರು, ಬಳ್ಳಾರಿ ದಾವಣಗೆರೆ, ಬೆಳಗಾವಿ, ಬಿಜಾಪುರ ಬೀದರ್, ಕಲ್ಬುರ್ಗಿ, ಶಿವಮೊಗ್ಗ, ತುಮಕೂರು, ಹಾಸನ. ತೆಲಂಗಾಣ ಆಂಧ್ರ ಪ್ರದೇಶ ತಮಿಳುನಾಡು ಪುದುಚೇರಿ.
ಉಚಿತ ಸಮಾಲೋಚನೆ : 9550001133
ಉಚಿತ ಕರೆಗೆ: 1800 108 1212.

ವಿವರಗಳಿಗೆ ಹೋಮಿಯೋಕೇರ್ ಇಂಟರ್‌ನ್ಯಾಷನಲ್
ಉಚಿತ ಸಮಾಲೋಚನೆಗಾಗಿ 9550001133
Toll Free Num: 18001081212

ಶಾಖೆಗಳು: ಕರ್ನಾಟಕ: ಬೆಂಗಳೂರು (ಜಯನಗರ, ಮಲ್ಲೇಶ್ವರಂ, ಇಂದಿರಾನಗರ, ಎಚ್‌ಎಸ್‌ಆರ್ ಲೇಔಟ್), ಮೈಸೂರು, ಹುಬ್ಬಳ್ಳಿ, ಮಂಗಳೂರು, ಬಳ್ಳಾರಿ, ದಾವಣಗೆರೆ, ಬೆಳಗಾವಿ, ಬಿಜಾಪುರ, ಬೀದರ್, ಗುಲ್ಬರ್ಗ, ಶಿವಮೊಗ್ಗ, ತುಮಕೂರು, ಹಾಸನ. ತೆಲಂಗಾಣ, ಆಂಧ್ರಪ್ರದೇಶ, ತಮಿಳುನಾಡು, ಪುದುಚೆರಿ

*Additional 10% discount applicable on purchase of Rs.50,000 and above. *T&C Apply.
• Living Room • Dining • Bedroom • Mattress • Storage • Seating • Utility • Office
BENGALURU: NILKAMAL FURNITURE IDEAS SARJAPUR: Muthanallur Cross, Dommasandra Village, Sarjapur Road. Tel.: 9790715286 • **NILKAMAL FURNITURE IDEAS - M/S. MAGNUM FURNITURES:** No. 10, Maruthi Arcade , Madhuban Colony, Krishna Layout. Tel.: 6362745670 / 9886785573 • **MAYUR TEX:** No. 28/41, 9th B Main, 50 Ft Road, Hanumanthnagar, Banashankari 1st Stage. Tel.: 9945470027 • **SRI VENKATESHWARA MARKETING:** #959, 2nd Cross, 1st Main Kamakshipalya, 2nd Stage, Hrushabavathi Nagar. Tel.: 9742204833 • **MODERNITIVE:** Shop No. 5 & 6, Muniyappa Gopala Building, Sampige Nagara. Tel.: 9986112622 • **FOAM TECH BOUTIQUE:** No. 380, Gullareddy Layout, Chandapura Circle, Abekal Road. Tel.: 9845143387 / 9448563829 • **SONU INTERNATIONAL:** No. 4 & 5, Poojari Chaluvaiah Lane, S J P Cross Road. Tel.: 9844815240 / 9448594431 • **S L V MARKETING:** No. 127/2, Virupakshappa Layout, Ramanjunayya Temple Road, Nelmanagala. Tel.: 9845788667 • **ROYAL ENTERPRISES INDIA:** No. 2/2/C, Bolappa Garden, Hosabeedi, Bb Road, Yelahanka. Tel.: 9964410177 • **HOME FURNISHING & FURNITURE:** No. 20/24, Anand Nagar, Siddushree Complex, Opp. Karnataka Bank. Tel.: 9242752355
Nilkamal® India's Favourite Furniture
Scan to visit our website
For more product details, please visit: www.nilkamalfurniture.com | Follow us on: /officialnilkamal @nilkamal_ltd /nilkamal_ltd

ಆಯಾಸಕ್ಕೂ ಇದೆ ಮದ್ದು!

ರೇಷ್ಮಾ

ಇತ್ತೀಚಿನ ಬದಲಾದ ಜೀವನಶೈಲಿ, ಆಹಾರಕ್ರಮ ಮುಂತಾದ ಕಾರಣಗಳಿಂದ ಆಯಾಸ ಎನ್ನುವುದು ಎಲ್ಲರನ್ನೂ ಕಾಡುವ ಸಾಮಾನ್ಯ ಸಮಸ್ಯೆ. ಚಿಕ್ಕ ಮಕ್ಕಳಿಂದ ಹಿಡಿದು ದೊಡ್ಡವರವರೆಗೂ ಆಯಾಸ ಕಾಡುತ್ತಲೇ ಇರುತ್ತದೆ. ಕುಳಿತರೂ ಸುಸ್ತು, ನಿಂತರೂ ಸುಸ್ತು ಎಂದು ಅಲವತ್ತುಕೊಳ್ಳುವವರು ಹಲವರು. ಆಯಾಸದ ಕಾರಣದಿಂದ ನಮ್ಮಲ್ಲಿನ ಚುರುಕುತನವೇ ಮಾಯವಾಗಿದೆ ಎಂದು ಗೋಳು ತೋಡಿಕೊಳ್ಳುವವರೂ ಇದ್ದಾರೆ. ಆದರೆ ಆಯಾಸವನ್ನು ಕಡಿಮೆ ಮಾಡಿಕೊಂಡು ಚೈತನ್ಯ ಪುನರುಜ್ಜೀವನಗೊಳಿಸಿ ಶಕ್ತಿಯ ವರ್ಧನೆಗಾಗಿ ಈ ಕೆಳಗಿನ ಮಾರ್ಗಗಳನ್ನು ಅನುಸರಿಸಬಹುದು. ಇವುಗಳು ವೈಜ್ಞಾನಿಕವಾಗಿಯೂ ಸಾಬೀತಾಗಿವೆ.

> ಹಲವಾರು ಕಾರಣಗಳಿಂದ ದೇಹ ಹಾಗೂ ಮನಸ್ಸಿಗೆ ಆಯಾಸ ಆವರಿಸುತ್ತದೆ. ಆದರೆ ಆಯಾಸ ನಿವಾರಣೆಗೆ ಹಲವು ಮಾರ್ಗಗಳಿವೆ. ಆ ಮೂಲಕ ಆಯಾಸವನ್ನು ಸುಲಭವಾಗಿ ಪರಿಹರಿಸಿಕೊಳ್ಳಬಹುದು. ಜೊತೆಗೆ ದೇಹದಲ್ಲಿ ಚೈತನ್ಯವನ್ನು ಹೆಚ್ಚಿಸಿಕೊಳ್ಳಬಹುದು.

ಹೂವಿನ ಅಂದವನ್ನು ಕಣ್ತುಂಬಿಕೊಳ್ಳಿ

ಹೆಚ್ಚಿನವರಿಗೆ ಮನೆಗೆಲಸ, ಕಚೇರಿಯಲ್ಲಿ ಬಿಡುವಿಲ್ಲದ ಕೆಲಸ, ಸತತವಾದ ಮೀಟಿಂಗ್ ಈ ಎಲ್ಲಾ ಕಾರಣಗಳಿಂದ ಮನಸ್ಸು, ದೇಹ ಎರಡಕ್ಕೂ ಆಯಾಸವಾಗಿರುತ್ತದೆ. ಅಂತಹ ಸಂದರ್ಭದಲ್ಲಿ ಕಿಟಕಿಯಿಂದ ಹೊರಗೆ ಇಣುಕಿ ಹೂದೋಟದ ಅಂದವನ್ನು ಅನುಭವಿಸಬೇಕು. ಕೆಲ ನಿಮಿಷಗಳ ಕಾಲ ಅರಳಿದ ಹೂವನ್ನು ನೋಡುತ್ತಲೇ ಇರುವುದರಿಂದ ಆಯಾಸವನ್ನು ನಿಧಾನಕ್ಕೆ ಕಡಿಮೆ ಮಾಡಿಕೊಳ್ಳಬಹುದು ಎಂದು ಸಂಶೋಧನೆಯೊಂದು ತಿಳಿಸಿದೆ. ಇದು ತಕ್ಷಣಕ್ಕೆ ನಮಗೆ ಶಕ್ತಿ ನೀಡುವುದಲ್ಲದೇ ಮನಸ್ಸಿಗೆ ಚೈತನ್ಯ ಮರಳುವಂತೆ ಮಾಡುತ್ತದೆ.

ಗಾಢ ಬಣ್ಣಗಳು ಮೆದುಳಿನ ಬೀಟಾ ಕಿರಣಗಳಲ್ಲಿ ಚೈತನ್ಯವನ್ನು ಹೆಚ್ಚಿಸಿ ಮೆದುಳಿನ ಕಾರ್ಯಕ್ಷಮತೆಯನ್ನು ವೃದ್ಧಿಸುತ್ತವೆ. ಇದು ಸೆರೆಬ್ರಲ್ ಕಾರ್ಟೆಕ್ಸ್ ಅನ್ನು ಉತ್ತೇಜಿಸಿ ಮೆದುಳಿನ ತೀಕ್ಷ್ಣತೆ ಹೆಚ್ಚಲು ಸಹಾಯ ಮಾಡುತ್ತದೆ.

ಮೊಸರು ಸೇವನೆ

ಊಟದ ನಂತರ ರಕ್ತದಲ್ಲಿನ ಸಕ್ಕರೆ ಅಂಶದಲ್ಲಿ ಏರಿಳಿತವಾಗುವುದರಿಂದ ಕೊಂಚ ನಿದ್ದೆ ಬಂದಂತೆ ಭಾಸವಾಗುವುದು ಸಾಮಾನ್ಯ. ಆದರೆ ಇದರ ನಿವಾರಣೆಗೆ ಸಂಶೋಧಕರು ಸುಲಭ ಔಷಧಿಗಳನ್ನು ಕಂಡುಹಿಡಿದಿದ್ದಾರೆ. ನಿರಂತರವಾಗಿ ಮೊಸರು ಹಾಗೂ ಚೀಸ್‌ನ ಚೂರುಗಳನ್ನು ಸೇವಿಸುವುದರಿಂದ ರಕ್ತದಲ್ಲಿನ ಸಕ್ಕರೆ ಅಂಶದ ಏರಿಳಿತವನ್ನು ಕಡಿಮೆ ಮಾಡಬಹುದು. ಇದರ ಸೇವನೆಯಿಂದ ಶೇ 60 ರಷ್ಟು ಆಯಾಸವನ್ನು ಕಡಿಮೆ ಮಾಡಿಕೊಳ್ಳಬಹುದು.

ಈ ಡೈರಿ ಉತ್ಪನ್ನಗಳಲ್ಲಿನ ಪ್ರೊಟೀನ್, ಕ್ಯಾಲ್ಸಿಯಂ ಹಾಗೂ ಕೊಬ್ಬಿನಾಂಶವು ಸಕ್ಕರೆ ಅಂಶವನ್ನು ನಿಯಂತ್ರಣದಲ್ಲಿಡುತ್ತದೆ. ಕೊಬ್ಬಿನಾಂಶವಿರುವ ವಿವಿಧ ಡೈರಿ ಉತ್ಪನ್ನಗಳನ್ನು ಸೇವಿಸುವುದರಿಂದ ಮೆಟಾಬಾಲಿಕ್ ಸಿಂಡ್ರೋಮ್ ಅಪಾಯವನ್ನು ಕಡಿಮೆ ಮಾಡಲು ಸಹಾಯ ಮಾಡುತ್ತದೆ ಎಂದು ವಿವಿಧ ಸಂಶೋಧನೆಗಳಿಂದ ತಿಳಿದು ಬಂದಿದೆ.

ಸಂಗೀತ ಆಲಿಸುವುದು

ಬಿಸಿಲು ಹಾಗೂ ಅತಿಯಾದ ಉಷ್ಣಾಂಶದ ಕಾರಣದಿಂದಲೂ ಆಯಾಸ ಕಾಣಿಸಿಕೊಳ್ಳುವುದು ಸಾಮಾನ್ಯ. ಅಲ್ಲದೇ ಥೈರಾಯ್ಡ್ ಹಾರ್ಮೋನ್‌ಗಳ ವ್ಯತ್ಯಾಸದ ಕಾರಣದಿಂದಲೂ ಆಯಾಸವಾಗುತ್ತದೆ. ಥೈರಾಯ್ಡ್ ತನ್ನ ಕಾರ್ಯವನ್ನು ಕುಗ್ಗಿಸುವುದರಿಂದ ಆಯಾಸ ಉಂಟಾಗುತ್ತದೆ. ಜಗತ್ತಿನ ಶೇ 50 ರಷ್ಟು ಮಹಿಳೆಯರು ಈ ಸಮಸ್ಯೆಯನ್ನು ಎದುರಿಸುತ್ತಿದ್ದಾರೆ.

ಈ ಆಯಾಸವನ್ನು ತಗ್ಗಿಸಲು ಸಂಗೀತವನ್ನು ಆಲಿಸುವುದು ಉತ್ತಮ. ಸಂಗೀತವು ಮನಸ್ಸು ಹಾಗೂ ದೇಹದ ಆಯಾಸ ನಿವಾರಣೆಗೆ ಉತ್ತಮ ಔಷಧಿ. ಲಘು ಸಂಗೀತವು ಸುಸ್ತನ್ನು ಕಡಿಮೆ ಮಾಡಲು ಸಹಾಯ ಮಾಡುತ್ತದೆ ಎಂದು ಹಲವು ಅಧ್ಯಯನಗಳು ಸಲಹೆ ನೀಡಿವೆ. ಸಂಗೀತವು ಮನಸ್ಸಿಗೆ ಒತ್ತಡ ತರುವ ಹಾರ್ಮೋನ್‌ಗಳ ಉತ್ಪಾದನೆಯನ್ನು ಶೇ 30 ರಷ್ಟು ಕಡಿಮೆ ಮಾಡುತ್ತದೆ ಎನ್ನುತ್ತಾರೆ ತಜ್ಞರು. ❖

ಹಣ್ಣನ್ನು ಕೆಡದೆ ಇಡುವುದು ಹೇಗೆ?

ಹಣ್ಣುಗಳ ಸೇವನೆ ಆರೋಗ್ಯಕ್ಕೆ ಉತ್ತಮ ಎನ್ನುವುದು ಗೊತ್ತೇ ಇದೆ. ಹಾಗಂತ ಅವುಗಳ ಶೇಖರಣೆ ಸುಲಭವಲ್ಲ. ಪದೇ ಪದೇ ಮಾರುಕಟ್ಟೆಗೆ ಹೋಗಿ ಹಣ್ಣುಗಳನ್ನು ಖರೀದಿಸುವುದು ಕಷ್ಟ. ಅದಕ್ಕಾಗಿ ವಾರಕ್ಕೊಂದು ಬಾರಿ ಖರೀದಿ ಮಾಡಿ ಮನೆಯಲ್ಲಿ ತಂದಿರಿಸಿಕೊಳ್ಳಬಹುದು. ಆದರೆ ಆ ಹಣ್ಣುಗಳನ್ನು ಎಷ್ಟೇ ಜೋಪಾನ ಮಾಡಿದರೂ ಅವು ಕೊಳೆಯುತ್ತವೆ. ಹಣ್ಣುಗಳು ತಾಜಾ ಆಗಿರಬೇಕು ಎಂದುಕೊಂಡು ನಾನಾ ಮಾರ್ಗಗಳನ್ನು ಅನುಸರಿಸುತ್ತೇವೆ. ಆದರೆ ಸಾಧ್ಯವಾಗುವುದಿಲ್ಲ. ಈ ಕೆಳಗಿನ ಉಪಾಯಗಳು ಹಣ್ಣುಗಳು ಕೆಡದಂತೆ ತಾಜಾ ಆಗಿರಲು ಸಹಾಯ ಮಾಡುತ್ತವೆ. ಯಾವ ಯಾವ ಹಣ್ಣುಗಳನ್ನು ಹೇಗೆ ಶೇಖರಿಸಿ ಇಡಬೇಕು ಎಂಬ ಬಗ್ಗೆ ಮಾಹಿತಿ ಇಲ್ಲಿದೆ.

ಸೇಬುಹಣ್ಣು: ಹಣ್ಣುಗಳಲ್ಲೇ ಸೇಬುಹಣ್ಣಿಗೆ ಅಗ್ರಸ್ಥಾನವಿದೆ. ಇದು ಹೊರ ಸೂಸುವ ಇಥಿಲಿನ್ ಅನಿಲದಿಂದಾಗಿ ಇದು ಬೇಗನೆ ಮಾಗುತ್ತದೆ ಹಾಗೂ ಕೊಳೆಯುತ್ತದೆ. ಸಾಧ್ಯವಾದಷ್ಟು ಸೇಬುಹಣ್ಣುಗಳನ್ನು ಇತರ ಹಣ್ಣುಗಳಿಂದ ದೂರವಿರಿಸಬೇಕು. ಅದರಲ್ಲೂ ಬಾಳೆಹಣ್ಣು ಹಾಗೂ ಸಿಟ್ರಸ್ ಅಂಶ ಇರುವ ಹಣ್ಣುಗಳಿಂದ ದೂರವೇ ಇಡಬೇಕು. ಕೋಣೆಯ ಸಾಧಾರಣ ಉಷ್ಣಾಂಶದಲ್ಲಿ ಇರಿಸಿದರೂ ಹಣ್ಣುಗಳು ತಾಜಾ ಆಗಿರುತ್ತವೆ. ಹಣ್ಣಿನ ಮೂಲ ಪ್ಯಾಕ್‌ನಲ್ಲೇ ಇರಿಸಿ ಫ್ರಿಜ್‌ನಲ್ಲಿ ಇಡುವುದರಿಂದ ನಾಲ್ಕು ವಾರಗಳ ಕಾಲ ಕೆಡದಂತೆ ಇಡಬಹುದು.

ಬೆರ್ರಿ, ಚೆರ್ರಿ ಹಾಗೂ ದ್ರಾಕ್ಷಿಹಣ್ಣುಗಳು: ಬೆರ್ರಿ ಹಣ್ಣುಗಳನ್ನು ಕವರ್‌ನಲ್ಲಿ ಸುತ್ತಿ ಅಥವಾ ಕಂಟೇನರ್‌ಗಳಲ್ಲಿ ಶೇಖರಿಸಿ ಇಡುವುದರಿಂದ ಹೆಚ್ಚು ಕಾಲ ಬಾಳಿಕೆ ಬರುತ್ತವೆ. ಆದರೆ ಇದನ್ನು ತಿನ್ನುವ ಮೊದಲು ಚೆನ್ನಾಗಿ ತೊಳೆದು ತಿನ್ನಬೇಕು. ಜೊತೆಗೆ ತಿನ್ನಲು ಬೇಕಾದಷ್ಟನ್ನೇ ತೊಳೆಯಬೇಕು. ಇದು ದ್ರಾಕ್ಷಿ ಹಾಗೂ ಚೆರ್ರಿಗೂ ಅನ್ವಯಿಸುತ್ತದೆ.

ಬಾಳೆಹಣ್ಣು: ಅಂಗಡಿಗಳಲ್ಲಿ ಬಾಳೆಹಣ್ಣನ್ನು ತೂಗು ಹಾಕುವುದನ್ನು ನೋಡಿರಬಹುದು. ಅದು ಯಾಕಿರಬಹುದು ಎಂದು ನೀವು ಯೋಚಿಸಿಯೂ ಇರಬಹುದು. ಅದಕ್ಕೂ ಕಾರಣ ಇದೆ. ಸೇಬುಹಣ್ಣಿನಂತೆ ಬಾಳೆಹಣ್ಣನ್ನು ಬೇರೆಯಾಗಿಯೇ ಇರಿಸಬೇಕು. ಬಾಳೆಹಣ್ಣು ಕೂಡ ಇಥಿಲಿನ್ ಅನಿಲವನ್ನು ಬಿಡುಗಡೆ ಮಾಡುವುದರಿಂದ ಇದರ ಅಕ್ಕಪಕ್ಕದಲ್ಲಿರುವ ಹಣ್ಣುಗಳು ಬೇಗನೇ ಕೊಳೆಯುತ್ತವೆ. ಮನೆಯಲ್ಲೂ ಕೂಡ ಇತರ ಹಣ್ಣುಗಳನ್ನು ಬಾಳೆಹಣ್ಣಿನಿಂದ ದೂರ ಇರಿಸಬೇಕು. ಆ ಕಾರಣಕ್ಕೆ ಬಾಳೆಹಣ್ಣನ್ನು ತೂಗು ಹಾಕುವುದು ಉತ್ತಮ ಉಪಾಯ. ಬಾಳೆಹಣ್ಣನ್ನು ಫ್ರಿಜ್‌ನಲ್ಲಿ ಇರಿಸಬಹುದು, ಆದರೆ ಸಂಪೂರ್ಣವಾಗಿ ಹಣ್ಣಾದ ಬಳಿಕವಷ್ಟೇ ಫ್ರಿಜ್‌ನಲ್ಲಿಡುವುದು ಸೂಕ್ತ.

ಬೆಣ್ಣೆಹಣ್ಣು: ಬೆಣ್ಣೆಹಣ್ಣು ಅಥವಾ ಅವಕಾಡೊ ಕಾಯಿ ಇರುವಾಗ ಹಾಗೂ ಹಣ್ಣಾದಾಗ ಎರಡೂ ಸಮಯದಲ್ಲಿ ಹಸಿರಾಗಿಯೇ ಇರುತ್ತದೆ. ಕೆಲವೊಮ್ಮೆ ಇದರ ಸಿಪ್ಪೆ ತಿಳಿನೇರಳೆ ಬಣ್ಣಕ್ಕೆ ತಿರುಗುವುದೂ ಉಂಟು. ಹಾಗಾಗಿದ್ದರೆ ನೀವು ಬೆಣ್ಣೆಹಣ್ಣನ್ನು ಸರಿಯಾಗಿ ಶೇಖರಣೆ ಮಾಡಿದ್ದೀರಿ ಎಂದು ಅರ್ಥ. ಇದನ್ನು ಚೆನ್ನಾಗಿ ಹಣ್ಣಾದ ನಂತರವಷ್ಟೇ ಫ್ರಿಜ್‌ನಲ್ಲಿ ಇರಿಸಬೇಕು. ಇದು ಹಣ್ಣಾದ ಮೇಲೂ ಮೂರು ದಿನಗಳವರೆಗೆ ತಾಜಾ ಆಗಿಯೇ ಇರುತ್ತದೆ. ತಿನ್ನಲು ಎರಡು ದಿನ ಇರುವಾಗ ಅವನ್ನು ಹೊರಗೆ ತೆಗೆಯಬೇಕು, ಆಗ ಚೆನ್ನಾಗಿ ಮಾಗುತ್ತದೆ. ಒಮ್ಮೆ ಕತ್ತರಿಸಿದ ಮೇಲೆ ಹಾಗೇ ಇರಬೇಕು ಎಂದರೆ ನಿಂಬೆರಸವನ್ನು ಸಿಂಪಡಿಸಬೇಕು.

ಟೊಮೆಟೊ: ಟೊಮೆಟೊ ಹಣ್ಣನ್ನು ಗಾಳಿಯಾಡುವ ತೇವಾಂಶವಿರುವ ಜಾಗದಲ್ಲಿ ಇರಿಸಬೇಕು. ಇದನ್ನು ಬಳಸಲು ಸ್ವಲ್ಪ ಹೊತ್ತಿಗೆ ಮುಂಚೆ ತೊಳೆಯಬೇಕು. ಹಾಗೇ ಇಟ್ಟ ಟೊಮೆಟೊ ಒಂದು ವಾರದವರೆಗೆ ಕೆಡದಂತೆ ಇರುತ್ತದೆ. ಆದರೆ ಶೈತ್ಯೀಕರಿಸಿದ ಟೊಮೆಟೊಗಳನ್ನು ಹೆಚ್ಚು ಕಾಲ ಶೇಖರಿಸಿ ಇಡಬಹುದು.

ಕಲ್ಲಂಗಡಿ: ಕಲ್ಲಂಗಡಿ ಹಣ್ಣನ್ನು ಸಂಪೂರ್ಣವಾಗಿ ಹಣ್ಣಾಗುವವರೆಗೂ ಅಥವಾ ಕತ್ತರಿಸುವವರೆಗೂ ಕೋಣೆಯ ತಾಪಮಾನದಲ್ಲೇ ಇರಿಸಬೇಕು. ನಂತರ ಇದನ್ನು ಗಾಳಿಯಾಡದ ಪಾತ್ರೆಯಲ್ಲಿ ಇರಿಸಿ ಫ್ರಿಜ್‌ನಲ್ಲಿ ಇಡಬೇಕು.

ಸಿಟ್ರಸ್: ಸಿಟ್ರಸ್ ಒಮ್ಮೆಲೆ ಹಣ್ಣಾಗುವುದಿಲ್ಲ. ಆದ್ದರಿಂದ ಯಾವಾಗಲೂ ಅತ್ಯಂತ ಪರಿಮಳಯುಕ್ತ ಹಾಗೂ ತಿನ್ನಲು ಸಿದ್ಧವಿರುವ ಹಣ್ಣನ್ನು ಆರಿಸಿ ತರಬೇಕು. ಸೂರ್ಯನ ಕಿರಣ ನೇರವಾಗಿ ಬೀಳುವ ಕೋಣೆಯಲ್ಲಿ ಅವುಗಳನ್ನು ಸಂಗ್ರಹಿಸಬೇಕು. ಆಗ ಅವು ನಾಲ್ಕರಿಂದ ಏಳು ದಿನಗಳವರೆಗೆ ಇರುತ್ತವೆ.

ಮಾವಿನಹಣ್ಣು, ಪ್ಲಮ್ ಹಾಗೂ ಪಿಯರ್ಸ್: ಈ ಮೇಲಿನ ಹಣ್ಣುಗಳನ್ನು ಕೋಣೆಯ ತಾಪಮಾನದಲ್ಲೇ ಹಣ್ಣಾಗಲು ಬಿಡಬೇಕು. ನಂತರ ಅವನ್ನು ಫ್ರಿಜ್‌ನಲ್ಲಿ ಶೇಖರಿಸಿ ಇಡಬೇಕು. ಪ್ಲಮ್ ಹಾಗೂ ಪೀಚ್ ಹಣ್ಣುಗಳು ಫ್ರಿಜ್‌ನಲ್ಲಿ ಮೂರರಿಂದ ಐದು ದಿನಗಳವರೆಗೆ ಕೆಡದಂತೆ ಇರುತ್ತವೆ. ಮಾವು ಹಾಗೂ ಪಿಯರ್ಸ್ ಹಣ್ಣುಗಳು ಐದರಿಂದ ಏಳು ದಿನವರೆಗೆ ಕೆಡುವುದಿಲ್ಲ.

ಅನಾನಸ್: ಅನಾನಸ್ ಹಣ್ಣು ಬುಡದಲ್ಲಿ ಸಿಹಿ ಇದ್ದು ತಲೆಯ ಭಾಗದಲ್ಲಿ ಹುಳಿ ಇರುತ್ತದೆ. ಈ ಹಣ್ಣಿನ ಪೂರ್ಣ ಭಾಗ ಸಿಹಿ ಇರಬೇಕು ಎಂದರೆ ಹಣ್ಣನ್ನು ತಲೆಕೆಳಗಾಗಿ ಇರಿಸಬೇಕು. ಇದನ್ನು ಎರಡು ದಿನಗಳ ಕಾಲ ಹಾಗೇ ಇರಿಸಬೇಕು. ಅನಾನಸ್ ಹಣ್ಣು ಕೊಳೆಯದಂತೆ ಕಾಪಾಡಲು ಹಣ್ಣನ್ನು ಫ್ರಿಜ್‌ನಲ್ಲಿ ಇಡುವ ಮೊದಲು ಕೋಣೆಯ ಉಷ್ಣಾಂಶದಲ್ಲಿ ಇರಿಸಬೇಕು. ❖

ಆರೋಗ್ಯ ವೃದ್ಧಿಗೆ ಕುಂಬಳಕಾಯಿ ಬೀಜ

ಆಲಾಪ

ತರಕಾರಿ ಅಂದ್ರೆ ಮೂಗು ಮುರಿಯೋರೆ ಹೆಚ್ಚು. ಇನ್ನು ಕೆಲವು ತರಕಾರಿ ಬೀಜಗಳನ್ನಂತೂ ಬಿಸಾಡೋದು ಮಾಮೂಲಿ. ಆದರೆ, ಹೆಚ್ಚಿನ ತರಕಾರಿ ಬೀಜಗಳಲ್ಲಿ ದೇಹಕ್ಕೆ ಬೇಕಾದ ಪೌಷ್ಟಿಕಾಂಶಗಳು ಇರುತ್ತವೆ; ಒಮ್ಮೊಮ್ಮೆ ತರಕಾರಿಗಿಂತ ಅದರ ಬೀಜದಲ್ಲೇ ಹೆಚ್ಚು ಆರೋಗ್ಯಕರ ಅಂಶಗಳು ಇರುತ್ತವೆ. ಅಂಥ ತರಕಾರಿಯಲ್ಲೊಂದು ಕುಂಬಳಕಾಯಿ.

ಕುಂಬಳಕಾಯಿ ಬೀಜದಲ್ಲಿ ಬಹಳಷ್ಟು ಒಳ್ಳೆಯ ಅಂಶಗಳಿವೆ. ಈ ಬೀಜ ಒಂದು ತರಹ ಪೌಷ್ಟಿಕಾಂಶದ ಪವರ್‌ಹೌಸ್ ಇದ್ದ ಹಾಗೆ. ಉತ್ತಮ ಕೊಬ್ಬು, ನಾರು, ಪ್ರೊಟೀನ್, ಕಬ್ಬಿಣ, ಮ್ಯಾಂಗನೀಸ್, ಜಿಂಕ್ ಸೇರಿದಂತೆ ಅನೇಕ ಪೋಷಕಾಂಶಗಳು ಕುಂಬಳಕಾಯಿ ಬೀಜದಲ್ಲಿ ಇವೆ. ಆದ್ದರಿಂದ ಇದರಿಂದ ಮಾಡಿದ ತಿಂಡಿಗಳು, ಆಹಾರ ಪದಾರ್ಥಗಳು ರುಚಿಕರವೂ ಹೌದು, ಆರೋಗ್ಯಪೂರ್ಣವೂ ಹೌದು.

ಉಪಯೋಗಿಸುವ ಕ್ರಮ

ಕುಂಬಳಕಾಯಿ ಬೀಜವನ್ನು ಕುಂಬಳಕಾಯಿಯಿಂದ ಬೇರ್ಪಡಿಸಲು ಒಂದು ಕ್ರಮ ಇದೆ. ಬೀಜಗಳನ್ನು ಒಣಗಿಸಿ ಇಟ್ಟುಕೊಂಡರೆ ಅದರ ಉಪಯೋಗ ಸುಲಭ. ಬೀಜಗಳು ಒಳಗೆ ಪಲ್ಪ್‌ನೊಂದಿಗೆ ಬೆಸೆದುಕೊಂಡಿರುತ್ತವೆ. ನಾರುಗಳ ಮಧ್ಯೆ ಬೀಜ ಇರುತ್ತದೆ. ಇವುಗಳಿಂದ ಬೀಜಗಳನ್ನು ಬೇರ್ಪಡಿಸಬೇಕು. ಪಲ್ಪ್‌ನೊಂದಿಗೆ ಬೆಸೆದುಕೊಂಡ ಬೀಜಗಳಿಗೆ ಕಾಲು ಚಮಚ ಉಪ್ಪು ಬೆರೆಸಿದರೆ, ಎರಡೂ ಬೇರ್ಪಡುತ್ತವೆ. ಹೀಗೆ ಸಿಕ್ಕ ಬೀಜಗಳನ್ನು ಚೆನ್ನಾಗಿ ತೊಳೆದು, ಬಿಸಿಲಿನಲ್ಲಿ ಒಣಗಿಸಿ ಇಟ್ಟುಕೊಂಡರೆ ಸುಲಭ.

ಬೀಜಗಳನ್ನು ಹುರಿದು, ಕೆಲವು ಗಂಟೆಗಳ ಕಾಲ ನೆನೆಸಿಟ್ಟು ಅಥವಾ ಮೊಳಕೆ ಬರಿಸಿ ಪದಾರ್ಥಗಳನ್ನು ತಯಾರು ಮಾಡಬಹುದು.

ಕುಂಬಳಕಾಯಿ ಬೀಜವನ್ನು ರೋಸ್ಟ್ ಮಾಡುವುದು; ವಿವಿಧ ತರಕಾರಿ, ಹಣ್ಣು ಬಳಸಿ ಮಾಡುವ ಸಲಾಡ್‌ಗೆ ಹುರಿದ ಮಾಡಿದ ಬೀಜಗಳನ್ನು ಸೇರಿಸಬಹುದು. ತಿನ್ನುವಾಗ ಮಧ್ಯೆ ಮಧ್ಯೆ ಬಾಯಿಗೆ ಹುರಿದ ಈ ಕುಂಬಳಕಾಯಿ ಬೀಜಗಳು ಬಂದರೆ ತುಂಬಾ ಚೆನ್ನಾಗಿರುತ್ತದೆ.

ಹುರಿದ ಕುಂಬಳಕಾಯಿ ಬೀಜಗಳನ್ನು ಬೇರೆ ಬೇರೆ ಆಹಾರ ಪದಾರ್ಥಗಳ ಮೇಲೆ ಗ್ರಾರ್ನಿಷ್ ಮಾಡಲು ಬಳಸಬಹುದು. ಉದಾಹರಣೆಗೆ– ಪಾಸ್ತಾ, ರಿಸೊಟ್ಟೊ, ಟಾಕೊಸ್, ಮೀನು ಅಥವಾ ಮಾಂಸದ ಭಕ್ಷ್ಯಗಳ ಮೇಲೆ ಬೀಜಗಳನ್ನು ಗ್ರಾರ್ನಿಷ್ ಮಾಡಬಹುದಾಗಿದೆ.

ಕುಕೀಸ್ ಅಥವಾ ಬ್ರೆಡ್ ಮಾಡುವ ಆಲೋಚನೆ ಇದ್ದರೆ, ಕುಂಬಳಕಾಯಿ ಬೀಜಗಳು ಅದರ ರುಚಿಯನ್ನು ಹೆಚ್ಚಿಸುತ್ತವೆ. ಕುಕೀಸ್ ಮಾಡುವ ಮಿಶ್ರಣಕ್ಕೆ ಬೀಜಗಳನ್ನು ಹಾಕಬಹುದು, ಕುಕೀಸ್ ಅನ್ನು ಮೈಕ್ರೊವೇವ್ ಮಾಡುವ ಮೊದಲು ಬೀಜಗಳನ್ನು ಅದರ ಮೇಲೆ ಉದುರಿಸಬಹುದು. ಕುಕೀಸ್ ಅಥವಾ ಬ್ರೆಡ್ ಮಾಡುವಾಗ ಬೀಜಗಳನ್ನು ಮೊದಲೇ ರೋಸ್ಟ್ ಮಾಡಿಕೊಳ್ಳುವುದು ಬೇಡ. ಹೇಗಿದ್ದರೂ ಮೈಕ್ರೊವೇವ್ ಮಾಡಿಕೊಳ್ಳುವುದರಿಂದ ಸಾದಾ ಬೀಜಗಳನ್ನು ಬಳಸಿದರೆ ಸಾಕಾಗುತ್ತದೆ. ❖

ಕ್ಷಣದಲ್ಲಿ ತಯಾರಿಸಿ ರುಚಿಕರ ಕಿಮ್ಚಿ..

ರೆಸಿಪಿ

ಅಮೃತ

ಜಪಾನ್ ಹಾಗೂ ಕೊರಿಯಾದಲ್ಲಿ ಆರೋಗ್ಯಕರ ಆಹಾರವಾದ ಕಿಮ್ಚಿ ಈಗ ಭಾರತದಲ್ಲೂ ಜನಪ್ರಿಯ. ಇದನ್ನು ಸರಳವಾಗಿ ನಮ್ಮಲ್ಲಿನ ಉಪ್ಪಿನಕಾಯಿ ಎನ್ನಬಹುದು. ಇದರಲ್ಲಿ ಬಳಸುವ ಸಾಮಗ್ರಿಗಳು ಹಾಗೂ ನಂತರ ನಡೆಯುವ ಬುರುಗು ಭರಿಸುವ ಪ್ರಕ್ರಿಯೆಯಿಂದಾಗಿ ಜೀರ್ಣಕ್ರಿಯೆಯಲ್ಲಿ ಒಳ್ಳೆಯ ಬ್ಯಾಕ್ಟೀರಿಯಾಗಳನ್ನು ಹುಟ್ಟುಹಾಕುತ್ತದೆ. ಇದರಿಂದ ಜೀರ್ಣಾಂಗ ಸಂಬಂಧಿ ಅನಾರೋಗ್ಯವನ್ನು ತಡೆಗಟ್ಟಬಹುದು. ಜಪಾನ್‌ನಲ್ಲಂತೂ ಇದು ಸಾಂಪ್ರದಾಯಿಕ ಆಹಾರವಾಗಿದ್ದು, ನಿತ್ಯ ನೂಡಲ್ಸ್‌ನಲ್ಲಿ, ಅನ್ನದ ಜೊತೆ ಸಾಕಷ್ಟು ಸೇವಿಸುವುದು ರೂಢಿ.

ಇದನ್ನು ತಯಾರಿಸುವ ವಿಧಾನ ನೋಡೋಣ. ಸುಮಾರು ಮುಕ್ಕಾಲು ಕೆಜಿಯಷ್ಟು ಕಿಮ್ಚಿ ತಯಾರಿಕೆಗೆ ಸಾಮಗ್ರಿಗಳ ಅಳತೆ ನೀಡಲಾಗಿದೆ.

ಒಂದು ಲೀಟರ್ ಕುಡಿಯುವ ನೀರು, 40 ಗ್ರಾಂ ಹರಳು (ಸಮುದ್ರದ ಉಪ್ಪು) ಉಪ್ಪು, ಮುಕ್ಕಾಲು ಕೆಜಿ ಲೆಟ್ಯೂಸ್ ಅಥವಾ ಕ್ಯಾಬೇಜ್, ಕಾಲು ಕೆಜಿ ಮೂಲಂಗಿ, ಅರ್ಧ ಕೆಜಿ ಕ್ಯಾರೆಟ್, ಒಂದು ಬಾಳೆ ಹೂವಿನ ಕುಂಡಿಗೆ.

ಪೇಸ್ಟ್ ತಯಾರಿಕೆಗೆ: ಸಣ್ಣಗೆ ಹೆಚ್ಚಿದ ಒಂದು ಈರುಳ್ಳಿ, 2–3 ಬೆಳ್ಳುಳ್ಳಿ ಎಸಳು, 5 ಸೆಂ.ಮೀ. ಉದ್ದದ ಮೇಲಿನ ಸಿಪ್ಪೆ ತೆಗೆದ ಶುಂಠಿ, ಸೋಯಾ ಸಾಸ್ 3 ಟೀ ಚಮಚ, ಕೆಂಪು ಮೆಣಸಿನಕಾಯಿಯ ಬೀಜ 3 ಟೀ ಚಮಚ.

ಒಂದು ಲೀಟರ್ ಎಂ.ಎಲ್. ನೀರಿಗೆ ಹರಳುಪ್ಪನ್ನು ಹಾಕಿ ಕರಗಿಸಿ. ಇದನ್ನು ಕುದಿಸಿ ಆರಿಸಿ. ಕ್ಯಾಬೇಜ್ ಅಥವಾ ಲೆಟ್ಯೂಸ್ ಅನ್ನು ಬೆರಳುದ್ದದಷ್ಟು ಕತ್ತರಿಸಿಕೊಳ್ಳಿ. ಇದು ಮೇಲ್ಗಡೆ ಪದರಕ್ಕೆ ಹಾಕು. ಸ್ವಲ್ಪ ಚಿಕ್ಕದಾಗಿ ಅಂದರೆ ಒಂದು ಸೆಂ.ಮೀ. ಉದ್ದಕ್ಕೆ ಕತ್ತರಿಸಿಕೊಂಡ ಕ್ಯಾಬೇಜ್ ತಳಭಾಗದಲ್ಲಿ ಹಾಕಲು. ಮೂಲಂಗಿ ಮತ್ತು ಕ್ಯಾರಟ್ ಅನ್ನು ಉದ್ದಕ್ಕೆ, ತೆಳುವಾಗಿ ಸೀಳಿ. ತರಕಾರಿ ಸಿಪ್ಪೆ ತೆಗೆಯುವ ಪೀಲರ್‌ನಿಂದ ಇಂತಹ ತೆಳುವಾದ ಹೋಳುಗಳನ್ನು ಮಾಡಿಕೊಳ್ಳಬಹುದು.

ಒಂದು ದೊಡ್ಡ ಪಾತ್ರೆಯಲ್ಲಿ ಕ್ಯಾಬೇಜ್/ಲೆಟ್ಯೂಸ್ ಚೂರು, ಮೂಲಂಗಿ, ಕ್ಯಾರಟ್ ಅನ್ನು ಮಿಶ್ರ ಮಾಡಿ. ಇದರ ಮೇಲೆ ಹರಳುಪ್ಪು ಕರಗಿಸಿದ ನೀರನ್ನು ಹಾಕಿ. ಇದನ್ನು ಚೆನ್ನಾಗಿ ಅದುಮಿಡಿ. ಬೇಕಿದ್ದರೆ ಇದರ ಮೇಲೆ ಭಾರವಾದ ಪ್ಲೇಟ್ ಅನ್ನು ಒತ್ತಿ ಇಡಬಹುದು. ಈ ಮಿಶ್ರಣವನ್ನು ವಾತಾವರಣದ ಉಷ್ಣಾಂಶದಲ್ಲಿ ಎಂಟು ತಾಸುಗಳ ಕಾಲ ಇಡಿ.

ಎಂಟು ತಾಸುಗಳ ನಂತರ ಉಪ್ಪಿನ ನೀರನ್ನು ಚೆಲ್ಲಿ. ತರಕಾರಿ ಮಿಶ್ರಣಕ್ಕೆ ಬಾಳೆ ಹೂವನ್ನು ಚೂರು ಚೂರು ಮಾಡಿ ಸೇರಿಸಿ. ಮಸಾಲೆ ಮಿಶ್ರಣ ಮಾಡಲು ಈರುಳ್ಳಿ, ಬೆಳ್ಳುಳ್ಳಿಗೆ 100 ಎಂ.ಎಲ್. ಉಪ್ಪು ನೀರು ಸೇರಿಸಿ ಮಿಕ್ಸಿಯಲ್ಲಿ ಅರೆಯಿರಿ. ಇದು ನಯವಾಗಿರಬೇಕು. ನಂತರ ಈ ಮಸಾಲೆಯನ್ನು ಸೋಯಾ ಸಾಸ್ ಜೊತೆ ಸೇರಿಸಿ ಕ್ಯಾಬೇಜ್ ಮತ್ತು ಇತರ ತರಕಾರಿ ಮಿಶ್ರಣಕ್ಕೆ ಸೇರಿಸಿ.

ಅಗಲ ಬಾಯಿಯ ಗಾಜಿನ ಪಾತ್ರೆ ತೆಗೆದುಕೊಂಡು ಅದರಲ್ಲಿ ಈ ಮಿಶ್ರಣ ಹಾಕಿ. ಉಳಿದ ಉಪ್ಪು ನೀರನ್ನು ಅದಕ್ಕೆ ಸೇರಿಸಿ. ತರಕಾರಿಗಳೆಲ್ಲ ಪೂರ್ತಿ ಈ ನೀರಿನೊಳಗೆ ಮುಳುಗುವಂತೆ ನೋಡಿಕೊಳ್ಳಿ. ಬೇಕಿದ್ದರೆ ಸೋಯಾ ಸಾಸ್ ಸೇರಿಸಿ. ಮಿಶ್ರಣವನ್ನು ಚೆನ್ನಾಗಿ ಒತ್ತಿಟ್ಟು, ಮುಚ್ಚಳ ಹಾಕಿ. ಇದರ ಮೇಲೆ ಉಪ್ಪಿನಕಾಯಿ ಜಾಡಿ ಮುಚ್ಚಳಕ್ಕೆ ಬಟ್ಟೆಯನ್ನು ಕಟ್ಟುವಂತೆ ಸಣ್ಣ ಕಾಟನ್ ವಸ್ತ್ರ ಅಥವಾ ಮಸ್ಲಿನ್ ಬಟ್ಟೆಯನ್ನು ಕಟ್ಟಿಡಿ. ಒಂದು ವಾರದಿಂದ ನಾಲ್ಕು ವಾರಗಳ ಕಾಲ ವಾತಾವರಣದ ಉಷ್ಣಾಂಶದಲ್ಲೇ ಇಡಿ. ಒಳ್ಳೆಯ ಚೈನೀಸ್ ನೂಡಲ್ಸ್‌ಗೆ ಸೇರಿಸುವ ಮಸಾಲೆಯ ಪರಿಮಳ, ರುಚಿ ಬರುತ್ತದಲ್ಲ, ಆ ರೀತಿ ರುಚಿ ಬಂದರೆ ಕಿಮ್ಚಿ ಸಿದ್ಧವಾದಂತೆ.

ಇದನ್ನು ಫ್ರಿಜ್‌ನಲ್ಲಿ ಎರಡು ತಿಂಗಳ ಕಾಲ ಇಟ್ಟು ಸವಿಯಬಹುದು. ಉಪ್ಪಿನಕಾಯಿಯ ತರಹ ಅಥವಾ ನೂಡಲ್ಸ್‌ಗೆ, ಫ್ರೈಡ್ ರೈಸ್‌ಗೆ ಮಿಶ್ರ ಮಾಡಿಕೊಂಡು ತಿನ್ನಬಹುದು. ❖

ಪುರುಷರ ಫ್ಯಾಷನ್‌ನಲ್ಲಿ ಬಿಳಿ ಉಡುಪು

ಮನಸ್ವಿ

ಬಿಳಿ ಅಥವಾ ಶ್ವೇತವರ್ಣವನ್ನು ಇಷ್ಟಪಡದೇ ಇರುವವರು ಹಲವರು. ಶಾಂತಿಯ ಸಂಕೇತವಾದ ಬಿಳಿ ಬಣ್ಣದ ಉಡುಪು ಎಲ್ಲರಿಗೂ ಹೊಂದುತ್ತದೆ. ಅದರಲ್ಲೂ ಹೆಣ್ಣುಮಕ್ಕಳಿಗಿಂತ ಗಂಡು ಮಕ್ಕಳು ಈ ಬಣ್ಣದ ದಿರಿಸು ತೊಡಲು ಹೆಚ್ಚು ಇಷ್ಟಪಡುತ್ತಾರೆ. ಟಿಪ್‌ಟಾಪ್ ಆಗಿ ಕಾಣಲು ಬಿಳಿ ಬಣ್ಣ ಹೆಚ್ಚು ಸೂಕ್ತ. ಬಿಳಿ ಬಣ್ಣ ಯೂನಿವರ್ಸಲ್ ಬಣ್ಣವಾದ ಕಾರಣ ಇದನ್ನು ಎಲ್ಲದರ ಜೊತೆ ಮಿಕ್ಸ್ ಅಂಡ್ ಮ್ಯಾಚ್ ಮಾಡಿಕೊಳ್ಳಬಹುದು. ಈ ಉಡುಪು ಧರಿಸುವುದರಿಂದ ದೇಹವು ತಣ್ಣಗಿರುತ್ತದೆ. ಇದು ಉಷ್ಣಾಂಶವು ನೇರವಾಗಿ ದೇಹವನ್ನು ತಾಕುವುದನ್ನು ತಡೆಯುತ್ತದೆ.

ಬಿಳಿಯೊಂದಿಗೆ ಬಿಳಿ

ಅಡಿಯಿಂದ ಮುಡಿಯವರೆಗೆ ಸಂಪೂರ್ಣವಾಗಿ ಬಿಳಿ ಬಣ್ಣ ಧರಿಸುವುದರಿಂದ ಅಂದವಾಗಿ ಕಾಣಬಹುದು. ಹಾಲು ಬಿಳುಪು ಹಾಗೂ ತಿಳಿ ಬಿಳಿ ಬಣ್ಣ ಇರುವವರಿಗೆ ಈ ರಂಗಿನ ದಿರಿಸು ಹೆಚ್ಚು ಒಪ್ಪುತ್ತದೆ. ಬಿಳಿ ಬಣ್ಣದ ಟೀ-ಶರ್ಟ್, ಶರ್ಟ್, ಪೈಜಾಮ, ಪ್ಯಾಂಟ್ ಅಥವಾ ಟ್ರ್ಯಾಕ್ ಸೂಟ್... ಹೀಗೆ ಸಂಪೂರ್ಣ ಬಿಳಿ ಬಣ್ಣದ ಉಡುಪನ್ನೇ ಧರಿಸಬಹುದು. ಇದರೊಂದಿಗೆ ಎರಡು ಭಿನ್ನ ಛಾಯೆ ಇರುವ ಡ್ರೆಸ್ ಅನ್ನು ಮ್ಯಾಚ್ ಮಾಡಿಕೊಳ್ಳಬಹುದು.

ಒಳ ಉಡುಪುಗಳು

ಬಿಳಿ ಬಣ್ಣದ ಒಳ ಉಡುಪುಗಳನ್ನು ಸದಾ ಕಾಟನ್ ಬಟ್ಟೆಯಲ್ಲಿ ತಯಾರಿಸುವುದರಿಂದ ಇದನ್ನು ಧರಿಸಿದರೆ ದೇಹಕ್ಕೆ ಆರಾಮದಾಯಕ ಎನಿಸುತ್ತದೆ. ಅಲ್ಲದೇ ಇದು ಚರ್ಮವು ಉಸಿರಾಡಲು ಸುಲಭವಾಗುವಂತೆ ಮಾಡುತ್ತದೆ.

ಬಿಳಿ ಬನಿಯನ್

ಕಟ್ಟಡ ಕಾಮಗಾರಿ ಕೆಲಸ ಮಾಡುವ ಮಂದಿ ಹೆಚ್ಚಾಗಿ ಬಿಳಿ ಬಣ್ಣದ ಅರ್ಧ ತೋಳಿನ ಬನಿಯನ್ ಧರಿಸುತ್ತಿದ್ದರು. ಇದರಿಂದ ಬಿಳಿಯ ಬನಿಯನ್ ಇಂದು ಹೆಚ್ಚು ಪ್ರಚಲಿತದಲ್ಲಿದೆ. ಮನೆಯಲ್ಲಿ ಧರಿಸಲು, ಜಿಮ್‌ನಲ್ಲಿ, ರನ್ನಿಂಗ್ ಮಾಡುವಾಗ ವಿವಿಧ ವಿನ್ಯಾಸದ ಬಿಳಿ ಬನಿಯನ್ ಅನ್ನು ಧರಿಸುವುದು ಟ್ರೆಂಡ್ ಆಗಿದೆ. ಆ ಮೂಲಕ ಹಳೆಯ ಟ್ರೆಂಡ್‌ಗೆ ಮರುಜೀವ ನೀಡಲಾಗಿದೆ.

ಬಿಳಿ ಬಣ್ಣದ ದಿರಿಸನ್ನು ಕೇವಲ ಕಚೇರಿಗಷ್ಟೇ ಧರಿಸಬೇಕು ಎಂಬ ಅಭ್ಯಾಸ ಈಗಿಲ್ಲ. ವಾರಾಂತ್ಯದಲ್ಲಿ, ಸಂಜೆ ಪಾರ್ಟಿ ಸೇರಿದಂತೆ ವಿವಿಧೆಡೆಗೆ ಧರಿಸಲು ಹೆಚ್ಚು ಸೂಕ್ತ ಎನ್ನಿಸುತ್ತದೆ. ಪಿಕ್‌ನಿಕ್, ಬೀಚ್‌ನಲ್ಲಿ ಧರಿಸಲೂ ಬಿಳಿಯ ಉಡುಪು ಹೆಚ್ಚು ಸೂಕ್ತ. ಬೀಚ್‌ನಲ್ಲಿ ಧರಿಸಲು ಬಿಳಿ ಪೈಜಾಮ ಹಾಗೂ ಅರ್ಧ ತೆರೆದಂತಿರುವ ಕತ್ತಿನ ಶರ್ಟ್ ಧರಿಸುವುದು ಉತ್ತಮ. ಪೈಜಾಮ, ಪ್ಯಾಂಟ್ ಹಾಗೂ ಶರ್ಟ್ ಅನ್ನು ಹಗುರವಾದ ಹತ್ತಿಯ ಬಟ್ಟೆಯಲ್ಲಿ ಮಾಡಿರುವುದರಿಂದ ಧರಿಸಿದಾಗ ಹಿತ ಎನ್ನಿಸುತ್ತದೆ.

ಟೀ ಶರ್ಟ್

ಬಿಳಿಯ ಟೀ ಶರ್ಟ್ ಅನ್ನು ಹಿಂದಿನಿಂದಲೂ ಹೆಚ್ಚು ಮಂದಿ ಇಷ್ಟಪಡುತ್ತಿದ್ದರು. ರೌಂಡ್ ನೆಕ್, ವಿ ಆಕಾರದ ನೆಕ್.. ಹೀಗೆ ವಿವಿಧ ರೂಪದ ಟೀ ಶರ್ಟ್‌ಗಳು ಜೀನ್ಸ್ ಜೊತೆ ತೊಡಲು ಸೂಕ್ತ. ಇದನ್ನು ಜಾಕೆಟ್ ಅಥವಾ ಸೆಮಿ ಫಾರ್ಮಲ್ ಉಡುಪಿನ ಜೊತೆಗೂ ಧರಿಸಬಹುದು.

ಕ್ಯಾಷುವಲ್ ಶರ್ಟ್

ಬಹುಶಃ ಬಿಳಿಯ ಶರ್ಟ್ ಅನ್ನು ತಮ್ಮ ಉಡುಪಿನ ಸಂಗ್ರಹದಲ್ಲಿ ಇಟ್ಟುಕೊಳ್ಳದ ಪುರುಷರು ಬಹಳ ಕಡಿಮೆ ಎನ್ನಬಹುದು. ಇದು ಪುರುಷರಿಗೆ ಅಗತ್ಯ ವಸ್ತುಗಳಲ್ಲಿ ಒಂದು ಎಂದರೂ ತಪ್ಪಾಗಲಿಕ್ಕಿಲ್ಲ. ಇದನ್ನು ಜೀನ್ಸ್, ಫಾರ್ಮಲ್ ಪ್ಯಾಂಟ್ ಹೀಗೆ ಎಲ್ಲದರ ಜೊತೆ ಧರಿಸಬಹುದು.

ಬಿಳಿ ಡೆನಿಮ್ ಜಾಕೆಟ್

ಬಿಳಿ ಡೆನಿಮ್ ಜಾಕೆಟ್ ಇಂದಿನ ಟ್ರೆಂಡ್. ಸಂಪೂರ್ಣ ಬಿಳಿ ಬಣ್ಣದೊಂದಿಗೆ ಕಪ್ಪು ಪಟ್ಟಿ ಇರುವ ಜಾಕೆಟ್ ಧರಿಸುವುದರಿಂದ ಟ್ರೆಂಡಿ ಆಗಿ ಕಾಣಿಸಬಹುದು. ಅದನ್ನು ಜೀನ್ಸ್, ಕಾರ್ಗೋ ಪ್ಯಾಂಟ್ ಸೇರಿದಂತೆ ಕ್ಯಾಷುವಲ್ ಪ್ಯಾಂಟ್ ಜೊತೆಗೂ ಧರಿಸಬಹುದು.

ಸಾಂಪ್ರದಾಯಿಕ ಉಡುಪು

ಬಿಯ ಕುರ್ತಾ ಪೈಜಾಮವನ್ನು ಸಾಂಪ್ರದಾಯಿಕ ಉಡುಪಾಗಿಯೂ ಪರಿಗಣಿಸಲಾಗಿದೆ. ಇದರೊಂದಿಗೆ ಧೋತಿ ಅಥವಾ ಬಳಿ ಬಣ್ಣದ ಪಂಚೆಯನ್ನೂ ತೊಡಬಹುದು. ಇದರಿಂದ ಹೊಸ ಟ್ರೆಂಡ್ ಸೃಷ್ಟಿಸಬಹುದು.

ಬಿಳಿ ಬಣ್ಣದ ಜೀನ್ಸ್

ಸಂಪೂರ್ಣ ಶ್ವೇತಮಯವಾದ ಜೀನ್ಸ್ ಧರಿಸುವುದು ಸುಲಭ. ಆದರೆ ಅದನ್ನು ಧರಿಸಿದ ಮೇಲೆ ಕಲೆಯಾಗದಂತೆ ಕಾಪಾಡಿಕೊಳ್ಳುವುದು ಕಷ್ಟ. ಇದನ್ನು ಬಳಿ ಅಥವಾ ಕಪ್ಪು ಬಣ್ಣದ ಶರ್ಟ್‌ನೊಂದಿಗೆ ಧರಿಸುವುದರಿಂದ ಅಂದವಾಗಿ ಕಾಣಬಹುದು. ಇದರೊಂದಿಗೆ ಚಿತ್ತಾರವಿಲ್ಲದ ಅಥವಾ ಅಲ್ಲಲ್ಲಿ ಚಿತ್ತಾರವಿರುವ, ಶರ್ಟ್‌ನೊಂದಿಗೆ ಧರಿಸಬಹುದು.

ಬಿಳಿ ಚಪ್ಪಲಿ ಅಥವಾ ಶೂ

ಬಿಳಿ ಬಣ್ಣದ ಚಪ್ಪಲಿ ಅಥವಾ ಶೂ ಧರಿಸುವುದರಿಂದ ನಮ್ಮ ನೋಟವೇ ಬದಲಾಗುತ್ತದೆ. ಮದುವೆ, ಮುಂಜಿಯಂತಹ ಕಾರ್ಯಕ್ರಮ ಮಾತ್ರವಲ್ಲದೇ ನೈಟ್ ಪಾರ್ಟಿಯಂತಹ ಕಾರ್ಯಕ್ರಮಕ್ಕೂ ಬಿಳಿ ಬಣ್ಣದ ಶೂ ಹೊಂದುತ್ತದೆ. ಯಾವುದೇ ಬಣ್ಣದ ಜೀನ್ಸ್‌ನೊಂದಿಗೆ ಬಿಳಿ ಶರ್ಟ್, ಟೀ ಶರ್ಟ್ ಧರಿಸಿದಾಗ ಈ ಶೂ ಹೆಚ್ಚು ಸೂಕ್ತ ಎನ್ನಿಸುತ್ತದೆ. ❖

ಆಹಾರದಲ್ಲೇ ಇದೆ ತ್ವಚೆಯ ಆರೋಗ್ಯ

ಸುಕೃತ ಎಸ್.

ಸ್ವಾಸ್ಥ್ಯ

ಇನ್ನೇನು ಚಳಿಗಾಲ ಶುರು ಆಗ್ತಾ ಇದೆ. ತ್ವಚೆಯ ಕಡೆಗೆ ನಮ್ಮೆಲ್ಲರ ಗಮನ ಇರುವ ಕಾಲ ಅದು. ಯುವತಿಯರಂತೂ ಬಹಳ ತಲೆಕಡೆಸಿಕೊಂಡು ತ್ವಚೆಯ ಸೌಂದರ್ಯ ಕಾಪಾಡಿಕೊಳ್ಳಲು ಕಷ್ಟಪಡುತ್ತಾರೆ. ಬ್ಯೂಟಿ ಪಾರ್ಲರ್‌ಗೆ ಹೋಗೋದು, ಮಾಯಿಶ್ಚರೈಸರ್, ಆ ಕ್ರೀಮು ಈ ಕ್ರೀಮು ಅಂತ ಅಂಗಡಿ ಅಂಗಡಿ ಸುತ್ತುತ್ತಾರೆ. ಆದರೆ, ತ್ವಚೆಯ ಸೌಂದರ್ಯ ಕಾಪಾಡಿಕೊಳ್ಳಲು ಬೇರೆ ಎಲ್ಲೂ ಹೋಗಿ ದುಡ್ಡು ಖರ್ಚು ಮಾಡಿಕೊಳ್ಳಬೇಕಾಗಿಲ್ಲ, ನಮ್ಮ ಆಹಾರದಲ್ಲಿ ಸ್ವಲ್ಪ ಬದಲಾವಣೆ ಮಾಡಿಕೊಂಡರೆ ಸಾಕು.

ನೀರು ಸೇವನೆ ಕೂಡ ಮುಖ್ಯವಾದ ಪಾತ್ರ ವಹಿಸುತ್ತದೆ. ತ್ವಚೆ ಮಾತ್ರ ಅಲ್ಲ, ದೇಹದ ಆರೋಗ್ಯದಲ್ಲೂ ನೀರು ಮುಖ್ಯ ಭೂಮಿಕೆ ವಹಿಸುತ್ತದೆ. ದೇಹದ ತೂಕ ಇಳಿಸಿಕೊಳ್ಳಬಯಸುವವರೂ ಚೆನ್ನಾಗಿ ನೀರು ಕುಡಿಯಬೇಕು ಎನ್ನುತ್ತಾರೆ. ಅಂತೆಯೇ ತ್ವಚೆಯ ಸೌಂದರ್ಯ ವೃದ್ಧಿಗೂ ನೀರು ಅತ್ಯಗತ್ಯ. ಬೆಳಿಗ್ಗೆ ಎದ್ದ ಕೂಡಲೇ ಕನಿಷ್ಠ ಒಂದು ಲೀಟರ್ ನೀರು ಕುಡಿಯಬೇಕು ಎನ್ನುತ್ತಾರೆ ತಜ್ಞರು.

ಬಾಯಾರಿಕೆ ಆದಾಗ ಕೆಲವರು ಜ್ಯೂಸ್ ಕುಡಿಯುವುದನ್ನು ಇಷ್ಟಪಡುತ್ತಾರೆ. ಆದರೆ, ಅಂಗಡಿಯಲ್ಲಿ ಮಾಡಿ, ಫ್ರಿಡ್ಜ್‌ನಲ್ಲಿ ಶೇಖರಿಸಿ ಇಟ್ಟ ಜ್ಯೂಸ್‌ಗಿಂತ, ತಾಜಾ ಹಣ್ಣಿನ ಜ್ಯೂಸ್ ಕುಡಿದರೆ ಆರೋಗ್ಯದ ಜೊತೆಗೆ ತ್ವಚೆಗೂ ಉತ್ತಮ. ದಿನದಲ್ಲಿ ಎರಡು ಗ್ಲಾಸ್ ತಾಜಾ ಜ್ಯೂಸ್ ಕುಡಿದರೆ ಸಾಕು.

ನಿಂಬೆಹಣ್ಣಿನ ಬಳಕೆ ಕೂಡ ತ್ವಚೆಗೆ ಒಳ್ಳೆಯದನ್ನೇ ಮಾಡುತ್ತದೆ. ನಿಂಬೆಹಣ್ಣಿನಲ್ಲಿ ವಿಟಮಿನ್ ಸಿ ಅಂಶ ಇರುವುದರಿಂದ ಇದರ ಜ್ಯೂಸ್ ಅನ್ನು ಸಹ ಸೇವಿಸಬಹುದಾಗಿದೆ. ಅಡುಗೆಯಲ್ಲಿ ನಿಂಬೆಹಣ್ಣಿನ ಬಳಕೆ ಹೆಚ್ಚು ಮಾಡಬಹುದು.

ಬೇಗ ನಿದ್ದೆಗೆ ಹೋಗುವುದು ಕೂಡ ತ್ವಚೆಯ ಆರೋಗ್ಯಕ್ಕೆ ಒಳ್ಳೆಯದು ಮತ್ತು ಇದರಿಂದ ಸೌಂದರ್ಯವೂ ವೃದ್ಧಿಯಾಗುತ್ತದೆ. ಕಚೇರಿ ಕೆಲಸ ಎಂದೆಲ್ಲಾ ರಾತ್ರಿ ತಡವಾಗಿ ಮಲಗುವುದು, ದೇಹಕ್ಕೆ ಬೇಕಾದಷ್ಟು ನಿದ್ದೆ ಆಗಿರದಿದ್ದರೆ, ತ್ವಚೆಯ ಸೌಂದರ್ಯ ಹಾಳಾಗಬಹುದು. ಆದ್ದರಿಂದ ದಿನದಲ್ಲಿ 7ರಿಂದ 8 ಗಂಟೆಗಳ ನಿದ್ದೆ ಅಗತ್ಯವಾಗಿದೆ.

ಅಕ್ರೂಟ್ ಬಳಕೆಯೂ ಸಹ ತ್ವಚೆಯ ಆರೋಗ್ಯಕ್ಕೆ ಒಳ್ಳೆಯದು. ಇದರಲ್ಲಿ ಒಮೆಗಾ 3 ಎನ್ನುವ ಫ್ಯಾಟಿ ಆ್ಯಸಿಡ್ ಇರುತ್ತದೆ. ಅದು ತ್ವಚೆಯ ಆರೋಗ್ಯಕ್ಕೆ ಉತ್ತಮವಾದುದು. ಇದರ ಎಣ್ಣೆಯನ್ನು ಕೂಡ ಚರ್ಮಕ್ಕೆ ಹಚ್ಚಿಕೊಳ್ಳಬಹುದು. ಮೀನಿನಲ್ಲಿ ಕೂಡ ಒಮೆಗಾ 3 ಇರುತ್ತದೆ.

ದಿನನಿತ್ಯ ಒಮ್ಮೆಯಾದರೂ ಗ್ರೀನ್ ಟೀ ಕುಡಿಯುವುದು ಉತ್ತಮ ರೂಢಿ. ಇದರಿಂದ ಚರ್ಮವು ಮೃದು ಆಗುತ್ತದೆ. ಟೊಮೆಟೊದ ಬಳಕೆ ಕೂಡ ಚರ್ಮಕ್ಕೆ ಒಳ್ಳೆಯದು. ಇದರ ಬಳಕೆಯಿಂದ ಚರ್ಮವು ಹೆಚ್ಚು ಕಾಂತಿಯುಕ್ತವಾಗಿ ಕಾಣುತ್ತದೆ.

ದಾಳಿಂಬೆ ಹಣ್ಣಿನ ಉಪಯೋಗ ಕೂಡ ತ್ವಚೆಯ ಸೌಂದರ್ಯ ವೃದ್ಧಿಗೆ ಉತ್ತಮ ಉಪಾಯ. ಇದರಲ್ಲಿರುವ ಆ್ಯಂಟಿಆಕ್ಸಿಡೆಂಟ್ ಚರ್ಮಕ್ಕೆ ಆದ ಸಣ್ಣಪುಟ್ಟ ಗಾಯಗಳನ್ನು ಸರಿ ಮಾಡುತ್ತದೆ. ರಕ್ತಕ್ಕೂ ಸಹ ಇದರ ಸೇವನೆ ಒಳ್ಳೆಯದು. ಬೆಣ್ಣೆ ಹಣ್ಣಿನ ಸೇವನೆಯಿಂದ ಚರ್ಮಕ್ಕೆ ಕಾಂತಿ ಒದಗಿಸುತ್ತದೆ. ಮೊಟ್ಟೆ ಸೇವನೆ ಕೂಡ ಚರ್ಮದ ಆರೋಗ್ಯಕ್ಕೆ ಉತ್ತಮವಾದುದು. ❖

ಜಾಕ್ವೆಲಿನ್ ಭೇಟಿ ಮಾಡಿದ 'ಮನಿಕೆ ಮಗೆ ಹಿತೆ' ಖ್ಯಾತಿಯ ಯೋಹನಿ

ಸಿನಿ ಹನಿ

'ಮನಿಕೆ ಮಗೆ ಹಿತೆ' ಶ್ರೀಲಂಕಾ ಹಾಡಿನ ಮೂಲಕ ಜನಪ್ರಿಯತೆ ಗಳಿಸಿರುವ ಗಾಯಕಿ ಯೋಹನಿ, ನಟಿ ಜಾಕ್ವೆಲಿನ್ ಫರ್ನಾಂಡಿಸ್ ಅವರನ್ನು ಭೇಟಿ ಮಾಡಿದ್ದಾರೆ.

ಜಾಕ್ವೆಲಿನ್ ಫರ್ನಾಂಡಿಸ್ ಅವರು ಮಾಜಿ ಮಿಸ್ ಶ್ರೀಲಂಕಾ ಆಗಿದ್ದು, ಬಾಲಿವುಡ್ ಚಿತ್ರರಂಗದಲ್ಲಿ ತೊಡಗಿಸಿಕೊಂಡಿದ್ದಾರೆ.

ಗಾಯಕಿ ಯೋಹನಿ ಅವರು ಮನಿಕೆ ಮಗೆ ಹಿತೆ ಕವರ್ ಹಾಡಿನ ಮೂಲಕ ಇಂಟರ್‌ನೆಟ್ ಸ್ಟಾರ್ ಅನ್ನಿಸಿಕೊಂಡಿದ್ದಾರೆ.

ಅಲ್ಲದೆ, ಇಬ್ಬರೂ ಶ್ರೀಲಂಕಾ ಮೂಲದವರಾಗಿದ್ದು, ಭಾರತದಲ್ಲಿ ಅಪಾರ ಪ್ರಸಿದ್ಧಿ ಪಡೆದಿದ್ದಾರೆ. ಜಾಕ್ವೆಲಿನ್ ಜತೆಗಿನ ಫೋಟೊ ಅನ್ನು ಯೋಹನಿ ತಮ್ಮ ಇನ್‌ಸ್ಟಾಗ್ರಾಂನಲ್ಲಿ ಪೋಸ್ಟ್ ಮಾಡಿದ್ದಾರೆ. ಈ ಫೋಟೊಗೆ ನಟಿ ಜಾಕ್ವೆಲಿನ್ ಕಮೆಂಟ್ ಮಾಡಿದ್ದು, 'ನಿನ್ನ ಬಗ್ಗೆ ಹೆಮ್ಮೆಯನ್ನಿಸುತ್ತಿದೆ' ಎಂದಿದ್ದಾರೆ. ಯೋಹನಿ ಗಾಯನವನ್ನು ಪ್ರಿಯಾಂಕ ಚೋಪ್ರಾ ಸಹಿತ ಅನೇಕ ಸೆಲೆಬ್ರಿಟಿಗಳು ಮೆಚ್ಚಿಕೊಂಡಿದ್ದಾರೆ. ❖

ಪ್ರಜಾವಾಣಿ ವಾರೆವ್ಹಾ ವಾರಾಂತ್ಯ

ಸೂಪರ್ ಬ್ರ್ಯಾಂಡ್‌ಗಳ ಬಂಪರ್ ಕೊಡುಗೆಗಳು ಇದೀಗ ನಿಮಗಾಗಿ!

ಇನ್ನಷ್ಟು ಆಕರ್ಷಕ ಕೊಡುಗೆಗಳಿಗೆ ಇಲ್ಲಿ ಸ್ಕ್ಯಾನ್ ಮಾಡಿ

ಕೂಪನ್ ಪಾರ್ಟನರ್: COUPON DUNIA

200ಕ್ಕೂ ಹೆಚ್ಚು ಕೊಡುಗೆಗಳು

Faasos: ₹199 ಕ್ಕಿಂತ ಹೆಚ್ಚಿನ ಆರ್ಡರ್‌ಗಳ ಮೇಲೆ 40% ವರೆಗೆ ರಿಯಾಯಿತಿ
upGrad: ಅಪ್‌ಗ್ರಾಡ್ ಆನ್‌ಲೈನ್ ಕಾರ್ಯಕ್ರಮಗಳಲ್ಲಿ 20% ಶುಲ್ಕ ಮನ್ನಾ
MediBuddy: ಮೆಡಿಬಡ್ಡಿ ಗೋಲ್ಡ್ ವಾರ್ಷಿಕ ಸದಸ್ಯತ್ವದ ಮೇಲೆ ಫ್ಲಾಟ್ ₹500 ರಿಯಾಯಿತಿ
onsitego Always On: ಎಲ್ಲಾ ಸೇವೆಗಳ ಮೇಲೆ ಫ್ಲಾಟ್ ₹250 ರಿಯಾಯಿತಿ
Flipkart: ಮೊಬೈಲ್ ಫೋನ್‌ಗಳ ಮೇಲೆ 50% ವರೆಗೆ ರಿಯಾಯಿತಿ
McDelivery: ₹499 ಕ್ಕಿಂತ ಹೆಚ್ಚಿನ ಆರ್ಡರ್‌ಗಳ ಮೇಲೆ ರೆಗ್ಯುಲರ್ ಮೀಲ್ ಉಚಿತ
goibibo: ಸ್ಥಳೀಯ ಹೋಟೆಲ್‌ಗಳಲ್ಲಿ 50% ವರೆಗೆ ರಿಯಾಯಿತಿ
rapido BIKE TAXI: ಬೈಕ್ ಟ್ಯಾಕ್ಸಿ ಬುಕ್ಕಿಂಗ್ ಮೇಲೆ 20% ರಿಯಾಯಿತಿ
MUSCLEBLAZE MB: ಪೌಷ್ಠಿಕಾಂಶ ಪೂರಕಗಳ ಮೇಲೆ ₹250 ರಿಯಾಯಿತಿ
OYO: OYO Wizard ಬಳಕೆದಾರರಿಗೆ ಹೋಟೆಲ್ ಬುಕಿಂಗ್ ಮೇಲೆ 50% ರಿಯಾಯಿತಿ
Domino's Pizza: ತಲಾ ₹99ಕ್ಕೆ 2 ರೆಗ್ಯುಲರ್ ಪಿಜ್ಜಾಗಳನ್ನು ಪಡೆಯಿರಿ
fernsnpetals: ಉಡುಗೊರೆ, ಹೂವು, ಕೇಕ್ ಇತರೆಗಳ ಮೇಲೆ 18% ರಿಯಾಯಿತಿ

*ಷರತ್ತುಗಳು ಅನ್ವಯ

ಬಳುಕುವ ಕರೀನಾ ದೇಹಸಿರಿಯ ಗುಟ್ಟೇನು?

ತಾನೊಂದು ಮಗುವಿನ ತಾಯಿಯಾಗಬೇಕು ಎಂಬುದು ಪ್ರತಿ ಹೆಣ್ಣಿನ ಕನಸು. ಆದರೆ ಮಗು ಹಡೆದ ಮೇಲೆ ಬೇಡವೆಂದರೂ ತೂಕ ಹೆಚ್ಚುತ್ತದೆ. ಆದರೆ ತೂಕ ಇಳಿಸಲು ಮಾತ್ರ ಹರಸಾಹಸ ಪಡಬೇಕು. ಅದಕ್ಕಾಗಿ ವ್ಯಾಯಾಮ, ಯೋಗ, ಜಾಗಿಂಗ್ ಹೀಗೆ ದೇಹ ದಂಡನೆ ಮಾಡುತ್ತಾರೆ. ಆದರೆ ಗರ್ಭಧಾರಣೆಯ ನಂತರವೂ ಸುಲಭವಾಗಿ ತೂಕ ಇಳಿಸಿ ತಮ್ಮ ಸೌಂದರ್ಯವನ್ನು ಕಾಪಾಡಿಕೊಳ್ಳಬಹುದು ಎಂಬುದಕ್ಕೆ ನಟಿ ಕರೀನಾ ಕಪೂರ್ ಉತ್ತಮ ಉದಾಹರಣೆ. ಮುದ್ದಾದ ಎರಡು ಮಕ್ಕಳ ತಾಯಿಯಾಗಿರುವ ಕರೀನಾ ತಮ್ಮ ದೈಹಿಕ ಸ್ವಾಸ್ಥ್ಯದ ಬಗ್ಗೆ ಹೆಚ್ಚು ಕಾಳಜಿ ವಹಿಸುತ್ತಾರೆ.

ಸಿನಿಮಾದಲ್ಲಿ ತನ್ನ ಅದ್ಭುತ ನಟನೆಯ ಮೂಲಕ ಪ್ರೇಕ್ಷಕರ ಪಾಲಿಗೆ ಉತ್ತಮ ನಟಿ ಎನ್ನಿಸಿಕೊಂಡಿರುವ ಕರೀನಾ ತನ್ನ ಕ್ಷೇಮ ಹಾಗೂ ಡಯೆಟ್ ಪಾಲನೆಯ ವಿಷಯದಲ್ಲೂ ಅಷ್ಟೇ ಪರಿಪೂರ್ಣರಾಗಿದ್ದಾರೆ. 38 ವರ್ಷದ ಈ ನಟಿ ಈಗಲೂ ತನ್ನ ದೇಹ ಸೌಂದರ್ಯವನ್ನು ಹಾಗೇ ಕಾಪಾಡಿಕೊಂಡಿದ್ದಾರೆ. ಈಗಲೂ ಅವರ ದೇಹ ಮುಂಚಿನಂತೆ ಬಾಗಿ ಬಳುಕುತ್ತಿದ್ದು ಇಪ್ಪತ್ತರ ತರುಣಿಯರೂ ನಾಚುವಂತಿದೆ. ಹಾಗಾದರೆ ಕರೀನಾರ ಈ ಸೌಂದರ್ಯಕ್ಕೆ ಕಾರಣ ಏನು ಎಂದು ಕೇಳುವವರಿಗೆ ಇಲ್ಲಿದೆ ಉತ್ತರ. ಅದೇನೆಂದರೆ ನಿಯಮಿತವಾದ ಆಹಾರಕ್ರಮ.

ಬೇಬೊ ಹಸಿವಾದಾಗೆಲ್ಲಾ ಹಸಿವನ್ನು ನೀಗಿಸಿಕೊಳ್ಳಲು ಒಂದು ಕಪ್‌ನಲ್ಲಿ 'ಮಖಾನ' (ಕಮಲದ ಹೂವಿನ ಬೀಜ– ಲೋಟಸ್ ಅಥವಾ ಫಾಕ್ಸ್ ಸೀಡ್ಸ್) ಸೇವಿಸುತ್ತಾರಂತೆ. ಇದರಲ್ಲಿ ನಾರಿನಾಂಶ ಅಧಿಕವಿದ್ದು ಇವು ಕಡಿಮೆ ಕ್ಯಾಲೋರಿ ಅಂಶವನ್ನು ಹೊಂದಿರುತ್ತವೆ. ಆ ಕಾರಣಕ್ಕೆ ಇದು ಬಹಳ ಹೊತ್ತಿನವರೆಗೂ ಹಸಿವಾಗದಂತೆ ತಡೆಯುತ್ತದೆ. ಅಲ್ಲದೇ ಇದು ಪದೇ ಪದೇ ಹೊಟ್ಟೆ ಹಸಿವಾಗುವುದನ್ನು ತಡೆದು ತಿನ್ನುವುದಕ್ಕೆ ಕಡಿವಾಣ ಹಾಕುವಂತೆ ಮಾಡುತ್ತದೆ. ಮಖಾನದಲ್ಲಿ ಮ್ಯಾಗ್ನೆಶಿಯಂ ಅಂಶ ಅಧಿಕವಿದ್ದು ಇದು ಹೃದಯದ ಆರೋಗ್ಯಕ್ಕೆ ಬಹಳ ಉತ್ತಮ.

ಮಖಾನವನ್ನು ಸ್ನಾಕ್ಸ್ ರೂಪದಲ್ಲಿ ಸೇವಿಸುವುದು ಹೇಗೆ?

ಕಡಿಮೆ ಕ್ಯಾಲೊರಿ, ಕಡಿಮೆ ಕೊಬ್ಬಿನಾಂಶ ಇರುವ ಮಖಾನವನ್ನು ಬಿಸಿ ಮಾಡಬಹುದು ಅಥವಾ ಹುರಿಯಬಹುದು. ಇದಕ್ಕೆ ರುಚಿ ಬೇಕು ಎಂದರೆ ಹುರಿಯಬೇಕಾದರೆ ಸ್ವಲ್ಪ ಉಪ್ಪು ಸೇರಿಸಬೇಕು. ಇದನ್ನು ಬೇಯಿಸುವಾಗ ತುಪ್ಪವನ್ನು ಸೇರಿಸಬಹುದು. ಈ ಸಂಜೆ ಸ್ನಾಕ್ಸ್ ನಿಮ್ಮ ಹೊಟ್ಟೆಯನ್ನು ತಣಿಸಿ, ದೇಹತೂಕ ನಿಯಂತ್ರಣಕ್ಕೂ ಸಹಾಯ ಮಾಡುತ್ತದೆ. ನೀವು ಇದನ್ನು ತಯಾರಿಸಿ ತಿನ್ನಿ ಎನ್ನುತ್ತಾರೆ ಬಾಲಿವುಡ್ ಬೆಡಗಿ.

ಸೆಟ್ಟೇರಿತು ಚಿನ್ನಾರಿಮುತ್ತನ 'ಗ್ರೇ ಗೇಮ್ಸ್'

ಸಿನಿಮಾ

ವಿಭಿನ್ನ ಪಾತ್ರಗಳ ಮುಖಾಂತರ ತಮ್ಮ ಸಿನಿಪಯಣದ ಎರಡನೇ ಇನ್ನಿಂಗ್ಸ್ ಆರಂಭಿಸಿರುವ ನಟ ವಿಜಯ ರಾಘವೇಂದ್ರ ಇದೀಗ ಗಾಳಿಪಟ ಹುಡುಗಿ, ನಟಿ ಭಾವನಾ ರಾವ್ ಜೋಡಿಯಾಗಿ 'ಗ್ರೇ ಗೇಮ್ಸ್' ಆಡಲು ಸಜ್ಜಾಗಿದ್ದಾರೆ.

ಚಿತ್ರದ ಮುಹೂರ್ತ ಸಮಾರಂಭ ಇತ್ತೀಚೆಗೆ ಧರ್ಮಗಿರಿ ಶ್ರೀ ಮಂಜುನಾಥ ದೇವಸ್ಥಾನದಲ್ಲಿ ನೆರವೇರಿತು. ಮೊದಲ ಸನ್ನಿವೇಶಕ್ಕೆ ನಟ ಶ್ರೀಮುರಳಿ ಕ್ಲ್ಯಾಪ್ ಮಾಡಿದರು. ಅ.8ರಿಂದ ಬೆಂಗಳೂರಿನಲ್ಲಿ ಚಿತ್ರದ ಮೊದಲ ಹಂತದ ಚಿತ್ರೀಕರಣ ಆರಂಭವಾಗಿದೆ.

ಚಿತ್ರದ ಕುರಿತು ಮಾಹಿತಿ ನೀಡಿದ ನಿರ್ದೇಶಕ ಗಂಗಾಧರ್ ಸಾಲಿಮಠ್, 'ಸೈಬರ್ ಕ್ರೈಮ್ ಸುತ್ತ ನಡೆಯುವ ಕಥೆ ಇದು. ಮನಃಶಾಸ್ತ್ರಜ್ಞನ ಪಾತ್ರದಲ್ಲಿ ವಿಜಯ ರಾಘವೇಂದ್ರ ಅಭಿನಯಿಸುತ್ತಿದ್ದಾರೆ. ಗ್ರೇ ಗೇಮ್ ಆಡುವ ಇಪ್ಪತ್ತು ವರ್ಷದ ಹುಡುಗನ ಪಾತ್ರದಲ್ಲಿ ವಿಜಯ ರಾಘವೇಂದ್ರ ಅವರ ಅಕ್ಕನ ಮಗ ಜೈ ನಟಿಸುತ್ತಿದ್ದಾರೆ. ವರ್ಕ್‌ ಶಾಪ್ ಮೂಲಕ ಜೈ ಅವರಿಗೆ ಅಭಿನಯದ ತರಬೇತಿ ನೀಡಲಾಗಿದೆ. ಜೈ ಅವರ ತಾಯಿಯ ಪಾತ್ರದಲ್ಲಿ ಅಪರ್ಣ ಕಾಣಿಸಿಕೊಳ್ಳಲಿದ್ದಾರೆ. ಸೈಬರ್ ಕ್ರೈಮ್ ವಿಶೇಷ ಅಧಿಕಾರಿ ಪಾತ್ರವನ್ನು ಭಾವನಾ ರಾವ್ ಮಾಡಲಿದ್ದಾರೆ' ಎಂದು ಪಾತ್ರ ಪರಿಚಯ ಮಾಡಿದರು.

'ನನಗೆ ಈ ಅವಕಾಶ ಸಿಗಲು ಪ್ರಮುಖ ಕಾರಣ ರಾಘು ಮಾವ. ಅವರಿಗೆ ಹಾಗೂ ನಿರ್ದೇಶಕ, ನಿರ್ಮಾಪಕರಿಗೆ ತುಂಬಾ ಧನ್ಯವಾದ' ಎಂದರು ಜೈ.

'ನಿರ್ದೇಶಕರು ಕಥೆ ಹೇಳಿದಾಗಲೇ ಸಿನಿಮಾ ಒಪ್ಪಿಕೊಂಡೆ. ಸೈಬರ್ ಪೊಲೀಸ್ ಅಧಿಕಾರಿ ಪಾತ್ರದಲ್ಲಿ ಕಾಣಿಸಿಕೊಳ್ಳುತ್ತಿದ್ದೇನೆ' ಎಂದರು ಭಾವನಾ ರಾವ್.

ಚಿತ್ರಕ್ಕೆ ವರುಣ್ ಅವರ ಛಾಯಾಗ್ರಹಣವಿದ್ದು, ಶ್ರೀಯನ್ಸ್ ಶ್ರೀರಾಮ್ ಹಾಗೂ ಡೋಲೇಶ್ವರ ರಾಜ್ ಸಂಕು ಸಂಗೀತ ನೀಡುತ್ತಿದ್ದಾರೆ. ದತ್ತಣ್ಣ ನಿರ್ಮಾಣ, ನಿರ್ವಹಣೆ ಹಾಗೂ ರಂಜಿತ್ ಅವರ ಸಂಕಲನ ಈ ಚಿತ್ರಕ್ಕಿದೆ.